ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಸ್ಕಾಡಾ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸ್ವಯಂ (ಆಟೋಮ್ಯಾಟಿಕ್) ಆಗಿ 11ಕೆ.ವಿ ವಿದ್ಯುತ್ ಮಾರ್ಗಗಳ ನಿಲುಗಡೆ (ಟ್ರಿಪ್) ಮಾಡುವ ವ್ಯವಸ್ಥೆ (ADMS) ಮತ್ತು ವಿಶೇಷ ರಕ್ಷಣಾ ಯೋಜನೆ (SPS)ಯನ್ನು ನಿಗಮದ ಸ್ಕಾಡಾ ಇಂಜಿನೀಯರ್‌ಗಳ ತಂಡ ಅನುಷ್ಠಾನಗೊಳಿಸಲಾಗಿದೆ.

2019–20ನೇ ವಿತ್ತೀಯ ವರ್ಷದಲ್ಲಿ ಹೊಸದಾಗಿ ಕಾರ್ಯಾರಂಭ ಮಾಡಿದ ಒಂದು ಸಂಖ್ಯೆಯ 400ಕೆ.ವಿ, ಏಳು(7) ಸಂಖ್ಯೆಯ 220ಕೆ.ವಿ ಮತ್ತು ಎಂಟು(8) ಸಂಖ್ಯೆಯ 66/11ಕೆ.ವಿ ಉಪಕೇಂದ್ರಗಳು, 15 ಸಂಖ್ಯೆಯ ಪವನ ಮತ್ತು ಸೌರ ಉತ್ಪಾದನಾ ಕೇಂದ್ರಗಳು, ಒಂದೊಂದು ಸಣ್ಣ ಜಲವಿದ್ಯುದ್ಗಾರ, ಬಯೋಮಾಸ್ ಮತ್ತು ಕ್ಯಾಪ್ಟಿವ್ ಉತ್ಪಾದನಾ ಕೇಂದ್ರಗಳನ್ನು ಸಹ ಸ್ಕಾಡಾ ವ್ಯವಸ್ಥೆಗೆ ಸಂಯೋಜಿಸಲಾಗಿದೆ.

<u>ನವೀಕರಿಸಬಹುದಾದ ಇಂಧನಗಳ ನಿರ್ವಹಣಾ ಕೇಂದ್ರ</u> (REMC)

ಇಂಡೋ ಜರ್ಮನ್ ಅಭಿವೃದ್ಧಿ ಸಹಕಾರ ಸಂಸ್ಥೆಯ ಧನ ಸಹಾಯದಿಂದ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆ ಅಡಿಯಲ್ಲಿ ಪವರ್ ಗ್ರಿಡ್ ಕಾರ್ಪೋರೇಷನ್ ಸಹಯೋಗದೊಂದಿಗೆ ನವೀಕರಿಸಬಹುದಾದ ಇಂಧನಗಳ ನಿರ್ವಹಣಾ ಕೇಂದ್ರ (REMC) ಸ್ಥಾಪಿಸಲಾಗಿದೆ. ಸದರಿ ಕೇಂದ್ರವನ್ನು ದಿನಾಂಕ 14.02.2020ರಂದು ಕಾರ್ಯಾರಂಭ ಮಾಡಲಾಯಿತು ಮತ್ತು ದಿನಾಂಕ 28.02.2020ರಂದು ಭಾರತ ಸರ್ಕಾರದ ಮಾನ್ಯ ರಾಜ್ಯ ಸಚಿವರು (ವಿದ್ಯುತ್ ಮತ್ತು ಹೊಸ ನವೀಕರಿಸಬಹುದಾದ ಇಂಧನ) ಉದ್ಘಾಟಿಸಿದರು.

ಈ ನಿಯಂತ್ರಣಾ ಕೇಂದ್ರವು ರಾಜ್ಯ ವಿದ್ಯುತ್ ಜಾಲಕ್ಕೆ ಸಂಪರ್ಕಗೊಂಡಿರುವ ಎಲ್ಲಾ ಪವನ ಮತ್ತು ಸೌರವಿದ್ಯುತ್ ಉತ್ಪಾದನಾ ಕೇಂದ್ರಗಳ ಮೇಲ್ವಿಚಾರಣೆ ಸೌಲಭ್ಯವನ್ನು ಹೊಂದಿದೆ ಮತ್ತು ಸುರಕ್ಷಿತ ಸೂಕ್ತ ಗ್ರಿಡ್ ಕಾರ್ಯಾಚರಣೆಗೆ ರಾಜ್ಯವಿದ್ಯುತ್ ರವಾನೆ ಕೇಂದ್ರದೊಂದಿಗೆ ಸಮನ್ವಯ ಸಾಧಿಸುತ್ತದೆ.

ಸಂವಹನ ಜಾಲವನ್ನು ಬಲಪಡಿಸುವ ಸಲುವಾಗಿ ಸ್ಕಾಡದ ಉದ್ದೇಶಿತ ಕಾರ್ಯಯೋಜನೆಗಳು:

1) 188ಸಂಖ್ಯೆಯ 66/11ಕೆ.ವಿ ಮತ್ತು 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಕಾಡಾ ವ್ಯವಸ್ಥೆಗೆ ಸಂಯೋಜಿಸಲು RTUಗಳನ್ನು ಅಳವಡಿಸುವುದು ಮತ್ತು ಚಾಲ್ತಿಗೊಳಿಸುವುದು– ಕೆಲಸ ಪ್ರಗತಿಯಲ್ಲಿದೆ.

2) ಉತ್ತಮ ಸಂವಹನೆ, ದತ್ತಾಂಶ ಸಂಗ್ರಹಣೆ ಮತ್ತು ಪ್ರಸರಣಾ ಮಾರ್ಗಗಳ ಸುರಕ್ಷತೆಗಾಗಿ 253.57 ಕೋಟಿ ರೂಗಳ ವೆಚ್ಚದಲ್ಲಿ (ಶೇಕಡ 50% ರಷ್ಟು ವಿದ್ಯುತ್‌ಕ್ಷೇತ್ರ ಅಭಿವೃದ್ಧಿ ನಿಧಿಯ ಅನುದಾನದೊಂದಿಗೆ) ರಾಜ್ಯದ ಎಲ್ಲಾ ಉತ್ಪಾದನಾ ಕೇಂದ್ರಗಳು ಹಾಗೂ 400ಕೆ.ವಿ ಮತ್ತು 220ಕೆ.ವಿ ಸ್ವೀಕರಣಾ ಕೇಂದ್ರಗಳನ್ನು ಸಂಪರ್ಕಿಸಲು 6000ಕಿ.ಮಿಮಾರ್ಗದ ಹಾಲಿ ಇರುವ ಗ್ರೌಂಡ್ ವೈರ್‌ನ್ನು ಆಪ್ಟಿಕಲ್ ಗ್ರೌಂಡ್ ವೈರ್‌ಗೆ ಬದಲಾಯಿಸುವ ಯೋಜನೆ –ಇ–ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ.

3) 17.75 ಕೋಟಿ ರೂ ವೆಚ್ಚದ (9 ಕೋಟಿ ರೂ.ಗಳಷ್ಟು ವಿದ್ಯುತ್‌ಕ್ಷೇತ್ರ ಅಭಿವೃದ್ಧಿ ನಿಧಿಯ ಅನುದಾನದೊಂದಿಗೆ) ವೇಳಾಪಟ್ಟಿ, ಲೆಕ್ಕಪತ್ರ, ಮಾಪಕ ಮತ್ತು ವಹಿವಾಟು ಇತ್ಯರ್ಥ (Scheduling Accounting Metering &Settlement Of Transaction) SAMASTಯೋಜನೆ– ಇ–ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

4) ರಾಷ್ಟ್ರೀಯ ಇಂಧನ ಪೋರ್ಟಲ್‌ಗೆ ಮಾಹಿತಿ ಒದಗಿಸುವ ಸಲುವಾಗಿ, 15000 ಸಂಖ್ಯೆಯ ಮಧ್ಯವರ್ತಿ ಬಿಂದುಗಳು (Interface Point) ಮತ್ತು 11ಕೆವಿ ಫೀಡರ್‌ಗಳ ಮಾಪಕಗಳನ್ನು DLMSವಿದ್ಯುತ್ ಮಾಪಕಗಳಿಗೆ ಬದಲಾಯಿಸುವ ಯೋಜನೆ – ಕಾರ್ಯ ಪ್ರಗತಿಯಲ್ಲಿರುತ್ತದೆ. 2019–2020 ವಿತ್ತೀಯ ವರ್ಷದ ಕೊನೆಯಲ್ಲಿ 10,300 DLMSಮಾಪಕಗಳು ಸರಬರಾಜಾಗಿದ್ದು, 254 ವಿ.ಉ ಕೇಂದ್ರಗಳ 3501 ಸಂಖ್ಯೆಯ ಮಾಪಕಗಳನ್ನು ಬದಲಾಯಿಸಲಾಗಿರುತ್ತದೆ.

ಆರ್ಥಿಕ ವರ್ಷ 2019–20 ರಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕವಿಪ್ರನಿನಿರವರ ಕಛೇರಿಯಿಂದ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳು:

ಕ್ರ.ಸಂ	ಸುತ್ತೋಲೆ/ಆದೇಶ ಸಂಖ್ಯೆ	ದಿನಾಂಕ	ವಿಷಯ
1.	ಕವಿಪ್ರನಿನಿ/ಬಿ28(ಎ)/32543/ 12–13	01.04.2019	ಕೆಇಆರ್‌ಸಿಯ ಸುತ್ತೋಲೆಯ ಆದೇಶ ದಿನಾಂಕ: 14.12.2018 ರಂದು ತಿಳಿಸಿರುವಂತೆ ಒ ಅಂಡ್ ಎಂ ಶುಲ್ಕಗಳನ್ನು ಪರಿಷ್ಕರಿಸುವ ಕಾರ್ಯವಿಧಾನ.
2.	ಕವಿಪ್ರನಿನಿ/ಬಿ28/1228/2019–20	27.05.2019	ವಿದ್ಯುತ್ ಕ್ಷೇತ್ರದಲ್ಲಿ ಸಮನ್ವಯ ಸಮಿತಿಯನ್ನು ರಚಿಸುವ ಆದೇಶ
3.	ಕವಿಪ್ರನಿನಿ/ಬಿ19/7625/86–87	28.05.2019	2019ರ ವರ್ಷಕ್ಕೆ ಬೃಹತ್ ಕಾಮಗಾರಿಯ ದರಪಟ್ಟಿಗಳನ್ನು ಪರಿಷ್ಕರಿಸಿರುವುದು.
4.	ಕವಿಪ್ರನಿನಿ/ಬಿ25/ಮುಇಂ(ಟಿ&ಪಿ)/ ಅಇಂ(ಟಿ&ಪಿ)/ಕಾನಿಇಂ(ಪಿ)/ಸಕಾನಿಇಂಖ–2/19–20	27.06.2019	ಮೆ॥ ಎಂಇಐ ನಿಯಮಿತ, ಬೆಂಗಳೂರು ರವರಿಂದ 11ಕೆ.ವಿ ಸ್ವಿಚ್‌ಗೇರ್‌ಗಳನ್ನು ಖರೀದಿಸಿರುವುದು.
5.	ಕವಿಪ್ರನಿನಿ/ಬಿ19/345/85–86	24.07.2019	ಅರ್ಕಾವತಿ ವಸತಿ ವಿನ್ಯಾಸ, ಬಿಡಿಎ ಗೆ ವಿದ್ಯುತ್ ಮೂಲ ಸೌಕರ್ಯಗಳನ್ನು ರಚಿಸುವ ನಿಟ್ಟಿನಲ್ಲಿ 77.22 ಎಂ.ವಿ.ಎ (65.62 ಮೆಗಾ ವ್ಯಾಟ್) ರಷ್ಟು ವಿದ್ಯುತ್ ಸರಬರಾಜಿನ ವ್ಯವಸ್ಥೆ ಕಲ್ಪಿಸಲು ಕವಿಪ್ರನಿನಿಯು ಬಿಡಿಎ ಪರವಾಗಿ ಆರಂಭಿಕ ಹೂಡಿಕೆಯನ್ನು ಮಾಡಿದ್ದು, ಸದರಿ ಮೊತ್ತವನ್ನು ಮುಂದೂಡಲ್ಪಟ್ಟ ಪಾವತಿಯ ರೂಪದಲ್ಲಿ ಮರುಪಾವತಿ ಮಾಡುವ ಷರತ್ತಿಗೊಳಪಟ್ಟಿರುವ ಬಗ್ಗೆ.
6.	ಕವಿಪ್ರನಿನಿ/ಬಿ28(ಎ)/32543/ 12–13	02.08.2019	ಆರ್.ಇ ಉತ್ಪಾದನೆಗೆ ಮೀಸಲಿರಿಸಿರುವ ಪ್ರಸರಣ ಮಾರ್ಗ/ಟರ್ಮಿನಲ್ ಬೇಗಳು/11 ಕೆ.ವಿ. ಸ್ವಿಚ್‌ಗೇರ್ ಮುಂತಾದವುಗಳನ್ನು ನಿರ್ಮಿಸಲು ಬಳಸುವ ನಿರೂಪಯುಕ್ತ/ಕವಿಪ್ರನಿನಿ ಆಸ್ತಿಗಳ ಬಗ್ಗೆ.
7.	ಕವಿಪ್ರನಿನಿ/ಬಿ25/87066/ 2018–19	06.11.2019	ಗುಣಮಟ್ಟದ ಭರವಸೆಯ ಯೋಜನೆಯ ಪ್ರಮಾಣೀಕರಣ ಮತ್ತು 31.5 ಎಂ.ವಿ.ಎ ವರೆಗಿನ ರೇಟಿಂಗ್‌ನ 110ಕೆ.ವಿ ಮತ್ತು 66ಕೆ.ವಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪರಿಶೀಲನೆಯ ಹಂತದ ಸಂಖ್ಯೆಯನ್ನು ಪರಿಶೀಲಿಸುವುದು.
8.	ಬಿ19/7625/86–87	06.11.2019	ಎನ್.ಎಚ್.ಎ.ಐ ನಿಂದ ಸ್ವಯಂ ಕಾರ್ಯದ ಆಧಾರದ ಮೇಲೆ ಪ್ರಸರಣ ಮಾರ್ಗ ಕಾಮಗಾರಿಗಳ ವರ್ಗಾವಣೆ/ ಮಾರ್ಪಾಡುಗಳ ಕಾರ್ಯಗತಗೊಳಿಸುವ ಸಮಯದಲ್ಲಿ ಬಿಡುಗಡೆಯಾದ ಕೆಪಿಟಿಸಿಎಲ್ ಸ್ವತ್ತುಗಳನ್ನು ಹಿಂತಿರುಗಿಸುವ ಬಗ್ಗೆ.
9.	ಕವಿಪ್ರನಿನಿ/ಬಿ28(ಎ)/70112/ 2017–18	16.11.2019	ಎಲ್ಲಾ ಹೊಸ ಹಾಗೂ ಮುಂಬರುವ 220ಕೆವಿ/400ಕೆವಿ ಪ್ರಸರಣ ಮಾರ್ಗಗಳಿಗೆ ಕನ್ವೆನ್ಷನಲ್ ಗ್ರೌಂಡ್ ವೈರ್ ಅಳವಡಿಸುವ ಬದಲು ಆಪ್ಟಿಕಲ್ ಗ್ರೌಂಡ್ ವೈರ್ (ಒಪಿಜಿಡಬ್ಲ್ಯೂ) ನ್ನು ಒದಗಿಸುವ ಸುತ್ತೋಲೆ ಬಗ್ಗೆ.
10.	ಕವಿಪ್ರನಿನಿ/ಬಿ28/1228/ 2019–20	19.11.2019	ವಿದ್ಯುತ್ ಕ್ಷೇತ್ರದಲ್ಲಿ ಸಮನ್ವಯ ಸಮಿತಿಯನ್ನು ರಚಿಸುವ ಆದೇಶ.

ಕ್ರ.ಸಂ	ಸುತ್ತೋಲೆ/ಆದೇಶ ಸಂಖ್ಯೆ	ದಿನಾಂಕ	ವಿಷಯ
11.	ಕವಿಪ್ರನಿನಿ/ಬಿ19/345/85–86	30.11.2019	ಸ್ವಯಂ ಕಾರ್ಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಜಾಯಿಂಟ್ ಇನ್ವೆಂಟರಿ ತೆಗೆದುಕೊಂಡು ಆಸ್ತಿ ವರ್ಗೀಕರಿಸುವ ಬಗ್ಗೆ.
12.	ಕವಿಪ್ರನಿನಿ/ಬಿ28(ಎ)/70151/ 2017–18	02.12.2019	ಐಪಿಪಿಗಳಿಂದ ಉತ್ಪಾದಿಸಿರುವ ವಿದ್ಯುತ್‌ನ್ನು ವಿಲೇವಾರಿ ಮಾಡುವ ಸಲುವಾಗಿ ಕವಿಪ್ರನಿನಿಯ ಉಪ ಕೇಂದ್ರಗಳ ಜಾಗದಲ್ಲಿ ಟೇಕ್–ಆಫ್ ಗೋಪುರಗಳನ್ನು ಸ್ಥಾಪಿಸಲು ಬಳಸುವ ಕವಿಪ್ರನಿನಿಯ ಜಾಗಕ್ಕೆ ಸಂಬಂಧಿಸಿದ ಸುತ್ತೋಲೆ ಬಗ್ಗೆ.
13.	ಕವಿಪ್ರನಿನಿ/ಬಿ31/ಅಇಂ(ವಿ) (ಐಟಿ & ಎಂಐಎಸ್)/	03.12.2019	ಕವಿಪ್ರನಿನಿಯಲ್ಲಿ ಸೈಬರ್ ಭದ್ರತಾ ಬೆದರಿಕೆಗಳಿಗೆ ಸಂಬಂಧಿಸಿದ ಪಾಲನಾ ಮಾರ್ಗ ಸೂಚಿ.
14.	ಕವಿಪ್ರನಿನಿ/ಬಿ28/1228/ 2019–20	21.12.2019	ವಿದ್ಯುತ್ ಕ್ಷೇತ್ರದಲ್ಲಿ ಸಮನ್ವಯ ಸಮಿತಿಯನ್ನು ರಚಿಸುವ ಆದೇಶ.
15.	ಕವಿಪ್ರನಿನಿ/ಬಿ19/345/85–86	08.01.2020	ಪೂರ್ಣ ಟರ್ನ್‌ಕೀ/ಭಾಗಶಃ ಟರ್ನ್‌ಕೀ ಯೋಜನೆಗಳಿಗೆ ಸಂಬಂಧಿಸಿದ ಸಾಮಗ್ರಿಗಳು/ಉಪಕರಣಗಳ ಖರೀದಿಗೆ ಮುಂದುವರೆಯಲು ಇಪಿಸಿ ಗುತ್ತಿಗೆ ಏಜೆನ್ಸಿಗೆ ಅನುಮತಿ ನೀಡುವ ಸೂಚನೆ.
16.	ಕವಿಪ್ರನಿನಿ/ಬಿ25/ಮುಇಂ(ವಿ)/ತಾಪ &/ಕಾನಿಇಂ(ಕ)/19–20/421	26.02.2020	ವಿದ್ಯುತ್ ಪರಿವರ್ತಕಗಳಲ್ಲಿ ತಾಪಮಾನ ಹೆಚ್ಚಿಸುವ/ಹೀಟ್ ರನ್ ಪರೀಕ್ಷೆ ನಡೆಸಲು ಪರಿಶೀಲಿಸುವ/ಸಾಕ್ಷಿಯಾಗುವ ಬಗ್ಗೆ.
17.	ಕವಿಪ್ರನಿನಿ/ಬಿ19/345/85–86	11.03.2020	ಸ್ವಯಂ ಕಾರ್ಯಶೀಲನಾ ಕಾಮಗಾರಿಗಳ/ಠೇವಣಿ ದೇಣಿಗೆ ಕಾಮಗಾರಿಗಳ ಆಧಾರದಲ್ಲಿ ಇಎಚ್‌ಟಿ ಗ್ರಾಹಕರು ಅಪೂರ್ಣ ದಾಖಲೆಗಳನ್ನು ಸಲ್ಲಿಸಿದ್ದರು ವಿದ್ಯುತ್ ಸಂಪರ್ಕ ಕಲ್ಪಿಸುವ ಆಡಳಿತಾತ್ಮಕ ಅನುಮೋದನೆ ಬಗ್ಗೆ ಹಾಗೂ ಡಿಪಿಆರ್‌ಗಳನ್ನು ಸಿದ್ದಪಡಿಸುವ ಬಗ್ಗೆ.

ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್

A. ಸಾಮಗ್ರಿಗಳ ಖರೀದಿ

2019–20ನೇ ವರ್ಷಕ್ಕೆ ಕವಿಪ್ರನಿನಿಯು ವಿವಿಧ ರೇಟಿಂಗ್‌ಗಳ ವಿದ್ಯುತ ಪರಿವರ್ತಕಗಳು, 11ಕೆವಿ ಸ್ವಿಚ್‌ಗೇರ್, ಪರೀಕ್ಷಾ ಉಪಕರಣಗಳು ಮತ್ತು ಇನ್‌ಫ್ರಾರೆಡ್ ಥರ್ಮೋ ವಿಷನ್ ಕ್ಯಾಮೆರಾಗಳಂತಹ ಪ್ರಮುಖ ಉಪಕರಣಗಳ ಖರೀದಿ ಪ್ರಕ್ರಿಯೆ ನಡೆಸಿರುತ್ತಾರೆ. ಈ ಉಪಕರಣಗಳು ಉಪಕೇಂದ್ರಗಳ ಸಾಮರ್ಥ್ಯ ಹೆಚ್ಚಿಸಲು ಹಾಗೂ ಪ್ರಸರಣ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರಿಂದ ವಿದ್ಯುತ್ ಸ್ಥಗಿತಗಳನ್ನು ಮತ್ತು ಸರಬರಾಜು ಸ್ಥಗಿತಗಳನ್ನು ಮಿತಿಗೊಳಿಸುವುದು.

B. ದೊಡ್ಡ ಪ್ರಮಾಣದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ ವಿವರ.

i. ಗುಲ್ಬರ್ಗ (ಫಿರೋಜಾಬಾದ್)ನಲ್ಲಿ 2X500 ಎಂವಿಎ, 400/220 ಕೆವಿ ಉಪಕೇಂದ್ರವನ್ನು ಸ್ಥಾಪಿಸುವುದು.

ii. ಬೆಂಗಳೂರು ನಗರದ ಎಕ್ಸೋರಾ (ಸೆಸ್ನಾ ಬಿಸಿನೆಸ್ ಪಾರ್ಕ್) ಮತ್ತು ಶೋಭಾ ಡ್ರೀಮ್ಸ್ ನಲ್ಲಿ 220/66 ಕೆವಿ ಗ್ಯಾಸ್ ಇನ್ಸುಲೇಟೆಡ್ ಉಪ ಕೇಂದ್ರವನ್ನು ಸ್ಥಾಪಿಸುವುದು.

iii. ವಿಜಯಪುರ ಜಿಲ್ಲೆಯ ಆಹೇರಿ, ಕಲ್ಬುರ್ಗಿ ಜಿಲ್ಲೆಯ ಘಾನಗಾಪುರ, ಬೆಳಗಾವಿ ಜಿಲ್ಲೆಯ ಎಇಕ್ಯೂಸ್, ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ 220ಕೆವಿ ಉಪಕೇಂದ್ರಗಳನ್ನು ಸ್ಥಾಪಿಸುವುದು.

iv. ಎ) ಟಿ.ಕೆ ಹಳ್ಳಿ ಬಿ) ಬೆಳಗಾವಿ ಸಿ) ತುಬಿನಕೆರೆ ಡಿ) ದೊಡ್ಡಬಳ್ಳಾಪುರ ಇ) ಎಂಆರ್ಎಸ್ ಶಿವಮೊಗ್ಗ ಎಫ್) ಬಾಲಿಗಾವಿ ಮತ್ತು ಜಿ) ನೆಟ್ಲಮಡನೂರು 220ಕೆವಿ ಉಪಕೇಂದ್ರಗಳಲ್ಲಿ ಹೆಚ್ಚುವರಿ 150/100 ಎಂವಿಎ ಪರಿವರ್ತಕಗಳನ್ನು ಸ್ಥಾಪಿಸಿ, ಉಪಕೇಂದ್ರಗಳ ಸಾಮರ್ಥ್ಯವನ್ನು ಉನ್ನತೀಕರಿಸುವುದು.

v. ಬೆಂಗಳೂರಿನ ಆಡುಗೋಡಿಯಲ್ಲಿ ಗ್ಯಾಸ್ ಇನ್ಸುಲೇಟೆಡ್ ಉಪಕೇಂದ್ರದಿಂದ ಅಸ್ತಿತ್ವದಲ್ಲಿರುವ 66/11 ಕೆವಿ ಏರ್ ಇನ್ಸುಲೇಟೆಡ್ ಉಪಕೇಂದ್ರಗಳನ್ನು ಪರಿವರ್ತಿಸುವುದು.

vi. ವಿವಿಧ ಸ್ಥಳಗಳಲ್ಲಿ 110 ಕೆವಿ ಮತ್ತು 66 ಕೆವಿ ಉಪಕೇಂದ್ರಗಳನ್ನು ಸ್ಥಾಪಿಸುವುದು.

vii. ಹೊಸ 66ಕೆವಿ ಮತ್ತು 110 ಕೆವಿ ಪ್ರಸರಣ ಮಾರ್ಗಗಳನ್ನು ನಿರ್ಮಿಸುವುದು ಹಾಗೂ ಅಸ್ತಿತ್ವದಲ್ಲಿರುವ ಹದಗೆಟ್ಟಿರುವ ಪ್ರಸರಣ ಮಾರ್ಗಗಳಿಗೆ ಗೋಪುರಗಳು, ಕಂಡಕ್ಟರ್ಗಳು ಮತ್ತು ಬಿಡಿ ಭಾಗಗಳನ್ನು ಬದಲಾಯಿಸುವುದರಿಂದ ಬಲಪಡಿಸುವುದು.

viii. ಹುಬ್ಬಳ್ಳಿಯ 110ಕೆವಿ ತರಿಹಾಳ್ ಮತ್ತು ಅಕ್ಷಯ ಕಾಲೋನಿ ಉಪಕೇಂದ್ರಗಳ ನಡುವೆ ಹಾಗೂ ಬೆಂಗಳೂರು ನಗರದ 66ಕೆವಿ ನೆಲಗೆದರನಹಳ್ಳಿ ಮತ್ತು ವಿಡಿಯಾ ಉಪಕೇಂದ್ರಗಳ ನಡುವೆ 110ಕೆವಿ ಯುಜಿ ಕೇಬಲ್ ನಿರ್ಮಾಣ.

ix. ವಿವಿಧ ಠೇವಣಿ ದೇಣಿಗೆ ಕಾಮಗಾರಿಗಳಿಗೆ, ಬೆಂಗಳೂರಿನ ಇಸ್ರೋನಲ್ಲಿ 66ಕೆವಿ ಯುಜಿ ಕೇಬಲ್ನ್ನು ಬದಲಾಯಿಸುವುದು, ಮುಲ್ಕಿಯಾ ಕೊಂಕಣ ರೈಲ್ವೆ, ಸೇನಾಪುರ ಮತ್ತು ಬಾರ್ಕುರ್ ಉಪಕೇಂದ್ರಗಳಿಗೆ 110 ಕೆವಿ ಎಳೆಯಲು, ಬಿಎಂಆರ್ಸಿಎಲ್ನ 220 ಕೆವಿ ಯುಜಿ ಕೇಬಲ್ ಮಾರ್ಗ ಬದಲಾವಣೆ ಹಾಗೂ ಅಸ್ತಿತ್ವದಲ್ಲಿರುವ 220 ಕೆವಿ ದೇವನಹಳ್ಳಿಯ 220/66 ಕೆವಿ ಬಿಐಎಎಲ್ ಉಪ ಕೇಂದ್ರಕ್ಕೆ ಹೆಚ್ಚುವರಿ 100 ಎಂವಿಎ, 220/66 ಕೆವಿ ವಿದ್ಯುತ್ ಪರಿವರ್ತಕವನ್ನು ಒದಗಿಸುವುದು.

C. 2019–20ರ ಅವಧಿಗೆ,ಖರೀದಿ, ಸೇವೆ ಮತ್ತು ಕಾಮಗಾರಿಗಳಿಗೆ ಟೆಂಡರ್ಗಳನ್ನು ಆಹ್ವಾನಿಸಿದ ಟೆಂಡರ್ಗಳ ಸಾರಾಂಶ ಹಾಗೂ ಕಾರ್ಯಾದೇಶ ನೀಡಿರುವ ವಿವರ ಈ ಕೆಳಕಂಡಂತಿದೆ.

1. **ಕಾಮಗಾರಿಗಳು**

i) 400 ಕೆವಿ ಮತ್ತು 220ಕೆವಿ ಕಾಮಗಾರಿಗಳು:

ಆಹ್ವಾನಿಸಿದ ಟೆಂಡರ್ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ/ಉದ್ದಗಳು
220 ಕೆವಿ ಮತ್ತು ಮೇಲ್ಪಟ್ಟ ವೋಲ್ಟೇಜ್ ವರ್ಗಗಳ ಕಾಮಗಾರಿಗಳು	19	163472.84	400/220 ಕೆವಿ, 500ಎಂವಿಎ ವಿದ್ಯುತ್ ಪರಿವರ್ತಕಗಳು	04 ಸಂಖ್ಯೆ
			220/66/11 ಕೆವಿ, 150ಎಂವಿಎ ವಿದ್ಯುತ್ ಪರಿವರ್ತಕಗಳು	06 ಸಂಖ್ಯೆ
			220/110/11 ಕೆವಿ, 100 ಎಂವಿಎ ವಿದ್ಯುತ್ ಪರಿವರ್ತಕಗಳು	11 ಸಂಖ್ಯೆ
			220/66/11ಕೆವಿ, 100ಎಂವಿಎವಿದ್ಯುತ್ ಪರಿವರ್ತಕಗಳು	04 ಸಂಖ್ಯೆ
			110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು	02 ಸಂಖ್ಯೆ
			110/11ಕೆವಿ, 20ಎಂವಿಎ ವಿದ್ಯುತ್ ಪರಿವರ್ತಕಗಳು	04 ಸಂಖ್ಯೆ
			66/11ಕೆವಿ, 12.5ಎಂವಿಎ,ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			125ಎಂವಿಎ, 400ಕೆವಿ ಬಸ್ ರಿಯಾಕ್ಟರ್	03 ಸಂಖ್ಯೆ

ಆಹ್ವಾನಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ/ಉದ್ದಗಳು
			400ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	02 ಸಂಖ್ಯೆ
			400ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು.	ಯಾವುದೂ ಇಲ್ಲ
			220ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	04 ಸಂಖ್ಯೆ
			220 ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು..	02 ಸಂಖ್ಯೆ
			220 ಕೆವಿ ರಿಪೇರಿ ಮತ್ತು ನಿರ್ವಹಣ ಕಾಮಗಾರಿಗಳು	01 ಸಂಖ್ಯೆ
			400ಕೆವಿ ಓಹೆಚ್ ಮಾರ್ಗಗಳು	232.536 ಕಿ.ಮೀ
			220ಕೆವಿ ಓಹೆಚ್ ಮಾರ್ಗಗಳು	99.377 ಕಿಮೀ
			110ಕೆವಿ ಓಹೆಚ್ ಮಾರ್ಗಗಳು,	109.343 ಕಿಮೀ
			66ಕೆವಿ ಓಹೆಚ್ ಮಾರ್ಗಗಳು	ಯಾವುದೂ ಇಲ್ಲ
			400ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			220ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			110ಕೆವಿ ಟರ್ಮಿನಲ್ ಬೇ ಗಳು	04 ಸಂಖ್ಯೆ
			66ಕೆವಿ ಟರ್ಮಿನಲ್ ಬೇ ಗಳು	04 ಸಂಖ್ಯೆ
			66ಕೆವಿ ಹೈ ಬ್ರೀಡ್ ಸ್ವಿಚ್‌ಗೇರ್‌ಗಳು	02 ಸಂಖ್ಯೆ
			220ಕೆವಿ 1200ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ
			220ಕೆವಿ 1000 ಚಮಿಮೀ ಯುಜಿ ಕೇಬಲ್	12.1052ಕಿಮೀ
			66ಕೆವಿ 1000 ಚಮಿಮೀ ಯುಜಿ ಕೇಬಲ್	2.45 ಕಿಮೀ
			66ಕೆವಿ 630 ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ

ಕೈಬಿಡಲಾದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ/ಉದ್ದಗಳು
220 ಕೆವಿ ಮತ್ತು ಮೇಲ್ಪಟ್ಟ ವೋಲ್ಟೇಜ್ ವರ್ಗಗಳ ಕಾಮಗಾರಿಗಳು	4	71049.94	400/220 ಕೆವಿ, 500ಎಂವಿಎ ವಿದ್ಯುತ್ ಪರಿವರ್ತಕಗಳು	2 ಸಂಖ್ಯೆ
			220/66/11 ಕೆವಿ, 150ಎಂವಿಎ ವಿದ್ಯುತ್ ಪರಿವರ್ತಕಗಳು	2 ಸಂಖ್ಯೆ
			220/110/11ಕೆವಿ, 100ಎಂವಿಎ ವಿದ್ಯುತ್ ಪರಿವರ್ತಕಗಳು	2 ಸಂಖ್ಯೆ
			220/66/11ಕೆವಿ, 100ಎಂವಿಎ ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			110/11ಕೆವಿ, 20ಎಂವಿಎ ವಿದ್ಯುತ್ ಪರಿವರ್ತಕಗಳು	2 ಸಂಖ್ಯೆ
			66/11ಕೆವಿ, 12.5ಎಂವಿಎ ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			400 ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	01 ಸಂಖ್ಯೆ
			400 ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು.	ಯಾವುದೂ ಇಲ್ಲ

ಕೈಬಿಡಲಾದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ/ಉದ್ದಗಳು
			220 ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	01 ಸಂಖ್ಯೆ
			220 ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು.	01 ಸಂಖ್ಯೆ
			220 ಕೆವಿ ರಿಪೇರಿ ಮತ್ತು ನಿರ್ವಹಣಾ ಕಾಮಗಾರಿಗಳು	ಯಾವುದೂ ಇಲ್ಲ
			400 ಕೆವಿ ಓಎಚ್ ಮಾರ್ಗಗಳು	116.268 ಕಿಮೀ
			220 ಕೆವಿ ಓಎಚ್ ಮಾರ್ಗಗಳು	19.388 ಕಿಮೀ
			110 ಕೆವಿ ಓಎಚ್ ಮಾರ್ಗಗಳು	22.075 ಕಿಮೀ
			66 ಕೆವಿ ಓಎಚ್ ಮಾರ್ಗಗಳು	ಯಾವುದೂ ಇಲ್ಲ
			400 ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			220 ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			110 ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			66 ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			220 ಕೆವಿ 1200 ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ
			220 ಕೆವಿ 1000 ಚಮಿಮೀ ಯುಜಿ ಕೇಬಲ್	11.6352ಕಿಮೀ
			66 ಕೆವಿ 1000 ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ
			66 ಕೆವಿ 630 ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ

ಆದೇಶಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
220 ಕೆವಿ ಮತ್ತು ಮೇಲ್ಪಟ್ಟ ವೋಲ್ಟೇಜ್ ವರ್ಗಗಳ ಕಾಮಗಾರಿಗಳು	09	74117.58	400/220ಕೆವಿ, 500 ಎಂವಿಎ ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			220/66/11ಕೆವಿ, 150 ಎಂವಿಎ ವಿದ್ಯುತ್ ಪರಿವರ್ತಕಗಳು	06 ಸಂಖ್ಯೆ
			220/110/11ಕೆವಿ, 100 ಎಂವಿಎ ವಿದ್ಯುತ್ ಪರಿವರ್ತಕಗಳು	05 ಸಂಖ್ಯೆ
			220/66/11ಕೆವಿ, 100 ಎಂವಿಎ ವಿದ್ಯುತ್ ಪರಿವರ್ತಕಗಳು	03 ಸಂಖ್ಯೆ
			110/11ಕೆವಿ, 10 ಎಂವಿಎ ವಿದ್ಯುತ್ ಪರಿವರ್ತಕಗಳು	02ಸಂಖ್ಯೆ.
			110/11ಕೆವಿ, 20 ಎಂವಿಎ ವಿದ್ಯುತ್ ಪರಿವರ್ತಕಗಳು	ಯಾವುದೂ ಇಲ್ಲ
			66/11ಕೆವಿ 12.5 ಎಂವಿಎ ವಿದ್ಯುತ್ ಪರಿವರ್ತಕಗಳು	02 ಸಂಖ್ಯೆ
			400 ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	ಯಾವುದೂ ಇಲ್ಲ
			400 ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು.	ಯಾವುದೂ ಇಲ್ಲ
			220 ಕೆವಿ ಏರ್ ಇನ್ಸುಲೇಟೆಡ್ ಕೇಂದ್ರಗಳು.	02 ಸಂಖ್ಯೆ

ಆದೇಶಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
			220 ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು.	02 ಸಂಖ್ಯೆ
			220 ಕೆವಿ ರಿಪೇರಿ ಮತ್ತು ನಿರ್ವಹಣಾ ಕಾಮಗಾರಿಗಳು	ಯಾವುದೂ ಇಲ್ಲ
			400 ಕೆವಿ ಓಎಚ್ ಮಾರ್ಗಗಳು	ಯಾವುದೂ ಇಲ್ಲ
			220ಕೆವಿ ಓಎಚ್ ಮಾರ್ಗಗಳು	131.904 ಕಿಮೀ
			110ಕೆವಿ ಓಎಚ್ ಮಾರ್ಗಗಳು	125.426 ಕಿಮೀ
			66 ಕೆವಿ ಓಎಚ್ ಮಾರ್ಗಗಳು	ಯಾವುದೂ ಇಲ್ಲ
			400 ಕೆವಿ ಟರ್ಮಿನಲ್ ಬೇ ಗಳು	ಯಾವುದೂ ಇಲ್ಲ
			220 ಕೆವಿ ಟರ್ಮಿನಲ್ ಬೇ ಗಳು	03 ಸಂಖ್ಯೆ
			110 ಕೆವಿ ಟರ್ಮಿನಲ್ ಬೇ ಗಳು	03 ಸಂಖ್ಯೆ
			66 ಕೆವಿ ಟರ್ಮಿನಲ್ ಬೇ ಗಳು	03 ಸಂಖ್ಯೆ
			66ಕೆವಿ ಹೈ ಬ್ರೀಡ್ ಸ್ವಿಚ್‌ಗೇರ್‌ಗಳು	02 ಸಂಖ್ಯೆ
			220ಕೆವಿ 1200 ಚಮಿಮೀ ಯುಜಿ ಕೇಬಲ್	ಯಾವುದೂ ಇಲ್ಲ
			220ಕೆವಿ 1000 ಚಮಿಮೀ ಯುಜಿ ಕೇಬಲ್	4.5 ಕಿಮೀ
			66ಕೆವಿ 1000 ಚಮಿಮೀ ಯುಜಿ ಕೇಬಲ್	5.78 ಕಿಮೀ
			66ಕೆವಿ 630 ಚಮಿಮೀ ಯುಜಿ ಕೇಬಲ್	0.03 ಕಿಮೀ.

ii) <u>110ಕೆವಿ ಮತ್ತು 66 ಕೆವಿ ಕಾಮಗಾರಿಗಳು:</u>

ಆಹ್ವಾನಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
ಕೆಆರ್‌ಸಿಎಲ್‌ಗಾಗಿ ಮಾನವ ರಹಿತ 110 ಕೆವಿ ಸ್ವಿಚಿಂಗ್ ಕೇಂದ್ರಗಳು, 110/11 ಕೆವಿ ಉಪ ಕೇಂದ್ರಗಳ ಜೊತೆಗಿನ ಸಂಯೋಜಿತ ಮಾರ್ಗಗಳು ಮತ್ತು ಟರ್ಮಿನಲ್ ಬೇಗಳು. 66/11 ಕೆವಿ ಉಪ ಕೇಂದ್ರಗಳ ಜೊತೆಗೆ ಸಂಯೋಜಿತ ಮಾರ್ಗಗಳು ಮತ್ತು ಟರ್ಮಿನಲ್ ಬೇಗಳು. 66ಕೆವಿ ಗ್ಯಾಸ್ ಇನ್ಸುಲೇಟೆಡ್ ಕೇಂದ್ರಗಳು. 66ಕೆವಿ ಓಎಚ್ ಮಾರ್ಗಗಳ ಜೊತೆಗಿನ ಸಂಯೋಜಿತ	52	54598.76	ಕೆಆರ್‌ಸಿಎಲ್‌ಗಾಗಿ ಮಾನವ ರಹಿತ 110 ಕೆವಿ ಸ್ವಿಚಿಂಗ್ ಕೇಂದ್ರಗಳು.	03 ಸಂಖ್ಯೆ
			110/11 ಕೆವಿ ಉಪ ಕೇಂದ್ರಗಳು	13 ಸಂಖ್ಯೆ
			66/11 ಕೆವಿ ಉಪ ಕೇಂದ್ರಗಳು	10 ಸಂಖ್ಯೆ
			66 ಕೆವಿ ಗ್ಯಾಸ್ ಇನ್ಸುಲೇಟೆಡ್ ಉಪ ಕೇಂದ್ರಗಳು.	01 ಸಂಖ್ಯೆ
			110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು.	17 ಸಂಖ್ಯೆ
			66/11ಕೆವಿ, 12.5 ಎಂವಿಎ ವಿದ್ಯುತ್ ಪರಿವರ್ತಕಗಳು.	03 ಸಂಖ್ಯೆ
			66/11ಕೆವಿ, 8 ಎಂವಿಎ ವಿದ್ಯುತ್ ಪರಿವರ್ತಕಗಳು.	09 ಸಂಖ್ಯೆ
			66ಕೆವಿ ಓಎಚ್ ಮಾರ್ಗಗಳು	289.673ಕಿಮೀ

ಆಹ್ವಾನಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
ಟರ್ಮಿನಲ್ ಬೇಗಳು. 110ಕೆವಿ ಓಎಚ್ ಮಾರ್ಗಗಳ ಜೊತೆಗಿನ ಸಂಯೋಜಿತ ಟರ್ಮಿನಲ್ ಬೇಗಳು. 66ಕೆವಿ ಹೈ ಬ್ರೀಡ್ ಸ್ವಿಚ್‌ಗೇರ್‌ಗಳು, 110ಕೆವಿ ಯುಜಿ ಕೇಬಲ್ ಮಾರ್ಗಗಳು ಮತ್ತು 66ಕೆವಿ ಯುಜಿ ಕೇಬಲ್ ಮಾರ್ಗಗಳು.			110ಕೆವಿಓಎಚ್ ಮಾರ್ಗಗಳು	679.571ಕಿಮೀ
			ಮೂರು 66ಕೆವಿ ಹೈಬ್ರಿಡ್ ಸ್ವಿಚ್‌ಗೇರ್‌ಗಳು	1 ಸಂಖ್ಯೆ
			110 ಕೆವಿ ಟರ್ಮಿನಲ್ ಬೇ ಗಳು	23 ಸಂಖ್ಯೆ
			66 ಕೆವಿ ಟರ್ಮಿನಲ್ ಬೇ ಗಳು	15 ಸಂಖ್ಯೆ
			110ಕೆವಿ, 1ಸಿx630ಚಮಿಮೀ ಯುಜಿ ಕೇಬಲ್ ಮಾರ್ಗಗಳು	7.922 ಕಿಮೀ
			66ಕೆವಿ, 1ಸಿx630ಚಮಿಮೀ ಯುಜಿ ಕೇಬಲ್ ಮಾರ್ಗಗಳು	1.37 ಕಿಮೀ

ಕೈಬಿಡಲಾದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
110/11ಕೆವಿ ಉಪ ಕೇಂದ್ರಗಳು ಅದಕ್ಕೆಸಂಬಂಧಿಸಿದ ಮಾರ್ಗಗಳು, 66ಕೆವಿ ಓಎಚ್ ಮಾರ್ಗಗಳು ಅದಕ್ಕೆ ಸಂಬಂಧಿಸಿದ ಟರ್ಮಿನಲ್ ಬೇಗಳು, 66ಕೆವಿ ಹೈಬ್ರಿಡ್ ಸ್ವಿಚ್‌ಗೇರ್‌ಗಳು 110ಕೆವಿ ಯುಜಿ ಕೇಬಲ್ ಮಾರ್ಗಗಳು ಮತ್ತು 66ಕೆವಿ ಯುಜಿ ಮಾರ್ಗಗಳು	8	12310.40	110/11ಕೆವಿ ಕೆಂದ್ರಗಳು	1 ಸಂಖ್ಯೆ
			ಮೂರು 66ಕೆವಿ ಹೈಬ್ರಿಡ್ ಸ್ವಿಚ್‌ಗೇರ್‌ಗಳು	1 ಸಂಖ್ಯೆ
			110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು	01 ಸಂಖ್ಯೆ
			110ಕೆವಿ ಓಎಚ್ ಮಾರ್ಗಗಳು	11.662 ಕಿಮೀ
			66ಕೆವಿ ಓಎಚ್ ಮಾರ್ಗಗಳು	63.094 ಕಿಮೀ (04 ಸಂಖ್ಯೆ)
			66ಕೆವಿ ಟರ್ಮಿನಲ್ ಬೇ ಗಳು	04 ಸಂಖ್ಯೆ
			110ಕೆವಿ,1ಸಿx630ಚಮಿಮೀ ಯುಜಿ ಕೇಬಲ್ ಮಾರ್ಗಗಳು	7.922 ಕಿಮೀ (01 ಸಂಖ್ಯೆ)
			66ಕೆವಿ, 1ಸಿx1000ಚಮಿಮೀ ಯುಜಿ ಕೇಬಲ್ ಮಾರ್ಗಗಳು	4.91 ಕಿಮೀ (01 ಸಂಖ್ಯೆ)

ಆದೇಶಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
ಕೆಆರ್‌ಸಿಎಲ್‌ಗಾಗಿ ಮಾನವ ರಹಿತ 110 ಕೆವಿ ಸ್ವಿಚಿಂಗ್ ಕೇಂದ್ರಗಳು, 110/11 ಉಪ ಕೇಂದ್ರಗಳು ಅದಕ್ಕೆ ಸಂಬಂಧಿಸಿದ ಮಾರ್ಗಗಳು 110ಕೆವಿ ಓಎಚ್ ಮಾರ್ಗಗಳು ಅದಕ್ಕೆ ಸಂಬಂಧಿಸಿದ ಟರ್ಮಿನಲ್ ಬೇಗಳು, 66ಕೆವಿಓಎಚ್ ಮಾರ್ಗಗಳು ಅದಕ್ಕೆ ಸಂಬಂಧಿಸಿದ	32	31138.62	ಕೆಆರ್‌ಸಿಎಲ್‌ಗಾಗಿ ಮಾನವ ರಹಿತ 110 ಕೆವಿ ಸ್ವಿಚಿಂಗ್ ಕೇಂದ್ರಗಳು,	03 ಸಂಖ್ಯೆ
			110/11 ಕೆವಿ ಕೆಂದ್ರಗಳು	11 ಸಂಖ್ಯೆ
			66/11 ಕೆವಿ ಕೆಂದ್ರಗಳು	14 ಸಂಖ್ಯೆ
			110/33ಕೆವಿ, 20ಎಂವಿಎವಿದ್ಯುತ್ ಪರಿವರ್ತಕಗಳು	01 ಸಂಖ್ಯೆ
			110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು	17 ಸಂಖ್ಯೆ
			66/11ಕೆವಿ, 12.5ಎಂವಿಎ ವಿದ್ಯುತ್ ಪರಿವರ್ತಕಗಳು	06 ಸಂಖ್ಯೆ

ಆದೇಶಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ / ಉದ್ದಗಳು
ಟರ್ಮಿನಲ್ ಬೇಗಳು, 66ಕೆವಿ 1ಸಿx1000ಚಮಿಮೀ ಯುಜಿ ಕೇಬಲ್ ಮಾರ್ಗಗಳು, 66ಕೆವಿ 1ಸಿx630ಚಮಿಮೀ ಯುಜಿ ಕೇಬಲ್ ಮಾರ್ಗಗಳು			66/11ಕೆವಿ, 8ಎಂವಿಎ ವಿದ್ಯುತ್ ಪರಿವರ್ತಕಗಳು	10 ಸಂಖ್ಯೆ
			66ಕೆವಿಓವರ್‌ಹೆಡ್ ಮಾರ್ಗಗಳು	130.686 ಕಿಮೀ
			110ಕೆವಿಓವರ್‌ಹೆಡ್ ಮಾರ್ಗಗಳು	155.726 ಕಿಮೀ
			110ಕೆವಿ ಟರ್ಮಿನಲ್ ಬೇ ಗಳು	06 ಸಂಖ್ಯೆ
			66 ಕೆವಿ ಟರ್ಮಿನಲ್ ಬೇ ಗಳು	05 ಸಂಖ್ಯೆ
			66ಕೆವಿ, 1ಸಿx1000ಚಮಿಮೀ ಯುಜಿ ಕೇಬಲ್ ಮಾರ್ಗಗಳು	3.678 ಕಿಮೀ
			66ಕೆವಿ, 1ಸಿx630ಚಮಿಮೀ ಯುಜಿ ಕೇಬಲ್ ಮಾರ್ಗಗಳು	1.37 ಕಿಮೀ

2) ಸರಕುಗಳು ಮತ್ತು ಸೇವೆಗಳು:–

2019–20 ರ ಅವಧಿಯಲ್ಲಿ ಸರಕಗಳ ಖರೀದಿ ಮತ್ತು ಸೇವೆಗಳು		
ಖರೀದಿಸಿದ ಸರಕು ಮತ್ತು ಸೇವೆಗಳ ವಿವರಣೆ	ಖರೀದಿ ಆದೇಶಗಳ ಮೊತ್ತ (ರೂ.ಕೋಟಿಗಳಲ್ಲಿ)	ಸಂಬಂಧಿಸಿದ ಕಾಮಗಾರಿ
ವಿದ್ಯುತ್ ಪರಿವರ್ತಕಗಳು, ಆರ್‌ಟಿ ಮತ್ತು ಆರ್ ಅಂಡ್ ಡಿ ಶಾಖೆಗೆ ಅವಶ್ಯವಿರುವ ಉಪಕರಣಗಳು, ಆರ್‌ಟಿಯು ಮತ್ತು ಡಿಸಿಯುಗಳಿಗೆ ಸ್ವಿಚ್‌ಗೇರ್‌ಗಳು, ಸರಬರಾಜು ಮತ್ತು ಏಕೀಕರಣ, ಇನ್‌ಫ್ರಾರೆಡ್ ಥರ್ಮೋವಿಷನ್ ಕ್ಯಾಮೆರಾಗಳು, ಕ್ಯಾಪಾಸಿಟರ್ ವೋಲ್ಟೇಜ್ ಪರಿವರ್ತಕಗಳು, ಹೊರಾಂಗಣದಲ್ಲಿ ಬಳಕೆ ಮಾಡಲು 11ಕೆವಿ ಕಾಂಪ್ಯಾಕ್ಟ್ ರಿಂಗ್ ಮೇನ್ ಯೂನಿಟ್ ಹಾಗೂ ಪೀಠೋಪಕರಣಗಳ ಖರೀದಿ.	103.50	ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಬದಲಾಯಿಸುವ ಕಾಮಗಾರಿಗಳು

ಯೋಜನೆ ಮತ್ತು ಸಮನ್ವಯ:

ಧ್ಯೇಯ:–

ಸಂವಹನ ಜಾಲವನ್ನು ಬಲಪಡಿಸುವುದು ಮತ್ತು ಉತ್ಪಾದಿಸಿದ ವಿದ್ಯುತನ್ನು ಲೋಡ್ ಕೇಂದ್ರಕ್ಕೆ ರವಾನಿಸುವ ಸಲುವಾಗಿ ಸಂಯೋಜನೆ, ನವೀಕರಣ ಮತ್ತು ಕಾರ್ಯಗತಗೊಳಿಸಲು ಸಮಗ್ರ ಪ್ರಸರಣ ಮಾಸ್ಟರ್ ವಿನ್ಯಾಸವನ್ನು ಕಾರ್ಯರೂಪಕ್ಕೆ ತರುವುದು.

ಉದ್ದೇಶಗಳು:

1) ವಿದ್ಯುಚ್ಛಕ್ತಿ ಕಾಯ್ದೆ–2003 ರಲ್ಲಿ ರೂಪಿಸಿದಂತೆ ಕನಿಷ್ಠ ದರದಲ್ಲಿ ಸಮರ್ಥವಾಗಿ ಸಂಯೋಜನೆಯ ಮೂಲಕ ರಾಜ್ಯದಲ್ಲಿ ಪ್ರಸರಣ ಜಾಲವನ್ನು ವಿಸ್ತರಿಸುವುದು.

2) ವಿಶ್ವಾಸನೀಯ ಮತ್ತು ಸುರಕ್ಷತೆಯ ಮೂಲ ತತ್ವಗಳನ್ನೊಳಗೊಂಡ ಗುಣಮಟ್ಟದ ಪ್ರಸರಣ ವ್ಯವಸ್ಥೆಯ ಯೋಜನೆಗಳನ್ನು ನಿರ್ಮಿಸುವುದು.

ಕಾರ್ಯಸೂಚಿ:

1) ವಿದ್ಯುತ್ ಪ್ರಸರಣದ ತಾಂತ್ರಿಕ ಸಲಕರಣೆಗಳ ವಿಶಿಷ್ಠ ವಿವರಣೆಯ ತಯಾರಿಕೆ.

2) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧೀಕಾರ, ಕೇಂದ್ರ ವಿದ್ಯುತ್ ಪ್ರಸರಣ, ವಿದ್ಯುತ್ ಸರಬರಾಜು ಕಂಪನಿಗಳು, ಕೇಂದ್ರ ಮತ್ತು ರಾಜ್ಯದ ಸ್ವತಂತ್ರ ವಿದ್ಯುತ್ ಉತ್ಪಾದಕರೊಂದಿಗೆ ರಾಜ್ಯದ ಪ್ರಸರಣ ವ್ಯವಸ್ಥೆಗೆ ಸಂಬಂಧಿಸಿದ ಯೋಜನೆ ಮತ್ತು ಸಮನ್ವಯದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಪೂರೈಸುವುದು.

3) ಎಲ್‌ಟಿಒಎಮತ್ತು ಎಂಟಿಒಎ ಅಡಿಯಲ್ಲಿ ಪ್ರಸರಣ ವ್ಯವಸ್ಥೆಗೆ ತಾರತಮ್ಯವಿಲ್ಲದೆ ಮುಕ್ತ ಪ್ರವೇಶವನ್ನು ಒದಗಿಸುವುದು.

2019–20ನೇ ಆರ್ಥಿಕ ವರ್ಷಕ್ಕೆ ಪ್ರಸರಣ ವ್ಯವಸ್ಥೆಯ ಯೋಜನೆ ಮತ್ತು ಅಂಗೀಕರಿಸಿರುವುದು.

ಕವಿಪ್ರನಿನಿಯು ರಾಜ್ಯದ ಪ್ರಸರಣ ಸಂಸ್ಥೆಯಾಗಿದ್ದು, ವಿದ್ಯುಚ್ಛಕ್ತಿ ಕಾಯಿದೆ, 2003 ರ ಪ್ರಕರಣ 39(2) ರಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ. ತದನುಸಾರವಾಗಿ, ರಾಜ್ಯದಲ್ಲಿ ವಿದ್ಯುತ್ ಸಾಮರ್ಥ್ಯ ವರ್ಧನೆ ಹಾಗೂ ವಿದ್ಯುತ್ ಬೇಡಿಕೆಯ ಯೋಜನೆಯನ್ನು ಪರಿಗಣಿಸಿ ಪ್ರಸರಣ ವ್ಯವಸ್ಥೆಯ ಯೋಜನೆಯನ್ನು ಹೊಂದಿಸಲಾಗಿದೆ. ಸಂಸ್ಥೆಯೊಳಗೆ ಅಧ್ಯಯನವನ್ನು ನಡೆಸಿ, ತಾಂತ್ರಿಕ ಸಮನ್ವಯ ಸಮಿತಿಯಿಂದ ಅನುಮೋದನೆ ಪಡೆದು ಕೆಳಕಂಡಂತೆ ಪ್ರಸರಣ ವ್ಯವಸ್ಥೆಯನ್ನು ಯೋಜಿಸಲಾಗಿದೆ:

ವೋಲ್ಟೇಜ್ ವರ್ಗ (ಕೆ.ವಿ.)	ಉಪಕೇಂದ್ರಗಳು (ಸಂಖ್ಯೆಗಳಲ್ಲಿ)	
	ಯೋಜಿತ	ಅನುಮೋದಿತ
400	2	2
220	10	9
110	35	32
66	30	28
ಒಟ್ಟು	**77**	**71**

2019–20ರ ವರ್ಷಕ್ಕೆ ನವೀಕರಿಸ ಬಹುದಾದ ವಿದ್ಯುತ್ ಸ್ಥಾವರ ಸಾಮರ್ಥ್ಯ ಸೇರ್ಪಡೆ:

ಕ್ರಮ ಸಂಖ್ಯೆ	ಪ್ರವರ್ಗ	ಅನುಮತಿಸಿರುವ ವಿದ್ಯುತ್ ಬಳಕೆ ಸಾಮರ್ಥ್ಯ (ಮೆ.ವಾ.ಗಳಲ್ಲಿ)	ಜಾಲದೊಂದಿಗೆ ಪರಸ್ಪರ ಸಂಪರ್ಕಗೊಂಡಿರುವುದು (ಮೆ.ವಾ.ಗಳಲ್ಲಿ)
1	ಪವನ ವಿದ್ಯುತ್	424.8	86.5
2	ಸಣ್ಣ ಜಲ ವಿದ್ಯುತ್	6	3.5
3	ಸಹ ಉತ್ಪಾದನೆ	0	29
4	ಜೈವಿಕ+ನಿರ್ಬಂಧಿತ+ ಉಷ್ಣ	45	49
5	ಸೌರ ಶಕ್ತಿ	473.5	425
6	ಘನ ತ್ಯಾಜ್ಯ	15	0
ಒಟ್ಟು		**964.3**	**593**

ಉಪಕೇಂದ್ರ ಹಾಗೂ ಪ್ರಸರಣ ಮಾರ್ಗಗಳ ತಾಂತ್ರಿಕತೆಯಲ್ಲಿ ಅಳವಡಿಸಿರುವ ಸುಧಾರಣೆಗಳು:

a) ಆರ್.ಇ ಜನರೇಟರ್‌ನ ಗರಿಷ್ಠ ನುಗ್ಗುವ ಮಟ್ಟವನ್ನು ವಿಶೇಷವಾಗಿ ಕರ್ನಾಟಕ ಗ್ರಿಡ್‌ನಲ್ಲಿ ವಿಂಡ್ ಮತ್ತು ಸೋಲಾರ್‌ನಿಂದ 2016 ರಿಂದ 2021 ರವರೆಗೆ ಮೌಲ್ಯಮಾಪನ.

b) ವಿದ್ಯುತ್ ವ್ಯವಸ್ಥೆ ಅಬಿವೃದ್ಧಿ ನಿಧಿಯಡಿಯಲ್ಲಿ ಅಂದಾಜು ರೂ.74.87 ಕೋಟಿ ವೆಚ್ಚದಲ್ಲಿ, ಎಲ್ಲಾ 220ಕೆವಿ ಸ್ವೀಕರಣಾ ಕೇಂದ್ರಗಳಿಗೆ ಮೈನ್–2 ಪ್ರೋಟೆಕ್ಷನ್ ಅಳವಡಿಕೆ.

c) ಅಂದಾಜು ರೂ.74 ಕೋಟಿ ವೆಚ್ಚದಲ್ಲಿ, ರಾಜ್ಯದಾದ್ಯಂತ 1508 ಎಂ.ವಿ.ಎ.ಆರ್ ಹೊಸ ಕ್ಯಪಾಸಿಟರ್ ಬ್ಯಾಂಕ್‌ಗಳ ಅಳವಡಿಕೆ.

d) ಎನ್.ಸಿ.ಇ.ಎಫ್. ಅನುದಾನದೊಂದಿಗೆ, ವಿದ್ಯುತ್ ಯೋಜನೆಯ ಗ್ರೀನ್‌ಎನರ್ಜಿ ಕಾರಿಡಾರ್ ಪ್ರಾಜೆಕ್ಟ್ಸ್ ಫೇಸ್–1 ಅಡಿಯಲ್ಲಿ ಅಂದಾಜು ರೂ.906 ಕೋಟಿ ವೆಚ್ಚದಲ್ಲಿ, ನವೀಕರಿಸಬಹುದಾದ ವಿದ್ಯುತ್ಪಾದನೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು 7 ಹೊಸ ಯೋಜನೆಗಳನ್ನು ಡಿಸೆಂಬರ್ 2020ರ ಒಳಗೆ ಪೂರ್ಣಗೊಳಿಸಲಾಗುವುದು.

e) ಗ್ರೀನ್ ಎನರ್ಜಿ ಕಾರಿಡಾರ್ ಪ್ರಾಜೆಕ್ಟ್ಸ್ ಫೇಸ್–2 ಅಡಿಯಲ್ಲಿ ಅಂದಾಜು ರೂ.2500 ಕೋಟಿ ವೆಚ್ಚದಲ್ಲಿ, ನವೀಕರಿಸಬಹುದಾದ ವಿದ್ಯುತ್ಪಾದನೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು 13 ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

f) ವಿದ್ಯುತ್ ಪ್ರಸರಣದ ಸ್ಥಿತಿಯನ್ನು ಉತ್ತಮಗೊಳಿಸಲು / ನವಿಕರಿಸಬಹುದಾದ ವಿದ್ಯುತ್ ಉತ್ಪಾದನೆಯ ವ್ಯವಸ್ಥೆಯನ್ನು ಉತ್ತಮಗೊಳಿಸಲು ಯಲವಾರ್, ಪೀಣ್ಯ, ಕಲಬುರಗಿ, ಕಡಕೋಳ, ಹುಲಿಯೂರುದುರ್ಗಾ, ದೊಮ್ಮಸಂದ್ರ ಹಾಗೂ ಕುಷ್ಟಗಿಯಲ್ಲಿ 400/220 ಕೆ.ವಿ. ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

g) ಶರಾವತಿಯಲ್ಲಿ ಪ್ರಸ್ತಾವಿತ 2000 ಮೆ. ವ್ಯಾ. ಸಾಮರ್ಥ್ಯದ ಪಂಪ್‌ಡ್ ಸ್ಟೋರೇಜ್ ಘಟಕವನ್ನುಇವಾಕ್ಯುವೆಷನ್ ಸ್ಕೀಮ್‌ನ ಅಡಿಯಲ್ಲಿ ಅಂತಿಮಗೊಳಿಸಲಾಗಿದೆ.

h) ಹೂಡಿಯ ಮಾನವ ರಹಿತ 400ಕೆ.ವಿ. ಉಪಕೇಂದ್ರವನ್ನು ನೇರವಾಗಿ 220ಕೆ.ವಿ. ಹೂಡಿ ಉಪಕೇಂದ್ರದಿಂದಲೇ ನಿಯಂತ್ರಿಸುವುದು.

i) ದಿನಾಂಕ:04.10.2019 ರಲ್ಲಿ ನಡೆದ 82ನೇ ತಾಂತ್ರಿಕ ಸಮನ್ವಯ ಸಮಿತಿ ನಡಾವಳಿಯಲ್ಲಿ ಅನುಮೋದಿಸಿರುವಂತೆ, ಹೊಸ 400 ಮತ್ತು 220 ಕೆ.ವಿ(110ಕೆ.ವಿ ಮತ್ತು 66ಕೆ.ವಿ ವಿದ್ಯುತ್ ಉಪಕೇಂದ್ರಗಳಿಗೆ ಅವಶ್ಯವಿರುವ ಜಾಗವು ಲಭ್ಯವಿರುವ ಷರತ್ತಿಗೊಳಪಟ್ಟಿದ್ದು) ಹೊರಹೊಗುವ ಮಾರ್ಗಗಳು ಅಂದಾಜು 1 ರಿಂದ 2ಕಿ.ಮೀ ಅಂತರದಲ್ಲಿ ಹೊರಹೊಮ್ಮುವ ಮಾರ್ಗಗಳಲ್ಲಿ ಬಹು ಮಾರ್ಗ ಬಹು ವೋಲ್ಟೇಜ್‌ಗಗಳ ಪ್ರಸರಣ ಮಾರ್ಗಗಳು/ಗೋಪುರಗಳನ್ನು ಅಳವಡಿಸಿಕೊಳ್ಳುವುದು.

j) ಪ್ರಸ್ತಾವಿತ 220 ಕೆ.ವಿ. ಎಲೆಕ್ಟ್ರಾನಿಕ್ ಸಿಟಿ ಉಪಕೇಂದ್ರದಲ್ಲಿ ಹೊರಾಂಗಣ ಜಿ.ಐ.ಎಸ್ ಅಳವಡಿಕೆ.

k) 220 ಕೆ.ವಿ. ಸುಬ್ರಮಣ್ಯಪುರ ಉಪಕೇಂದ್ರದಲ್ಲಿ ಪ್ರೊಸೆಸ್ ಬಸ್ ಕಂಟ್ರೋಲರ್ ಅಳವಡಿಕೆ.

ರಿಲೇ ಪರೀಕ್ಷೆ, ಸಂಶೋಧನೆ ಮತ್ತು ಅಭಿವೃದ್ಧಿ

ಮುಖ್ಯ ಇಂಜಿನಿಯರ್(ವಿ), ಆರ್ ಟಿ ಮತ್ತು ಆರ್ & ಡಿ ಕಛೇರಿಯ ರಾಜ್ಯ ಪ್ರಸರಣ ವ್ಯವಸ್ಥೆಯಲ್ಲಿ ಮೂರು ಪ್ರಮುಖ ವಿಭಾಗಗಳಾದ ರಿಲೇ ಟೆಸ್ಟಿಂಗ್, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಹಾಟ್ ಲೈನ್ ನಿರ್ವಹಣಾ ಚಟುವಟಿಕೆಗಳ ತಾಂತ್ರಿಕ ನಿಯಂತ್ರಣ ವ್ಯಾಪ್ತಿಯಶಾಖೆ ಹಾಗೂ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ, ಲೈವ್ ಲೈನ್ ನಿರ್ವಹಣೆ ಹಾಗೂ ವಿವಿಧ ಪ್ರಸರಣ ಉಪಕರಣಗಳ ಸ್ಥಿತಿ ಅವಲೋಕನಾಗಳ ಮೇಲ್ವಿಚಾರಣೆ ಇತ್ಯಾದಿಗಳನ್ನು ನಿರ್ವಹಿಸುತ್ತದೆ.

ಎ) ರಿಲೇ ಪರೀಕ್ಷಾ ವಿಭಾಗದ ತಾಂತ್ರಿಕ ಕಾರ್ಯಗಳು:–

ರಿಲೇ ಪರೀಕ್ಷಾ ವಿಭಾಗವು ವಿದ್ಯುತ್ ಪ್ರಸರಣದ ಇ.ಹೆಚ್.ವಿ ಮಾರ್ಗಗಳ 66ಕೆ.ವಿ ಯಿಂದ 400ಕೆ.ವಿ ವರೆಗಿನ ರಕ್ಷಣಾ ವ್ಯವಸ್ಥೆಯನ್ನು ವಿವಿಧ ವಿದ್ಯುತ್ ಉಪಕೇಂದ್ರಗಳ/ಸ್ವೀಕರಣಾ ಕೇಂದ್ರಗಳಲ್ಲಿ ಸ್ಥಾಪಿಸಲಾದ ಎಲ್ಲಾ ರಿಲೇಗಳನ್ನು ಪರೀಕ್ಷಿಸುವ ಹಾಗೂ ನಿರ್ವಹಿಸುವ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಪ್ರಕ್ರಿಯೆಯಲ್ಲಿ ರಾಜ್ಯದಾದ್ಯಂತದ ಇರುವ 1222 ವಿವಿಧ ವೋಲ್ಟೇಜ್ ಹಂತದ ವದ್ಯುತ್ ಉಪಕೇಂದ್ರಗಳ ಕಾರ್ಯಗಳನ್ನು ನಿರ್ವಹಿಸುತ್ತದೆ.(400ಕೆ.ವಿಯ–06, 220ಕೆ.ವಿ–107, 110ಕೆ.ವಿ–432 ಮತ್ತು 66ಕೆ.ವಿ–677 ಉಪ ಕೇಂದ್ರಗಳು) ಸರಿಯಾದ ಆಯ್ದ ಟ್ರಿಪಿಂಗ್ ವ್ಯವಸ್ಥೆ ಆರೋಗ್ಯಕರ ಪ್ರಸರಣ ಮಾರ್ಗವನ್ನು ದೋಷಯುಕ್ತ ಮಾರ್ಗದಿಂದ ಪ್ರತ್ಯೇಕಿಸುವಲ್ಲಿ ಸಹಾಯ ಮಾಡುವ ಪ್ರಕ್ರಿಯೆ ಯಾವುದೇ ಪ್ರಸರಣಾ ವ್ಯವಸ್ಥೆಯ ಬೆನ್ನೆಲುಬಾಗಿದೆ. ಈ ಮೂಲಕ ಪ್ರಮುಖ ಮಾರ್ಗಗಳ ಅನವಶ್ಯಕ ಟ್ರಿಪಿಂಗ್‌ನ ತಡೆಗಟ್ಟುವಿಕೆಯಿಂದ ಪ್ರಸರಣಾ ಜಾಲದ ಕುಸಿತವನ್ನು ತಡೆಯಲು ಸಹಾಯ ಮಾಡುತ್ತದೆ. ಇದಲ್ಲೇ, ಯಾವುದೇ ಪ್ರಸರಣ ಮಾರ್ಗಗಳ ಅನವಶ್ಯಕ ಟ್ರಿಪಿಂಗ್‌ಗಳನ್ನು ವಿಶ್ಲೇಶಿಸಿ ಅವಶ್ಯವಿದ್ದಲ್ಲಿ ಅನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಮುಖ್ಯ ಚಟುವಟಿಕೆಗಳಲ್ಲದೆ, ಕೆಳಗಿನ ಚಟುವಟಿಕೆಗಳನ್ನೂ ಸಹ ನಡೆಸಲಾಗುತ್ತದೆ.

a) ಪ್ರಸರಣಾ ವ್ಯವಸ್ಥೆಯ ಅಂಶಗಳಪರಿಣಾಮಕಾರಿ ರಕ್ಷಣೆಗಾಗಿ ಕೇ.ವಿ.ಆಯೋಗ, ರಾ.ವಿ.ರ ಕೇಂದ್ರ ಮತ್ತು ಪೊಸೊಕೊಅಂತಹ ಸಂಸ್ಥೆಗಳೊಂದಿಗೆ ಸಮನ್ವಯಗೊಳಿಸುವುದು.

b) ರಿಲೇಗಳ ಮತ್ತು ಮೀಟರ್‌ಗಳ ನಿಯತಕಾಲಿಕ ಪರೀಕ್ಷೆ ಮತ್ತು ಮಾಪನಾಂಕಗಳ ನಿರ್ಣಯ ಮಾಡಿಸುವುದರಿಂದ, ರಕ್ಷಣಾ ವ್ಯವಸ್ಥೆ ಮತ್ತು ಮೀಟರ್‌ಗಳ ವ್ಯವಸ್ಥೆಯ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ನಡೆಸುವುದು.

c) ನಿಯತಕಾಲಿಕ ತಪಾಸಣೆ ನಡೆಸುವ ಮೂಲಕ ವಿವಿಧ ವಿದ್ಯುತ್ ಉಪ ಕೇಂದ್ರದ ಉಪಕರಣಗಳ ಸುಸ್ಥಿತಿಯ ಮೇಲ್ವಿಚಾರಣೆ ಮಾಡುವುದು.

d) ಪ್ರಸರಣ ವ್ಯವಸ್ಥೆಯ ಕುಸಿತದ ಕಾರಣಗಳನ್ನು ತನಿಖೆ ಮಾಡಿ ಅದನ್ನು ತಗ್ಗಿಸುವ ಹಾಗೂ ಸರಿಪಡಿಸುವ ಕ್ರಮಗಳನ್ನು ಸೂಚಿಸುವುದು.

e) ಐಪಿಪಿ ಮತ್ತು ಇಹೆಚ್‌ಟಿ ಗ್ರಾಹಕರನ್ನು ಒಳಗೊಂಡಂತೆ ಹಲವಾರು ಪ್ರಸರಣಾ ವ್ಯವಸ್ಥೆಯ ಅಂಶಗಳ ಮೇಲೆ ಪೂರ್ವಭಾವಿ(ಪಿಸಿ) ಪರೀಕ್ಷೆಗಳನ್ನು ನಡೆಸುವುದು.

f) ಪರೀಕ್ಷಾ ಶುಲ್ಕದ ಆಧಾರದ ಮೇಲೆ ಸಂಬಂಧಿಸಿದ ಮೀಟರಿಂಗ್ ಸಲಕರಣೆಗಳೊಂದಿಗೆ ಮೂರನೇ ವ್ಯಕ್ತಿಯ ಮೀಟರ್‌ಗಳ ಪರೀಕ್ಷೆಯನ್ನು ಕೈಗೊಳ್ಳುವುದು.

g) ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣ ವಿಭಾಗದ ಜೊತೆಗೂಡಿ ಟರ್ನ್ ಕೀ ಏಜೆನ್ಸಿಗಳ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ನಿಗಮವು ಖರೀದಿಸಿದ ಸಾಮಗ್ರಿಗಳ ತಪಾಸಣೆಯನ್ನು ಕೈಗೊಳ್ಳುವುದು.

I. ಪ್ರಸಕ್ತ 2019–20ರ ವರ್ಷಕ್ಕೆ ರಿಲೇ ಟೆಸ್ಟಿಂಗ್ ವಿಭಾಗವು ವಿವಿಧ ಕಾಮಗಾರಿಗಳಲ್ಲಿ ಕೈಗೊಂಡ ಚಟುವಟಿಕೆಗಳು ಹಾಗೂ ಸಾಧಿಸಿದ ಪ್ರಗತಿ ಈ ಕೆಳಕಂಡಂತಿದೆ.

i. ಎಲ್ಲಾ ವೋಲ್ಟೇಜ್ ವರ್ಗಗಳ ಉಪ ಕೇಂದ್ರಗಳು ವಿವಿಧ ವಿದ್ಯುತ್ ಪರಿವರ್ತಕಗಳು, ಹೆಚ್ಚುವರಿ ಬೇಗಳು ಮತ್ತು ಐಪಿಪಿ/ಇಹೆಚ್‌ಟಿ ಗ್ರಾಹಕ ಕೇಂದ್ರಗಳ ಪೂರ್ವ ಕಾರ್ಯಾರಂಭ ಪರೀಕ್ಷೆ ನಡೆಸುವುದು ಹಾಗೂ ಬ್ರೇಕ್ ಡೌನ್‌ಗಳನ್ನು ಸರಿಪಡಿಸುವ ಕಾರ್ಯಈ ಕೆಳಗಿನಂತಿವೆ.

ಎಲ್ಲಾ ವೋಲ್ಟೇಜ್ ವರ್ಗಗಳ ಕೇಂದ್ರಗಳಲ್ಲಿ ಪಿ.ಸಿ ಪರೀಕ್ಷೆಗಳನ್ನು ನಡೆಸಿರುವುದು.	ಸಂಖ್ಯೆ	32*
ಎಲ್ಲಾ ವೋಲ್ಟೇಜ್ ವರ್ಗಗಳ ವಿದ್ಯುತ್ ಪರಿವರ್ತಕಗಳಿಗೆ ಪಿ.ಸಿ ಪರೀಕ್ಷೆಗಳನ್ನು ನಡೆಸಿರುವುದು.	ಸಂಖ್ಯೆ	103
ಹೆಚ್ಚುವರಿ ಬೇಗಳಿಗೆ ಪಿ.ಸಿ ಪರೀಕ್ಷೆಗಳನ್ನು ನಡೆಸಿರುವುದು.	ಸಂಖ್ಯೆ	218
ಐಪಿಪಿಗಳಿಗೆ ಪಿ.ಸಿ ಪರೀಕ್ಷೆಗಳನ್ನು ನಡೆಸಿರುವುದು.	ಸಂಖ್ಯೆ	26
ಇಹೆಚ್‌ಟಿ ಗ್ರಾಹಕರ ಕೇಂದ್ರಗಳಲ್ಲಿ ಪಿ.ಸಿ ಪರೀಕ್ಷೆಗಳನ್ನು ನಡೆಸಿರುವುದು.	ಸಂಖ್ಯೆ	9
ಬ್ರೇಕ್ ಡೌನ್ ತನಿಖೆ ಸರಿಪಡಿಸಿರುವ ಸಂಖ್ಯೆ	ಸಂಖ್ಯೆ	2527

ಈ ಮೇಲ್ಕಂಡ ಚಟುವಟಿಕೆಗಳನ್ನು ಹೊರತು ಪಡಿಸಿ ರಿಲೇ ಟೆಸ್ಟಿಂಗ್ ವಿಭಾಗವು ಕೆಐಎಡಿಬಿ ವಿ.ಎನ್.ಪುರ, ಕೆಐಎಡಿಬಿ ದೇವನಹಳ್ಳಿ ಹಾರ್ಡ್‌ವೇರ್ ಪಾರ್ಕ್, ಮಾನ್ಯತಾ ಟೆಕ್ ಪಾರ್ಕ್, ಎಸ್.ಕೆ.ಸ್ಟೀಲ್ಸ್ ಇಹೆಚ್‌ಟಿ, ಆರ್ಕೇಡ್ ಲ್ಯಾಮಿನೇಟ್ಸ್ ಇಹೆಚ್‌ಟಿ, ಶೋಭಾ ಸಿಟಿ ಇಹೆಚ್‌ಟಿ ಹಾಗೂ ಈ ರೀತಿಯ ಕಾಮಗಾರಿಗಳು ಸ್ವಯಂ ಕಾಮಗಾರಿ ಕಾರ್ಯಗಳ/ಠೇವಣಿ ಭದ್ರತಾ ಕಾಮಗಾರಿಗಳ ಆಧಾರದಲ್ಲಿ ಹೊಸದಾಗಿ ಸ್ಥಾಪಿಸಲಾದ 220 ಕೆವಿ ಮತ್ತು 66 ಕೆವಿ ಉಪ ಕೇಂದ್ರಗಳ ಪೂರ್ವ ಕಾರ್ಯಾರಂಭ ಪರೀಕ್ಷೆಗಳಿಗೆ ಸಾಕ್ಷಿಯಾಗಿರುವುದು.

ii. ರಿಲೇಗಳು ಮತ್ತು ಮೀಟರ್‌ಗಳ ಜೊತೆಗಿನ ಮೀಟರಿಂಗ್ ಉಪಕರಣಗಳ ನಿಯತಕಾಲಿಕ ಮಾಪನಾ ಕಾರ್ಯಗಳು ಮೂರನೆ ವ್ಯಕ್ತಿಗಳ ಸಹಿತ ಮತ್ತು ಅದರ ಮೇಲೆ ವಸೂಲಿ ಮಾಡಲಾದ ಮೊತ್ತ.

ರಕ್ಷಣಾತ್ಮಕ ರಿಲೇಗಳನ್ನು ಪರೀಕ್ಷೆಗೆ ಮತ್ತು ಮಾಪನಾ ಕಾರ್ಯಗಳಿಗೆ ಒಳಪಡಿಸಿರುವ ಒಟ್ಟು ಸಂಖ್ಯೆ	ಸಂಖ್ಯೆ	87143
ಕವಿಪ್ರನಿನಿಯ ಉಪಕೇಂದ್ರಗಳಲ್ಲಿ ಅಳವಡಿಸಿರುವ ಮೀಟರ್‌ಗಳನ್ನು ಪರೀಕ್ಷೆ ಮತ್ತು ಕ್ಯಾಲಿಬ್ರೇಷನ್‌ಗೆ ಒಳಪಡಿಸಿರುವ ಒಟ್ಟು ಸಂಖ್ಯೆ	ಸಂಖ್ಯೆ	21068
ಐಪಿಪಿ ಸ್ಥಾವರಗಳಲ್ಲಿ ಅಳವಡಿಸಿರುವ ಮೀಟರ್‌ಗಳನ್ನು ಪರೀಕ್ಷೆ ಮತ್ತು ಕ್ಯಾಲಿಬ್ರೇಷನ್‌ಗೆ ಒಳಪಡಿಸಿರುವ ಒಟ್ಟು ಸಂಖ್ಯೆ	ಸಂಖ್ಯೆ	332
ಇಹೆಚ್‌ಟಿ ಗ್ರಾಹಕರ ಸ್ಥಾವರಗಳಲ್ಲಿ ಅಳವಡಿಸಿರುವ ಮೀಟರ್‌ಗಳನ್ನು ಪರೀಕ್ಷೆ ಮತ್ತು ಕ್ಯಾಲಿಬ್ರೇಷನ್‌ಗೆ ಒಳಪಡಿಸಿರುವ ಒಟ್ಟು ಸಂಖ್ಯೆ	ಸಂಖ್ಯೆ	147
ಮೂರನೆ ವ್ಯಕ್ತಿಯ ಮೀಟರ್‌ಗಳನ್ನು ಹಾಗೂ ಅದರ ಜೊತೆಗೂಡಿರುವ ಮೀಟರಿಂಗ್ ಉಪಕರಣಗಳನ್ನು ಪರೀಕ್ಷಿಸಲು ಸಂಗ್ರಹಿಸಲಾದ ಮೊತ್ತ	ರೂಗಳಲ್ಲಿ	ರೂ.1,82,53,261/–

iii. ಮೇಲ್ಕಂಡವುಗಳನ್ನು ಹೊರತುಪಡಿಸಿ,ಕೇಂದ್ರ ವಿದ್ಯುತ್ ಪ್ರಾಧಿಕಾರ ಮತ್ತು ಗೌರವಾನ್ವಿತ ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗಗಳ ನಿರ್ದೇಶನಗಳ ಅನ್ವಯಕವಿಪ್ರನಿನಿಯ 220ಕೆವಿ ಮತ್ತು ಅದಕ್ಕಿಂತ ಹೆಚ್ಚಿನ ವೋಲ್ಟೇಜ್ ವರ್ಗಗಳ ಉಪ ಕೇಂದ್ರಗಳ ಹಾಲಿ ರಕ್ಷಣಾ ವ್ಯವಸ್ಥೆಯ ಮೂಲ ಸೌಕರ್ಯಗಳನ್ನು ನವೀಕರಿಸಲು ಹಾಗೂ ಉನ್ನತೀಕರಿಸಲು ರೂ.10,760.48 ಲಕ್ಷಗಳಷ್ಟು ಮೊತ್ತಕ್ಕೆ ಕಾರ್ಯಾದೇಶ ನೀಡಲು ಕ್ರಮ ಕೈಗೊಳ್ಳಲಾಗಿದೆ.ವಿದ್ಯುತ್ ಸಚಿವಾಲಯ, ಭಾರತ ಸರ್ಕಾರ ವಿದ್ಯುತ್‌ವ್ಯವಸ್ಥೆಯ ಅಭಿವೃದ್ಧಿ ನಿಧಿಯಿಂದ ರೂ.6042 ಲಕ್ಷಗಳಷ್ಟು ಮೊತ್ತದ ಅನುದಾನವನ್ನು ಮಂಜೂರು ಮಾಡಲಾಗಿದೆ. ಆರ್ಥಿಕ ವರ್ಷ 2016–17 ರಲ್ಲಿ ರೂ.604 ಲಕ್ಷಗಳನ್ನು (10%) ಬಿಡುಗಡೆ ಮಾಡಲಾಗಿದೆ, ಆರ್ಥಿಕ ವರ್ಷ 2017–18 ರಲ್ಲಿ ರೂ.1208.4 ಲಕ್ಷಗಳನ್ನು (20%)

ಬಿಡುಗಡೆಮಾಡಲಾಗಿದೆ. ಹಾಗೂ ಪ್ರಸಕ್ತ ವರ್ಷದಲ್ಲಿ ರೂ.3624 ಲಕ್ಷಗಳನ್ನು (60%) ಬಿಡುಗಡೆಮಾಡಲಾಗಿದೆ.ಕೊನೆಯ (10%) ಮಂಜೂರಾದ ಅನುದಾನ ಮೊತ್ತದ (604 ಲಕ್ಷಗಳ) ಬಿಡುಗಡೆಗಾಗಿ ಕವಿಪ್ರನಿನಿಯು ಯೋಜನೆಯನ್ನು ಸಂಪೂರ್ಣಗೊಳಿಸಿ, ಅದರ ಆರಂಭಿಕ ಮತ್ತು ಬಳಕೆಯ ದೃಢೀಕರಣವನ್ನು ಎನ್‌ಎಲ್‌ಡಿಸಿ ಗೆ ಒದಗಿಸಿದ ನಂತರ ಕೋರಿಕೆ ಸಲ್ಲಿಸಬೇಕಾಗಿರುತ್ತದೆ. ಈ ಯೋಜನೆಯ ಕಾಮಗಾರಿಗಳನ್ನು ಅತಿ ಶೀಘ್ರವಾಗಿ ಸಂಪೂರ್ಣಗೊಳಿಸಲಾಗುವುದು. ಪ್ರಸರಣ ವಲಯಗಳು ಕಾಮಗಾರಿಗಳನ್ನು ನಡೆಸುತ್ತಿರುವುದರಿಂದ ರಕ್ಷಣಾ ಉಪ ಸಮಿತಿಯ ಸಭೆಯಲ್ಲಿ ಆರ್‌ಟಿ ವಿಭಾಗವು ಕವಿಪ್ರನಿನಿಯನ್ನು ಪ್ರತಿನಿಧಿಸುತ್ತಿದ್ದು ಎಸ್‌ಆರ್‌ಪಿಸಿಯು (ಸಿಇಎ) ಸದರಿ ಕಾಮಗಾರಿಗಳ ಪರಿಶೀಲನೆ ನಡೆಸುತ್ತಿರುವುದರಿಂದ, ರಿಲೇ ಪರಿಕ್ಷೇ ವಿಭಾಗವು ಕಾಮಗಾರಿಗಳ ಪ್ರಗತಿಯನ್ನು ಅತೀ ಶೀಘ್ರವಾಗಿ ಅಂತಿಮಗೊಳಿಸಲು ನಿರಂತರವಾಗಿ ಮೇಲ್ವಿಚಾರಣೆಯನ್ನು ನಡೆಸುತ್ತಿದೆ.

ಬಿ. <u>ಸಂಶೋಧನಾ ಮತ್ತು ಅಭಿವೃದ್ಧಿ ಶಾಖೆಯ ತಾಂತ್ರಿಕ ಕಾರ್ಯಗಳು:</u>

ನಿಗಮವು ತನ್ನದೇ ಆದಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಬೆಂಗಳೂರಿನಲ್ಲಿ ಹೊಂದಿದ್ದು, ಅದು ಅಧೀಕ್ಷಕ ಇಂಜಿನಿಯರ್(ವಿ) ರವರ ಮುಖ್ಯಸ್ಥಿಕೆಯಲ್ಲಿ ನಡೆಸಲಾಗುತ್ತಿದೆ. ಕವಿಪ್ರನಿನಿ/ವಿ.ಸ.ಕಂಪನಿಗಳ (ಕೋರಿಕೆಯ ಆಧಾರದಲ್ಲಿ) ಮತ್ತು ಇತರೆ ಖಾಸಗಿ ಫರ್ಮ್‌ಗಳ/ಐಪಿಪಿಗಳ ಎಲ್ಲಾ ಪ್ರಸ್ಥಾವಿತ ಉಪ ಕೇಂದ್ರಗಳ ಸಾಯಿಲ್ ರೆಸಿಸ್ಟಿವಿಟಿ ಮೆಜರ್‌ಮೆಂಟ್‌ಗಳು ಮತ್ತು ಅರ್ಥ್‌ಮ್ಯಾಟ್ ವಿನಯಾಸಗಳನ್ನು ಸಿದ್ಧಪಡಿಸುವಂತಹ ಕಾಮಗಾರಿಗಳನ್ನು ಹಾಗೂ ಪ್ರಸ್ತುತವಿರುವ ಕವಿಪ್ರನಿನಿಯ ಉಪ ಕೇಂದ್ರಗಳಲ್ಲಿ ಅರ್ಥಿಂಗ್‌ಗಳನ್ನು ಪರಿಶೀಲಿಸುವಂತಹ ಕಾರ್ಯಗಳನ್ನು ಆರ್ ಮತ್ತು ಡಿ ಶಾಖೆಯು ಕೈಗೆತ್ತಿಕೊಂಡಿದೆ. ಪ್ರಸ್ತುತವಿರುವ ಉಪಕೇಂದ್ರಗಳ ಉನ್ನತೀಕರಣ ಕಾಮಗಾರಿಗಳಿಗೆ ಅರ್ಥ್‌ಮ್ಯಾಟ್‌ಗಳ ಮರುವಿನ್ಯಾಸ/ಮಾರ್ಪಾಡುಗಳು ಮಾಡುವುದನ್ನು ಕೇಂದ್ರವು ಅನುಮೋದಿಸುತ್ತದೆ. ಅರ್ಥಿಂಗ್‌ಗಳ ದಕ್ಷತೆಯನ್ನು ಪರಿಶೀಲಿಸುವುದು, ವಿದ್ಯುತ್ ಪರಿವರ್ತಕಗಳ ಟಾನ್–ಡೆಲ್ಟಾ ಮತ್ತು ಕೆಪಾಸಿಟನ್ಸ್ ಪರೀಕ್ಷೆಗಳು ನಡೆಸುವುದು (ವೈಂಡಿಗ್ಸ್ ಮತ್ತು ಬುಷಿಗ್ಸ್), 220ಕೆವಿ ಮತ್ತು ಜಿಐಎಸ್ ಕೇಂದ್ರಗಳ ವರ್ಕಿಂಗ್ ಡ್ರಾಯಿಂಗ್‌ಗಳನ್ನು ಅನುಮೋದಿಸುವುದು, ಕವಿಪ್ರನಿನಿಯ ಎಲ್ಲಾ ವಿದ್ಯುತ್ ಪರಿವರ್ತಕಗಳನ್ನು ಐಎಸ್ 1866, ಐಎಸ್ 335 ಮತ್ತು ಐಇಸಿ 60296–2012ಅನ್ವಯ ಆಯಿಲ್ ಸ್ಯಾಂಪಲ್‌ಗಳನ್ನು ನಿಯತಕಾಲಿಕವಾಗಿ ಪರೀಕ್ಷೆಗೆ ಒಳಪಡಿಸುವುದು, ವಿದ್ಯುತ್ ಪರಿವರ್ತಕಗಳ ದೋಷಗಳನ್ನು ಕಂಡುಹಿಡಿಯಲು ಡಿಸಾಲ್ವ್ಡ್ ಗ್ಯಾಸ್ ಅನಾಲಿಸಿಸ್ ಪರೀಕ್ಷೆ, ಫ್ಯೂರನ್ ಅನಾಲಿಸಿಸ್ ಪರೀಕೆಗಳು ಮತ್ತು ಇತರೆ ಬಹಳಷ್ಟು ಪರೀಕ್ಷೆಗಳನ್ನು ಬೆಂಗಳೂರಿನಲ್ಲಿರುವ ಪ್ರಯೋಗಾಲಯದಲ್ಲಿ ನಡೆಸಲಾಗುವುದು.ಆಧುನಿಕರಣ ಕಡೆಗೆ ಮತ್ತು ಕೇಂದ್ರದಲ್ಲಿ ಹೆಚ್ಚುತ್ತಿರುವ ಕೆಲಸದ ಹೊರೆಯನ್ನು ಪೂರೈಸಲು ಹೊಸ ಅತ್ಯಾಧುನಿಕ ಸಾಧನಗಳನ್ನು ಹೆಚ್ಚುವರಿಯಾಗಿ ಖರೀದಿಸಿ ಕೇಂದ್ರದಲ್ಲಿ ಸ್ಥಾಪಿಸಲಾಗಿದೆ.

I. <u>ಸಂಶೋಧನೆ ಮತ್ತು ಅಭಿವೃದ್ಧಿ ಶಾಖೆಯ ನೂತನ ಅಧ್ಯಯನ ಮತ್ತು ಚಟುವಟಿಕೆಗಳು</u>

i. **ಪರಿವರ್ತಕದ ತೈಲವನ್ನು ಪರೀಕ್ಷಿಸುವುದು:** ದೀರ್ಘಾವಧಿ ಕಾಲಕ್ಕಾಗಿ ಉತ್ತಮ ಮಾದರಿಯ ತೈಲವನ್ನು ಖಚಿತಪಡಿಸಿಕೊಳ್ಳಲು ವಿದ್ಯುತ್ ಪರಿವರ್ತಕಗಳ ಹೊಸ ತೈಲವನ್ನು ಐಎಸ್ 1866, ಐಎಸ್ 335 ಮತ್ತು ಐಇಸಿ 60296–2012 ಅನ್ವಯಸಂ ಮತ್ತು ಅ ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗುವುದು.

ii. **ಜಿಐಎಸ್ ವಿನ್ಯಾಸಗಳ ಅನುಮೋದನೆ:** ಸಾಂಪ್ರದಾಯಿಕ ಅರ್ಥ್‌ಮ್ಯಾಟ್ ವಿನ್ಯಾಸದ ಜೊತೆಗೆ, ಜಿಐಸ್ ಉಪಕೇಂದ್ರಗಳ ಅರ್ಥ್‌ಮ್ಯಾಟ್ ವಿನ್ಯಾಸಗಳನ್ನು ಆರ್ ಮತ್ತು ಡಿ ಅನುಮೋದಿಸಿದೆ. ಜಿಐಎಸ್ ಕೇಂದ್ರಗಳಿಗೆ ಕಟ್ಟಗಳು ಸೇರಿದಂತೆ ಸಮಗ್ರ ಅರ್ಥಿಂಗ್ ವ್ಯವಸ್ಥೆಗಳ ವಿವರವಾದ ಅಧ್ಯಯನವನ್ನು ಸಹ ನಡೆಸಲಾಗುತ್ತದೆ. ಟರ್ನ್‌ಕೀ ಏಜೆನ್ಸಿಗಳು ಸಲ್ಲಿಸಿದ ಜಿಐಎಸ್ ಉಪಕೇಂದ್ರಗಳ ವರ್ಕಿಂಗ್ ಡ್ರಾಯಿಂಗ್ಸ್, ಅರ್ಥ್‌ಮ್ಯಾಟ್, ಜಿಐಎಸ್ ಕಟ್ಟಡ/ಮಾಡ್ಯೂಲ್ ಅರ್ಥಿಂಗ್ ವ್ಯವಸ್ಥೆಗಳು ಮತ್ತು ಮಿಂಚಿನ ರಕ್ಷಣೆ ಸೇರಿದಂತೆ ಅರ್ಥ್‌ಮ್ಯಾಟ್‌ಗಳು ಒಳಗೊಂಡ ಸಾಂಪ್ರದಾಯಿಕ ಅರ್ಥಿಂಗ್ ಯೋಜನೆಯ ಬಗ್ಗೆ ಸಂಬಂಧ ಪಟ್ಟ ಏಜೆನ್ಸಿಗಳೊಂದಿಗೆ ಚರ್ಚಿಸಲಾಗುವುದು. ಕವಿಪ್ರನಿನಿಯ ವಾಡಿಕೆಯ ಮತ್ತು ಸಿಬಿಐಟಿ

309 ಮತ್ತು ಐಇಇಇ 80:2000 ರ ಅನುಸಾರವಾಗಿ ಅಗತ್ಯ ಮಾರ್ಪಾಡುಗಳ ವಿನ್ಯಾಸಗಳ ಅನುಮೋದನೆಗೆ ಮುನ್ನ ಸೇರಿಸಲಾಗುವುದು.

iii. **ಕಂದಾಯ ವಸೂಲಾತಿ:** ಕವಿಪ್ರನಿನಿಗೆ ಅರ್ಥ್‌ಮ್ಯಾಟ್ ವಿನ್ಯಾಸಗಳನ್ನು ಕೈಗೊಳ್ಳುವುದರ ಹೊರತುಪಡಿಸಿ, ವಿಸಕಂಗಳ ಉಪಕೇಂದ್ರಗಳಿಗೂ ಹಾಗೂ ಕೋರಿಕೆಯ ಆಧಾರದಲ್ಲಿ ಮತ್ತು ಸಂಗ್ರಹಣೆಯ ಆಧಾರದಲ್ಲಿ ಇತರೆ ಖಾಸಗಿ ಏಜೆನ್ಸಿಗಳಿಗೂ ಅರ್ಥ್‌ಮ್ಯಾಟ್ ವಿನ್ಯಾಸಗಳನ್ನು ಕೇಂದ್ರವು ಸಿದ್ಧಪಡಿಸುತ್ತದೆ. ಈ ರೀತಿಯ ಚಟುವಟಿಕೆಗಳ ಫಲಿತಾಂಶವಾಗಿ ಕೇಂದ್ರವು ಕವಿಪ್ರನಿನಿಯೇತರ ವಿವಿಧ ಉಪಕೇಂದ್ರಗಳಿಗೆ ಸಾಯಿಲ್ ರೆಸಿಸ್ಟಿವಿಟಿ ಪರೀಕ್ಷೆಯನ್ನು ನಡೆಸಿರುತ್ತಾರೆ ಹಾಗೂ ವಿದ್ಯುತ್ ಪರಿವರ್ತಕಗಳ ಟ್ರಾನ್ಸಿಲ್ ತೈಲಾ ಪರೀಕ್ಷೆ ಮತ್ತು ಅರ್ಥ್‌ಮ್ಯಾಟ್ ವಿನ್ಯಾಸವನ್ನು ವಿಸಕಂಗಳು/ಖಾಸಗಿ ಏಜೆನ್ಸಿಗಳು ನೀಡಿರುವ ಸೇವೆಯಿಂದ 2019–20ನೇ ವರ್ಷದಲ್ಲಿ ವಸೂಲಾದಸಲಹಾ/ಪರೀಕ್ಷಾ ಶುಲ್ಕಗಳ ಮೊತ್ತ ರೂ.1,36,37,783/– ಗಳಾಗಿರುತ್ತದೆ.

iv. **ಸೋಡಿಯಂ ಬೆನ್ಜೋನೈಟ್ ಕ್ಲೇ ಟೆಸ್ಟಿಂಗ್:**ಸೋಡಿಯಂ ಬೆನ್ಜೋನೈಟ್ ಕ್ಲೇಇದು ತೇವಾಂಶವನ್ನು ಮರುಕಳಿಸುವ ರಾಸಾಯನಿಕ ವಸ್ತುವಾಗಿದ್ದು, ಇದನ್ನು ಅರ್ಥ್‌ಎಲೆಕ್ಟ್ರೋಡ್/ಅರ್ಥಿಂಗ್ ಬ್ಯಾಕ್ ಫಿಲ್ ರೀತಿಯಲ್ಲಿ ಬಳಸುವುದರಿಂದ ಮಣ್ಣಿನ ನಿರೋಧಕತೆಯನ್ನು ಕಡಿತಗೊಳಿಸಲು ಸಹಾಯ ಮಾಡುತ್ತದೆ. ಕೇಂದ್ರವು ಸೋಡಿಯಂ ಬೆನ್ಜೋನೈಟ್ ಕ್ಲೇ ಮಾದರಿಗಳನ್ನು ಪರೀಕ್ಷೆಗೊಳಪಡಿಸಿ ಅದರ ನಿರೋಧಕತೆಯನ್ನು 10 ಓಂ–ಮೀಟರ್ಸ್‌ಗಳಿಗಿಂತ ಕಡಿಮೆ ಇರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಪಿಹೆಚ್ ವ್ಯಾಲ್ಯೂ 8 ರಿಂದ 10 ರವರೆಗೆ ಇರುವಂತೆ ಹಾಗೂ ಸ್ವೆಲ್ ಇಂಡೆಕ್ಸ್ ಗಾತ್ರವು 8 ಕ್ಕಿಂತ ಹೆಚ್ಚಿರುವುದನ್ನು ಖಚಿತಪಡಿಸಿಕೊಳ್ಳುವುದು.

v. **ಪ್ರಸ್ತುತವಿರುವ ವಿದ್ಯುತ್ ಪರಿವರ್ತಕಗಳ ಮೇಲ್ವಿಚಾರಣಾ ಪರತ್ತುಗಳು:** ಆರ್ & ಡಿ ಕೇಂದ್ರವು ವಾರ್ಷಿಕವಾರು ಆಧಾರದಲ್ಲಿ ಕವಿಪ್ರನಿನಿಯ ಪ್ರಸ್ತುತವಿರುವ ಉಪ ಕೇಂದ್ರಗಳ ಎಲ್ಲಾ ವಿದ್ಯುತ್ ಪರಿವರ್ತಕಗಳ ತೈಲ ಮಾದರಿಗಳ ನಿಯತಕಾಲಿಕ ಪರೀಕ್ಷೆ ಕೈಗೊಂಡು ಪರಿವರ್ತಕದ ಸುಸ್ಥಿತಿಯ ಮೇಲ್ವಿಚಾರಣೆ ನಡೆಸುತ್ತದೆ. ಕೇಂದ್ರದಲ್ಲಿ ಕವಿಪ್ರನಿನಿಯ ಗ್ರಿಡ್‌ನಲ್ಲಿ ಪ್ರಸ್ತುತವಿರುವಎಲ್ಲಾ ವಿದ್ಯುತ್ ಪರಿವರ್ತಕಗಳ ತೈಲ ಪರೀಕ್ಷೆಯ ಫಲಿತಾಂಶಗಳ ಗಣಕೀಕೃತ ಐತಿಹಾಸಿಕ ಮಾಹಿತಿನಿರ್ವಹಿಸಲಾಗುತ್ತಿದೆ. ಸದರಿ ಮಾಹಿತಿಯು ಇತ್ತೀಚಿನ ಪರೀಕ್ಷಾ ಫಲಿತಾಂಶಗಳನ್ನು ಹಿಂದಿನ ಫಲಿತಾಂಶಗಳೊಂದಿಗೆ ಹೋಲಿಸಲು ಮತ್ತು ವಿಶ್ಲೇಷಿಸಲು ಅನುವು ಮಾಡುತ್ತದೆ. 2019–20 ಪ್ರಸಕ್ತ ವರ್ಷದಲ್ಲಿ ಕೇಂದ್ರವು ವಿದ್ಯುತ್ ಪರಿವರ್ತಕಗಳ 3860 ಸಂಖ್ಯೆಗಳಷ್ಟು (ಹೊಸ ಮತ್ತು ಪುನರಾವರ್ತಿತ ಪರೀಕ್ಷಾ ಮಾದರಿಗಳು ಒಳಗೊಂಡಿರುತ್ತದೆ) ತೈಲ ಮಾದರಿಗಳನ್ನು ವಿಶ್ಲೇಷಿಸಿದ್ದು, ಕೇಂದ್ರದ ಸಿಬ್ಬಂದಿಗಳಿಗೆ ಪರಿವರ್ತಕಗಳ ಸ್ಥಿತಿಗಳನ್ನು ಸುಧಾರಿಸುವ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡಿದ್ದು ಸಂಸ್ಥೆಗೆ ಕಂದಾಯ ವೆಚ್ಚವನ್ನು ಕ್ಷೀಣಿತಗೊಳಿಸುತ್ತಿದೆ.

- 2019–20ರ ಪ್ರಸಕ್ತ ವರ್ಷದಲ್ಲಿ 1144 ಸಂಖ್ಯೆಗಳಷ್ಟು ತೈಲ ಮಾದರಿಗಳ ಮೇಲೆ ಡಿಸಾಲ್‌ವುಡ್ ಗ್ಯಾಸ್ ವಿಶ್ಲೇಷಣೆಯನ್ನು ಕೈಗೊಂಡಿದೆ.
- 2019–20ರ ಪ್ರಸಕ್ತ ವರ್ಷದಲ್ಲಿ 1018 ಸಂಖ್ಯೆಗಳಷ್ಟು ತೈಲ ಮಾದರಿಗಳ ಮೇಲೆ ಫ್ಯುರನ್ ವಿಶ್ಲೇಷಣೆಯನ್ನು ನಡೆಸಲಾಗಿದೆ.

ಈ ಚಟುವಟಿಕೆಗಳು ಆರ್ & ಡಿ ಸೆಂಟರ್‌ನಲ್ಲಿ ಸ್ಥಿತಿಯ ಮೇಲಿಚಾರಣೆ ಮತ್ತು ಅನ್ವಯಿಕ ಸಂಶೋಧನಾ ಚಟುವಟಿಕೆಯ ತಿರುಳಾಗಿದೆ. ಕೆಲವು ಕ್ಲಿಷ್ಟಕರ ತಾಂತ್ರಿಕ ಸಮಸ್ಯೆಗಳ ಸಂದರ್ಭದಲ್ಲಿ, ಆರ್ & ಡಿ ಕೇಂದ್ರವು ಮಾಹಿತಿಯನ್ನು ಹಂಚಿಕೊಳ್ಳುತ್ತದೆ. ಹಾಗೂಮೆ॥ ಸಿಪಿಆರ್‌ಐ, ಕೇಂದ್ರ ಸರ್ಕಾರ ಸ್ವಾಮ್ಯದ ಬೆಂಗಳೂರಿನಲ್ಲಿ ನೆಲೆಗೊಂಡಿರುವ ಒಂದು ಸುಸ್ಥಾಪಿತ ಆರ್ & ಡಿ ವಿಭಾಗದಸಂಸ್ಥೆಯೊಂದಿಗೆ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಒಂದು ಸಮಾಲೋಚನೆಯನ್ನು ಆಯೋಜಿಸುತ್ತದೆ.

II. 2019–20 ನೇ ಸಾಲಿನ ಆರ್ & ಡಿ ಕೇಂದ್ರದ ಪ್ರಗತಿಯ ಮಾಹಿತಿ ಈ ಕೆಳಕಂಡಂತಿದೆ.

i. 2019–20ರ ಅವಧಿಯಲ್ಲಿ ನಡೆಸಿದ ಮಣ್ಣಿನ ಪ್ರತಿರೋಧ (SR) ಅಳತೆಗಳು:

ಕ್ರ.ಸಂ	ಕೇಂದ್ರದ ವೋಲ್ಟೇಜ್ ವರ್ಗ	ಪ್ರಸಕ್ತ ವರ್ಷದಲ್ಲಿ ಮಣ್ಣಿನ ಪ್ರತಿರೋಧಕ ಪರೀಕ್ಷೆಗಳನ್ನು ನಡೆಸಿರುವ ಕೇಂದ್ರಗಳ ಸಂಖ್ಯೆ
1	220 ಕೆವಿ ಕೇಂದ್ರ	10
2	110 ಕೆವಿ ಕೇಂದ್ರ	49
3	66 ಕೆವಿ ಕೇಂದ್ರ	32
4	33 ಕೆವಿ ಕೇಂದ್ರ	12
	ಒಟ್ಟು	**103**

ii. **2019–20ರ ಅವಧಿಯಲ್ಲಿ ಅರ್ಥ್‌ಮ್ಯಾಟ್ ವಿನ್ಯಾಸ(ಇಎಮ್‌ಡಿ) ಒದಗಿಸಲಾಗಿದೆ. (ಪ್ರಸ್ತಾವಿತ/ಪರಿಷ್ಕೃತ/ಹೆಚ್ಚುವರಿ ಅರ್ಥ್‌ಮ್ಯಾಟ್‌ಗಳು):**

ಕ್ರ.ಸಂ	ಕೇಂದ್ರದ ವೋಲ್ಟೇಜ್ ವರ್ಗ	ಪ್ರಸಕ್ತ ವರ್ಷದಲ್ಲಿ ಇಎಮ್‌ಡಿಗಳನ್ನು ಒದಗಿಸಿದ ಕೇಂದ್ರಗಳ ಸಂಖ್ಯೆ
1	220 ಕೆವಿ ಕೇಂದ್ರ	14
2	110 ಕೆವಿ ಕೇಂದ್ರ	23
3	66 ಕೆವಿ ಕೇಂದ್ರ	36
4	33 ಕೆವಿ ಕೇಂದ್ರ	3
	ಒಟ್ಟು	**76**

iii. **2019–20ರ ಅವಧಿಯಲ್ಲಿ ಅರ್ಥಿಂಗ್‌ತನಿಖೆಗಳುಹಾಗೂ ಪರಿಹಾರ ಕ್ರಮಗಳು ಸೂಚಿಸಿರುವುದು:**

ಕ್ರ.ಸಂ	ಕೇಂದ್ರದ ವೋಲ್ಟೇಜ್ ವರ್ಗ	ಪ್ರಸಕ್ತ ವರ್ಷದಲ್ಲಿ ಅರ್ಥಿಂಗ್ ತನಿಖೆ ನಡೆಸಿರುವ ಕೇಂದ್ರಗಳ ಸಂಖ್ಯೆ
1	400 ಕೆವಿ ಕೇಂದ್ರ	1
2	220 ಕೆವಿ ಕೇಂದ್ರ	28
3	110 ಕೆವಿ ಕೇಂದ್ರ	19
4	66 ಕೆವಿ ಕೇಂದ್ರ	65
5	33 ಕೆವಿ ಕೇಂದ್ರ	4
	ಒಟ್ಟು	**117**

iv. ಪರಿವರ್ತಕದ ವೈಂಡಿಂಗ್‌ಗಳ ಹಾಗೂ ಬುಷಿಂಗ್‌ಗಳ ಮೇಲೆ ನಡೆಸಿರುವ ಟ್ಯಾನ್ ಡೆಲ್ಟಾ ಮತ್ತು ಕೆಪಸಿಟನ್ಸ್ ಪರೀಕ್ಷೆಗಳು:

ಕ್ರ.ಸಂ	ಕೇಂದ್ರದ ವೋಲ್ಟೇಜ್ ವರ್ಗ	ಪ್ರಸಕ್ತ ವರ್ಷದಲ್ಲಿ ಟ್ಯಾನ್ ಡೆಲ್ಟಾ ಮತ್ತು ಕೆಪಸಿಟನ್ಸ್ ಪರೀಕ್ಷೆಗಳು ನಡೆಸಿರುವ ಪರಿವರ್ತಕಗಳ ಸಂಖ್ಯೆ
1	315 ಕೆವಿ ಕೇಂದ್ರ	2
2	167 ಎಂವಿಎ/ಐಸಿಟಿ	12
3	150 ಎಂವಿಎ	12
4	100 ಎಂವಿಎ	51
5	50 ಎಂವಿಎ	1
6	31.5 ಎಂವಿಎ	32
7	ಸಿ.ಟಿ ಗಳು/ಸಿ.ವಿ.ಟಿ ಗಳು	182
	ಒಟ್ಟು	**292**

v. 2019–20ರ ಅವಧಿಯಲ್ಲಿ ಸ್ಥಿತಿಯ ಮೇಲ್ವಿಚಾರಣಾ ಪರೀಕ್ಷೆಗಳು:

ಪರಿವರ್ತಕಗಳು			
1	ತೈಲ ಮಾದರಿಗಳನ್ನು ವಿಶ್ಲೇಷಿಸುವುದು	ಮಾದರಿಗಳ ಸಂಖ್ಯೆ	3860 ಸಂಖ್ಯೆ
2	ಇನ್ಸುಲೇಷನ್ ಡಯಾಗ್ನೋಸ್ಟಿಕ್ ವಿಶ್ಲೇಷಣೆ (ವಿದ್ಯುತ್ ಪರಿವರ್ತಕದ ಮೇಲೆ ನಡೆಸಿರುವ ಐಡಿಎಎಕ್ಸ್ ಪರೀಕ್ಷೆಗಳು)	ಪರಿವರ್ತಕಗಳ ಸಂಖ್ಯೆ	102 ಸಂಖ್ಯೆ
3	ವಿದ್ಯುತ್ ಪರಿವರ್ತಕದ ಮೇಲೆ ನಡೆಸಿರುವ ಎಸ್‌ಎಫ್‌ಆರ್‌ಎ ಪರೀಕ್ಷೆಗಳು	ಪರಿವರ್ತಕಗಳ ಸಂಖ್ಯೆ	22 ಸಂಖ್ಯೆ
4	ಡಿಸಾಲ್ವ್‌ಡ್ ಗ್ಯಾಸ್ ವಿಶ್ಲೇಷಣೆ	ಮಾದರಿಗಳ ಸಂಖ್ಯೆ	1144 ಸಂಖ್ಯೆ
5	ಫ್ಯೂರನ್ ವಿಶ್ಲೇಷಣೆ	ಮಾದರಿಗಳ ಸಂಖ್ಯೆ	1018 ಸಂಖ್ಯೆ

ಅರ್ಥಿಂಗ್ ವ್ಯವಸ್ಥೆಗಳು			
1	ಸೋಡಿಯಂ ಬೆಂಟೋನೈಟ್ ಕ್ಲೇ ಪರೀಕ್ಷೆಗಳು	ಮಾದರಿಗಳ ಸಂಖ್ಯೆ	3 ಸಂಖ್ಯೆ
2	ಕೇಂದ್ರಗಳ ಅರ್ಥಿಂಗ್ ವಿನ್ಯಾಸ ಅನುಮೋದನೆ	400/220 ಕೆವಿ	9 ಸಂಖ್ಯೆ
3	ಕೇಂದ್ರಗಳ ಉನ್ನತೀಕರಣ ಕಾಮಗಾರಿಗಳಲ್ಲಿ ಅರ್ಥ್‌ಮ್ಯಾಟ್ ವಿನ್ಯಾಸ ಪರಿಶೀಲಿಸುವುದು	ಕೇಂದ್ರಗಳ ಸಂಖ್ಯೆ	263 ಸಂಖ್ಯೆ
4	ಹೆಚ್ಚುವರಿ ಅರ್ಥ್‌ಮ್ಯಾಟ್	ಕೇಂದ್ರಗಳ ಸಂಖ್ಯೆ	53 ಸಂಖ್ಯೆ
ಲೈಟನಿಂಗ್ ಅರೆಸ್ಟರ್ಸ್			
1	ಲೈಟನಿಂಗ್ ಅರೆಸ್ಟರ್ಸ್‌ಗಳ ಮೇಲೆ ಸ್ಥಿತಿ ಮೇಲ್ವಿಚಾರಣಾ ಪರೀಕ್ಷೆಗಳು	ಲೈಟನಿಂಗ್ ಅರೆಸ್ಟರ್ಸ್‌ಗಳ ಸಂಖ್ಯೆ	–
ಒಟ್ಟು (I ರಿಂದ V)			**7062 ಸಂಖ್ಯೆ**

ಸಿ. **<u>ಹಾಟ್‌ಲೈನ್ ಶಾಖೆಯ ತಾಂತ್ರಿಕ ಕಾರ್ಯಗಳು:</u>**

ಹಾಟ್‌ಲೈನ್ ಶಾಖೆಯು ಹಾಟ್ ಸ್ಟಿಕ್ ವಿಧಾನವನ್ನು ಬಳಸಿ ಲೈವ್ ಲೈನ್ ನಿರ್ವಹಣಾ ತಂತ್ರಗಾರಿಕೆಯನ್ನು ಅಳವಡಿಸಿಕೊಂಡು 220 ಕೆವಿ ಮತ್ತು ಅದಕ್ಕಿಂತ ಕಡಿಮೆ ಮಾರ್ಗಗಳ ಮತ್ತು ಕೇಂದ್ರಗಳ ತುರ್ತು ಸ್ಥಿತಿ ನಿರ್ವಹಣಾ ಕಾಮಗಾರಿಗಳ ಹಾಗೂ ಇನ್ಸುಲೇಟೆಡ್ ಎರಿಯಲ್ ಸಹಾಯದಿಂದ ಬೇರ್ ಹ್ಯಾಂಡೆಡ್ ತಂತ್ರಗಾರಿಕೆಯನ್ನು ಬಳಸಿ 400 ಕೆವಿ ಮತ್ತು 220 ಕೆವಿ ಮಾರ್ಗಗಳ ಮತ್ತು ಕೇಂದ್ರಗಳ ಮುನ್ಸೂಚನೆಯ/ತಡೆಗಟ್ಟುವ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ತಂತ್ರವು ಪ್ರಸರಣ ಮಾರ್ಗಗಳ ಹಾಗೂ ಉಪಕೇಂದ್ರಗಳ ನಿರ್ವಹಣೆಯನ್ನು ಖಾತರಿಪಡಿಸುವುದಲ್ಲದೇ ಯಾವುದೇ ಅಡಚಣೆ ಇಲ್ಲದೆ ವಿದ್ಯುತ್ ಪೂರೈಕೆಯ ನಿರಂತರತೆಯನ್ನು ಅಂತಿಮ ಬಳಕೆದಾರರಿಗೆ ಒದಗಿಸುತ್ತದೆ.ಹಾಟ್‌ಲೈನ್ ಶಾಖೆಯು ಲೈವ್ ಪ್ರಸರಣ ಮಾರ್ಗಗಳ ಮತ್ತು ಉಪಕೇಂದ್ರಗಳ ಸ್ವಿಚ್‌ಯಾರ್ಡ್‌ಗಳ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುವಂತಹ ಹಾಟ್‌ಲೈನ್ ತರಬೇತಿ ಕೇಂದ್ರ, ರಾಷ್ಟ್ರೀಯ ವಿದ್ಯುತ್ ತರಬೇತಿ ಸಂಸ್ಥೆ, ಭಾರತ ಸರ್ಕಾರ, ಸೋಮನಹಳ್ಳಿ, ಬೆಂಗಳೂರು ರವರು ನೀಡಿರುವ ಹಾಟ್‌ಲೈನ್ ತಂತ್ರಗಾರಿಕೆಯ ಅಗಾಧವಾದ ತರಬೇತಿಗೆ ಒಳಪಟ್ಟ ಸುಸಜ್ಜಿತ ಸಿಬ್ಬಂದಿಯನ್ನು ಹೊಂದಿದೆ.ಈ ಕೆಳಕಂಡ ಚಟುವಟಿಕೆಗಳು ಸಾಮಾನ್ಯವಾಗಿ ಹಾಟ್‌ಲೈನ್ ಶಾಖೆಯಿಂದ ನಡೆಸಲಾಗುತ್ತದೆ.

- ಪ್ರಸರಣ ಮಾರ್ಗಗಳಲ್ಲಿ ದೋಷಯುಕ್ತ ಇನ್ಸುಲೇಟರುಗಳನ್ನು ಪರೀಕ್ಷಿಸುವುದು ಮತ್ತು ಪತ್ತೆ ಹಚ್ಚುವಿಕೆ.
- ದೋಷಪೂರಿತ ಇನ್ಸುಲೇಟರ್ ಸ್ಟ್ರಿಂಗ್‌ಗಳನ್ನು ಬದಲಿಸುವುದು.
- ಬೈ–ಪಾಸ್ ಜಂಪುಗಳನ್ನು ಒದಗಿಸುವ ಮೂಲಕ ಪ್ರಸರಣ ಮಾರ್ಗಗಳನ್ನು ಬಲಪಡಿಸುವುದು.
- ಉಪ ಕೇಂದ್ರಗಳ ಮತ್ತು ಪ್ರಸರಣ ಮಾರ್ಗಗಳ ಥರ್ಮೋವಿಷನ್ ಸ್ಕ್ಯಾನಿಂಗ್‌ನಿಂದಹಾಟ್‌ಸ್ಪಾಟ್‌ಗಳನ್ನು ಗುರುತಿಸುವುದು.
- ಇ.ಹೆಚ್.ವಿ ಉಪ ಕೇಂದ್ರಗಳಮತ್ತು ಪ್ರಸರಣ ಮಾರ್ಗಗಳಹಾನಿ ತಡೆಗಟ್ಟುವ ನಿರ್ವಹಣೆ.
- ತುರ್ತು ಹಾಟ್‌ಲೈನ್ ಕಾಮಗಾರಿಗಳು.

2019–20 ರ ಅವಧಿಯಲ್ಲಿ ಹಾಟ್‌ಲೈನ್ ಶಾಖೆ ನಡೆಸಿದ ವಿವಿಧ ಚಟುವಟಿಕೆಗಳನ್ನು ಕೆಳಗೆ ನಮೂದಿಸಲಾಗಿದೆ.

ಕ್ರ. ಸಂ	ವಿವರಗಳು	ವೋಲ್ಟೇಜ್ ವರ್ಗ ಕೆವಿಯಲ್ಲಿ				ಒಟ್ಟು
		400	220	110	66	
1	ಪರೀಕ್ಷೆ ನಡೆಸಿದ ಇನ್ಸುಲೇಟರ್ ಸ್ಟ್ರಿಂಗ್‌ಗಳ ಸಂಖ್ಯೆ.	---	2589	3040	5652	11281
2	ದೋಷಪೂರಿತ ಇನ್ಸುಲೇಟರ್ ಸ್ಟ್ರಿಂಗ್‌ಗಳನ್ನು ಬದಲಿಸಿದ ಸಂಖ್ಯೆ	---	25	52	9	86
3	ಹಾಟ್ ಸ್ಪಾಟ್‌ಗಳನ್ನು ಗುರುತಿಸುವುದಕ್ಕಾಗಿ ಥರ್ಮೋವಿಷನ್ ಸ್ಕ್ಯಾನಿಂಗ್ ಮೂಲಕ ಪರೀಕ್ಷಿಸಲ್ಪಟ್ಟ ಉಪಕೇಂದ್ರಗಳ ಸಂಖ್ಯೆ	8	216	299	696	1219
4	ಪರೀಕ್ಷೆ ನಡೆಸಿದ ಜಂಪರುಗಳ ಸಂಖ್ಯೆ	330	3916	363	466	5075
5	ಉಪ ಕೇಂದ್ರಗಳ ಸ್ವಿಚ್ ಯಾರ್ಡ್‌ಗಳಿಗೆ ತಡೆಗಟ್ಟುವ ನಿರ್ವಹಣೆ ನಡೆಸಿರುವ ಸಂಖ್ಯೆ.	1	218	297	645	1161
6	ಪ್ರಸರಣ ಮಾರ್ಗಗಳಿಗೆ ತಡೆಗಟ್ಟುವ ನಿರ್ವಹಣೆನಡೆಸಿದ ಸಂಖ್ಯೆ.	---	499	12	---	511

ಕ್ರ ಸಂ	ವಿವರಗಳು	ವೋಲ್ಟೇಜ್ ವರ್ಗ ಕೆವಿಯಲ್ಲಿ				ಒಟ್ಟು
		400	220	110	66	
7	ಇ.ಹೆಚ್.ವಿ ಉಪ ಕೇಂದ್ರಗಳಲ್ಲಿ ಒದಗಿಸಿರುವ ಬೈ ಪಾಸ್ ಜಂಪರುಗಳು	---	14			14
8	ತುರ್ತು ಸ್ಥಿತಿಗಳ ಸಮಯದಲ್ಲಿ ತುರ್ತು ಸ್ಥಿತಿಗಳನ್ನು ನಿರ್ವಹಿಸಿದ ಮಾರ್ಗಗಳು ಮತ್ತು ಉಪಕೇಂದ್ರಗಳ ಸಂಖ್ಯೆ	---	56			56
9	ಇಹೆಚ್‌ವಿ ಪ್ರಸರಣ ಮಾರ್ಗಗಳಿಂದ ಕಟ್ಟಡಗಳಿಗೆ ಇರುವ ಲಂಬ ಮತ್ತು ಅಡ್ಡ ಕ್ಲಿಯರೆನ್ಸ್‌ಗಳ ಅಳತೆ		488			488
10	ಪ್ರಸರಣ ಮಾರ್ಗಗಳ ಮೇಲೆ ಅಳವಡಿಸಿರುವ ವೈಬ್ರೇಶನ್ ಡ್ಯಾಂಪರುಗಳ ಸಂಖ್ಯೆ.	---	1000	---	----	1000

ತಾಂತ್ರಿಕ ಪರಿಶೋಧನೆ ಮತ್ತು ಗುಣನಿಯಂತ್ರಣ ಶಾಖೆ

ತಾಂತ್ರಿಕ ಪರಿಶೋಧನೆ ಮತ್ತು ಗುಣನಿಯಂತ್ರಣ ಶಾಖೆಯ ಮುಖ್ಯ ಕಾರ್ಯಗಳು;

- ಐಪಿಪಿಗಳ, ಸ್ವಯಂ ಕಾಮಗಾರಿಗಳ, ಸ್ಥಳಾಂತರಿಸುವ, ಇತರೆ ಪ್ರಗತಿಯಲ್ಲಿರುವ ಕಾಮಗಾರಿಗಳ(ಉಪ ಕೇಂದ್ರಗಳು, ಮಾರ್ಗಗಳು, ಇತರೆ) ಸಾಮಗ್ರಿಗಳ ತಪಾಸಣೆ.
- ಪ್ರಸ್ತುತವಿರುವ ಉಪ ಕೇಂದ್ರಗಳ ಮಾರ್ಗಗಳ ಪ್ರತ್ಯೇಕ ಸೀಮಿತ ಮಾರ್ಗಗಳ, ಇತರೆಮಾರ್ಗಗಳ ನಿಯತಕಾಲಿಕ ತಪಾಸಣೆ.
- ಬೃಹತ್ ಕಾಮಗಾರಿ/ಟಿಎಲ್ ಅಂಡ್ ಎಸ್‌ಎಸ್ ಉಗ್ರಾಣಗಳ ನಿಯತಕಾಲಿಕ ತಪಾಸಣೆ.
- ಕಾರ್ಖಾನೆಯಸಾಮಾಗ್ರಿಗಳ ತಪಾಸಣೆ.
- ಕಾಮಗಾರಿಗಳ ಆವರಣದಲ್ಲಿನ ಸಾಮಾಗ್ರಿಗಳ ತಪಾಸಣೆ.
- ಪೂರ್ಣಗೊಂಡ ಕಾಮಗಾರಿಗಳ (ಉಪ ಕೇಂದ್ರಗಳು, ಮಾರ್ಗಗಳು, ಉನ್ನತೀಕರಣ ಕಾಮಗಾರಿಗಳು) ಪರಿಶೋಧನೆ.
- ಮಾರಾಟಗಾರರ ವಿಶ್ಲೇಷಣೆಗಾಗಿ ಕಾರ್ಖಾನೆ ಆವರಣ ಪರಿಶೀಲನೆ.
- ಇತರೆ ಕಾಮಗಾರಿಗಳ ತಪಾಸಣೆ.
- ಅರ್ಜಿಗಳ/ದೂರುಗಳ ತನಿಖೆ.
- ಉಪ ಕೇಂದ್ರಗಳ/ಮಾರ್ಗಗಳಿಗೆ ಸಂಬಂಧಿಸಿದ ಸಿವಿಲ್ ಕಾಮಗಾರಿಗಳ ತಪಾಸಣೆ.
- ನಿಗಮದಿಂದ ವಹಿಸಿದ ಇತರೆ ಯಾವುದೇ ಕರ್ತವ್ಯಗಳು.

2019–20ನೇ ಸಾಲಿನ ವಾರ್ಷಿಕ ಸಾಧನೆಗಳು

ಕ್ರ ಸಂ	ಕ್ರಿಯಾಶೀಲ ವಸ್ತುಗಳು/ಕಾರ್ಯಕ್ರಮಗಳು	ಕಾಮಗಾರಿಗಳ ಒಟ್ಟು ಸಂಖ್ಯೆ	2019–20 ನೇ ಸಾಲಿನ ಒಟ್ಟು ತಪಾಸಣೆಯ ಸಂಖ್ಯೆ
1	**ಪ್ರಗತಿಯಲ್ಲಿರುವ ಕಾಮಗಾರಿಗಳು**		
ಎ	ಉಪ ಕೇಂದ್ರಗಳು	66	634
ಬಿ	ಪ್ರಸರಣ ಮಾರ್ಗಗಳು	66	607

ಕ್ರ. ಸಂ	ಕ್ರಿಯಾಶೀಲ ವಸ್ತುಗಳು/ಕಾರ್ಯಕ್ರಮಗಳು	ಕಾಮಗಾರಿಗಳ ಒಟ್ಟು ಸಂಖ್ಯೆ	2019–20 ನೇ ಸಾಲಿನ ಒಟ್ಟು ತಪಾಸಣೆಯ ಸಂಖ್ಯೆ
ಸಿ	ವಿಶೇಷ ಸಾಲುಗಳು	126	315
ಡಿ	ಉನ್ನತೀಕರಣ/ಹೆಚ್ಚುವರಿ	112	546
2	**ಪ್ರಸ್ತುತವಿರುವ ಉಪ ಕೇಂದ್ರಗಳು ಮತ್ತು ಮಾರ್ಗಗಳು**		
ಎ	ಉಪ ಕೇಂದ್ರಗಳು	1190	910
ಬಿ	ಪ್ರಸರಣ ಮಾರ್ಗಗಳು	1569	749
3	**ಬೃಹತ್ ಕಾಮಗಾರಿ/ಟಿಎಲ್ ಅಂಡ್ ಎಸ್ಎಸ್ ಉಗ್ರಾಣ**	18	4
4	**ಸಾಮಾಗ್ರಿಗಳ ಪರಿಶೀಲನೆ**		
ಎ	ಕಾರ್ಖಾನೆಯಲ್ಲಿ		
ಎ	ಕವಿಪ್ರನಿನಿ ಕಾಮಗಾರಿಗಳು	**	2012
ಬಿ	ಐಪಿಪಿ ಕಾಮಗಾರಿಗಳು	**	34
ಸಿ	ಸ್ವಯಂ ಕಾರ್ಯಗತಗೊಳಿಸುವ ಕಾಮಗಾರಿಗಳು	**	220
ಬಿ	ಕಾಮಗಾರಿಗಳ ಆವರಣ		
ಎ	ಕವಿಪ್ರನಿನಿ ಕಾಮಗಾರಿಗಳು	**	275
ಬಿ	ಐಪಿಪಿ ಕಾಮಗಾರಿಗಳು	**	4
ಸಿ	ಸ್ವಯಂ ಕಾರ್ಯಗತಗೊಳಿಸುವ ಕಾಮಗಾರಿಗಳು	**	75
ಸಿ	ಉಗ್ರಾಣಗಳಲ್ಲಿ	**	1630
5	**ಪೂರ್ಣಗೊಂಡ ಕಾಮಗಾರಿಗಳ ಪರಿಶೋಧನೆ**		
ಎ	ಉಪ ಕೇಂದ್ರಗಳು	**	24
ಬಿ	ಪ್ರಸರಣ ಮಾರ್ಗಗಳು	**	29
ಸಿ	ಉನ್ನತೀಕರಣ/ಹೆಚ್ಚುವರಿ	**	34
6	**ಮಾರಾಟಗಾರರ ವಿಶ್ಲೇಷಣೆಯ ತನಿಖೆ**	**	12
7	**ಅರ್ಜಿ/ದೂರುಗಳ ಪರಿಶೀಲನೆ**	–	3
8	ಇತರೆ	**	0

ಕಾಮಗಾರಿಗಳ			
1	**ಪ್ರಗತಿಯಲ್ಲಿರುವ ಕಾಮಗಾರಿಗಳು**		
ಎ	ಉಪ ಕೇಂದ್ರಗಳು	66	95
2	**ಪ್ರಸ್ತುತವಿರುವ ಉಪ ಕೇಂದ್ರಗಳು ಮತ್ತು ಮಾರ್ಗಗಳು**		
ಎ	ಉಪ ಕೇಂದ್ರಗಳು	-	9
ಬಿ	ಪ್ರಸರಣ ಮಾರ್ಗಗಳು	-	6
3	**ಪೂರ್ಣಗೊಂಡ ಕಾಮಗಾರಿಗಳ ಪರಿಶೋಧನೆ**		
ಎ	ಉಪ ಕೇಂದ್ರಗಳು	-	26
ಬಿ	ಉನ್ನತೀಕರಣ/ಹೆಚ್ಚುವರಿ	-	4
4	**ಅರ್ಜಿ/ದೂರುಗಳ ಪರಿಶೀಲನೆ**	-	2
5	**ಇತರೆ**	-	37

ಟಿಪ್ಪಣಿ:

* ಕಾರ್ಯಾರಂಭಗೊಳ್ಳುವ ಉಪ ಕೇಂದ್ರಗಳ/ಮಾರ್ಗಗಳ ಆಧಾರದ ಮೇಲೆ ಬದಲಾಗಬಹುದಾದ ನಿರೀಕ್ಷಿತ ವಾರ್ಷಿಕ ಗುರಿ.

* ಎಲ್ಲಾ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪ್ರತಿ ತಿಂಗಳು ತಪಾಸಣೆ ನಡೆಸುವುದು.

* ಪ್ರಸ್ತುತವಿರುವ ಎಲ್ಲಾ ಉಪ ಕೇಂದ್ರಗಳ ತಪಾಸಣೆ ವರ್ಷಕ್ಕೊಮ್ಮೆ ನಡೆಸುವುದು.

* ಪ್ರಸ್ತುತವಿರುವ ಎಲ್ಲಾ ಪ್ರಸರಣ ಮಾರ್ಗಗಳ ತಪಾಸಣೆ ಎರಡು ವರ್ಷಕ್ಕೊಮ್ಮೆ ನಡೆಸುವುದು

ಮಾಹಿತಿ ತಂತ್ರಜ್ಞಾನ ಮತ್ತು ಆಡಳಿತ ಮಂಡಳಿಯ ಮಾಹಿತಿ ವ್ಯವಸ್ಥೆ

ಕವಿಪ್ರನಿನಿಯ ಮಾಹಿತಿ ತಂತ್ರಜ್ಞಾನಶಾಖೆಯು ಮಾಹಿತಿ ತಂತ್ರಜ್ಞಾನದ ಮೂಲ ಸೌಕರ್ಯವನ್ನು ಒದಗಿಸುವುದು ಮತ್ತು ಕವಿಪ್ರನಿನಿಯ ಜಾಲತಾಣವನ್ನು ನಿರ್ವಹಿಸುವುದು, ಅಂತರ್ಜಾಲ, ಅಂತರ್ಜಾಲದ ಪೋರ್ಟಲ್ ಇ–ಪ್ರಸರಣ ಮಾಹಿತಿ ಕೇಂದ್ರ, ಕಾವೇರಿ ಭವನದ ಕಛೇರಿಗಳಲ್ಲಿ ನೆಟ್‌ವರ್ಕಿಂಗ್, ಯಂತ್ರಾಂಶ ಮತ್ತು ವ್ಯವಸ್ಥೆಯ ನಿರ್ವಹಣೆ, ಪ್ರಸ್ತುತವಿರುವ ತಂತ್ರಾಂಶಗಳ ನಿರ್ವಹಣೆ, ತಂತ್ರಾಂಶಗಳ ಅಭಿವೃದ್ಧಿ ಪಡಿಸುವುದು, ಯಂತ್ರಾಂಶ ಮತ್ತು ತಂತ್ರಾಂಶವನ್ನು ಖರೀದಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

2019–20ನೇ ಸಾಲಿನ ವರದಿಯ ವರ್ಷದಲ್ಲಿಈ ಕೆಳಕಂಡ ಮಾಹಿತಿ ತಂತ್ರಜ್ಞಾನ ಚಟುವಟಿಕೆಗಳು ನಡೆಸಲಾಗಿದೆ.

1. **ಈ ಕೆಳಕಂಡ ಆಂತರಿಕ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ನಿರ್ವಹಿಸುವುದು:**

- ಪೇರೋಲ್
- ಪಿಂಚಣಿ ಮತ್ತು ಕುಟುಂಬ ಪಿಂಚಣಿ, ಗ್ರಾಚ್ಯುಟಿ
- ಇಲಾಖಾ ಪರೀಕ್ಷೆ
- ಎ ಮತ್ತು ಬಿ ಶ್ರೇಣಿಯ ಅಧಿಕಾರಿಗಳ ವಿವರ
- ಕವಿಪ್ರನಿನಿಯ ಯೋಜನೆಗಳ ಭಾವಚಿತ್ರಗಳನ್ನು ಅಪ್‌ಲೋಡ್ ಮಾಡುವುದು.
- ಲೋಡ್‌ಕರ್ವ್ ವಿವರಗಳನ್ನು ಅಪ್‌ಲೋಡ್ ಮಾಡುವುದು.
- ಹುಂಡಿಗಳ ನಿರೂಪಣಾ ವ್ಯವಸ್ಥೆ
- ಕಡತಗಳ ನಿರೂಪಣಾ ವ್ಯವಸ್ಥೆ
- ಅಂತರ ಘಟಕಗಳ ಲೆಕ್ಕಗಳ ವಹಿವಾಟು
- ಸಿಬ್ಬಂದಿಯ ತಿಂಗಳುವಾರು ವಂತಿಕೆ–ಎನ್‌ಡಿಸಿಪಿಎಸ್
- 31.03.2020ರಲ್ಲಿ ಇದ್ದಂತೆ ಕವಿಪ್ರನಿನಿಯ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಹುದ್ದೆ ಮತ್ತು ಸಿಬ್ಬಂದಿಯ ವಿವರಗಳು.
- ಕೇಂದ್ರಗಳ ಇ–ಲಾಗ್
- ಕೇಂದ್ರಗಳ ಮತ್ತು ವಿದ್ಯುತ್ ಪರಿವರ್ತಕಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು
- ಜಿಎಸ್‌ಟಿ ತಂತ್ರಾಂಶ

- ಅಂತರ್ಜಾದಲ್ಲಿ ವರ್ಗಾವಣೆ ಕೋರುವ ಅರ್ಜಿಗಳ ತಂತ್ರಾಂಶ
- ದಾಸ್ತಾನು ನಿರ್ವಹಣಾ ವ್ಯವಸ್ಥೆ
- ಬ್ಯಾಂಕ್ ಸಮನ್ವಯ ವ್ಯವಸ್ಥೆ
- ವಿ.ಸ.ಕಂಪನಿಗಳ ಕಾರ್ಯಕ್ಷಮತೆ ಮೇಲ್ವಿಚಾರಣಾ ವ್ಯವಸ್ಥೆ

2. ಕವಿಪ್ರನಿನಿಗೆ ಸಂಬಂಧಿಸಿದ ಇ–ಪ್ರೊಕ್ಯೂರ್‌ಮೆಂಟ್ ಅಧಿಕಾರಿಗಳಿಗೆ ರಚಿಸುವ, ನವೀಕರಿಸುವ, ಮ್ಯಾಪಿಂಗ್ ಮತ್ತು ಹೊಣೆಗಾರಿಕೆ ನೀಡುವ ಅಧಿಕಾರ.
3. ಬಯೋಮೇಟ್ರಿಕ್ ಹಾಜರಾತಿ ಉಸ್ತುವಾರಿ ವ್ಯವಸ್ಥೆ.
4. ಆನ್‌ಲೈನ್ ಸೇವೆಗಳಿಗಾಗಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಏಜೆನ್ಸಿಯೊಂದಿಗೆ ಸಮನ್ವಯಗೊಳಿಸುವುದು. (ಮಾರಾಟಗಾರರ ಅನುಮೋದನೆ, ಎಚ್‌ಟಿ ಗ್ರಾಹಕರ ವಿದ್ಯುತ್ ಸ್ಥಳಾಂತರಿಸುವ ಅರ್ಜಿ, ಮುಕ್ತ ಪ್ರವೇಶ), ಎಚ್‌ಟಿ ಗ್ರಾಹಕರಿಂದ ಸ್ವೀಕರಿಸಿದ ಅರ್ಜಿಗಳಿಗಾಗಿ ಬೆಸ್ಕಾಂ ಅಭಿವೃದ್ಧಿಪಡಿಸಿರುವ ಅಪ್ಲಿಕೇಶನ್ ತಂತ್ರಾಂಶದೊಂದಿಗೆ ಏಕೀಕರಿಸುವುದು.
5. ಪ್ರಸರಣ ಮಾರ್ಗಗಳು, ಇಹೆಚ್‌ವಿ ಕೇಬಲ್‌ಗಳು, ಗೋಪುರಗಳು ಮತ್ತು ಅದರ ಜೊತೆಗೂಡಿದ ಕವಿಪ್ರನಿನಿಯ ಉಪ ಕೇಂದ್ರಗಳಿಗೆ ಜಿಐಎಸ್ ತಂತ್ರಾಂಶವನ್ನು ವಿನ್ಯಾಸ, ಅಭಿವೃದ್ಧಿಸಂಯೋಜಿಸುವ ಕಾರ್ಯದಲ್ಲಿ ಏಜೆನ್ಸಿಗಳ ಜೊತೆ ಸಮನ್ವಯಗೊಳಿಸುವುದರೊಂದಿಗೆ ಬೆಂಗಳೂರು ಪ್ರಸರಣ ವಲಯದಲ್ಲಿ ಜಿಪಿಎಸ್ ಸರ್ವೇ ಮಾಹಿತಿಯನ್ನು ಜಿಐಎಸ್ ತಂತ್ರಾಂಶದಲ್ಲಿ ಅಳವಡಿಸಿ ಏಕೀಕರಿಸುವುದು.
6. ಈ ಕೆಳಕಂಡವುಗಳನ್ನು ನಿಗಮ ಕಛೇರಿ, ಕವಿಪ್ರನಿನಿಗೆ ಮಾಹಿತಿ ತಂತ್ರಜ್ಞಾನ ಶಾಖೆಯಿಂದ ಖರೀದಿಸಲಾಗಿದೆ.

ಕ್ರ.ಸಂ	ವಿವರ	ಸಂಖ್ಯೆ
1	ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು	5
2	ಲ್ಯಾಪ್ ಟಾಪ್‌ಗಳು	2
3	ಸ್ಕಾನರ್ ಸಹಿತ ಪ್ರಿಂಟರ್‌ಗಳು	7
4	ಪ್ರಿಂಟರ್‌ಗಳು	1

7. ಕವಿಪ್ರನಿನಿ, ನಿಗಮ ಕಛೇರಿ ಮತ್ತು ಮಾಹಿತಿಹಕ್ಕು ಕಾಯ್ದೆ ಅಡಿಯ ಇತರೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಒದಗಿಸಿರುವ ಮಾಹಿತಿಗೆ ಸಂಬಂಧಿಸಿದ ದತ್ತಾಂಶ ನಿರ್ವಹಿಸಲಾಗುತ್ತಿದೆ.

   ಎಂಐಎಸ್ ಶಾಖೆಯು ಕವಿಪ್ರನಿನಿಯ ಮತ್ತು ವಿ.ಸ.ಕಂಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕುವ ಕ್ರೋಢೀಕರಿಸುವ ಜವಾಬ್ದಾರಿಯನ್ನು ಹಾಗೂ ಕೇಂದ್ರ ವಿದ್ಯುತ್ ಆಯೋಗ, ಕೇಂದ್ರ ಸರ್ಕಾರ–ವಿದ್ಯುತ್ ಸಚಿವಾಲಯ, ರಾಜ್ಯ ಸರ್ಕಾರ–ಯೋಜನಾ ಇಲಾಖೆ, ಶಾಸನ ಬದ್ಧ ಸಂಸ್ಥೆಗಳು ಕೋರುವ ಮಾಹಿತಿಗಳನ್ನು ನಿಯಮಿತವಾಗಿ ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

   ಎಂಐಎಸ್ ಶಾಖೆಯು ಪ್ರತಿ ತಿಂಗಳು ಗ್ರಾಮೀಣ ವಿದ್ಯುದೀಕರಣ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಪ್ರಗತಿಯ ವರದಿಗಳನ್ನು ಗ್ರಾಮೀಣ ವಿದ್ಯುದೀಕರಣ ನಿಗಮ, ನವದೆಹಲಿ ರವರಿಗೆ ಸಲ್ಲಿಸುವುದಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು, ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆ/ಕೆ.ಡಿ.ಪಿ ಸಭೆಗಳಿಗೆ ಒದಗಿಸುತ್ತಿದೆ.

2019–20ರ ಅವಧಿಯಲ್ಲಿ ಸಾರ್ವಜನಿಕ ಕುಂದು ಕೊರತೆ ಪರಿಹಾರ ವ್ಯವಸ್ಥೆಯಡಿಯಲ್ಲಿ 119 ಕುಂದು ಕೊರತೆಗಳನ್ನು ಮಾನ್ಯ ಮುಖ್ಯಮಂತ್ರಿ ಜನತಾ ದರ್ಶನ, ಇ–ಸ್ಪಂದನ ಮತ್ತು ಸಿ.ಪಿ. ಗ್ರಾಂ ಕವಿಪ್ರನಿನಿಗೆ ಸಂಬಂಧಿತ ವಿಭಾಗಗಳು/ಕಛೇರಿಗಳು ಒದಗಿಸಿದ ಪ್ರತ್ಯುತ್ತರಗಳನ್ನು ಅಪ್‌ಲೋಡ್ ಮಾಡಿದ ನಂತರ ಎಲ್ಲಾ ಕುಂದು ಕೊರತೆಗಳನ್ನು ಮುಚ್ಚಲಾಗಿದೆ.

ವಿಧಾನ ಮಂಡಲದ ಗೌರವಾನ್ವಿತ ಸದಸ್ಯರುಗಳ ವಿಧಾನ ಮಂಡಲದಲ್ಲಿ ಮತ್ತು ಅಧಿವೇಶನದ ಸಮಯದಲ್ಲಿ ಇತರೆ ವಿವಿಧ ಸೂಚನೆಗಳಡಿ ಉದ್ಭವಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವುದು ಈ ಶಾಖೆಯ ಬಹುಮುಖ್ಯ ಕಾರ್ಯವಾಗಿರುತ್ತದೆ. 2019–20ರ ಅವಧಿಯಲ್ಲಿ ಮೂರು ವಿಧಾನ ಮಂಡಲದ ಅಧಿವೇಶನಗಳು ಜರುಗಿದ್ದು ಈ ಕೆಳಕಂಡಂತಿವೆ:

ಕ್ರ.ಸಂ	ಅವಧಿ	ದಿನಗಳು	ಅಧಿವೇಶನ
1.	12–07–2019 ರಿಂದ 23–07–2019	07 **ದಿನಗಳು**	ಮುಂಗಾರು ಅಧಿವೇಶನ
2.	10–10–2019 ರಿಂದ 12–10–2019	03 **ದಿನಗಳು**	ಚಳಿಗಾಲ ಅಧಿವೇಶನ
3.	17–02–2020 ರಿಂದ 21–02–2020	04 **ದಿನಗಳು**	ಬಜೆಟ್ ಅಧಿವೇಶನ
4.	02–03–2020 ರಿಂದ 24–03–2020	17 **ದಿನಗಳು**	

ಕವಿಪ್ರನಿನಿಯ ಮತ್ತು ವಿ.ಸ.ಕಂಗಳಿಗೆ ಸಂಬಂಧಿಸಿದ ವಿಧಾನ ಸಭೆಯ 140 ಪ್ರಶ್ನೆಗಳು ವಿಧಾನ ಪರಿಷತ್ತಿನ 55 ಪ್ರಶ್ನೆಗಳು (ಒಟ್ಟು 195) ಮತ್ತು ವಿವಿಧ ನಿಯಮಗಳಡಿಯಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ 14 ಸಂಖ್ಯೆಯ ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಿಸಲಾಗಿದೆ.

ಲೋಕ ಸಭೆ ಮತ್ತು ರಾಜ್ಯ ಸಭೆ ಪ್ರಶ್ನೆಗಳಿಗೆ ಎಂಐಎಸ್ ಶಾಖೆಯಿಂದ ಉತ್ತರಿಸಲಾಗಿದೆ. 2019–20ರ ಅವಧಿಯಲ್ಲಿ 3 ಸಂಖ್ಯೆ ಲೋಕ ಸಭೆ ಪ್ರಶ್ನೆಗಳಿಗೆ ಮತ್ತು 3 ಸಂಖ್ಯೆ ರಾಜ್ಯ ಸಭೆ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

ವಿಧಾನ ಮಂಡಲದ ಮನವಿ ಸಮಿತಿ, ಭರವಸೆ ಸಮಿತಿ ಮತ್ತು ಇತರೆ ಸಮಿತಿಗಳಿಂದ ಉದ್ಭವಿಸುವ ಸಮಸ್ಯೆಗಳಿಗೆ ಉತ್ತರಗಳನ್ನು ಸಹಾ ಈ ಶಾಖೆಯು ಒದಗಿಸುತ್ತಿದೆ.

ಎಪಿಆರ್ ಮತ್ತು ಪ್ರಸರಣ ಜಕಾತಿ

1. ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಅರ್ಜಿ: ಕೆಇಆರ್‌ಸಿ ಮೊದಲು 27.11.2019 ರಂದು ಎಆರ್‌ಆರ್ ಅನುಮೋದನೆ ಮತ್ತು ಎಫ್‌ವೈ21 ರ ಪ್ರಸರಣ ದರ ಪರಿಷ್ಕರಣೆಗಾಗಿ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕ ಪತ್ರಗಳ ಆಧಾರದ ಮೇಲೆ ಕವಿಪ್ರನಿನಿ ಎಫ್ ವೈ 19 ಗಾಗಿ ತನ್ನ ವಾರ್ಷಿಕ ಕಾರ್ಯಕ್ಷಮತೆಯ ವಿಮರ್ಶೆಯನ್ನು ಸಲ್ಲಿಸಿದೆ.

2. ವಾರ್ಷಿಕ ಕಾರ್ಯಕ್ಷಮತಯಲ್ಲಿ ವಿಮರ್ಶೆಯಲ್ಲಿ ಕವಿಪ್ರನಿನಿ, ಕೆಇಆರ್‌ಸಿಯನ್ನು ಆಡಿಟ್ ಮಾಡಿದ ವಾರ್ಷಿಕ ಲೆಕ್ಕಪತ್ರಗಳ ಆಧಾರದ ಮೇಲೆ ಹಣಕಾಸು ವರ್ಷ 19 ಕ್ಕೆ ರೂ.3400.64 ಕೋಟಿಗಳಷ್ಟು ಎಆರ್‌ಆರ್ ನ್ನು ಅನುಮತಿಸುವಂತೆ ಪ್ರಾರ್ಥಿಸಿತ್ತು.

3. ಕವಿಪ್ರನಿನಿ ರೂ.ಗಳ ಅಂತರವನ್ನು ಮರುಪಡೆಯಲು ಅನುಮತಿಸುವಂತೆ ಪ್ರಾಸಿತ್ತು. 448.52 ಕೋಟಿ ವಿ.ಸ.ಕಂಪನಿಗಳಿಂದ 01.04.2020

4. ಕವಿಪ್ರನಿನಿ ಕೆಇಆರ್‌ಸಿಗೆ ಪ್ರೋತ್ಸಾಹವನ್ನು ನೀಡುವಂತೆ ವಿನಂತಿಸಿತ್ತು ಏಕೆಂದರೆ ಇದು ಹಣಕಾಸು ವರ್ಷ 19ಕ್ಕೆ ಶೇಕಡ 99.48% ಉತ್ತಮ ಲಭ್ಯತೆಯನ್ನು ಸಾಧಿಸಿದೆ.

5. ಹಣಕಾಸು ವರ್ಷ 19 ರ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನಾ ಆದೇಶ ಮತ್ತು ಹಣಕಾಸು ವರ್ಷ 21ಗಾಗಿ ಪರಿಷ್ಕೃತ ಪ್ರಸರಣ ಸುಂಕದ ಆದೇಶವನ್ನು ಕೆಇಆರ್‌ಸಿ ನೀಡಬೇಕಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ

ಕವಿಪ್ರನಿನಿ ಅಗತ್ಯ ಸೇವೆಗಳ ಸಂಸ್ಥೆಯಾಗಿದ್ದು, ವೃತ್ತಿಪರ ಕೆಲಸವನ್ನು ನಿರಂತರವಾಗಿ ಜಾಗರೂಕತೆಯಿಂದ ಇರಿಸುವುದು ಮತ್ತು ವಿದ್ಯುತ್ ಕ್ಷೇತ್ರದ ತಾಂತ್ರಿಕ ಮತ್ತು ಆರ್ಥಿಕ ಅಂಶಗಳೆರಡರಲ್ಲೂ ನವೀಕರಿಸುವುದನ್ನು ಕಡ್ಡಾಯಗೊಳಿಸುತ್ತದೆ. ಕವಿಪ್ರನಿನಿಯ ಮಾ.ಸಂ.ಅ ಕೇಂದ್ರದಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣೆಗೆ ಸಂಬಂಧಿಸಿದಂತೆ ಹಾಗೂ ಸಿಬ್ಬಂದಿಯ ಒಟ್ಟಾರೆ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಗಳು ಕೌಶಲ್ಯಗಳನ್ನು ಪಡೆಯಲು ಸಾಕಷ್ಟು ಅವಕಾಶವನ್ನು ನೀಟುತ್ತವೆ, ಅದು ಅವರ ಕ್ರಿಯಾತ್ಮಕ ದಕ್ಷತೆಯನ್ನು ಸುಧಾರಿಸಲು ಸಹಾಯಕ ಮಾಡುತ್ತದೆ ಮತ್ತು ಸಂಸ್ಥೆಗೆ ಉತ್ತಮವಾದ ಸೇವೆ ಮಾಡಲು ಅನುವು ಮಾಡಿಕೊಡುತ್ತದೆ ಹಾಗೂ ಅದರಿಂದಾಗಿ ಸಂಸ್ಥೆಗೆ ಪ್ರಯೋಜನಕಾರಿಯಾಗಿರುತ್ತದೆ. ಪ್ರತಿ ಉದ್ಯೋಗಿಯ ಗ್ರಹಿಕೆಯ ಮಟ್ಟ ಮತ್ತು ಸಾಮರ್ಥ್ಯದೊಂದಿಗೆ ವಿವಿಧ ತರಬೇತಿಗಳನ್ನು ನೀಡಲು ಸರಿಯಾದ ವಿಧಾನವನ್ನು ಅಭಿವೃದ್ಧಿಪಡಿಸಲಾಗಿದೆ.

ಹೂಡಿಯಲ್ಲಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು ಸುಮಾರು 12 ಎಕರೆಗಳಷ್ಟು ವಿಸ್ತಾರವಾಗಿದೆ. ಪ್ರಸ್ತುತ, ಈ ಕೆಂದ್ರವು ಹೊಂದಿರುವುದು:

- 9 ತರಬೇತಿ ಕೊಠಡಿಗಳಿದ್ದು, ಒಂದು ಕೊಠಡಿಯಲ್ಲಿ 50 ಪ್ರಶಿಕ್ಷಣಾರ್ಥಿಗಳಿಗೆ ವ್ಯವಸ್ಥೆ ಕಲ್ಪಿಸಬಹುದಾಗಿದೆ.
- 2 ಪ್ರಶಿಕ್ಷಣಾರ್ಥಿಗಳ ಸಂಕೀರ್ಣಗಳಿದ್ದು, ಒಂದು ಸಂಕೀರ್ಣದಲ್ಲಿ 50 ಪ್ರಶಿಕ್ಷಣಾರ್ಥಿಗಳಿಗೆ ವ್ಯವಸ್ಥೆ ಕಲ್ಪಿಸಬಹುದಾಗಿದೆ.
- ಕೇಂದ್ರದಲ್ಲಿಯೇ ಕ್ಯಾಂಟೀನ್ ವ್ಯವಸ್ಥೆ ಕಲ್ಪಿಸಲಾಗಿದೆ.
- ಯೋಗ ಸಭಾಂಗಣ.
- ಒಳಾಂಗಣ ಕ್ರೀಡಾ ಹಾಲ್
- ಒಳಾಂಗಣ ಶಟಲ್ ಬ್ಯಾಡ್ಮಿಂಟನ್ ಕೋರ್ಟ್
- ಆಟವಾಡಲು ಸೌಲಭ್ಯಗಳನ್ನು ಹೊಂದಿರುವ ದೊಡ್ಡ ಹೊರಾಂಗಣ ಕ್ರೀಡಾ ಮೈದಾನ.
- ಗ್ರಂಥಾಲಯ.

ಇದರ ಜೊತೆಗೆ 400 ರಿಂದ 500 ವ್ಯಕ್ತಿಗಳ ಆಸನ ಸಾಮರ್ಥ್ಯದ ಸ್ಟೇಟ್ ಆಫ್ ದಿ ಆರ್ಟ್ ಮಲ್ಟಿಪರ್ಪಸ್ ಆಡಿಟೋರಿಯಂ ನಿರ್ಮಾಣ, 200 ಪ್ರಶಿಕ್ಷಣಾರ್ಥಿಗಳಿಗೆ ವ್ಯವಸ್ಥೆ ಕಲ್ಪಿಸುವ ಹೆಚ್ಚುವರಿ ಪ್ರಶಿಕ್ಷಣಾರ್ಥಿಗಳ ಸಂಕೀರ್ಣ ವಿಶೇಷ ಆಡಳಿತ ಅಧಿಕಾರಿಗಳ ಸಂಕೀರ್ಣ ಒಳಗೊಂಡಂತೆ, ಆಡಳಿತ ಅಧಿಕಾರಿಗಳ ಸಭಾಂಗಣ, ಡಿಜಿಟಲ್ ಗ್ರಂಥಾಲಯ ವರ್ಕಿಂಗ್, ಮಾಡ್ಯೂಲ್ಸ್/ಸಲಕರಣೆಗಳ ಪ್ರದರ್ಶನ ಪ್ರಯೋಗಾಲಯ, ಪ್ರಧಾನ ಸಂಸ್ಥೆಗಳು/ಸಂಸ್ಥೆಗಳು ಇತ್ಯಾದಿಗಳೊಂದಿಗೆ ನೆಟ್‌ವರ್ಕಿಂಗ್ ಪೈಪ್‌ಲೈನ್‌ನಲ್ಲಿದೆ ಮತ್ತು ಒಂದು ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. "ಒಟ್ಟಾರೆಯಾಗಿ ಕೆಪಿಟಿಸಿಎಲ್ ಈ ಮಾನವ ಸಂಪನ್ಮೂಲ ಕೇಂದ್ರವನ್ನು ಶ್ರೇಷ್ಠತೆಯ ಕೇಂದ್ರವಾಗಿ ರೂಪಿಸುವ ದೃಷ್ಟಿಕೋನವನ್ನು ಹೊಂದಿದೆ".

2019–20 ರ ಆರ್ಥಿಕ ವರ್ಷದಲ್ಲಿ ನಡೆಸಲಾದ ತರಬೇತಿ ಕಾರ್ಯಕ್ರಮ:

2019–20 ರ ಆರ್ಥಿಕ ವರ್ಷದಲ್ಲಿ 2357 ಉದ್ಯೋಗಿಗಳು/ಅಧಿಕಾರಿಗಳಿಗೆ ವಿವಿಧ ವಿಷಯಗಳ ಮೇಲೆ ತರಬೇತಿ ನೀಡಲಾಗಿದೆ. ಸರಾಸರಿ 156 ಪುರುಷರು ಪ್ರತಿ ದಿನ. ಕವಿಪ್ರನಿನಿ ಮತ್ತು ವಿ.ಸ.ಕಂಪನಿಯ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಮೂರು ವಿಭಾಗಗಳಲ್ಲಿ ನಡೆಸಲಾಗುತ್ತದೆ.

(1) ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ.

(2) ಸೇವೆಯಲ್ಲಿರುವವರಿಗೆ ತರಬೇತಿ ಕಾರ್ಯಕ್ರಮ.

(3) ಬಾಹ್ಯ ತರಬೇತಿಗೆ ನಿಯೋಜನೆ.

1. ಉದ್ಯೋಗ – ಪೂರ್ವ ತರಬೇತಿ ಕಾರ್ಯಕ್ರಮ:

ಕವಿಪ್ರನಿನಿ ಮತ್ತು ಎಲ್ಲಾ ವಿ.ಸ.ಕಂಪನಿಗಳಲ್ಲಿ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳಿಗೆ ಈ ತರಬೇತಿಯನ್ನು ನಡೆಸಲಾಗುತ್ತದೆ. ಕೆಳಗಿನ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮವನ್ನು 2019–20 ರ ಹಣಕಾಸು ವರ್ಷದಲ್ಲಿ ನಡೆಸಲಾಯಿತು:

- ಹೊಸದಾಗಿ ನೇಮಕಗೊಂಡ 401 ಸಂಖ್ಯೆಯ ಸಹಾಯಕ ಇಂಜಿನಿಯರ್(ವಿ) ರವರುಗಳಿಗೆ 60 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು, 30 ದಿನಗಳ ತರಗತಿಯ ತರಬೇತಿ ಮತ್ತು 30 ದಿನಗಳ ಕ್ಷೇತ್ರ ತರಬೇತಿ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 52 ಸಂಖ್ಯೆಯ ಸಹಾಯಕಲೆಕ್ಕಾಧಿಕಾರಿ ರವರುಗಳಿಗೆ 90 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು, 60 ದಿನಗಳ ತರಗತಿಯ ತರಬೇತಿ ಮತ್ತು 30 ದಿನಗಳ ಕ್ಷೇತ್ರ ತರಬೇತಿ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 210 ಸಂಖ್ಯೆಯ ಕಿರಿಯ ಇಂಜಿನಿಯರ್(ವಿ) ರವರುಗಳಿಗೆ 60 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು, 30 ದಿನಗಳ ತರಗತಿಯ ತರಬೇತಿ ಮತ್ತು 30 ದಿನಗಳ ಕ್ಷೇತ್ರ ತರಬೇತಿ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 204 ಸಂಖ್ಯೆಯ ಸಹಾಯಕ ರವರುಗಳಿಗೆ 42 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 155 ಸಂಖ್ಯೆಯ ಕಿರಿಯ ಸಹಾಯಕ ರವರುಗಳಿಗೆ 28 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 44 ಸಂಖ್ಯೆಯ ದಫ್ತರಿ ರವರುಗಳಿಗೆ 28 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

- ಹೊಸದಾಗಿ ನೇಮಕಗೊಂಡ 26 ಸಂಖ್ಯೆಯ ಸಹಾಯಕ ಇಂಜಿನಿಯರ್(ಕಾಮಗಾರಿ) ಮತ್ತು ಕಿರಿಯ ಇಂಜಿನಿಯರ್(ಕಾಮಗಾರಿ) ರವರುಗಳಿಗೆ 60 ಕೆಲಸದ ದಿನಗಳ ಅವಧಿಗೆ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು, 30 ದಿನಗಳ ತರಗತಿಯ ತರಬೇತಿ ಮತ್ತು 30 ದಿನಗಳ ಕ್ಷೇತ್ರ ತರಬೇತಿ ನಂತರ ಪರೀಕ್ಷೆಯನ್ನು ನಡೆಸಲಾಗುವುದು.

2.ಸೇವೆಯಲ್ಲಿರುವವರಿಗೆ ತರಬೇತಿ ಕಾರ್ಯಕ್ರಮ:

ಕವಿಪ್ರನಿನಿ ಮತ್ತು ವಿ.ಸ.ಕಂಪನಿಗಳಲ್ಲಿ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಕೆಳಗಿನ ತರಬೇತಿ ಕಾರ್ಯಕ್ರಮಗಳನ್ನು 2019–20 ರ ಆರ್ಥಿಕ ವರ್ಷದಲ್ಲಿ ಆಯೋಜಿಸಲಾಗಿದೆ.

- ವಿ.ಸಕಂಪನಿಗಳ/ಕವಿಪ್ರನಿನಿಯ ಅಧಿಕಾರಿ/ನೌಕರರಿಗೆ ನಿವೃತ್ತಿ ಯೋಜನೆ–812 ಸಂಖ್ಯೆಗಳು.
- ಹೊಸದಾಗಿ ಬಡ್ತಿ ಪಡೆದ ಸಹಾಯಕ ಲೆಕ್ಕಾಧಿಕಾರಿ ಗಳಿಗೆ ದೃಷ್ಟಿಕೋನ ತರಬೇತಿ–20 ಸಂಖ್ಯೆಗಳು.
- ವಿ.ಸಕಂಪನಿಗಳ/ಕವಿಪ್ರನಿನಿಯ ಸಹಾಯಕರುಗಳಿಗೆ ಎಸ್ ಎ ಎಸ್ ತರಬೇತಿ–45 ಸಂಖ್ಯೆಗಳು.
- ಕವಿಪ್ರನಿನಿಯ ಕಿರಿಯ ಇಂಜಿನಿಯರ(ವಿ) ಮತ್ತು ಸಹಾಯಕ ಇಂಜಿನಿಯರ್(ವಿ) ರವರುಗಳಿಗೆ ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಾಮಕ –185 ಸಂಖ್ಯೆಗಳು.

3.**ಬಾಹ್ಯ ತರಬೇತಿ ಕಾರ್ಯಕ್ರಮಕ್ಕೆ ನಿಯೋಜನೆ:**

ಪ್ರಸಕ್ತ ಆರ್ಥಿಕ ವರ್ಷ 2019–20 ರಲ್ಲಿ ಕವಿಪ್ರನಿನಿಯ 203 ಅಧಿಕಾರಿ/ನೌಕರರಿಗೆ ಬಾಹ್ಯ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿದೆ.

2019–20 ನೇ ಸಾಲಿನ ಕವಿಪ್ರನಿನಿ ಮತ್ತು ಎಸ್ಕಾಂಗಳ ಅಧಿಕಾರಿಗಳು/ಉದ್ಯೋಗಿಗಳಿಗೆ ಎಚ್ಆರ್‌ಡಿ ಕೇಂದ್ರ, ಕವಿಪ್ರನಿನಿ, ಬೆಂಗಳೂರು ನಡೆಸಿದ ತರಬೇತಿಗಳು:

ಕ್ರ. ಸಂ	ತರಬೇತಿಯ ಹೆಸರು	ಬ್ಯಾಚ್‌ಗಳ ಸಂಖ್ಯೆ	ನಿಯೋಜಿಸಲಾದ ತರಬೇತಿ ಪಡೆದವರ ಸಂಖ್ಯೆ	ಹಾಜರಾದ ತರಬೇತಿದಾರರ ಸಂಖ್ಯೆ	ದಿನಗಳಲ್ಲಿ ಅವಧಿ	ಒಟ್ಟು ಮಾನವ ದಿನಗಳು	ಶೇಕಡವಾರು ತರಬೇತಿ ಪಡೆದವರು
1	ಹೊಸದಾಗಿ ನೇಮಕಗೊಂಡ ಜೂನಿಯರ್ ಇಂಜಿನಿಯರ್‌ಗಳಿಗೆ ಉದ್ಯೋಗ ಪೂರ್ವ ತರಬೇತಿ	4	217	210	30	6300	97%
2	ದಫ್ತರಿಗೆ ಉದ್ಯೋಗ ಪೂರ್ವ ತರಬೇತಿ	1	56	44	28	1232	79%
3	ಸಹಾಯಕರಿಗೆ ಎಸ್ಎಎಸ್ ತರಬೇತಿ	1	61	45	40	1800	74%
4	ಹೊಸದಾಗಿ ನೇಮಕಗೊಂಡ ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿ	4	202	204	42	8568	101%
5	ಕವಿಪ್ರನಿನಿ ಮತ್ತು ವಿ.ಸ.ಕಂಪನಿಗಳ ಅಧಿಕಾರಿಗಳಿಗೆ ನಿವೃತ್ತಿ ಯೋಜನೆ (ಸಂಗಾತಿಯೊಂದಿಗೆ)	10	982	812	2	1624	83%
6	ಹೊಸದಾಗಿ ನೇಮಕಗೊಂಡ ಕಿರಿಯ ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿ	3	155	155	28	4340	100%
7	ಹೊಸದಾಗಿ ನೇಮಕಗೊಂಡ ಸಹಾಯಕ ಇಂಜಿನಿಯರ್ (ಸಿವಿಲ್) ಕಿರಿಯ ಇಂಜಿನಿಯರ್ (ಸಿವಿಲ್) ಉದ್ಯೋಗ ಪೂರ್ವ ತರಬೇತಿ	1	26	26	30	780	100%

ಕ್ರ. ಸಂ	ತರಬೇತಿಯ ಹೆಸರು	ಬ್ಯಾಚ್‌ಗಳ ಸಂಖ್ಯೆ	ನಿಯೋಜಿಸಲಾದ ತರಬೇತಿ ಪಡೆದವರ ಸಂಖ್ಯೆ	ಹಾಜರಾದ ತರಬೇತಿದಾರರ ಸಂಖ್ಯೆ	ದಿನಗಳಲ್ಲಿ ಅವಧಿ	ಒಟ್ಟು ಮಾನವ ದಿನಗಳು	ಶೇಕಡವಾರು ತರಬೇತಿ ಪಡೆದವರು
8	ಹೊಸದಾಗಿ ನೇಮಕಗೊಂಡ ಸಹಾಯಕ ಇಂಜಿನಿಯರ್‌ಗಳಿಗೆ ಪೂರ್ವ ಉದ್ಯೋಗ ತರಬೇತಿ(ವಿ)	8	405	401	30	12030	99%
9	ಪ್ರಥಮ ಚಿಕಿತ್ಸೆ ಅಗ್ನಿಶಾಮಕ ಕಾರ್ಯಕ್ರಮ	3	230	185	10	1850	80%
10	ಹೊಸದಾಗಿ ನೇಮಕಗೊಂಡ ಸಹಾಯಕ ಲೆಕ್ಕಾಧಿಕಾರಿಗಳಿಗೆ ಉದ್ಯೋಗ ಪೂರ್ವ ತರಬೇತಿ	1	55	52	60	3120	100%
11	ಹೊಸದಾಗಿ ಬಡ್ತಿ ಪಡೆದ ಸಹಾಯಕ ಲೆಕ್ಕಾಧಿಕಾರಿಗಳಿಗೆ ಓರಿಯಂಟೇಶನ್ ತರಬೇತಿ ನೀಡಿರುವುದು.	1	20	20	5	100	100%
12	ಬಾಹ್ಯ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಿರುವುದು		203	203	3	609	99%
	ಒಟ್ಟು ಮೊತ್ತ ತರಬೇತಿಯನ್ನು ಹೆಚ್‌ಆರ್‌ಡಿ ಕೇಂದ್ರ, ಕವಿಪ್ರನಿನಿ, ಹೂಡಿಯಲ್ಲಿ ನಡೆಸಿರುವುದು.		**2612**	**2357**		**42353**	**90%**

ಒಟ್ಟು ಮಾನವ ದಿನಗಳು–42353

ಒಟ್ಟು ಕೆಲಸದ ದಿನಗಳು–271

ದಿನಕ್ಕೆ ತರಬೇತಿ ಪಡೆದವರು–156

ಆಂತರಿಕ ಪರಿಶೋಧನಾ ಶಾಖೆ

I ನಿಗಮದಿಂದ ಕಾಲಕಾಲಕ್ಕೆ ಆದೇಶಿಸಲ್ಪಡುವ ಸುತ್ತೋಲೆಗಳು, ಜಾರಿಯಲ್ಲಿರುವ ನಿಬಂಧನೆಗಳು, ಲೆಕ್ಕ ಸಂಪುಟ ಹಾಗೂ ಆಂತರಿಕ ಪರಿಶೋಧನಾ ಕೈಪಿಡಿ ಪ್ರಕಾರ ಆಂತರಿಕ ಪರಿಶೋಧನೆ ಕಾರ್ಯ ಆರ್ಥಿಕ ಸಲಹೆಗಾರರ (ಆಂ.ಪ) ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ನೀಡಲ್ಪಟ್ಟ ಪರಿಶೋಧನಾ ವಿಚಾರಣೆ/ಟಿಪ್ಪಣಿ, ಹೆಚ್ಚುವರಿ ಪಾವತಿ/ನಿಯಮ ಬಾಹಿರ ವೆಚ್ಚ ಇವುಗಳನ್ನು ಸಂಬಂಧಿತ ನಿಗಮದ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚಿಸಿದ ನಂತರ ಇತ್ಯರ್ಥಗೊಳಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ವಿಭಾಗವಾರು ಕಾರ್ಯ ಚಟುವಟಿಕೆಯ ವಿವರಗಳನ್ನು ಕಾಲಕಾಲಕ್ಕೆ ಕ್ರೋಢೀಕರಿಸಿ ಕಾರ್ಯಾಧಾರಿತ ಪ್ರಗತಿಯ ವರದಿಯನ್ನು ಸಲ್ಲಿಸಲಾಗುತ್ತಿದೆ.

II **<u>2019–20 ರ ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋಧನಾ ವಿಭಾಗದ ಸಾಧನೆಗಳು ಹಾಗೂ ಮುಖ್ಯವಾಗಿ ಅವಲೋಕಿಸಿದ ವಿಷಯಗಳ ಸಂಕ್ಷಿಪ್ತ ವಿವರಗಳು</u>** :

(1) ಕೇಂದ್ರ ಖರೀದಿ ಸಭೆಯ ಮುಂದೆ ಮಂಡಿಸಲಾದ ಖರೀದಿ ಹಾಗೂ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗಮ ಕಾರ್ಯಾಲಯದ ಆಂತರಿಕ ಪರಿಶೋಧನೆಯಿಂದ **194** ಪ್ರಸ್ತಾವನೆಗಳನ್ನು

ಪರಿಶೀಲಿಸಲಾಗಿರುತ್ತದೆ. ವಲಯ ಮಟ್ಟದಲ್ಲಿನ ಸದರಿ ವಿಷಯದ ಪ್ರಸ್ತಾವನೆಗಳನ್ನು ಪ್ರಸರಣ ವಲಯದ ಉಪ ಲೆಕ್ಕನಿಯಂತ್ರಣಾಧಿಕಾರಿ (ಆಂ.ಪ) ರವರು ಪರಿಶೀಲಿಸಿ ಆಂತರಿಕ ಪರಿಶೋಧನೆ ಅಭಿಪ್ರಾಯ ನೀಡಿರುತ್ತಾರೆ.

(2) ಆರ್ಥಿಕ ವರ್ಷ 2019–20 ರಲ್ಲಿ ದರ ವ್ಯತ್ಯಾಸದ ಬಿಲ್ಲುಗಳಲ್ಲಿ(Price Variation bill)ಒಟ್ಟು **ರೂ.6.64** ಕೋಟಿಯಷ್ಟು ಹೆಚ್ಚುವರಿ ಕ್ಲೇಮ್ ಮಾಡಿರುವ ಮೊತ್ತವನ್ನು ಆಂತರಿಕ ಪರಿಶೋಧನೆಯ ಪೂರ್ವ ತನಿಖೆಯ ಸಮಯದಲ್ಲಿ ಕಂಡುಹಿಡಿಯಲಾಗಿದೆ.

(3) ಉಗ್ರಾಣದ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ ಆಂತರಿಕ ಪರಿಶೋಧನಾ ವಿಭಾಗದಿಂದ ನಿರಂತರ ವರದಿ ಮಾಡಿದ ಪರಿಣಾಮ, ಆರ್ಥಿಕ ವರ್ಷ 2019–20ರಲ್ಲಿ ಒಟ್ಟು **ರೂ. 8.62**ಕೋಟಿಯಷ್ಟು ಮೊತ್ತದ ರದ್ದಿ ಸಾಮಗ್ರಿಗಳನ್ನು ಮಾರಾಟ ಮಾಡಲಾಗಿರುತ್ತದೆ.

(4) ಆಂತರಿಕ ಪರಿಶೋಧನೆಯ ಮೇಲ್ವಿಚಾರಣೆಯಿಂದ ಆರ್ಥಿಕ ವರ್ಷ 2019–20 ರಲ್ಲಿ **ರೂ. 12.87** ಕೋಟಿಯಷ್ಟು ವಸತಿ ಸಮುಚ್ಚಯಗಳ ಬಾಡಿಗೆ ಹಾಗೂ **ರೂ. 6.63**ಕೋಟಿಯಷ್ಟು ಕಛೇರಿ ಕಟ್ಟಡಗಳ ಬಾಡಿಗೆಯನ್ನು ಟಿ.ಎಲ್&ಎಸ್.ಎಸ್ ವಿಭಾಗಗಳಲ್ಲಿ ಬೇಡಿಕೆ ಮಾಡಲಾಗಿದೆ.

(5) ಆರ್ಥಿಕ ವರ್ಷ 2019–20ರ ಅವಧಿಯಲ್ಲಿ ಸಾಮಗ್ರಿ ಸರಬರಾಜು ಮತ್ತು ಕಾಮಗಾರಿ ಬಿಲ್ಲುಗಳಲ್ಲಿ ಒಟ್ಟು ರೂ. **1.11** ಕೋಟಿಯಷ್ಟು ದಂಡ (Penalty) ವನ್ನು ಕಡಿಮೆ ಲೆಕ್ಕಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

(6) ಆರ್ಥಿಕ ವರ್ಷ 2019–20ರಲ್ಲಿ ಒಟ್ಟು **ರೂ. 106.3 ಲಕ್ಷದಷ್ಟು** ಮೊತ್ತವನ್ನು ಅಂತಿಮ ಪರಿಮಾಣ ವ್ಯತ್ಯಾಸದ ಏರಿಳಿತ ಪಟ್ಟಿಯಲ್ಲಿ (Final Quantity Variation Bill) ಹೆಚ್ಚುವರಿಯಾಗಿ ಕ್ಲೇಮ್ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

(7) ನಿಗಮದಲ್ಲಿ ಸಿಬ್ಬಂದಿಗೆ ಸಂಬಂಧಪಟ್ಟ ಸೇವಾ ನಿಯಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಭಿಪ್ರಾಯಗಳನ್ನು ನಿಗಮ ಮಟ್ಟದಲ್ಲಿ ಹಾಗೂ ಇತರೆ ಕಛೇರಿಗಳಲ್ಲಿ ಕೋರುತ್ತಿದ್ದು, ಕಾಲಕಾಲಕ್ಕೆ ನಿಯಮಗಳನ್ವಯ ಸೂಕ್ತ ಅಭಿಪ್ರಾಯವನ್ನು ನೀಡಲಾಗುತ್ತಿದೆ. ಅಧಿಕಾರಿಗಳ/ಸಿಬ್ಬಂದಿ ವೇತನ ನಿಗಧೀಕರಣ, ಅಂತಿಮ ಗಳಿಕೆ ರಜಾ ಲೆಕ್ಕಚಾರ, ವೈದ್ಯಕೀಯ ವೆಚ್ಚಗಳ ಪಾವತಿ ಹಾಗೂ ಇತರೆ ಸಿಬ್ಬಂದಿ ವೆಚ್ಚ ಪಾವತಿಗಳಲ್ಲಿ ಆರ್ಥಿಕ ವರ್ಷ 2019–20ರಲ್ಲಿ ಆಂತರಿಕ ಪರಿಶೋಧನಾ ವಿಭಾಗವು ಪರಿಶೀಲಿಸಿ **ರೂ.100.44**ಲಕ್ಷದಷ್ಟು ಹೆಚ್ಚುವರಿ ಪಾವತಿಯನ್ನು ಕಂಡುಹಿಡಿಯಲಾಗಿದೆ.

(8) ಕವಿಪ್ರನಿನಿ ವತಿಯಿಂದ ಉಪ ಕೇಂದ್ರಗಳನ್ನು ಹಾಗೂ ಪ್ರಸರಣ ಮಾರ್ಗಗಳನ್ನು ನಿರ್ಮಾಣ ಮಾಡುವಾಗ ಭೂ ಪರಿಹಾರ, ಬೆಳೆ ಪರಿಹಾರವನ್ನು ನಷ್ಟಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿದ್ದು, ಪ್ರಸಕ್ತ ಆರ್ಥಿಕ ವರ್ಷ 2019–20ರಲ್ಲಿ ಆಂತರಿಕ ಪರಿಶೋಧನೆಯಿಂದ ಒಟ್ಟಾರೆ **ರೂ. 17.71** ಲಕ್ಷದಷ್ಟು ತಪ್ಪಾಗಿ ಲೆಕ್ಕಾಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ಹೆಚ್ಚುವರಿ ಪಾವತಿಯನ್ನು ತಡೆಗಟ್ಟಲಾಗಿದೆ.

(9) ಮುಕ್ತ ಪ್ರವೇಶಾಧಿಕಾರ ವಹಿವಾಟುಗಳಿಗೆ(Open Access) ಸಂಬಂಧಿಸಿದಂತೆ ಎಸ್.ಎಲ್.ಡಿ.ಸಿ ಕಛೇರಿಯಲ್ಲಿ ನಡೆಸಲಾಗುತ್ತಿರುವ ವಹಿವಾಟು ನಿರ್ವಹಣೆಯಲ್ಲಿ ಗಮನಿಸಲಾದ ಲೋಪ ಮತ್ತು ಆರ್ಥಿಕ ನಷ್ಟದ ಬಗ್ಗೆ ಆಂತರಿಕ ಪರಿಶೋಧನೆ ನಡೆಸಿ ವಿಶೇಷ ವರದಿಯನ್ನು ನಿರ್ದೇಶಕರು(ಆ&ಮಾ.ಸಂ) ರವರಿಗೆ ದಿನಾಂಕ: 18.11.2019 ರಂದು ಸಲ್ಲಿಸಲಾಗಿದೆ. ಮುಂದುವರೆದು, ಪ್ರಸಕ್ತ ಆರ್ಥಿಕ ವರ್ಷ 2019–20ರಲ್ಲಿ ಮುಕ್ತ ಪ್ರವೇಶಾಧಿಕಾರ ವಹಿವಾಟುಗಳಿಗೆ(Open Access)

ಹಾಗೂ ವೀಲಿಂಗ್ ಎನರ್ಜಿ ಬಿಲ್ಲುಗಳಿಗೆ ಸಂಬಂಧಿಸಿದಂತೆ, ಒಟ್ಟಾರೆ ರೂ. 149.15 ಲಕ್ಷದಷ್ಟು ತಪ್ಪಾಗಿ ಬಿಲ್ಲು ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡು ಹಿಡಿದು ಸರಿಪಡಿಸಲಾಗಿದೆ.

III 2019–20ನೇ ಸಾಲಿನ ಆಂತರಿಕ ಪರಿಶೋಧನೆಯ ಪ್ರಗತಿಯ ಹೆಚ್ಚುವರಿ ಪಾವತಿ/ ನಿಯಮಬಾಹಿರ ವೆಚ್ಚದ ಮತ್ತು ಆಡಿಟ್ ವರದಿಗಳ ಸಾರಾಂಶದ ವಿವರಗಳನ್ನು ಕೆಳಗಿನ ವಿವರಣಾ ಪಟ್ಟಿಯಲ್ಲಿ ಗಮನಿಸಬಹುದಾಗಿದೆ. ವಲಯವಾರು ವಿವರವನ್ನು ಅನುಬಂಧ–1 ರಿಂದ 3 ರಲ್ಲಿ ತೋರಿಸಲಾಗಿದೆ.

ಹೆಚ್ಚುವರಿ ಪಾವತಿಯ ವಿವರಗಳು				**ರೂ. ಲಕ್ಷಗಳಲ್ಲಿ**
ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ವಸೂಲಾದ ಮೊತ್ತ	ಅಂತಿಮ ಬಾಕಿ
241.37	**1294.04**	**1535.41**	**1491.44**	**43.97**
ಅಕ್ಷೇಪಣಾರ್ಹ ಮೊತ್ತದ ವಿವರಗಳು				**ರೂ. ಲಕ್ಷಗಳಲ್ಲಿ**
ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ಸಕ್ರಮಗೊಳಿಸಿದ ಮೊತ್ತ	ಅಂತಿಮ ಬಾಕಿ
26.29	**200.95**	**227.24**	**205.99**	**21.25**
ಆಡಿಟ್ ಪ್ಯಾರಗಳ ವಿವರಗಳು				**ಸಂಖ್ಯೆಗಳಲ್ಲಿ**
ಪ್ರಾರಂಭದ ಆಡಿಟ್ ಪ್ಯಾರಗಳ ವಿವರ	ಆಡಿಟ್ ಪ್ಯಾರಗಳ ನೀಡಿದ ವಿವರ	ಒಟ್ಟು	ಅಡಿಟ್ ಪ್ಯಾರಗಳಿಗೆ ಉತ್ತರ ಪಡೆದ ವಿವರ	ಬಾಕಿ ಉಳಿದ ಆಡಿಟ್ ಪ್ಯಾರಗಳು
360	**1830**	**2190**	**1884**	**306**

ವಲಯವಾರು ವಿವರಗಳು ಈ ಕೆಳಕಂಡಂತಿದೆ:

ಅರ್ಥಿಕ ವರ್ಷ 2019–20 ರಲ್ಲಿ ಆಡಿಟ್ ಪ್ಯಾರಗಳ ವಿವರಗಳು

ಕ್ರ. ಸಂ	ವಲಯ ಕಛೇರಿ ಹೆಸರು	ಪ್ರಾರಂಭದ ಆಡಿಟ್ ಪ್ಯಾರಗಳ ಬಾಕಿ	ಆರ್ಥಿಕ ವರ್ಷದಲ್ಲಿ ನೀಡಲಾದ ಆಡಿಟ್ ಪ್ಯಾರಗಳ ಸಂಖ್ಯೆ	ಒಟ್ಟು	ಆರ್ಥಿಕ ವರ್ಷದಲ್ಲಿ ಉತ್ತರ ಪಡೆಯಲಾದ ಆಡಿಟ್ ಪ್ಯಾರಗಳ ಸಂಖ್ಯೆ	ಬಾಕಿ ಉಳಿದ ಆಡಿಟ್ ಪ್ಯಾರಗಳು
1	ಬೆಂಗಳೂರು	55	345	400	370	30
2	ತುಮಕೂರು	22	429	451	447	4
3	ಕಲಬುರಗಿ	80	130	210	153	57
4	ಮೈಸೂರು	90	215	305	242	63
5	ಹಾಸನ	52	331	383	331	52
6	ಬಾಗಲಕೋಟೆ	42	282	324	238	86
7	ಕೇಂದ್ರ ಕಛೇರಿ	15	84	99	91	8
8	ಎಸ್.ಎಲ್.ಡಿ.ಸಿ	4	14	18	12	6
	ಒಟ್ಟು	**360**	**1830**	**2190**	**1884**	**306**

ಆರ್ಥಿಕ ವರ್ಷ 2019–20 ರಲ್ಲಿ ಹೆಚ್ಚುವರಿ ಪಾವತಿಯ ವಿವರಗಳು

ಕ್ರ. ಸಂ	ವಲಯ ಕಛೇರಿಯ ಹೆಸರು	ಆರ್ಥಿಕ ವರ್ಷ 2019–20 ರ ಅವಧಿಯ ಹೆಚ್ಚುವರಿ ಪಾವತಿಗಳು				ರೂ. ಲಕ್ಷಗಳಲ್ಲಿ
		ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ವಸೂಲಾದ ಮೊತ್ತ	ಅಂತಿಮ ಬಾಕಿ
1	ಬೆಂಗಳೂರು	197.43	718.98	916.41	915.54	0.88
2	ತುಮಕೂರು	1.05	174.22	175.27	174.84	0.43
3	ಕಲಬುರಗಿ	8.45	55.38	63.83	53.66	10.16
4	ಮೈಸೂರು	6.10	17.04	23.14	21.26	1.88
5	ಹಾಸನ	15.13	72.97	88.10	63.94	24.16
6	ಬಾಗಲಕೋಟೆ	0.92	47.09	48.01	46.42	1.59
7	ಕೇಂದ್ರ ಕಛೇರಿ	10.27	49.01	59.28	56.33	2.95
8	ಎಸ್.ಎಲ್.ಡಿ.ಸಿ	2.02	159.35	161.37	159.45	1.92
	ಒಟ್ಟು	**241.37**	**1294.04**	**1535.41**	**1491.44**	**43.97**

ಆರ್ಥಿಕ ವರ್ಷ 2019–20 ರಲ್ಲಿ ಅಕ್ಷೇಪಣಾರ್ಹ ಮೊತ್ತದ ವಿವರಗಳು

ಕ್ರ. ಸಂ	ವಲಯ ಕಛೇರಿಯ ಹೆಸರು	ಆರ್ಥಿಕ ವರ್ಷ 2019–20 ರ ಅವಧಿಯ ಅಕ್ಷೇಪಣಾರ್ಹ ಮೊತ್ತಗಳು				ರೂ. ಲಕ್ಷಗಳಲ್ಲಿ
		ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ಸಕ್ರಮಗೊಳಿಸಿದ ಮೊತ್ತ	ಅಂತಿಮ ಬಾಕಿ
1	ಬೆಂಗಳೂರು	15.24	9.16	24.40	21.77	2.63
2	ತುಮಕೂರು	0.00	115.22	115.22	106.15	9.07
3	ಕಲಬುರಗಿ	0.00	0.41	0.41	0.00	0.41
4	ಮೈಸೂರು	5.11	18.45	23.56	17.15	6.42
5	ಹಾಸನ	2.08	35.97	38.05	37.33	0.72
6	ಬಾಗಲಕೋಟೆ	3.52	20.55	24.07	22.06	2.00
7	ಕೇಂದ್ರ ಕಛೇರಿ	0.00	0.84	0.84	0.84	0.00
8	ಎಸ್.ಎಲ್.ಡಿ.ಸಿ	0.34	0.35	0.69	0.69	0.00
	ಒಟ್ಟು	**26.29**	**200.95**	**227.24**	**205.99**	**21.25**

ಸಹಾಯಕ ಪ್ರಧಾನ ವ್ಯವಸ್ಥಾಪಕರು(ವಿಚಾರಣೆಗಳ) ಶಾಖೆ

ವರ್ಷದ ಆರಂಭದಲ್ಲಿ ಬಾಕಿ ಇರುವ ಇಲಾಖಾ ವಿಚಾರಣೆಗಳು (01.04.2019 ರಂದು ಇದ್ದಂತೆ)	103
2019–20 ರ ಅವಧಿಯಲ್ಲಿ ಆದೇಶಿಸಲಾದ ಇಲಾಖಾ ವಿಚಾರಣೆಗಳ ಸಂಖ್ಯೆ	57
2019–20 ರಲ್ಲಿ ವಿಲೇವಾರಿ ಮಾಡಿದ ಇಲಾಖಾ ವಿಚಾರಣೆಗಳ ಸಂಖ್ಯೆ	22
31.03.2020 ರ ಅಂತ್ಯಕ್ಕೆ ಬಾಕಿ ಇರುವ ಇಲಾಖಾ ವಿಚಾರಣೆಗಳು	138

01.04.2019 ರಿಂದ 31.03.2020 ರ ಅಂತ್ಯಕ್ಕೆ ವ್ಯವಸ್ಥಾಪಕರು(ವಿಚಾರಣೆಗಳು–1/2), ನಿಗಮ ಕಾರ್ಯಾಲಯ ರವರ ಶಾಖೆಯಲ್ಲಿ ಸ್ವೀಕೃತವಾಗಿರುವ ಇತ್ಯರ್ಥಪಡಿಸಿರುವ ಹಾಗೂ ಬಾಕಿ ಇರುವ ಇಲಾಖಾ ವಿಚಾರಣೆಗಳ ವಿವರಣಾ ಪಟ್ಟಿ.												
ಶಾಖೆ	01.04.2019 ರ ಆರಂಭದಲ್ಲಿ ಉಳಿದಿರುವ ಇಲಾಖಾ ವಿಚಾರಣೆಗಳು		ಒಟ್ಟು	01.04.2019 ರಿಂದ 31.03.2020 ರ ಅಂತ್ಯಕ್ಕೆ ಸ್ವೀಕರಿಸಲಾದ ಇಲಾಖಾ ವಿಚಾರಣೆಗಳು		ಒಟ್ಟು	01.04.2019 ರಿಂದ 31.03.2020ರ ಅಂತ್ಯಕ್ಕೆ ಇತ್ಯರ್ಥಗೊಂಡ ಇಲಾಖಾ ವಿಚಾರಣೆಗಳು		ಒಟ್ಟು	31.03.2020 ರ ಅಂತ್ಯಕ್ಕೆ ಬಾಕಿ ಉಳಿದಿರುವ ಇಲಾಖಾ ವಿಚಾರಣೆಗಳು		ಒಟ್ಟು
	ನಿಯಮ–11	ನಿಯಮ–12		ನಿಯಮ–11	ನಿಯಮ–12		ನಿಯಮ–11	ನಿಯಮ–12		ನಿಯಮ–11	ನಿಯಮ–12	
ವ್ಯವಸ್ಥಾಪಕರು (ವಿಚಾರಣೆಗಳು–1)	38	2	40	46	2	48	18	2	20	66	2	68
ವ್ಯವಸ್ಥಾಪಕರು (ವಿಚಾರಣೆಗಳು–2)	63	0	63	9	0	9	2	0	2	70	0	70
ಒಟ್ಟು	101	2	103	55	2	57	20	2	22	136	2	138

ನಿಯಂತ್ರಣಾಧಿಕಾರಿ(ಲೆ, ಪಿಂ ಮತ್ತು ಮುಂ) ಶಾಖೆ :

1. ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್) ರವರ ನಿಯಂತ್ರಣದಲ್ಲಿ ಪಿಂಚಣಿ ಮತ್ತು ಮುಂಗಡ ಶಾಖೆಯು ಕಾರ್ಯನಿರ್ವಹಿಸುತ್ತಿವೆ.
2. ಆರ್ಥಿಕ ವರ್ಷ 2019–20 ಸಾಲಿನಲ್ಲಿ 119 ಸಂಖ್ಯೆಯ 'ಎ' ಮತ್ತು 'ಬಿ' ಪದವೃಂದದ ಅಧಿಕಾರಿಗಳು ನಿವೃತ್ತಿ ಹೊಂದಿದ್ದು, ಬಾಕಿ ಉಳಿದಿರುವ 35 ಪ್ರಕರಣಗಳು ಹಾಗೂ 2019–20ನೇ ಸಾಲಿನಲ್ಲಿ 79 ಪ್ರಕರಣಗಳು ಸೇರಿದಂತೆ ಒಟ್ಟು 114 ಪಿಂಚಣಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ.
3. ಆರ್ಥಿಕ ವರ್ಷ 2019–20 ಸಾಲಿನಲ್ಲಿ ಪಿಂಚಣಿ ಶಾಖೆಯಲ್ಲಿ ಸ್ವೀಕೃತಗೊಂಡ 'ಸಿ' ಮತ್ತು 'ಡಿ' ಪದವೃಂದದ ನಿವೃತ್ತಿ ನಂತರ ಮರಣ ಹೊಂದಿದ 520 ನೌಕರರ ಕುಟುಂಬದವರಿಗೆ ಕುಟುಂಬ ಪಿಂಚಣಿಯನ್ನು ಅಧಿಕರಿಸಲಾಗಿದೆ.
4. ಪಿಂಚಣಿದಾರರಿಗೆ ಪಾವತಿಸಲಾಗುವ ಮಾಹೆಯಾನ ಪಿಂಚಣಿಯಲ್ಲಿ ರೂ.200/–ಗಳನ್ನು ಪಿಂಚಣಿದಾರರ ಭದ್ರತಾ ನಿಧಿಯ ವಂತಿಗೆ ಮೊತ್ತವನ್ನು ಕಡಿತಗೊಳಿಸಿ ಪಿಂಚಣಿದಾರರ ಭದ್ರತಾ ನಿಧಿಗೆ ಜಮೆ ಮಾಡಲಾಗುತ್ತದೆ. ಪಿಂಚಣಿದಾರರ ಹಾಗೂ 2008ರ ಪೂರ್ವದಲ್ಲಿ ಕುಟುಂಬ ಪಿಂಚಣಿ ಮಂಜೂರಾದ ಕುಟುಂಬ ಪಿಂಚಣಿದಾರರ ಮರಣದ ನಂತರ ಪಿಂಚಣಿದಾರರ ಭದ್ರತಾ ನಿಧಿಯ ಅಧಿಕರಣೆಗಾಗಿ ಈ ಕಛೇರಿಯಲ್ಲಿ ಸ್ವೀಕೃತಗೊಂಡ 897 ಪ್ರಸ್ತಾವನೆಗಳು ಹಾಗೂ 2019–20ನೇ ಸಾಲಿನಲ್ಲಿ ಬಾಕಿ ಉಳಿದಿದ್ದ ಪ್ರಕರಣಗಳನ್ನು ಸೇರಿದಂತೆ 786 ಪಿಂಚಣಿ ಪ್ರಕರಣಗಳನ್ನು ಇತ್ಯರ್ಥಪಡಿಸಿ, ನಾಮನಿರ್ದೇಶಿತರಿಗೆ ಪಿಂಚಣಿ ಭದ್ರತಾ ನಿಧಿಯನ್ನು ಪಾವತಿಸಲಾಗಿರುತ್ತದೆ.

[

ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್) ಶಾಖೆ:

01.04.2006ರ ನಂತರ ಕ.ವಿ.ಪ್ರ.ನಿ.ನಿ/ವಿ.ಸ.ಕಂಗಳಿಗೆ ಹೊಸದಾಗಿ ನೇಮಕಾತಿ ಹೊಂದುವವರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಸೌಲಭ್ಯವನ್ನು ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005–06, ಬೆಂಗಳೂರು ದಿನಾಂಕ 05.07.2007 ರ ಕ.ವಿ.ಪ್ರ.ನಿ.ನಿ.ಯ ಆದೇಶದ ಪ್ರಕಾರ ಕಡ್ಡಾಯಗೊಳಿಸಲಾಗಿದೆ. ಮೇ–2015 ರಲ್ಲಿ ಸದರಿ ಯೋಜನೆಯ ಪರಿಪೂರ್ಣ ಆಡಳಿತವನ್ನು ಮೆ॥ ಎಲ್.ಐ.ಸಿ (ಪಿ & ಜಿ. ಎಸ್) ಘಟಕ, ಬೆಂಗಳೂರು ರವರಿಗೆ ವಹಿಸಲಾಗಿದೆ. ನೌಕರನು 10% ಮೂಲ ವೇತನ (ಡಿಯರ್‌ನೆಸ್ ಪೇ ಅನ್ವಯಿಸಿದ್ದಲ್ಲಿ) ಮತ್ತು ತುಟ್ಟಿ ಭತ್ಯೆಮಾಸಿಕ ದೇಣಿಗೆಯಾಗಿ ಸಂದಾಯ ಮಾಡಬೇಕು ಮತ್ತು ಕವಿಪ್ರನಿನಿ/ವಿಸಕಂಗಳ (ಉದ್ಯೋಗದಾತರ ಭಾಗವಾಗಿ) ಸಮಾನ ಅನುಪಾತದಲ್ಲಿ ದೇಣಿಗೆಯನ್ನು ಸಂದಾಯ ಮಾಡಬೇಕಾಗಿರುತ್ತದೆ. ಕವಿಪ್ರನಿನಿಯ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005–06 ದಿನಾಂಕ 13.09.2019 ರ ಪ್ರಕಾರ ಉದ್ಯೋಗದಾತರ ದೇಣಿಗೆಯನ್ನು ಶೇ. 10 ರಿಂದ ಶೇ. 14ಕ್ಕೆ ದಿನಾಂಕ 01.04.2019

ರಿಂದ ಜಾರಿಗೆಬರುವಂತೆ ಹೆಚ್ಚಿಸಲಾಗಿದೆ. ನೌಕರರವಾರು ದೇಣಿಗೆಗೆ ಸಂಬಂಧಿಸಿದ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಸೆರೆಹಿಡಿಯಲಾದ 211 ಲೆಕ್ಕ ಘಟಕಗಳ ಮಾಹಿತಿಯನ್ನು ಮೆ॥ ಎಲ್.ಐ.ಸಿ(ಪಿ & ಜಿ. ಎಸ್) ಘಟಕ, ಯೋಜನೆಯ ನಿಧಿಯ ವ್ಯವಸ್ಥಾಪಕರಿಗೆ ರವಾನಿಸಲಾಗಿದೆ. ಕಂಪನಿಗಳಿಂದ ವಸೂಲಾದ ಒಟ್ಟು ದೇಣಿಗೆಯ ಮೊತ್ತವನ್ನು ಮೆ॥ ಎಲ್.ಐ.ಸಿ. (ಪಿ & ಜಿ. ಎಸ್) ಘಟಕ ರವರ ನ್ಯೂ ಗ್ರೂಪ್ ಸೂಪರ್‌ಆನ್ಯುಯೇಶನ್‌ಕ್ಯಾಶ್ ಅಕ್ಯೂಮುಲೇಶನ್‌ಪಾಲಿಸಿ (ಎನ್‌ಜಿಎಸ್‌ಸಿಎ) ಗೆ ಹೂಡಿಕೆ ಮಾಡಲಾಗಿದೆ.

ಮೆ॥ ಎಲ್.ಐ.ಸಿ(ಪಿ & ಜಿ. ಎಸ್) ಘಟಕ ರವರ ತ್ರೈಮಾಸಿಕ ಹೇಳಿಕೆಗಳ ಅನ್ವಯ 31.03.2020 ರಂದು ಇದ್ದಂತೆ ಒಟ್ಟು ಸಂಖ್ಯೆ: 34332 ಅಧಿಕಾರಿ/ನೌಕರರುಗಳು ಈ ಯೋಜನೆಗೆ ಒಳಪಟ್ಟಿರುತ್ತಾರೆ ಮತ್ತು ಮಾರ್ಚ್–2020 ರವರೆಗೆ ಕವಿಪ್ರನಿನಿಯ/ವಿಸಕಂಗಳ ಒಟ್ಟು ದೇಣಿಗೆ ಬಡ್ಡಿ ಸಹಿತ ರೂ.2179.35 ಕೋಟಿಗಳಷ್ಟಿರುತ್ತದೆ.

ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ) ಶಾಖೆಯಿಂದ ಹೊರಡಿಸಲಾದ ಮುಖ್ಯ ಆದೇಶಗಳು:

ಕ್ರ.ಸಂ	ಆದೇಶಗಳು/ ಸುತ್ತೋಲೆಗಳ ಸಂಖ್ಯೆ/ ದಿನಾಂಕ	ವಿಷಯ
1.	ಸಂಖ್ಯೆ: ಕವಿಪ್ರನಿನಿ/ಬಿ16/3610(III)/ 2003–04, ದಿನಾಂಕ: 04.04.2019	ದಿನಾಂಕ: 01.01.2019 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯ ದರಗಳನ್ನು ಶೇ.3.75 ರಿಂದ ಶೇ.6.50 ಕ್ಕೆ ಪರಿಷ್ಕರಿಸುವ ಬಗ್ಗೆ.
2.	ಸಂಖ್ಯೆ: ಕವಿಪ್ರನಿನಿ/ಬಿ16/3611/ 2003–04, ದಿನಾಂಕ: 11.04.2019	ದಿನಾಂಕ: 01.01.2019 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯ ದರಗಳನ್ನು ಶೇ.3.75 ರಿಂದ ಶೇ.6.50 ಕ್ಕೆ ಪರಿಷ್ಕರಿಸುವ ಬಗ್ಗೆ.
3.	ಸಂಖ್ಯೆ: ಕವಿಪ್ರನಿನಿ/ಬಿ16/86460/ 2018–19 ದಿನಾಂಕ: 12.04.2019	80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟ ನಿಗಮದ ಎಲ್ಲಾ ಪಿಂಚಣಿದಾರರು/ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿ ಮಂಜೂರು ಮಾಡುವ ಬಗ್ಗೆ.
4.	ಸಂಖ್ಯೆ: ಕವಿಪ್ರನಿನಿ/ಬಿ5ಸಿ/721(II)/ 80–81, ದಿನಾಂಕ: 12.04.2019	ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 01.01.2019 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರನ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.49,633/– ಕ್ಕೆ ನಿಗದಿಪಡಿಸುವ ಬಗ್ಗೆ.
5.	ಸಂಖ್ಯೆ: ಕವಿಪ್ರನಿನಿ/ಬಿ16/7990/ 2009–10, ದಿನಾಂಕ: 24.04.2019	ನಿಗಮದ ಅಂಧ/ ಅಂಗವಿಕಲ ಅಧಿಕಾರಿ/ ನೌಕರರಿಗೆ ಶೇಕಡಾ 6 ರಷ್ಟು ವಾಹನ ಭತ್ಯೆಯನ್ನು ಮಂಜೂರು ಮಾಡುವಾಗ 'ಡಿಯರ್ ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸುವ ಬಗ್ಗೆ.
6.	ಸಂಖ್ಯೆ: ಕವಿಪ್ರನಿನಿ/ಬಿ16/3595/98–99 ದಿನಾಂಕ: 02.05.2019	ವಿಶೇಷ ಚೇತನ (ಅಂಧ ಮತ್ತು ಅಂಗವಿಕಲ) ನೌಕರರಿಗೆ ಮಿದು (ಫ್ಲೆಕ್ಸಿ) ಸಮಯ ಸೌಲಭ್ಯದ ಬಗ್ಗೆ.
7.	ಸಂಖ್ಯೆ: ಕವಿಪ್ರನಿನಿ/ಬಿ16/3595/98–99, ದಿನಾಂಕ: 02.05.2019	ನಿಗಮದ ವಿಕಲ ಚೇತನ(ಅಂಗವಿಕಲ) ನೌಕರರು ಮೋಟಾರು ಚಾಲಿತ/ ಯಾಂತ್ರಿಕ(ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಹಾಯಧನವನ್ನು ರೂ.25,000/– ರಿಂದ ರೂ.40,000/– ಕ್ಕೆ ಪರಿಷ್ಕರಿಸುವ ಬಗ್ಗೆ.
8.	ಸಂಖ್ಯೆ: ಕವಿಪ್ರನಿನಿ/ಬಿ16/3595/98–99, ದಿನಾಂಕ: 02.05.2019	ನಿಗಮದ ನೌಕರರ ಅವಲಂಬಿತ ವಿಶೇಷ ಚೇತನ (ಅಂಧ ಮತ್ತು ಅಂಗವಿಕಲ) ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಭತ್ಯೆಯನ್ನು ರೂ.500/– ರಿಂದ ರೂ.1000/– ಕ್ಕೆ ಪರಿಷ್ಕರಿಸುವ ಬಗ್ಗೆ.
9.	ಸಂಖ್ಯೆ: ಕವಿಪ್ರನಿನಿ/ಬಿ16/3595/98–	ಪೂರ್ಣ ಪ್ರಮಾಣದ ನಿವೃತ್ತಿ ವೇತನ ಪಡೆಯುವ ಉದ್ದೇಶಕ್ಕಾಗಿ

ಕ್ರ.ಸಂ	ಆದೇಶಗಳು/ ಸುತ್ತೋಲೆಗಳ ಸಂಖ್ಯೆ/ ದಿನಾಂಕ	ವಿಷಯ
	99, ದಿನಾಂಕ: 20.05.2019	ಗರಿಷ್ಠ 33 ವರ್ಷಗಳ ಅರ್ಹದಾಯಕ ಸೇವೆಯ ಪ್ರಮಾಣವನ್ನು ಗರಿಷ್ಠ 30 ವರ್ಷಗಳಿಗೆ ಇಳಿಕೆ ಮಾಡುವ ಬಗ್ಗೆ.
10.	ಸಂಖ್ಯೆ: ಕವಿಪ್ರನಿನಿ/ಬಿ16/780/2019–20, ದಿನಾಂಕ: 20.05.2019	ಪ್ರಭಾರ ಭತ್ಯೆ ದರಗಳನ್ನು ಶೇ.7.5 ರಿಂದ ಶೇ.15 ಕ್ಕೆ ಪರಿಷ್ಕರಿಸುವ ಬಗ್ಗೆ.
11.	ಸಂಖ್ಯೆ: ಕವಿಪ್ರನಿನಿ/ಬಿ16/86466/ 2018–19, ದಿನಾಂಕ: 06.06.2019	ವಿವಿಧ ದಿನಾಂಕಗಳಂದು ನಿಯತಗೊಳ್ಳುತ್ತಿರುವ ನಿಗಮದ ಅಧಿಕಾರಿ/ ನೌಕರರ ವಾರ್ಷಿಕ ವೇತನ ಬಡ್ತಿಯ ದಿನಾಂಕವನ್ನು ಜನವರಿ ಹಾಗೂ ಜುಲೈ ತಿಂಗಳಿಗೆ ಪರಿಷ್ಕರಿಸುವ ಬಗ್ಗೆ.
12.	ಸಂಖ್ಯೆ: ಕವಿಪ್ರನಿನಿ/ಬಿ16/2835/99–2000, ದಿನಾಂಕ: 17.06.2019	ಪ್ರತಿ ತಿಂಗಳ ನಾಲ್ಕನೇ ಶನಿವಾರವನ್ನು ಸಾರ್ವತ್ರಿಕ ರಜೆ ಎಂದು ಘೋಷಿಸುವ ಹಾಗೂ ಸಾಂದರ್ಭಿಕ ರಜೆಯನ್ನು 15 ದಿನಗಳಿಂದ 10 ದಿನಗಳಿಗೆ ಕಡಿಮೆಗೊಳಿಸುವ ಬಗ್ಗೆ.
13.	ಸಂಖ್ಯೆ: ಕವಿಪ್ರನಿನಿ/ಬಿ16/ಬಿ100/ 3736/2019–20, ದಿನಾಂಕ: 09.07.2019	ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆಯನ್ನು ನಿಗಮದಲ್ಲಿ ಅಳವಡಿಸಿಕೊಂಡಿರುವ ಬಗ್ಗೆ.
14.	ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ / ಬಿ93/36012/2018–19, ದಿನಾಂಕ: 19.07.2019	ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆ ಅಡಿಯಲ್ಲಿ ವಯೋನಿವೃತ್ತಿಹೊಂದುವ ಅಥವಾ ವಯೋನಿವೃತ್ತಿ ಮುನ್ನವೇ ಅಥವಾ ಸೇವೆಯಲ್ಲಿರುವಾಗಲೇ ನಿಧನ ಹೊಂದಿದಾಗ, ಯೋಜನೆಯಿಂದ ಮೊತ್ತವನ್ನು ಹಿಂಪಡೆಯುವ ಬಗ್ಗೆ.
15.	ಸಂಖ್ಯೆ: ಕವಿಪ್ರನಿನಿ/ಬಿ16/86466/ 2018–19, ದಿನಾಂಕ: 03.08.2019	ವಾರ್ಷಿಕ ವೇತನ ಬಡ್ತಿಯನ್ನು ಒಂದನೇ ಜನವರಿಗೆ ಮರುನಿಗಧಿಪಡಿಸಿದ ನಂತರ ವೇತನ ಬಡ್ತಿಯ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸುವ ಬಗ್ಗೆ.
16.	ಸಂಖ್ಯೆ: ಕವಿಪ್ರನಿನಿ/ಬಿ16/2835/99–2000, ದಿನಾಂಕ: 05.08.2019	ಹದಿನೈದು ದಿವಸಗಳ ಸಾಂದರ್ಭಿಕ ರಜೆಯನ್ನು ಹತ್ತು ದಿನಗಳಿಗೆ ಇಳಿಸಿರುವ ಬಗ್ಗೆ.
17.	ಸಂಖ್ಯೆ: ಕವಿಪ್ರನಿನಿ/ಬಿ16/4682/ 2006–07, ದಿನಾಂಕ: 19.08.2019	ದಿನಾಂಕ: 29.12.2010 ರಿಂದ ಅನ್ವಯವಾಗುವಂತೆ ಸಕ್ರಮಗೊಳಿಸಲಾಗಿದ್ದ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ದಿನಾಂಕ: 29.12.2010 ರಿಂದ 31.12.2018 ರವರೆಗೆ ಪಾವತಿಸಬೇಕಿರುವ ಅರ್ಹ ಭತ್ಯೆಗಳ ಜೊತೆಗೆ ವೇತನದ ಆರ್ಥಿಕ ಲಾಭದ ಬಾಕಿ ಮೊತ್ತವನ್ನು ಪೂರ್ವ ಆಂತರಿಕ ಪರಿಶೋಧನೆಗೊಳಪಡಿಸಿ ನಾಲ್ಕು ಸಮಾನ ಕಂತುಗಳಲ್ಲಿ ಪಾವತಿಸುವ ಬಗ್ಗೆ.
18.	ಸಂಖ್ಯೆ: ಕವಿಪ್ರನಿನಿ/ಬಿ16/5608/ 2000–01, ದಿನಾಂಕ: 21.08.2019	ನಿಗಮದ/ ಎಸ್ಕಾಂಗಳ ನೌಕರರಿಗೆ 2018–19 ನೇ ಹಣಕಾಸು ವರ್ಷಕ್ಕೆ ಬೋನಸ್/ ಅನುಗ್ರಹ ಪೂರ್ವಕವನ್ನು ಮಂಜೂರು ಮಾಡುವ ಬಗ್ಗೆ.
19.	ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/ 2005–06, ದಿನಾಂಕ: 13.09.2019	ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ನೌಕರರಿಗೆ ಉದ್ಯೋಗದಾತರ ವಂತಿಗೆಯನ್ನು ಶೇ.10 ರಿಂದ ಶೇ.14ಕ್ಕೆ ಹೆಚ್ಚಿಸಿ ಹೊರಡಿಸಿರುವ ಸರ್ಕಾರದ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಂಡಿರುವ ಬಗ್ಗೆ.

ಕ್ರ.ಸಂ	ಆದೇಶಗಳು/ ಸುತ್ತೋಲೆಗಳ ಸಂಖ್ಯೆ/ ದಿನಾಂಕ	ವಿಷಯ
20.	ಸಂಖ್ಯೆ: ಕವಿಪ್ರನಿನಿ/ಬಿ16/3610(III)/ 2003–04, ದಿನಾಂಕ: 28.10.2019	ದಿನಾಂಕ: 01.07.2019 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯ ದರಗಳನ್ನು ಶೇ.6.50 ರಿಂದ ಶೇ.11.25 ಪರಿಷ್ಕರಿಸುವ ಬಗ್ಗೆ.
21.	ಸಂಖ್ಯೆ: ಕವಿಪ್ರನಿನಿ/ಬಿ16/3611/ 2003–04, ದಿನಾಂಕ: 30.10.2019	ದಿನಾಂಕ: 01.07.2019 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯ ದರಗಳನ್ನು ಶೇ.6.50 ರಿಂದ ಶೇ.11.25 ಪರಿಷ್ಕರಿಸುವ ಬಗ್ಗೆ.
22.	ಸಂಖ್ಯೆ: ಕವಿಪ್ರನಿನಿ/ಬಿ16/ ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2 019–20, ದಿನಾಂಕ: 31.10.2019	ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ ಅವರ ಪಿಪಿಎಎನ್ ಖಾತೆಯಲ್ಲಿರುವ ಮೊತ್ತವನ್ನು ಇತ್ಯರ್ಥ ಪಡಿಸುವ ಬಗ್ಗೆ.
23.	ಸಂಖ್ಯೆ: ಕವಿಪ್ರನಿನಿ/ಬಿ16/ಬಿ93/35989/ 2019–20, ದಿನಾಂಕ: 31.10.2019	ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 01.04.2019 ರಿಂದ ದಿನಾಂಕ: 31.08.2019 ರವರೆಗೆ ಪಾವತಿಸಬೇಕಾದ ಉದ್ಯೋಗದಾತರ ವಂತಿಗೆಯ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸುವ ಬಗ್ಗೆ.
24.	ಸಂಖ್ಯೆ: ಕವಿಪ್ರನಿನಿ/ಬಿ5ಸಿ/721(II)/ 80–81, ದಿನಾಂಕ: 13.11.2019	ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 01.01.2019 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರನ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.51,422/– ಕ್ಕೆ ನಿಗದಿಪಡಿಸುವ ಬಗ್ಗೆ.
25.	ಸಂಖ್ಯೆ: ಕವಿಪ್ರನಿನಿ/ಬಿ16/5411/1996–97, ದಿನಾಂಕ: 28.11.2019	ಶಾಶ್ವತ ಅಂಗವಿಕಲ/ ಬುದ್ಧಿಮಾಂದ್ಯದಿಂದ ಬಳಲುತ್ತಿರುವ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಲು ಇರುವ ನಿರ್ಬಂಧವನ್ನು ಸಡಿಲಿಸುವ ಬಗ್ಗೆ.
26.	ಸಂಖ್ಯೆ: ಕವಿಪ್ರನಿನಿ/ಬಿ16/2835/99–2000, ದಿನಾಂಕ: 28.11.2019	2020ನೇ ವರ್ಷಕ್ಕೆ ಮಂಜೂರು ಮಾಡಿರುವ ಸಾರ್ವತ್ರಿಕ ರಜಾ ದಿನಗಳ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.
27.	ಸಂಖ್ಯೆ: ಕವಿಪ್ರನಿನಿ/ಬಿ16/813/2019–20, ದಿನಾಂಕ: 06.01.2020	ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳಲ್ಲಿ ತಿಳಿಸಲಾಗಿರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್/ ಸಿವಿಲ್) ಹುದ್ದೆಗಳಿಗೆ ತಿದ್ದುಪಡಿಯನ್ನು ಮಾಡುವ ಬಗ್ಗೆ.
28.	ಸಂಖ್ಯೆ: ಕವಿಪ್ರನಿನಿ/ಬಿ16/5411/96–97, ದಿನಾಂಕ: 03.02.2020	ನಿಗಮದ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಳ್ಳುವ ಅಭ್ಯರ್ಥಿಗಳನ್ನು ನೇಮಿಸಲು ನೇಮಕಾತಿ ಪ್ರಾಧಿಕಾರವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರವು ಹೊರಡಿಸಿರುವ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

ಹುದ್ದೆಗಳನ್ನು ರದ್ದುಗೊಳಿಸಿರುವುದು

ವರದಿ ಮಾಡುವ ವರ್ಷದಲ್ಲಿ ಕವಿಪ್ರನಿನಿಯ ವಿವಿಧ ಕಛೇರಿಗಳಲ್ಲಿ 291 ಸಂಖ್ಯೆಯ ಈ ಕೆಳಕಂಡ ವಿವಿಧ ಹುದ್ದೆಗಳನ್ನು ರದ್ದುಗೊಳಿಸಿರುವುದು.

ಕ್ರ.ಸಂ	ಹುದ್ದೆಯ ಹೆಸರು	ರದ್ದುಪಡಿಸಿದ ಹುದ್ದೆಗಳ ಸಂಖ್ಯೆ
1	ಡ್ರಾಫ್ಟ್ಮ್ಯಾನ್	03
2	ಸಹಾಯಕ ಡ್ರಾಫ್ಟ್ಸ್ಮ್ಯಾನ್	10
3	ಹಿರಿಯ ಡ್ರಾಫ್ಟ್ಸ್ಮ್ಯಾನ್	01
4	ಬೆರಳಚ್ಚುಗಾರ	104
5	ಮೆರಿಟ್ ಗ್ರೇಡ್ ಮೆಕಾನಿಕ್	04
6	ಕೇಬಲ್ ಜಾಯ್ಂಟ್ರ್	06
7	ಸಹಾಯಕ ಕೇಬಲ್ ಜಾಯ್ಂಟ್ರ್	04
8	ಉಗ್ರಾಣ ಪರಿಚಾರಕ ದರ್ಜೆ 1	15
9	ಸಹಾಯಕ ಉಗ್ರಾಣ	29
10	ಮೆಕಾನಿಕ್ ಕಮ್ ಮೆಕಾನಿಸ್ಟ್ ಗ್ರೇಡ್–1	01
11	ಕಾರ್ಪೆಂಟರ್ಗ್ರೇಡ್–2	04
12	ಬ್ಲಾಕ್ಸ್ಮಿತ್ ಗ್ರೇಡ್–2	01
13	ಮೇಸ್ತ್ರಿ (ಕಾಮಗಾರಿ) ಗ್ರೇಡ್–1	06
14	ಮೇಸ್ತ್ರಿ (ಕಾಮಗಾರಿ) ಗ್ರೇಡ್–2	02
15	ಸಿವಿಲ್ ಮೇಟಿ	04
16	ಫೀಲ್ಡ್ ಮ್ಯಾನ್ ಗ್ರೇಡ್–2	02
17	ಶುಚಿಗಾರ/ವಲಯವಾರು ಆಟೋ ಸಹಾಯಕ	61
18	ಮೇಟಿ	01
19	ಪೇಯಿಂಟರ್ ಗ್ರೇಡ್–2	01
20	ಸಹಾಯಕ (ಕಾರ್ಯಗಾರ)	09
21	ಮೇಸನ್ ಗ್ರೇಡ್–2	01
22	ಕುಕ್ ಕಮ್ ಕೇರ್ಟೇಕರ್	03
23	ಸಹಾಯಕ ಕಾಮಗಾರಿ	06
24	ಅಟೆಂಡೆಂಟ್ ಗ್ರೇಡ್–1	03
25	ಮೇಸ್ತ್ರಿ (ಆರೋಗ್ಯ) ಗ್ರೇಡ್–2	01
26	ಸೆಕ್ಯೂರಿಟಿ ಹೆಡ್ ಗಾರ್ಡ್	02
27	ಪ್ಲಂಬರ್ (ಕಾಮಗಾರಿ) ಗ್ರೇಡ್–1	01
28	ಆಟೋ ಮೆಕ್ಯಾನಿಕ್ ಗ್ರೇಡ್–2	02
29	ಆಟೋ ಮೆಕ್ಯಾನಿಕ್	01
30	ಆಟೋ ಸಹಾಯಕ ಮತ್ತು ಶುಚಿಗಾರ	03
	ಒಟ್ಟು	**291**

ಔದ್ಯಮಿಕ ಬಾಂಧವ್ಯ:

ಕವಿಪ್ರನಿನಿಯು ತನ್ನ ವಿದ್ಯುತ್ ಪ್ರಸರಣ ಮತ್ತು ನಿರ್ವಹಣೆ ಕ್ಷೇತ್ರದ ಗುರಿ ಸಾಧನೆಯಲ್ಲಿ ಮಾನವ ಶಕ್ತಿಯೂಅಪೂರ್ವವಾದ ಆಸ್ತಿಯೆಂದು ಪರಿಗಣಿಸಿರುವ ನಿಗಮದ ನೌಕರರ ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆಯೂ ಮುತುವರ್ಜಿವಹಿಸಿರುತ್ತದೆ. ನೌಕರರ ಕುಂದು–ಕೊರತೆಗಳನ್ನು ಸಕಾಲದಲ್ಲಿ ಗುರುತಿಸಿ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಪರಸ್ಪರ ಸಮಾಲೊಚಿಸಿ ಪರಿಹರಿಸಲಾಗುತ್ತಿದೆ.

ನಿಗಮವು ಸುಧಾರಣೆ ಹಾಗೂ ಪುನರ್ರಚನೆಯ ಮುಂಚೂಣಿಯಲ್ಲಿರುವುದರಿಂದ, ಈ ನಿಟ್ಟಿನಲ್ಲಿ ನೌಕರವರ್ಗ ಹಾಗೂ ಆಡಳಿತವರ್ಗ ಪರಸ್ಪರ ಸಮಾಲೋಚಿಸಿ, ಪಾರದರ್ಶಕವಾದ ಸಲಹೆಯೊಂದಿಗೆ ಮುಂದುವರೆಯುತ್ತಿರುವುದು ಆಶಾದಾಯಕ ವಿಷಯ. **"ಆಡಳಿತದಲ್ಲಿ ಕಾರ್ಮಿಕರ ಪಾತ್ರ"** ವನ್ನು ಗುರುತಿಸಿ ಮಹತ್ವ ನೀಡಿರುವ ನಿಗಮದಲ್ಲಿ ನೌಕರರ ಸಂಘವು ಗುರಿ ಸಾಧನೆಗೆ ಸಹಕರಿಸುತ್ತಿರುವುದು ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಸ್ಫೂರ್ತಿಯಾಗಿರುತ್ತದೆ.

ಕಾರ್ಮಿಕ ಸಂಬಂಧ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದ್ದು, ದಿನಾಂಕ 31–03–2020ರ ಅಂತ್ಯಕ್ಕೆ 21 ಕಾರ್ಮಿಕ ಸಂಬಂಧ ಪ್ರಕರಣಗಳು, ವಿವಿಧ ಕಾರ್ಮಿಕ ನ್ಯಾಯಾಲಯಗಳಲ್ಲಿ 22 ಪ್ರಕರಣಗಳು ಮತ್ತು 73 ರಿಟ್ ಅರ್ಜಿಗಳು/ರಿಟ್ ಅಫೀಲ್‌ಗಳು ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿನ ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ.

ಮಹಿಳಾ ದೂರು ನಿವಾರಣಾ ಸಮಿತಿ:

ನಿಗಮದಲ್ಲಿ ಮಹಿಳಾ ನೌಕರರುಗಳಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಕಾರ್ಯ ಕ್ಷೇತ್ರಗಳಲ್ಲಿ ತೊಂದರೆ ಮತ್ತು ಅನುಚಿತ ವರ್ತನೆಗಳ ಬಗ್ಗೆ ದುರು ನಿಡಲು ನಿಗಮದ ಆದೇಶ ದಿನಾಂಕ 03–07–1998ರ ಅನುಸಾರ ಮಹಿಳಾ ದೂರು ನಿವಾರಣಾ ಸಮಿತಿಯನ್ನು ನಿಗಮದಲ್ಲಿ ರಚಿಸುತ್ತಾ ಬಂದಿದ್ದು, ಸದರಿ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರು ಹಾಗೂ 08 ಜನ ಸದಸ್ಯರುಗಳೊಳಗೊಂಡು ಒಬ್ಬರು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯಾಗಿರುತ್ತದೆ. ಅದರಂತೆ ನಿಗಮವು ದಿನಾಂಕ: 02.01.2020 ರಂದು ಈ ಹಿಂದೆ ರಚಿಸಲಾದ ಸಮಿತಿಯನ್ನು ಮಾರ್ಪಡಿಸಿ 10 ಜನ ಸದಸ್ಯರುಗಳೊಳಗೊಂಡ **"ದೂರು ನಿವಾರಣಾ ಸಮಿತಿ"**ಯನ್ನು ಪುನರ್ ರಚಿಸಲಾಯಿತು.

ಸದರಿ ಸಮಿತಿಯ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಹೆಸರು/ಹುದ್ದೆ	ಸಮಿತಿಯಲ್ಲಿನ ಹುದ್ದೆ
1.	ಶ್ರೀಮತಿ ಶೋಭ.ಎಂ.ಎಸ್, ನಿಯಂತ್ರಣಾಧಿಕಾರಿ (ಲೆಕ್ಕ, ಪಿಂಚಣಿ ಮತ್ತು ಮುಂಗಡ), ನಿಗಮ ಕಾರ್ಯಾಲಯ, ಕಾವೇರಿ ಭವನ. ಬೆಂಗಳೂರು	ಅಧ್ಯಕ್ಷರು
2.	ಶ್ರೀಮತಿ ಸಿ.ಸುಜಾತಾ, ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪಿ ಅಂಡ್ ಸಿ)	ಸದಸ್ಯರು
3.	ಶ್ರೀಮತಿ ಸುಮಾ ಎಸ್. ಉಪಲೆಕ್ಕ ನಿಯಂತ್ರಣಾಧಿಕಾರಿ	ಸದಸ್ಯರು/ಸಂಚಾಲಕರು
4.	ಶ್ರೀಮತಿ ವೀಣ, ಲೆಕ್ಕಾಧಿಕಾರಿ (ಆಂ.ಪ)	ಸದಸ್ಯರು
5.	ಶ್ರೀಮತಿ ರೂಪಾ, ಸಹಾಯಕ ವ್ಯವಸ್ಥಾಪಕರು(ಸ್ಥಿರಾಸ್ತಿ), ನಿಗಮ ಕಾರ್ಯಾಲಯ	ಸದಸ್ಯರು
6.	ಶ್ರೀಮತಿ ಸ್ವಾತಿ.ಎಸ್, ಸಹಾಯಕ ಇಂಜಿನಿಯರ್(ವಿ)(ಪಿ ಅಂಡ್ ಸಿ), ನಿಗಮ ಕಾರ್ಯಾಲಯ, ಕಾವೇರಿ ಭವನ. ಬೆಂಗಳೂರು	ಸದಸ್ಯರು
7	ಶ್ರೀಮತಿ ಭಾರತಿ, ಹಿರಿಯ ಸಹಾಯಕಿ (ಸಿಬ್ಬಂದಿ–2)	ಸದಸ್ಯರು
8	ಶ್ರೀಮತಿ ರೆಹಮತ್ ಉನಿಸಾ, ಸಹಾಯಕಿ,	ಸದಸ್ಯರು
9	ಶ್ರೀಮತಿ ಕೆ.ವಿ.ರಾಧಾ, ಕಿರಿಯ ಸಹಾಯಕಿ	ಸದಸ್ಯರು
10	ಸ್ವಯಂ ಸೇವಾ ಸಂಸ್ಥೆಯ ಒಬ್ಬ ಪ್ರತಿನಿಧಿ	ಸದಸ್ಯರು

ಮೇಲ್ಕಂಡ ಸಮಿತಿಯ ಕಾಲಾನುಕ್ರಮಕ್ಕೆ ಸಭೆಯನ್ನು ಏರ್ಪಡಿಸಿಕೊಂಡು ಮಹಿಳಾ ದೂರುಗಳ ಬಗ್ಗೆ ಚರ್ಚಿಸಿ, ದೂರು ನಿರ್ವಹಣೆಗೊಳಿಸುತ್ತಾ ಬಂದಿರುತ್ತದೆ. ಆದರೆ 2019–20 ನೇ ಸಾಲಿನಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ.

ನಿಗಮದಲ್ಲಿ ಆಡಳಿತ ವರ್ಗ ಹಾಗೂ ನೌಕರರ ವರ್ಗದ ಸಂಬಂಧ ಸದಾ ಉತ್ತಮ ಹಾಗೂ ಸಾಮರಸ್ಯದಿಂದ ಮುಂದುವರೆದಿದು, ಎಲ್ಲಾ ನೌಕರರ ಹಾಗೂ ಅಧಿಕಾರಿಗಳ ತಂಟ ಸ್ಪೂರ್ತಿಯ ಸೆಲೆಯಿಂದ ಗ್ರಾಹಕ ವೃಂದಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವಲ್ಲಿ ಸಹಕಾರಿಯಾಗಿರುವುದು ಸಂತಸದ ವಿಷಯ.

ಕ್ರೀಡೆ:2019–20ನೇ ಸಾಲಿನ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಕ್ರೀಡಾ ಪಟುಗಳ ಸಾಧನೆ

ಅಖಿಲ ಭಾರತ ವಿದ್ಯುತ್ ಕಂಪನಿಗಳ ಕ್ರೀಡಾ ಕೂಟಗಳಲ್ಲಿ ಕವಿಪ್ರನಿನಿಯ ಈ ಕೆಳಕಂಡ ತಂಡಗಳು ಭಾಗವಹಿಸಿದ್ದವು.

ಬಾಡಿ ಬಿಲ್ಡಿಂಗ್ ಮತ್ತು ಪವರ್ ಲಿಫ್ಟಿಂಗ್, ಕಬಡ್ಡಿ, ಕ್ರಿಕೆಟ್, ಬಾಸ್ಕೆಟ್ ಬಾಲ್,
ಲಾನ್ ಟೆನ್ನಿಸ್, ಹಾಕಿ ಮತ್ತು ಷಟಲ್ ಬ್ಯಾಡ್ಮಿಂಟನ್

ಕವಿಪ್ರನಿನಿ ಕ್ರೀಡಾ ಪಟುಗಳು ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ, ರಾಷ್ಟ್ರ ಮಟ್ಟದ ಮತ್ತು ರಾಜ್ಯ ಮಟ್ಟದ ರ್‍ಯಾಂಕ್‌ಗಳನ್ನು ಪಡೆದು ನಿಗಮಕ್ಕೆ ಕೀರ್ತಿ ತಂದಿರುತ್ತಾರೆ.

ಟೇಬಲ್ ಟೆನ್ನಿಸ್	**ಅಂತರರಾಷ್ಟ್ರೀಯ ಮಟ್ಟದ ಸಾಧನೆ :** ಶ್ರೀ ಸಂಜೀವ.ಜಿ.ಹಮ್ಮಣ್ಣನವರ್, ಸಕಾಇಂ, ಬೆಳಗಾವಿ ಇವರು ಭಾರತವನ್ನು ಪ್ರತಿನಿಧಿಸಿ ಜುಲೈ–2019ರಲ್ಲಿ ತೈಚುಂಗ್, ತೈಪೆದಲ್ಲಿ ನಡೆದ ಏಷಿಯನ್ ಪ್ಯಾರಾ ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿರುತ್ತಾರೆ.
ಬಾಡಿ ಬಿಲ್ಡಿಂಗ್	ರಾಷ್ಟ್ರೀಯ ಮಟ್ಟದ ಸಾಧನೆ : ಶ್ರೀ ರೋಷನ್ ಫೇರಾವೋ, ಕಿರಿಯ ಸಹಾಯಕ, ಮೆಸ್ಕಾಂ ಇವರು ಮೇ–2019ರಲ್ಲಿ ತಮಿಳುನಾಡಿನ, ಗುಡಿಯತಮ್‌ನಲ್ಲಿ ನಡೆದ ನ್ಯಾಷನಲ್ ಮಾಸ್ಟರ್ಸ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ – 2019 ರಲ್ಲಿ ಭಾಗವಹಿಸಿ **5ನೇ ಸ್ಥಾನ** ಪಡೆದಿರುತ್ತಾರೆ. ಶ್ರೀ ರೋಷನ್ ಫೇರಾವೋ, ಕಿರಿಯ ಸಹಾಯಕ, ಮೆಸ್ಕಾಂ ಇವರು ಡಿಸೆಂಬರ್–2019ರಲ್ಲಿ ಬೆಂಗಳೂರಿನಲ್ಲಿ ನಡೆದ 67ನೇ ರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ **2ನೇ ಸ್ಥಾನ** ಪಡೆದಿರುತ್ತಾರೆ. ಶ್ರೀ ಜೆ.ಸಿ.ಜಗದೀಶ್, ಕಿರಿಯ ಸಹಾಯಕ, ಇವರು ಡಿಸೆಂಬರ್–2019ರಲ್ಲಿ ಬೆಂಗಳೂರಿನಲ್ಲಿ ನಡೆದ 67ನೇ ರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ **3ನೇ ಸ್ಥಾನ** ಪಡೆದಿರುತ್ತಾರೆ.
ಬಿಲಿಯರ್ಡ್ಸ್ ಮತ್ತು ಸ್ನೂಕರ್:	ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **ಆಗಸ್ಟ್ – 2019** ರಲ್ಲಿ **ಮುಂಬೈ**ಯಲ್ಲಿ ನಡೆದ ನ್ಯಾಷನಲ್ ಮಾಸ್ಟರ್ಸ್ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ **6ನೇ ರ್‍ಯಾಂಕ್ ಪಡೆದಿರುತ್ತಾರೆ**. ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **ಫೆಬ್ರವರಿ–2020** ರಲ್ಲಿ **ಪುಣೆಯ**ಲ್ಲಿ ನಡೆದ ನ್ಯಾಷನಲ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿರುತ್ತಾರೆ.

ಬಿಲಿಯರ್ಡ್ಸ್, ಸ್ನೂಕರ್ ಮತ್ತು ಫುಲ್:	**<u>ರಾಜ್ಯ ಮಟ್ಟದ ಸಾಧನೆ :</u>** ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು 2019–20ನೇ ಸಾಲಿನ ರಾಜ್ಯ ರ್‍ಯಾಂಕಿಂಗ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಈ ಕೆಳಕಂಡ ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ. • ಬಿಲಿಯರ್ಡ್ಸ್ – 2ನೇ ರ್‍ಯಾಂಕ್ • ಸ್ನೂಕರ್ – 2ನೇ ರ್‍ಯಾಂಕ್ • 6 ರೆಡ್ಸ್ ಸ್ನೂಕರ್ – 2ನೇ ರ್‍ಯಾಂಕ್
ಬಾಡಿಬಿಲ್ಡಿಂಗ್	ಶ್ರೀ ಜೆ.ಸಿ.ಜಗದೀಶ್, ಕಿರಿಯ ಸಹಾಯಕ, ಇವರು ಅಕ್ಟೋಬರ್–2019ರಲ್ಲಿ ತುಮಕೂರಿನಲ್ಲಿ ನಡೆದ ದಸರಾಶ್ರೀ–2019ರಲ್ಲಿ ಭಾಗವಹಿಸಿ **3ನೇ ಸ್ಥಾನ** ಪಡೆದಿರುತ್ತಾರೆ
<u>ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಪಂದ್ಯಾವಳಿಗಳಲ್ಲಿ ಕವಿಪ್ರನಿನಿ ತಂಡಗಳು ಭಾಗವಹಿಸಿರುವ ವಿವರ</u>	
ಬಾಡಿ ಬಿಲ್ಡಿಂಗ್ ಮತ್ತು ಪವರ್ ಲಿಫ್ಟಿಂಗ್	ಕವಿಪ್ರನಿನಿ ಬಾಡಿ ಬಿಲ್ಡಿಂಗ್ ಮತ್ತು ಪವರ್ ಲಿಫ್ಟಿಂಗ್ ತಂಡವು **ನವೆಂಬರ್–2019**ರಲ್ಲಿ **ಪಾಟಿಯಾಲದ**ಲ್ಲಿ ನಡೆದ **43ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಬಾಡಿ ಬಿಲ್ಡಿಂಗ್ ಮತ್ತು ಪವರ್‌ಲಿಫ್ಟಿಂಗ್ ಕ್ರೀಡಾ ಕೂಟದಲ್ಲಿ** ಭಾಗವಹಿಸಿ ಈ ಕೆಳಕಂಡ ಸಾಧನೆ ಮಾಡಿರುತ್ತಾರೆ. • ಚಿನ್ನದ – 3 ಪದಕಗಳು • ಬೆಳ್ಳಿಯ – 2 ಪದಕಗಳು • ಕಂಚಿನ – 2 ಪದಕಗಳು
ಕಬಡ್ಡಿ	ಕವಿಪ್ರನಿನಿ ಕಬಡ್ಡಿ ತಂಡವು **ಜನವರಿ – 2020**ರಲ್ಲಿ **ಮಹಾರಾಷ್ಟ್ರ**ದಲ್ಲಿ ನಡೆದ **44ನೇ ಅಖಿಲ ಭಾರತ ಕ್ರೀಡಾ ನಿಯಂತ್ರಣ ಮಂಡಳಿಯ ಕಬಡ್ಡಿ ಕ್ರೀಡಾ ಕೂಟದಲ್ಲಿ**ಭಾಗವಹಿಸಿ **3ನೇ ಸ್ಥಾನ** ಪಡೆದಿರುತ್ತಾರೆ.
ಕ್ರಿಕೆಟ್	ಕವಿಪ್ರನಿನಿ ಕ್ರಿಕೆಟ್ ತಂಡವು ಜೂನ್ – **2019** ರಲ್ಲಿ **ಹೈದರಾಬಾದ್**ದಲ್ಲಿ ನಡೆದ **43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರಿಕೆಟ್ ಕ್ರೀಡಾ ಕೂಟದಲ್ಲಿ** ಭಾಗವಹಿಸಿತ್ತಾರೆ.
ಬಾಸ್ಕೆಟ್ ಬಾಲ್	ಕವಿಪ್ರನಿನಿ ಬಾಸ್ಕೆಟ್‌ಬಾಲ್ ತಂಡವು ಸೆಪ್ಟಂಬರ್ – **2019**ರಲ್ಲಿ **ತಿರುವನಂತಪುರ**ದಲ್ಲಿ ನಡೆದ **43ನೇ ಅಖಿಲ ಭಾರತ ಕ್ರೀಡಾ ನಿಯಂತ್ರಣ ಮಂಡಳಿಯ ಬಾಸ್ಕೆಟ್ ಬಾಲ್ ಕ್ರೀಡಾ ಕೂಟದಲ್ಲಿ**ಭಾಗವಹಿಸಿರುತ್ತಾರೆ.
ಲಾನ್ ಟೆನ್ನಿಸ್	ಕವಿಪ್ರನಿನಿ ಲಾನ್ ಟೆನ್ನಿಸ್ ತಂಡವು **ಸೆಪ್ಟಂಬರ್ – 2019**ರಲ್ಲಿ **ಲಖನೌದ**ಲ್ಲಿ ನಡೆದ **43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಲಾನ್ ಟೆನ್ನಿಸ್ ಕ್ರೀಡಾ ಕೂಟದಲ್ಲಿ** ಭಾಗವಹಿಸಿರುತ್ತಾರೆ.
ಹಾಕಿ	ಕವಿಪ್ರನಿನಿ ಹಾಕಿ ತಂಡವು **ಡಿಸೆಂಬರ್ – 2019**ರಲ್ಲಿ **ಕೊಲ್ಕತ್ತಾ**ದಲ್ಲಿ ನಡೆದ **43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಹಾಕಿ ಕ್ರೀಡಾ ಕೂಟದಲ್ಲಿ** ಭಾಗವಹಿಸಿರುತ್ತಾರೆ.

ಷಟಲ್ ಬ್ಯಾಡ್ಮಿಂಟನ್	ಕವಿಪ್ರನಿನಿ ಷಟಲ್ ಬ್ಯಾಡ್ಮಿಂಟನ್ ತಂಡವು **ಜನವರಿ – 2020**ರಲ್ಲಿ ಗುಜರಾತ್‌ನ **ವಡೋದರ**ದಲ್ಲಿ ನಡೆದ **43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಷಟಲ್ ಬ್ಯಾಡ್ಮಿಂಟನ್‌ಕ್ರೀಡಾ ಕೂಟದಲ್ಲಿ** ಭಾಗವಹಿಸಿರುತ್ತಾರೆ.
ಕವಿಪ್ರನಿನಿಯ ಕ್ರೀಡಾಪಟುಗಳು ಮತ್ತು ತಂಡಗಳು ಸ್ಥಳೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿವರ	
ಕ್ರಿಕೆಟ್	ಶ್ರೀ ಪ್ರಕಾಶ್.ಡಿ.ಹೊನ್ನಾವಡ್, ಕಿರಿಯ ಕಂದಾಯ ಸಹಾಯಕ, ಹುಬ್ಬಳ್ಳಿ ಇವರುಮಾರ್ಚ್ - 2020ರಲ್ಲಿ ಅಖಿಲ ಭಾರತ ಕ್ರಿಕೆಟ್ ಸಂಸ್ಥೆ, ವಿಕಲಚೇತನರಿಗೆ ರವರು ಏರ್ಪಡಿಸಿದ **ವಿಕಲಚೇತನರ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳಲ್ಲಿ** ಭಾಗವಹಿಸುವ ಕ್ರೀಡಾ ಪಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿರುತ್ತಾರೆ. ಕವಿಪ್ರನಿನಿಯ ಕ್ರಿಕೆಟ್ ತಂಡವು ಫೆಬ್ರವರಿ - 2020ರಲ್ಲಿ ಬೆಂಗಳೂರಿನಲ್ಲಿ ನಡೆದ **ಕೆಎಸ್‌ಸಿಎ ಗ್ರೂಪ್– 2, 2ನೇ ಡಿವಿಷನ್ ಲೀಗ್‌ನ** ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.
ಕವಿಪ್ರನಿನಿಯ ಕ್ರೀಡಾ ಪಟುಗಳು ತೀರ್ಪುದಾರರಾಗಿ ಭಾಗವಹಿಸಿರುವ ವಿವರ	
ಫುಟ್ ಬಾಲ್	ಶ್ರೀ ಇಮ್ರಾನ್.ಎ.ತಡಕೋಡ್, ಕಿರಿಯ ಸಹಾಯಕ ಇವರು **ಜನವರಿ –2020**ರಲ್ಲಿ **ಮಂಡ್ಯದ**ಲ್ಲಿ ನಡೆದ ಸಿ **ಎಮ್ ಕಪ್ 2019-20 ಫುಟ್‌ಬಾಲ್** ಪಂದ್ಯಾವಳಿಯಲ್ಲಿ ತೀರ್ಪುದಾರರಾಗಿ ಭಾಗವಹಿಸಿರುತ್ತಾರೆ.
ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ಕಾವೇರಿ ಭವನದಲ್ಲಿ ಏರ್ಪಡಿಸಿದ ಪಂದ್ಯಾವಳಿಗಳ ಬಗ್ಗೆ.	
ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ಕಾವೇರಿ ಭವನದಲ್ಲಿ ಪುರುಷರ ಮತ್ತು ಮಹಿಳೆಯ ಅಧಿಕಾರಿ/ನೌಕರರುಗಳಿಗೆ **ಕೇರಂ ಮತ್ತು ಚೆಸ್ ಸ್ಪರ್ಧೆಗಳನ್ನು** ಕವಿಪ್ರನಿನಿ ಕ್ರೀಡಾ ಸಂಸ್ಥೆಯಿಂದ ಏರ್ಪಡಿಸಲಾಗಿತ್ತು. ಸದರಿ ಪಂದ್ಯಾವಳಿಗಳಲ್ಲಿ ವಿಜೇತರಾದವರಿಗೆ ಸ್ವಾತಂತ್ರ್ಯೋತ್ಸವ ದಿನದಂದು ಪದಕಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.	

ನಿಗಮ/ಎಸ್ಕಾಂಗಳಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಅಧಿಕಾರಿ/ನೌಕರರಲ್ಲಿ ಇರುವ ಯುವ ಕ್ರೀಡಾ ಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂಬ ಉದ್ದೇಶದ ಹಿನ್ನೆಲೆಯಲ್ಲಿ ಕವಿಪ್ರನಿನಿ ಕ್ರೀಡಾ ಶಾಖೆಯು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತರಬೇತಿಗೆ ಆಗಮಿಸುವ ಅಧಿಕಾರಿ/ನೌಕರರಿಗೆ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಬಗ್ಗೆ, ಕ್ರೀಡಾಪಟುಗಳ ಬಗ್ಗೆ, ಕ್ರೀಡಾ ಚಟುವಟಿಕೆಗಳ ಬಗ್ಗೆ, ರಾಷ್ಟ್ರೀಯ, ಅಂತರ ರಾಷ್ಟ್ರೀಯ, ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳ ಬಗ್ಗೆ **'ಪವರ್‌ಪಾಯಿಂಟ್ ಪ್ರೆಸೆಂಟೇಷನ್'** ಮೂಲಕ ಪರಿಚಯಿಸಲಾಗುತ್ತಿದೆ.ಮುಖ್ಯವಾಗಿ ಕವಿಪ್ರನಿನಿ ತಂಡಗಳು ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯು ನಡೆಸುವ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕುರಿತು ನಡೆಸಲಾಗುವ ಕ್ರೀಡಾ ಪಟುಗಳ ಆಯ್ಕೆ ಪ್ರಕ್ರಿಯೆ, ಕಂಪನಿ ಮಟ್ಟದ ಆಯ್ಕೆ ಪ್ರಕ್ರಿಯೆ, ಅಂತರ ಕಂಪನಿ ಪಂದ್ಯಾವಳಿಗಳ ಕುರಿತು ತಿಳಿಸಲಾಗುತ್ತಿದೆ.

ಮುಂದುವರಿದಂತೆ, ಕವಿಪ್ರನಿನಿ ಕ್ರೀಡಾ ಸಂಸ್ಥೆಯು ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ಹಾಗೂ ವಿವಿಧ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ಸಾಧನೆ ಮಾಡುತ್ತಿರುವ ಕ್ರೀಡಾ ಪಟುಗಳನ್ನು ಗುರುತಿಸಿ, ಉತ್ತೇಜಿಸುತ್ತಿದೆ ಹಾಗೂ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಆಯ್ಕೆಗೊಂಡ ಕ್ರೀಡಾಪಟುಗಳನ್ನು ನಿಯೋಜಿಸಲಾಗುತ್ತಿದೆ. ಒಟ್ಟಾರೆ ಕವಿಪ್ರನಿನಿ ಕ್ರೀಡಾ ಪಟುಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುತ್ತಾರೆ. ಇವರುಗಳಿಗೆ ನಿಗಮದ ವತಿಯಿಂದ ಅಭಿನಂದನೆಗಳು.

ಸಾಂಸ್ಥಿಕ ಆಡಳಿತ:

ಕ.ವಿ.ಪ್ರ.ನಿ.ನಿಯು ತನ್ನ ಎಲ್ಲಾ ರೀತಿಯ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಪ್ರಾಮಾಣಿಕತೆಯ ಬಗ್ಗೆ ನಂಬಿಕೆ ಹೊಂದಿದೆ. ಕ.ವಿ.ಪ್ರ.ನಿ.ನಿಯ ಮಂಡಳಿಯು ತನ್ನ ಎಲ್ಲಾ ವ್ಯವಹರಣೆಗಳಲ್ಲಿ ಉತ್ತಮ ಆಚರಣೆಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಆಡಳಿತದ ಅಭ್ಯಾಸಗಳನ್ನು ನಂಬುತ್ತದೆ ಮತ್ತು ಬೆಂಬಲಿಸುತ್ತದೆ.

ಕಂಪನಿಯಲ್ಲಿನ ಆಡಳಿತದ ಪ್ರಕ್ರಿಯೆಯು, ಸಭೆಗಳ ನಂತರ ಅನುಸರಣೆ, ಪರಿಶೀಲನೆ ಹಾಗೂ ಮಂಡಳಿಯಿಂದ/ಮಂಡಳಿಯ ಉಪ ಸಮಿತಿಗಳಿಂದ ಕೈಗೊಂಡ ಕ್ರಮಗಳಿಗೆ/ನಿಣ್ಯಗಳ ಬಾಕಿ ಇರುವುದಕ್ಕೆ ವರದಿ ಸಲ್ಲಿಕೆ ಇಂತಹ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ.

31 ಮಾರ್ಚ್ 2020ರ ಅಂತ್ಯಕ್ಕೆ ಇರುವಂತೆ ನಿರ್ದೇಶಕರ ಮಂಡಳಿಯು 12 ಸದಸ್ಯರನ್ನು ಒಳಗೊಂಡಿರುತ್ತದೆ. ಮಂಡಳಿ ಮತ್ತು ಉಪ ಸಮಿತಿ ಸಭೆಗಳಲ್ಲಿ ಎಲ್ಲಾ ನಿರ್ದೇಶಕರು ಸಕ್ರಿಯವಾಗಿ ಪಾಲ್ಗೋಳ್ಳುವುದು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗೆ ಮೌಲ್ಯವನ್ನು ನೀಡುತ್ತದೆ.

ದಿನಾಂಕ 01–04–2019 ರಿಂದ ವರದಿ ಮಾಡುವ ದಿನಾಂಕದ ಅವಧಿಯಲ್ಲಿ ಮಂಡಳಿಯ ನಿರ್ದೇಶಕರಾಗಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿದೆ:

ಕ್ರಮ ಸಂಖ್ಯೆ	ನಿರ್ದೇಶಕರ ಹೆಸರು ಶ್ರೀಯುತರು/ಶ್ರೀಮತಿ	ಡಿಐಎನ್ ಸಂಖ್ಯೆ	ಹುದ್ದೆ	ಅವಧಿ	
				ಇಂದ	ರವರೆಗೆ
1	ಬಿ.ಎಸ್.ಯಡಿಯೂರಪ್ಪ	02319705	ಗೌರವಾನ್ವಿತ ಅಧ್ಯಕ್ಷರು	05/08/2019	–
2	ಹೆಚ್.ಡಿ.ಕುಮಾರಸ್ವಾಮಿ	00267014	ಗೌರವಾನ್ವಿತ ಅಧ್ಯಕ್ಷರು	11/06/2018	05/08/2019
3	ಡಾ. ಎಸ್.ಸೆಲ್ವಕುಮರ್, ಭಾ.ಆ.ಸೇ	00962240	ವ್ಯವಸ್ಥಾಪಕ ನಿರ್ದೇಶಕರು	06/08/2018	05/08/2019
4	ಡಾ. ಎನ್.ಮಂಜುಳ, ಭಾ.ಆ.ಸೇ	07508345	ವ್ಯವಸ್ಥಾಪಕ ನಿರ್ದೇಶಕರು	20/08/2019	–
5	ಪಿ.ರವಿಕುಮಾರ್, ಭಾ.ಆ.ಸೇ	02285126	ನಿರ್ದೇಶಕರು	21/10/2017	24/06/2019
				05/08/2019	04/09/2020
6	ಮಾಹೇಂದ್ರ ಜೈನ್, ಭಾ.ಆ.ಸೇ	01660388	ನಿರ್ದೇಶಕರು	24/06/2019	18/11/2020
7	ಕಪಿಲ್ ಮೋಹನ್, ಭಾ.ಆ.ಸೇ	03627128	ನಿರ್ದೇಶಕರು	18/11/2020	31/03/2021
8	ಜಿ.ಕುಮಾರ್ ನಾಯಕ್, ಭಾ.ಆ.ಸೇ	01918435	ನಿರ್ದೇಶಕರು	31/03/2021	–
9	ಐ.ಎಸ್.ಎನ್.ಪ್ರಸಾದ್,ಭಾ.ಆ.ಸೇ	01469651	ನಿರ್ದೇಶಕರು	06/09/2013	–
10	ಇ.ವಿ.ರಾಮಣ್ಣ ರೆಡ್ಡಿ, ಭಾ.ಆ.ಸೇ	02935216	ನಿರ್ದೇಶಕರು	27/06/2018	05/08/2019
				04/09/2020	–
11	ವಿ.ಪೊನ್ನುರಾಜ್, ಭಾ.ಆ.ಸೇ	05211567	ನಿರ್ದೇಶಕರು	15/12/2018	05/08/2019
			ವ್ಯವಸ್ಥಾಪಕ ನಿರ್ದೇಶಕರು (ಅಧಿಕ ಪ್ರಭಾರ)	05/08/2019	20/08/2019
12	ಶಿಖಾ.ಸಿ, ಭಾ.ಆ.ಸೇ	06447295	ನಿರ್ದೇಶಕರು	14/08/2018	18/09/2019
13	ರಾಜೇಶ್ ಗೌಡ.ಎಂ.ಬಿ, ಭಾ.ಆ.ಸೇ	06917336	ನಿರ್ದೇಶಕರು	18/09/2019	–
14	ಡಾ. ಹೆಚ್.ಎನ್.ಗೋಪಾಲಕೃಷ್ಣ, ಭಾ.ಆ.ಸೇ	08184281	ನಿರ್ದೇಶಕರು (ಆ ಮತ್ತು ಮಾ.ಸಂ)	22/06/2018	20/08/2019

ಕ್ರಮ ಸಂಖ್ಯೆ	ನಿರ್ದೇಶಕರ ಹೆಸರು ಶ್ರೀಯುತರು/ಶ್ರೀಮತಿ	ಡಿಐಎನ್ ಸಂಖ್ಯೆ	ಹುದ್ದೆ	ಅವಧಿ	
				ಇಂದ	ರವರೆಗೆ
15	ಪ್ರವೀಣ್ ಕುಮಾರ್.ಎಲ್.ಗೌಡ್ರು, ಕೆಎಎಸ್	08557704	ನಿರ್ದೇಶಕರು (ಆ ಮತ್ತು ಮಾ.ಸಂ)	20/08/2019	01/10/2019
16	ಗಂಗಾಧರ ಸ್ವಾಮಿ.ಜಿ.ಎಮ್, ಭಾ.ಆ.ಸೇ	06782021	ನಿರ್ದೇಶಕರು (ಆ ಮತ್ತು ಮಾ.ಸಂ)	15/10/2019	----
17	ಆರ್.ನಾಗರಾಜ	03108629	ನಿರ್ದೇಶಕರು(ಹಣಕಾಸು)	30/03/2019	03/06/2019
				30/08/2019	21/05/2020
18	ಅಶ್ವಿನ್.ಡಿ.ಗೌಡ, ಭಾ.ಕ.ಸೇ	08498735	ನಿರ್ದೇಶಕರು(ಹಣಕಾಸು)	03/06/2019	30/08/2019
			ಸಿಎಫ್ಒ(ಕೆಎಂಪಿ)	28/06/2019	30/08/2019
19	ಸಿದ್ಲಿಂಗಪ್ಪ ತೇಲಿ, ಭಾ.ಕ.ಸೇ	08764080	ನಿರ್ದೇಶಕರು(ಹಣಕಾಸು)	21/05/2020	–
			ಸಿಎಫ್ಒ(ಕೆಎಂಪಿ)	09/09/2020	
20	ಕೆ.ವಿ.ಶಿವಕುಮಾರ್	08104146	ನಿರ್ದೇಶಕರು(ಪ್ರಸರಣ)	16/03/2018	30/11/2019
21	ಕೆ.ಸಿದ್ದರಾಜು	05184367	ನಿರ್ದೇಶಕರು(ಪ್ರಸರಣ)	06/12/2019	07/10/2020
22	ಬಿ.ಕೆ.ಉದಯಕುಮರ್	08529370	ನಿರ್ದೇಶಕರು(ಪ್ರಸರಣ)	07/10/2020	–
23	ಟಿ.ಆರ್.ರಾಮಕೃಷ್ಣಯ್ಯ	07924084	ನಿರ್ದೇಶಕರು	14/08/2017	–
24	ಎ.ಎನ್.ಜಯರಾಜ್	07178623	ನಿರ್ದೇಶಕರು	07/04/2015	18/07/2019
25	ಟಿ.ಎಮ್.ಶಿವಪ್ರಕಾಶ್	08522445	ನಿರ್ದೇಶಕರು	18/07/2019	–
26	ಟಿ.ರಾಮಾ ನಾಯ್ಕ್	08908142	ನಿರ್ದೇಶಕರು	14/09/2020	–
27	ಪ್ರಶಾಂತ್.ಆರ್.ಮಖನುರ್	07709746	ನಿರ್ದೇಶಕರು	25/11/2020	–
28	ಮಹಾದೇವಪ್ಪ ಶಿವಪ್ಪ ಅಳಗವಾಡಿ	09006543	ನಿರ್ದೇಶಕರು	25/11/2020	–
29	ಭಾನುಪ್ರಕಾಶ್.ಎಮ್.ಎಸ್	07415144	ನಿರ್ದೇಶಕರು	27/11/2020	–
30	ಭವಾನಿ ರಾವ್ ಮೊಹರೆ	01677748	ನಿರ್ದೇಶಕರು	27/11/2020	–

ಮಂಡಳಿಯ ಸಭೆಗಳು:

ಮಂಡಳಿ ನಿರ್ದೇಶಕರ ಸಭೆಯನ್ನು ಮುಂಚಿತವಾಗಿಯೇ ಗೊತ್ತುಪಡಿಸಿ, ಪ್ರತಿಯೊಬ್ಬ ನಿರ್ದೇಶಕರಿಗೆ ಲಿಖಿತ ರೂಪದಲ್ಲಿ ಸಭೆಯ ಸೂಚನಾ ಪತ್ರವನ್ನು ತಲುಪಿಸಲಾಗುತ್ತದೆ. ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಇತರ ಟಿಪ್ಪಣಿಗಳ ಮಾಹಿತಿಗಳನ್ನು ಮುಂಚಿತವಾಗಿ ಒದಗಿಸಲಾಗುತ್ತದೆ.

2019–20ನೇ ಸಾಲಿನ ಈ ಕೆಳಕಂಡ ದಿನಾಂಕಗಳಂದು ಐದು ಮಂಡಳಿ ಸಭೆಗಳನ್ನು ನಡೆಸಲಾಯಿತು:

ಕ್ರಮ ಸಂಖ್ಯೆ	ಸಭೆ ಸಂಖ್ಯೆ	ಸಭೆಯ ದಿನಾಂಕ
1	115 ನೇ ಸಭೆ	28/06/2019
2	116 ನೇ ಸಭೆ	26/09/2019
3	117 ನೇ ಸಭೆ	21/10/2019
4	118 ನೇ ಸಭೆ	12/11/2019
5	119 ನೇ ಸಭೆ	11/03/2020

ಮಂಡಳಿಯ ಉಪ ಸಮಿತಿ:

ಮಂಡಳಿಯ ಉಪ ಸಮಿತಿಗಳನ್ನು ಕೇವಲ ಪ್ರಮುಖ ವಿಷಯಗಳ ಬಗ್ಗೆ ಹೆಚ್ಚಿನ ಕೇಂದ್ರಿಕೃತ ಗಮನ ಹರಿಸುವುದಕ್ಕಷ್ಟೇ ಅಲ್ಲದೆ, ಅಂತಹ ಪ್ರಕರಣ ಬಗ್ಗೆ ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳಲು ರಚಿಸಲಾಯಿತು. ನಿರ್ಣಯಗಳನ್ನು ತೆಗೆದುಕೊಳ್ಳಲು ಮಂಡಳಿಯು ಕೆಲವು ನಿರ್ದಿಷ್ಟ ಅಧಿಕಾರಗಳನ್ನು ನೀಡಿದೆ.

1. ಕೇಂದ್ರಿಯ ಖರೀದಿ ಸಮಿತಿ:

ಮುಖ್ಯ ಇಂಜಿನಿಯರ್(ವಿದ್ಯುತ್) ರವರಿಗೆ ವಹಿಸಿರುವ ಅಧಿಕಾರವನ್ನು ಮೀರಿದ ಹಾಗೂ ರೂ.20 ಕೋಟಿಯವರೆಗೆ ಆರ್ಥಿಕ ಪರಿಣಾಮಗಳನ್ನು ಬೀರಬಹುದಾದ ಪ್ರಸರಣ ವಲಯ ಅಥವಾ ಯೋಜನೆಗಳ ಸಂಬಂಧ ಎಲ್ಲಾ ವಿಷಯಗಳು, ವಿದ್ಯುತ್ ಕೇಂದ್ರ/ಮಾರ್ಗ ಕಾಮಗಾರಿ ವಹಿಸುವಿಕೆ, ಖರೀದಿ ಸಂಬಂಧವಾದ ಎಲ್ಲಾ ಪ್ರಕರಣಗಳನ್ನು ಪರಿಗಣಿಸಲು ಕೇಂದ್ರಿಯ ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಈ ಕೆಳಕಂಡಂತೆ ಕೇಂದ್ರ ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಕ್ರಮ ಸಂಖ್ಯೆ	ಸದಸ್ಯರು ಶ್ರೀಯುತರು/ಶ್ರೀಮತಿ	ಹುದ್ದೆ	ಅವಧಿ	
			ಇಂದ	ರವರೆಗೆ
1	ಡಾ.ಎಸ್.ಸೆಲ್ವಕುಮರ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಅಧ್ಯಕ್ಷರು	06/08/2018	05/08/2019
2	ಡಾ. ಎನ್.ಮಂಜುಳ, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಅಧ್ಯಕ್ಷರು	20/08/2019	–
3	ಆರ್.ನಾಗರಾಜ, ನಿರ್ದೇಶಕರು (ಹಣಕಾಸು)(ಅಧಿಕ ಪ್ರಭಾರ), ಕವಿಪ್ರನಿನಿ	ಸದಸ್ಯರು	30/03/2019	03/06/2019
			30/08/2019	21/05/2020
4	ಅಶ್ವಿನ್.ಡಿ.ಗೌಡ, ಐಆರ್ಎಸ್ ನಿರ್ದೇಶಕರು (ಹಣಕಾಸು), ಕವಿಪ್ರನಿನಿ	ಸದಸ್ಯರು	03/06/2019	30/08/2019
5	ಸಿದ್ಲಿಂಗಪ್ಪ ತೇಲಿ, ಭಾ.ಕ.ಸೇ, ನಿರ್ದೇಶಕರು(ಹಣಕಾಸು), ಕವಿಪ್ರನಿನಿ	ಸದಸ್ಯರು	21/05/2020	–
6	ಕೆ.ವಿ.ಶಿವಕುಮಾರ್, ನಿರ್ದೇಶಕರು(ಪ್ರಸರಣ), ಕವಿಪ್ರನಿನಿ	ಸದಸ್ಯರು	16/03/2018	30/11/2019
7	ಕೆ.ಸಿದ್ದರಾಜು, ನಿರ್ದೇಶಕರು(ಪ್ರಸರಣ), ಕವಿಪ್ರನಿನಿ	ಸದಸ್ಯರು	06/12/2019	07/10/2020
8	ಬಿ.ಕೆ.ಉದಯಕುಮರ್, ನಿರ್ದೇಶಕರು(ಪ್ರಸರಣ), ಕವಿಪ್ರನಿನಿ	ಸದಸ್ಯರು	07/10/2020	–
9	ರಮ್ಯ.ಕೆ, ಎಫ್ಸಿಎಸ್, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ	ಸಂಚಾಲಕರು	16/01/2019	–

ವರದಿಯ ವರ್ಷದಲ್ಲಿ ಈ ಕೆಳಕಂಡ ಕೇಂದ್ರ ಖರೀದಿ ಸಭೆಗಳು ನಡೆಸಲಾಗಿದೆ:

ಕ್ರಸಂ	ಸಭೆ ಸಂಖ್ಯೆ	ಸಭೆ ದಿನಾಂಕ
1	ಎ) 182ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 150ನೇ ಪ್ರಸರಣ ವಲಯ, ಬೆಂಗಳೂರು ಸಿ) 64ನೇ ಪ್ರಸರಣ ವಲಯ, ಹಾಸನ ಡಿ) 68ನೇ ಪ್ರಸರಣ ವಲಯ, ಕಲಬುರ್ಗಿ ಇ) 61ನೇ ಪ್ರಸರಣ ವಲಯ, ತುಮಕೂರು ಎಫ್) 93ನೇ ಪ್ರಸರಣ ವಲಯ, ಮೈಸೂರು	14/05/2019

ಕ್ರಸಂ	ಸಭೆ ಸಂಖ್ಯೆ	ಸಭೆ ದಿನಾಂಕ
2	ಎ) 183ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 151ನೇ ಪ್ರಸರಣ ವಲಯ, ಬೆಂಗಳೂರು ಸಿ) 65ನೇ ಪ್ರಸರಣ ವಲಯ, ಹಾಸನ ಡಿ) 62ನೇ ಪ್ರಸರಣ ವಲಯ, ತುಮಕೂರು	03/07/2019
3	ಎ)184ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 152ನೇ ಪ್ರಸರಣ ವಲಯ, ಬೆಂಗಳೂರು ಸಿ) 66ನೇ ಪ್ರಸರಣ ವಲಯ, ಹಾಸನ ಡಿ) 69ನೇ ಪ್ರಸರಣ ವಲಯ, ಕಲಬುರ್ಗಿ ಇ) 63ನೇ ಪ್ರಸರಣ ವಲಯ, ತುಮಕೂರು ಎಫ್) 93ನೇ ಪ್ರಸರಣ ವಲಯ, ಬಾಗಕೋಟೆ	07/09/2019
4	185ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್	20/09/2019
5	ಎ) 186ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 153ನೇ ಪ್ರಸರಣ ವಲಯ, ಬೆಂಗಳೂರು ಸಿ) 67ನೇ ಪ್ರಸರಣ ವಲಯ, ಹಾಸನ ಡಿ) 70ನೇ ಪ್ರಸರಣ ವಲಯ, ಕಲಬುರ್ಗಿ ಇ) 64ನೇ ಪ್ರಸರಣ ವಲಯ, ತುಮಕೂರು ಎಫ್) 94ನೇ ಪ್ರಸರಣ ವಲಯ, ಬಾಗಕೋಟೆ	05/11/2019
6	ಎ) 187ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 154ನೇ ಪ್ರಸರಣ ವಲಯ, ಬೆಂಗಳೂರು ಸಿ) 68ನೇ ಪ್ರಸರಣ ವಲಯ, ಹಾಸನ ಡಿ) 71ನೇ ಪ್ರಸರಣ ವಲಯ, ಕಲಬುರ್ಗಿ ಇ) 65ನೇ ಪ್ರಸರಣ ವಲಯ, ತುಮಕೂರು ಎಫ್) 94ನೇ ಪ್ರಸರಣ ವಲಯ, ಮೈಸೂರು	26/11/2019
7	ಎ) 188ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ ಬಿ) 69ನೇ ಪ್ರಸರಣ ವಲಯ, ಹಾಸನ	23/01/2020

2. ಸಾಲ ಪಡೆಯುವಿಕೆ ಉಪ ಸಮಿತಿ:

ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಯ ಮಿತಿಗೆ ಒಳಪಟ್ಟಂತೆ, ನಿಗಮದ ಪರವಾಗಿ ಬ್ಯಾಂಕ್‌ಗಳು/ಆರ್ಥಿಕ ಸಂಸ್ಥೆಗಳಿಂದ ಕಾಲಕಾಲಕ್ಕೆ (ಪ್ರಸ್ತುತ ರೂ.8600 ಕೋಟಿಗಳು) ಧೀರ್ಘಾವಧಿ ಸಾಲಗಳನ್ನು ಪಡೆಯಲು ಸಾಲ ಪಡೆಯುವಿಕೆ ಉಪ ಸಮಿತಿಗೆ ಅಧಿಕಾರಗಳನ್ನು ವಹಿಸಲಾಗಿದೆ.

ಉಪ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರುಗಳು ಒಳಗೊಂಡಿರುತ್ತಾರೆ:

ಕ್ರ ಸಂ	ಸದಸ್ಯರು ಶ್ರೀಯುತರು/ಶ್ರೀಮತಿ	ಹುದ್ದೆ	ಅವಧಿ	
			ಇಂದ	ರವರೆಗೆ
1.	ಜಿ.ಕುಮಾರ್ ನಾಯಕ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	31/03/2021	–
2.	ಕಪಿಲ್ ಮೋಹನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	18/11/2020	31/03/2021

ಕ್ರ ಸಂ	ಸದಸ್ಯರು ಶ್ರೀಯುತರು/ಶ್ರೀಮತಿ	ಹುದ್ದೆ	ಅವಧಿ	
			ಇಂದ	ರವರೆಗೆ
3.	ಮಹೇಂದ್ರ ಜೈನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	24/06/2019	18/11/2020
4.	ಪಿ.ರವಿಕುಮಾರ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	21/10/2017	24/06/2019
5.	ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು	06/09/2013	–
6.	ಡಾ. ಎಸ್.ಸೆಲ್ವಕುಮರ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು	06/08/2018	05/08/2019
7.	ವಿ.ಪೊನ್ನುರಾಜ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು (ಅಧಿಕ ಪ್ರಭಾರ)	ಸದಸ್ಯರು	05/08/2019	20/08/2019
8.	ಡಾ. ಎನ್.ಮಂಜುಳ, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು	20/08/2019	–
9.	ಆರ್.ನಾಗರಾಜ, ನಿರ್ದೇಶಕರು (ಹಣಕಾಸು) (ಅಧಿಕ ಪ್ರಭಾರ), ಕವಿಪ್ರನಿನಿ	ಸದಸ್ಯರು	30/03/2019	03/06/2019
			30/08/2019	21/05/2020
10.	ಅಶ್ವಿನ್.ಡಿ.ಗೌಡ, ಭಾ.ಕ.ಸೇ ನಿರ್ದೇಶಕರು (ಹಣಕಾಸು), ಕವಿಪ್ರನಿನಿ	ಸದಸ್ಯರು	03/06/2019	30/08/2019
11.	ಸಿದ್ಲಿಂಗಪ್ಪ ತೇಲಿ, ಭಾ.ಕ.ಸೇ ನಿರ್ದೇಶಕರು(ಹಣಕಾಸು), ಕವಿಪ್ರನಿನಿ	ಸದಸ್ಯರು	21/05/2020	–
	ರಮ್ಯ.ಕೆ, ಎಫ್‌ಸಿಎಸ್, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ	ಸಂಚಾಲಕರು	16/01/2019	–

ವರದಿ ಮಾಡುವ ವರ್ಷದಲ್ಲಿ ಸಾಲ ಪಡೆಯುವಿಕೆಯ ಉಪ ಸಮಿತಿಯು ಈ ಕೆಳಕಂಡಂತೆ ಸಭೆಗಳನ್ನು ನಡೆಸಲಾಯಿತು:

ಕ್ರ.ಸಂ	ಸಂಸ್ಥೆಯಿಂದ ದೀರ್ಘಾವಧಿ ಸಾಲವನ್ನು ಪಡೆಯಲು	ಹಣಕಾಸಿನ ನೆರವಿನ ಮೊತ್ತ	ಸಭೆಯ ದಿನಾಂಕ
1	ಮೆ॥ ಕೆನರಾ ಬ್ಯಾಂಕ್	ರೂ.500 ಕೋಟಿ	22/07/2019
2	ಮೆ॥ ಪಂಜಾಬ್ ನ್ಯಾಷನಲ್ ಬ್ಯಾಂಕ್	ರೂ.400 ಕೋಟಿ	25/11/2019
3	ಮೆ॥ ಭಾರತೀಯ ಸ್ಟೇಟ್ ಬ್ಯಾಂಕ್	ರೂ.250 ಕೋಟಿ	26/02/2020
4	ಮೆ॥ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	ರೂ.250 ಕೋಟಿ	31/03/2020

3. ಪರಿಶೋಧನಾ ಸಮಿತಿ:

ಕಂಪನಿ ಕಾಯ್ದೆ–2013ರ ಅವಕಾಶಗಳ ಪ್ರಕಾರ, ಕ.ವಿ.ಪ್ರ.ನಿ.ನಿಯು ಕೆಳಕಂಡಂತೆ ಪರಿಶೋಧನಾ ಸಮಿತಿಯು ರಚಿಸಲಾಗಿದೆ.

ಕ್ರ ಸಂ	ಸದಸ್ಯರು ಶ್ರೀಯುತರು/ಶ್ರೀಮತಿ	ಹುದ್ದೆ	ಅವಧಿ	
			ಇಂದ	ರವರೆಗೆ
1	ಜಿ.ಕುಮಾರ್ ನಾಯಕ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	31/03/2021	–
2	ಕಪಿಲ್ ಮೋಹನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	18/11/2020	31/03/2021
3	ಮಹೇಂದ್ರ ಜೈನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	24/06/2019	18/11/2020
4	ಪಿ.ರವಿಕುಮಾರ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	21/10/2017	24/06/2019
5	ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು	06/09/2013	–
6	ಶಿಖಾ.ಸಿ, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಬೆ.ವಿ.ಕಂ	ಸದಸ್ಯರು	14/08/2018	18/09/2019
7	ರಾಜೇಶ್ ಗೌಡ.ಎಂ.ಬಿ, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಬೆ.ವಿ.ಕಂ	ಸದಸ್ಯರು	18/09/2019	–
8	ಕೆ.ವಿ.ಶಿವಕುಮಾರ್, ನಿರ್ದೇಶಕರು (ಪ್ರಸರಣ), ಕವಿಪ್ರನಿನಿ	ಸದಸ್ಯರು	16/03/2018	30/11/2019
9	ಕೆ.ಸಿದ್ದರಾಜು, ನಿರ್ದೇಶಕರು (ಪ್ರಸರಣ), ಕವಿಪ್ರನಿನಿ	ಸದಸ್ಯರು	06/12/2019	07/10/2020
10	ಬಿ.ಕೆ.ಉದಯ ಕುಮಾರ್, ನಿರ್ದೇಶಕರು (ಪ್ರಸರಣ), ಕವಿಪ್ರನಿನಿ	ಸದಸ್ಯರು	07/10/2020	–
	ರಮ್ಯ. ಕೆ, ಎಫ್‌ಸಿಎಸ್, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ	ಸಂಚಾಲಕರು	16/01/2019	–

ಪರಿಶೋಧನಾ ಸಮಿತಿಗೆ ಸೂಚಿಸಲಾದ ಆಧಾರಿತ ವಿಷಯಗಳು ಈ ಕೆಳಕಂಡಂತಿದೆ:

1) ಕಂಪನಿಯ ಪರಿಶೋಧಕರ ನೇಮಕ, ಸಂಭಾವನೆ ಮತ್ತು ನೇಮಕಾತಿಯ ಷರತ್ತುಗಳ ಬಗ್ಗೆ ಶಿಫಾರಸ್ಸು.

2) ಲೆಕ್ಕ ಪರಿಶೋಧಕರ ಸ್ವಾತಂತ್ರ್ಯ ಮತ್ತು ಕಾರ್ಯಕ್ಷಮತೆಯ ಬಗ್ಗೆ ಪರಿಶೀಲಿಸಲು ಹಾಗೂ ಮೇಲ್ವಿಚಾರಣೆ ನಡೆಸಲು ಹಾಗೂ ಪರಿಶೋಧನಾ ಪ್ರಕ್ರಿಯೆಯ ಪರಿಣಾಮಕಾರಿತ್ವದ ಬಗ್ಗೆ ಪರಿಶೀಲನೆ ನಡೆಸಲು.

3) ಆರ್ಥಿಕ ನಿರೂಪಣೆ ಹಾಗೂ ಪರಿಶೋಧಕರ ತತ್ಸಂಬಂಧ ವರದಿಯ ಪರಿಶೀಲನೆ.

4) ಸಂಬಂಧಿತ ವ್ಯಕ್ತಿಗಳೊಂದಿಗೆ ಇರಬಹುದಾದ ಕಂಪನಿಯ ವಹಿವಾಟಿನ/ವ್ಯವಹಾರಗಳ ಅನುಮೋದನೆ ಅಥವಾ ತದನಂತರದಲ್ಲಿ ಉಂಟಾಗುವ ಮಾರ್ಪಾಡು.

5) ಅಂತರ ನಿಗಮ ಸಾಲ ಮತ್ತು ಹೂಡಿಕೆಗಳ ಪರಿಶೀಲನೆ.

6) ಕಂಪನಿಯ ಆಸ್ತಿ ಅಥವಾ ಸ್ವಾಧೀನಪಡಿಸಿರುವಿಕೆಗೆ ಸಂಬಂಧಿಸಿದಂತೆ ಅಗತ್ಯವಿದ್ದಲ್ಲಿ ಮೌಲ್ಯೀಕರಣ.

7) ಆಂತರಿಕ ಆರ್ಥಿಕ ನಿಯಂತ್ರಣದ ಮತ್ತು ಅಪಾಯಕಾರಿ ನಿರ್ವಹಣೆ ವ್ಯವಸ್ಥೆಯ ಮೌಲ್ಯಮಾಪನ.

8) ಸಾರ್ವಜನಿಕ ಕೊಡುಗೆ ಮೂಲಕ ಸ್ವೀಕರಿಸಿದ ನಿಧಿಯ ಪೂರ್ಣ ಬಳಕೆ ಹಾಗೂ ಅದಕ್ಕೆ ಸಂಬಂಧಿತ ವಿಷಯಗಳ ಮೇಲುಸ್ತುವಾರಿ.

ಪರಿಶೋಧನಾ ಸಮಿತಿಯ ಸಭೆಗಳಿಗೆ ಲೆಕ್ಕ ಪರಿಶೋಧಕರು ಹಾಗೂ ಪೂರ್ಣಾವಧಿಯ ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ ರವರಿಗೆ ಆಮಂತ್ರಣವಿದ್ದರು, ಮತ ಚಲಾಯಿಸಲು ಹಕ್ಕಿರುವುದಿಲ್ಲ.

ಪರಿಶೋಧನಾ ಪ್ರಸಕ್ತ:

ಕ್ರ.ಸಂ	ಸಭೆಯ ಸಂಖ್ಯೆ	ಸಭೆಯ ದಿನಾಂಕ
1	30ನೇ ಸಭೆ	16/09/2019

ಪ್ರಸಕ್ತ ವರದಿಯ ವರ್ಷದಲ್ಲಿ, ಸಾಮನ್ಯ ಸಭೆಯನ್ನು ಈ ಕೆಳಕಂಡಂತೆ ನಡೆಸಲಾಯಿತು:

ಸಭೆಯ ಸಂಖ್ಯೆ ಮತ್ತು ದಿನಾಂಕ	ನಿರ್ಣಯಗಳು
20ನೇ ವಾರ್ಷಿಕ ಸಾಮಾನ್ಯ ಸಭೆ–ದಿನಾಂಕ: 12.11.2019.	ಸಾಮಾನ್ಯ ನಿರ್ಣಯಗಳು i) ಆ.ವ 2018–19ರ ನಿರ್ದೇಶಕರ ವರದಿಯನ್ನು ಅಳವಡಿಸಿಕೊಳ್ಳುವುದು. ii) ಆ.ವ 2018–19ರ ಪರಿಶೋಧಿತ ವಾರ್ಷಿಕ ಲೆಕ್ಕಗಳು. iii) ಆ.ವ 2018–19ರ ಶಾಸನ ಬದ್ಧ ಲೆಕ್ಕ ಪರಿಶೋಧಕರ ವರದಿಯನ್ನು. iv) ಆ.ವ 2018–19ರ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪ್ರಮಾಣ ಪತ್ರ. **ವಿಶೇಷ ನಿರ್ಣಯಗಳು** ಕಂಪನಿಗಳ ಕಾಯ್ದೆ, 2013ರ ಕಲಂ 186ರ ಅಡಿಯಲ್ಲಿ ಅಂತರ ನಿಗಮಸಾಲಗಳನ್ನು ರೂ.112.11 ಕೋಟಿಗಳಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿರುವುದು.
ಅಸಾಧಾರಣ ಸಾಮಾನ್ಯ ಸಭೆ–ದಿನಾಂಕ: 11.03.2020.	ಸಾಮಾನ್ಯ ನಿರ್ಣಯಗಳು ನಿರ್ದೇಶಕರ ಮಂಡಳಿಗೆ ಹಣವನ್ನು ಎರವಲು ಪಡೆಯಲು ಅಧಿಕಾರ ನೀಡಿರುವುದು–ಎರವಲು ಮಿತಿಯನ್ನು ಹಾಲಿ ಇರುವ ರೂ.6800 ಕೋಟಿಗಳಿಂದ ರೂ.8600 ಕೋಟಿಗಳಿಗೆ ಹೆಚ್ಚಿಸಿರುವುದು.

ಜಾಗರಣೆ ಕಾರ್ಯವಿಧಾನ(ಶಿಳ್ಳೆ ಊದುವ) ನೀತಿ:

ಕಂಪನಿಗಳ ಕಾಯ್ದೆ, 2013 ರ ಕಲಂ 177(9) ರ ಅಡಿಯಲ್ಲಿ ಅಗತ್ಯಕ್ಕೆ ಅನುಸಾರವಾಗಿ, ಕಂಪನಿಯು ಜಾಗರಣ ಕಾರ್ಯವಿಧಾನವನ್ನು (ಶಿಳ್ಳೆ ಊದುವ) ನೀತಿಯನ್ನು ಸ್ಥಾಪಿಸಿದೆ. ಪಾಲಿಸಿಯ ಪ್ರತಿ ಕಂಪನಿಯ ಅಂತರ್ಜಾಲ www.kptcl.karnataka.gov.inನಲ್ಲಿ ಲಭ್ಯವಿದೆ.

ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿ.

ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಪಾತ್ರ ಮತ್ತು ಕಾರ್ಯನಿರ್ವಹಣೆಯನ್ನು ಸೂಚಿಸುವ ಕಂಪನಿಗಳ ಕಾಯ್ದೆ, 2013 ರ ಕಲಂ 178ರ ಉಪ ವಿಭಾಗ (2), (3) ಮತ್ತು (4) ರ ನಿಬಂಧನೆಗಳನ್ನು ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ನೀಡಲಾಗಿದೆ. ಪೂರ್ಣಾವಧಿಯ ನಿರ್ದೇಶಕರ ಸಂಭಾವನೆ ಮತ್ತು ಭತ್ಯೆಗಳು ಅವರಿಗೆ ಅನ್ವಯವಾಗುವ ವೇತನದ ಸಮಯದ ಪ್ರಮಾಣವನ್ನು ಆಧರಿಸಿರುತ್ತದೆ. ಅಲ್ಪಾವಧಿಯ ನಿರ್ದೇಶಕರಿಗೆ ಕಾಲಕಾಲಕ್ಕೆ ಕರ್ನಾಟಕ ಸರ್ಕಾರದ ಆದೇಶಗಳ ಪ್ರಕಾರ ಸಿಟ್ಟಿಂಗ್ ಶುಲ್ಕವನ್ನು ಮಾತ್ರ ಪಾವತಿಸಲಾಗುತ್ತಿದೆ. ಅದರಂತೆ, ಕಂಪನಿಗಳ ಕಾಯ್ದೆ, 2013 ರ ಕಲಂ 178(1) ರ ಅಡಿಯಲ್ಲಿ ವಿನಾಯಿತಿಯನ್ನು ನವದೆಹಲಿಯ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಿಂದ ಕೋರಲಾಗಿದೆ.

ಸ್ವತಂತ್ರ ನಿರ್ದೇಶಕರ ನೇಮಕಾತಿ:

ಸ್ವತಂತ್ರ ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದಂತೆ, ಕಂಪನಿ ಕಾಯ್ದೆ 2013 ರ ಕಲಂ 149(6) ರ ಷರತ್ತು (ಎ) ಅನ್ನು ಎಂಸಿಎಯ ಅಧಿಸೂಚನೆ ದಿನಾಂಕ: 05.06.2015 ರಲ್ಲಿ ತಿದ್ದುಪಡಿ ಮಾಡಿ, ರಾಜ್ಯ ಸರ್ಕಾರಕ್ಕೆ ಸಮಗ್ರತೆಯ ವ್ಯಕ್ತಿ ಮತ್ತು ಸಂಬಂಧಿತ ಪರಿಣತಿ ಮತ್ತು ಅನುಭವವನ್ನು ಹೊಂದಿರುವಂತಹ ಸ್ವತಂತ್ರ ನಿರ್ದೇಶಕರನ್ನುನಿರ್ಧರಿಸಲು ಮತ್ತು ನೇಮಿಸಲು ಅಧಿಕಾರ ನೀಡಲಾಗಿದೆ.ಈ ಮೇಲ್ಕಂಡ ನಿಬಂಧನೆಯಿಂದಾಗಿ ಕರ್ನಾಟಕ ರಾಜ್ಯ ಸರ್ಕಾರವು ಸ್ವತಂತ್ರ ನಿರ್ದೇಶಕರನ್ನು ನೇಮಿಸುತ್ತಿದೆ. ಮುಂದುವರೆದಂತೆ, ಮುಂದಿನ ನೀತಿ ಸಂಹಿತೆಯನ್ನು ಕರ್ನಾಟಕ ಸರ್ಕಾರವು ಸೂಚಿಸಬೇಕಾಗಬಹುದು.

ಕಾಯ್ದೆಯ ಕಲಂ 134(3) ರ ನಿಬಂಧನೆಗಳ ಪ್ರಕಾರ ಈ ಕಎಳಗಿನ ಮಾಹಿತಿಯನ್ನು ಒದಗಿಸಲಾಗಿದೆ.

(ಎ) ವಾರ್ಷಿಕ ಸಲ್ಲಿಕೆ:

ಅನುಬಂಧ–1 ರಲ್ಲಿ ನೀಡಲಾಗಿರುವ ಕಲಂ 92 ರ ನಿಬಂಧನೆಗಳಿಗೆ ಅನುಸಾರವಾಗಿ ವಾರ್ಷಿಕ ಸಲ್ಲಿಕೆಯ ಸಾರವನ್ನು ಈ ವರದಿಗೆ (ಎಂಜಿಟಿ–9) ಲಗತ್ತಿಸಲಾಗಿದೆ.

(ಬಿ) ನಿರ್ದೇಶಕರ ಜವಾಬ್ದಾರಿ ಹೇಳಿಕೆ:

ಕಂಪನಿಗಳ ಕಾಯ್ದೆ,2013ರ ಸೆಕ್ಷನ್ 134(5)ರ ಅಡಿಯಲ್ಲಿನ ಅವಶ್ಯಕತೆಗೆ ಅನುಸಾರವಾಗಿ ನಿರ್ದೇಶಕರುಗಳುಈ ರೀತಿಹೇಳಿಕೆಯನ್ನು ನೀಡಿರುತ್ತಾರೆ.

(ಎ) ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ, ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳನ್ನು ಪಾಲಿಸುವುದರ ಜೊತೆಗೆ ಹೊರಹೊಮ್ಮುವ ವಿಷಯಗಳಿಗೆ ಸಂಬಂಧಿಸಿದ ವಿವರಣೆಯೊಂದಿಗೆ ಅನುಸರಿಸಲಾಗಿದೆ.

(ಬಿ) ನಿರ್ದೇಶಕರುಗಳು ಈ ರೀತಿಯ ಲೆಕ್ಕಪತ್ರಗಳ ನೀತಿಗಳನ್ನು ಆರಿಸಿಕೊಂಡಿದ್ದಾರೆಹಾಗೂ ಅವುಗಳನ್ನು ನಿರಂತರವಾಗಿ ಅಳವಡಿಸಿಕೊಂಡು ತೀರ್ಪುಗಳು ಮತ್ತು ಸಮಂಜಸವಾದ ಅಂದಾಜುಗಳನ್ನುಮಾಡುತ್ತಾರೆಹಾಗೂ ಈ ಅವಧಿಯಲ್ಲಿ ಕಂಪನಿಯ ಲಾಭ ಮತ್ತು ನಷ್ಟವನ್ನು ಮತ್ತು ಆರ್ಥಿಕ ವರ್ಷದ ಕೊನೆಯಲ್ಲಿ ಕಂಪನಿಯ ವ್ಯವಹಾರಗಳ ಸ್ಥಿತಿಯ ನೈಜ ಮತ್ತು ನ್ಯಾಯಸಮ್ಮತ ನೋಟವನ್ನು ಹಾಗೂ ವಿವೇಕಯುತವಾಗಿ ನೀಡುವಂತೆಮಾಡಿದ್ದಾರೆ.

(ಸಿ) ನಿರ್ದೇಶಕರುಗಳು ಕಂಪನಿಗೆ ಸಂಬಂಧಿತ ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗೆ ಸರಿಯಾದ ಮತ್ತು ಸಾಕಷ್ಟು ಕಾಳಜಿವಹಿಸಿ, ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಕಂಪನಿಗಳ ಸ್ವತ್ತುಗಳನ್ನು ರಕ್ಷಿಸುವ ಮತ್ತು ವಂಚಿಸುವ ಹಾಗೂ ಇತರೆ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ಕ್ರಮವಹಿಸುವುದು.

(ಡಿ) ನಿರ್ದೇಶಕರುಗಳು ವಾರ್ಷಿಕ ಲೆಕ್ಕಪತ್ರಗಳನ್ನು ಗೋಯಿಂಗ್ ಕನ್ಸರ್ನ್ ಆಧಾರದ ಮೇಲೆ ಸಿದ್ಧಪಡಿಸುತ್ತಾರೆ.

(ಇ) ಅನ್ವಯವಾಗುವ ಎಲ್ಲಾ ಕಾನೂನು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ, ನಿರ್ದೇಶಕರುಗಳು ಸರಿಯಾದ ವ್ಯವಸ್ಥೆಗಳನ್ನು ಕಂಡುಕೊಂಡಿದ್ದಾರೆ.

(ಸಿ) **<u>ಪ್ರತಿ ಅವಲೋಕನಗಳ, ಮೀಸಲಾತಿ ಅಥವಾ ಪ್ರತಿಕೂಲ ಟೀಕೆ ಅಥವಾ ಹಕ್ಕು ನಿರಾಕರಣೆ ಕುರಿತು ಮಂಡಳಿಯಿಂದ ವಿವರಣೆ ಅಥವಾ ಪ್ರತಿಕ್ರಿಯೆಗಳು</u>**

(i) ಶಾಸನಬದ್ಧ ಲೆಕ್ಕಪರಿಶೋಧಕರಿಂದ ತಮ್ಮ ವರದಿಯನ್ನು ಅನುಬಂಧ–2 ಎಂದು ಲಗತ್ತಿಸಲಾಗಿದೆ.

(ಡಿ) ಸೆಕ್ಷನ್ 186 ರ ಅಡಿಯಲ್ಲಿ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು

1. ದಿನಾಂಕ: 12.11.2019 ರಂದು ನಡೆದ ಕಂಪನಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿಯು ಪರಿಶೀಲಿಸಿದ ಅವಧಿಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 186 ರ ಅಡಿಯಲ್ಲಿ ಅಂತರ ನಿಗಮ ಸಾಲದ ಮೊತ್ತರೂ.112.11 ಕೋಟಿಗಳಷ್ಟು ಅರ್ಕಾವತಿ ವಸತಿ ಬಡಾವಣೆಯಲ್ಲಿ ವಿದ್ಯುತ್ ಮೂಲ ಸೌಕರ್ಯವನ್ನು ಸೃಷ್ಟಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಸ್‌ಬಿಐ ಒಂದು ವರ್ಷದ ಎಂಸಿಎಲ್‌ಆರ್ ಜೊತೆಗೆ ಇಪ್ಪತ್ತೈದು ಮೂಲಾಂಕಗಳಲ್ಲಿ ಬಡ್ಡಿ ನೀಡಲು ಅನುಮೋದನೆ ನೀಡಲಾಗಿದೆ.

2. ಕಂಪನಿಯು ಪರಿಶೀಲನೆಯ ಅವಧಿಯಲ್ಲಿ 20.12.2018 ರಂದು ನಡೆದ 113ನೇ ಸಭೆಯಲ್ಲಿ (ವಿಷಯ ಸಂಖ್ಯೆ. 113/26) ಮೇ॥ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶೇಷ ಮಿಡ್ ಕಾರ್ಪೋರೇಟ್ ಶಾಖೆ, ಬೆಂಗಳೂರು ನಿಂದ ದೂರಸಂಪರ್ಕ ಇಲಾಖೆ, ಭಾರತ ಸರ್ಕಾರ ಮತ್ತು ಮೇ॥ ಆಂಟ್ರಿಕ್ಸ್ ಕಾರ್ಪೋರೇಷನ್, ಬಾಹ್ಯಾಕಾಶ ಇಲಾಖೆ ಅಸ್ತಿತ್ವದಲ್ಲಿರುವ ನಿಧಿಯೇತರ ಸಾಲ ಸೌಬಭ್ಯಗಳನ್ನು ಅನುಸರಿಸಿ ನೀಡಲಾಗಿದೆ ಮತ್ತು ದಾಖಲೆಗಳನ್ನು 29.07.2019 ರಂದು ಕಾರ್ಯಗತಗೊಳಿಸಲಾಗಿದೆ.

(ಎ) ಸಾಲದ ಪತ್ರ ರೂ.5.70 ಕೋಟಿಗಳು.

(ಬಿ) ಬ್ಯಾಂಕ್ ಖಾತರಿಗಳು ರೂ.1,20,49,793/–

[ಒಟ್ಟು ರೂ.6,90,49,793/– (ರೂಪಾಯಿ ಆರು ಕೋಟಿ ತೊಂಬತ್ತು ಲಕ್ಷಗಳು ನಲವತ್ತೊಂಬತ್ತು ಸಾವಿರ ಏಳುನೂರ ತೊಂಬತ್ತಮೂರು ರೂಪಾಯಿಗಳು ಮಾತ್ರ)].

(ಇ) ನಿಬಂಧನೆ 188ರ ಉಪ ನಿಬಂಧನೆ (1) ರಲ್ಲಿ ಸೂಚಿಸಿರುವಂತೆ,ಒಪ್ಪಂದಗಳ ಅಥವಾ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಇರುವ ವ್ಯವಸ್ಥೆಯ ವಿವರಗಳು.

(ಎಫ್) ಕಂಪನಿಯ ವ್ಯವಹಾರಗಳ ಸ್ಥಿತಿ;ಹಿಂದಿನ ಪುಟ ಸಂಖ್ಯೆ 2 ರಿಂದ 72 ರಲ್ಲಿ ಸೂಚಿಸಿದಂತೆ.

(ಜಿ) ಯಾವುದಾದರೂ ಮೊತ್ತ ಇದ್ದಲ್ಲಿ, ಅದು ಯಾವುದೇ ಮೀಸಲುಗಳಿಗೆ ಸಾಗಿಸಲು ಪ್ರಸ್ತಾಪಿಸಿದ್ದಾರೆಯೇ–ಯಾವುದೇ ಮೀಸಲುಗೆ ಸಾಗಿಸಲು ಯಾವುದೇ ಮೊತ್ತವನ್ನು ಪ್ರಸ್ತಾಪಿಸಲಾಗಿಲ್ಲ.

(ಹೆಚ್) ಯಾವುದಾದರೂ ಮೊತ್ತ ಇದ್ದಲ್ಲಿ, ಅದು ಡಿವಿಡೆಂಡ್ ರೂಪದಲ್ಲಿ ಪಾವತಿಸಲು ಶಿಫಾರಸ್ಸು ಮಾಡಿದ್ದಾರೆಯೇ–ಯಾವುದೇ ಮೊತ್ತ ಡಿವಿಡೆಂಡ್ ರೂಪದಲ್ಲಿ ಪಾವತಿಸಲು ಶಿಫಾರಸ್ಸು ಮಾಡಿಲ್ಲ.

(ಐ) ಭೌತಿಕ ಬದಲಾವಣೆಗಳು ಮತ್ತು ಬದ್ಧತೆಗಳು, ಯಾವುದಾದರೂ ಇದ್ದಲ್ಲಿ, ಅದು ಕಂಪನಿಯ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವಂತಹದ್ದಾದಲ್ಲಿ, ಅದು ಕಂಪನಿಯಹಣಕಾಸು ಪತ್ರಗಳಿಗೆ ಸಂಬಂಧಿಸಿದ ಆರ್ಥಿಕ ವರ್ಷದ ನಡುವೆ ನಡೆದ ವಹಿವಾಟಾಗಿದ್ದಲ್ಲಿ, ವರದಿಯ ದಿನಾಂಕ –ಯಾವುದೂ ಇಲ್ಲ.

(ಜೆ) **ಇಂಧನ ಸಂರಕ್ಷಣೆ, ತಂತ್ರಜ್ಞಾನ ಗ್ರಹಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹೋಗುವಿಕೆ;**

ಕಂಪನಿಯ ಕಾರ್ಯಾಚರಣೆಗಳಲ್ಲಿ ಯಾವುದೇಉತ್ಪಾದನೆ ಅಥವಾ ಸಂಸ್ಕರಣಾ ಚಟುವಟಿಕೆಗಳು ಒಳಗೊಂಡಿಲ್ಲವಾದ್ದರಿಂದ, ಇಂಧನ ಸಂರಕ್ಷಣೆ ಮತ್ತು ತಂತ್ರಜ್ಞಾನ ಗ್ರಹಿಕೆಗೆ ಸಂಬಂಧಿಸಿದ ವಿವರಗಳು

ಕಂಪನಿಗಳ(ನಿರ್ದೇಶಕರ ಮಂಡಳಿಯ ವರದಿಯಲ್ಲಿ ವಿವರಗಳನ್ನು ಬಹಿರಂಗಪಡಿಸುವುದು) ನಿಯಮಗಳು, 1988 ರ ಪ್ರಕಾರ ಅನ್ವಯಿಸುವುದಿಲ್ಲ. ಪರಿಶೀಲಿಸಿದ ವರ್ಷದ ಅವಧಿಯಲ್ಲಿ ಯಾವುದೇ ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹೋಗುವಿಕೆ ಇರುವುದಿಲ್ಲ.

(ಕೆ) ಕಂಪನಿಯ ಅಪಾಯ ನಿರ್ವಹಣಾ ನೀತಿಯ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಹೇಳಿಕೆ– ಯಾವುದೂ ಇಲ್ಲ.

(ಎಲ್) **ಕಂಪನಿಯು ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಸಂಬಂಧಿಸಿದ ಕ್ರಮಗಳಲ್ಲಿ ಅಭಿವೃದ್ಧಿಪಡಿಸುವ ಮತ್ತು ಜಾರಿಗೊಳಿಸುವ ನೀತಿಯ ವಿವರಗಳು.**

(i) **ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿ:**

ಕಂಪನಿಗಳ ಕಾಯ್ದೆ, 2013ರ ನಿಬಂಧನೆ 135ರ ಪ್ರಕಾರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿಯನ್ನು ರಚಿಸಲಾಗಿದೆ. ಆ ರಚನೆಯು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸದಸ್ಯರು ಶ್ರೀಯುತರು/ಶ್ರೀಮತಿ	ಹುದ್ದೆ	ಅವಧಿ	
			ಇಂದ	ರವರೆಗೆ
1.	ಜಿ.ಕುಮಾರ್ ನಾಯಕ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	31/03/2021	–
2.	ಕಪಿಲ್ ಮೋಹನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	18/11/2020	31/03/2021
3.	ಮಹೇಂದ್ರ ಜೈನ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	24/06/2019	18/11/2020
4.	ಪಿ.ರವಿಕುಮಾರ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು	21/10/2017	24/06/2019
5.	ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು	06/09/2013	–
6.	ಡಾ. ಎನ್.ಮಂಜುಳ, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು	20/08/2019	–
7.	ಡಾ. ಎಸ್.ಸೆಲ್ವಕುಮರ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು	06/08/2018	05/08/2019
8.	ವಿ.ಪೊನ್ನುರಾಜ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು (ಅಧಿಕ ಪ್ರಭಾರ)	ಸದಸ್ಯರು	05/08/2019	20/08/2019
	ರಮ್ಯ.ಕೆ, ಎಫ್‌ಸಿಎಸ್, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ	ಸಂಚಾಲಕರು	16/01/2019	–

(ii) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಂಡಿರುವ ಪ್ರತಿಯನ್ನು ಅನುಬಂಧ–3 ಎಂದು ಲಗತ್ತಿಸಲಾಗಿದೆ.

(iii) ವರದಿಯ ವರ್ಷದ ಅವಧಿಯಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಸಭೆಗಳು ಈ ಕೆಳಕಂಡಂತೆ ನಡೆದಿದೆ.

ಕ್ರ.ಸಂ	ಸಭೆಯ ಸಂಖ್ಯೆ	ಸಭೆಯ ದಿನಾಂಕ
1	7ನೇ ಸಭೆ	17/02/2020

(iv) ಆರ್ಥಿಕ ವರ್ಷ 2019–20 ರ ಅವಧಿಯಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿಯು ರೂ.25.00 ಕೋಟಿಗಳಷ್ಟು ದೇಣಿಗೆ ನೀಡಲು ಶಿಫಾರಸ್ಸು ಮಾಡಿ ದಿನಾಂಕ: 31.03.2020 ರಂದು ಪರಿಚಾಲನೆ ಮುಖಾಂತರ ನಿರ್ಣಯಗಳನ್ನು ಹೊರಡಿಸಿರುತ್ತಾರೆ.

(v) 2019–20ರ ಅವಧಿಯಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಕೊಡುಗೆ

ಆರ್ಥಿಕ ವರ್ಷ 2019–20ರ ದಿನಾಂಕ: 31.03.2020 ರಂದು ಇದ್ದಂತೆ ಕಂಪನಿ ಕಾಯ್ದೆ, 2013 ಷಡ್ಯೂಲ್ Vll ರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳ ಪಟ್ಟಿಯ ಪ್ರಕಾರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ವೆಚ್ಚದ ಮೊತ್ತ ರೂ.25,01,73,602/– ಗಳನ್ನು ವ್ಯಹಿಸಲಾಗಿದೆ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳಿಗೆ ಖರ್ಚು ಮಾಡಿದ ಮೊತ್ತದ ವಿವರಗಳು ಈ ವರದಿಯ ಅನುಬಂಧ–4 ರಲ್ಲಿದೆ.

(vi) ಆಧಾರಿತ ನಿಯಮಗಳು

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಸಮಿತಿಯು ಸಮರ್ಪಕ ಅಧಿಕಾರಗಳನ್ನು ಮತ್ತು ಆಧಾರಿತ ನಿಯಮಗಳನ್ನು ಹೊಂದಿದ್ದು, ಕಂಪನಿ ಕಾಯ್ದೆ, 2013 ರಲ್ಲಿ ನಮೂದಿಸಿರುವಂತೆ ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸಬಹುದು. ಅದರಲ್ಲಿ ಈ ಕೆಳಕಂಡವುಗಳು ಒಳಗೊಂಡಿದೆ.

ಎ) ಮಂಡಳಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಲು ಮತ್ತು ಶಿಫಾರಸ್ಸು ಮಾಡುವುದು.

ಬಿ) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾಡಬೇಕಾದ ವೆಚ್ಚದ ಮೊತ್ತವನ್ನು ಶಿಫಾರಸ್ಸು ಮಾಡುವುದು.

ಸಿ) ಕಂಪನಿಯಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯ ಮೇಲ್ವಿಚಾರಣೆಯನ್ನು ಕಾಲಕಾಲಕ್ಕೆ ನಡೆಸುವುದುಮತ್ತು

ಡಿ) ಕಂಪನಿಯಿಂದ ಕೈಗೊಂಡ ಚಟುವಟಿಕೆಗಳು ಅಥವಾ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಯೋಜನೆಗಳ/ಕಾರ್ಯಕ್ರಮಗಳಅನುಷ್ಟಾನಕ್ಕಾಗಿ ಪಾರದರ್ಶಕ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸುವುದು.

ಶಾಸನಬದ್ಧ ಲೆಕ್ಕ ಪರಿಶೋಧಕರು

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ಕವಿಪ್ರನಿನಿಯ ಆರ್ಥಿಕ ವರ್ಷ 2019–20 ರ ಆರ್ಥಿಕ ಲೆಕ್ಕಪತ್ರ ನಿರೂಪಣೆಗಳ ಪರಿಶೋಧನೆ ನಡೆಸಲು ಮೆ॥ ಬಿ.ಪಿ.ರಾವ್ & ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಶಾಸನಬದ್ಧ ಪರಿಶೋಧಕರನ್ನಾಗಿ ಪತ್ರ ಸಂಖ್ಯೆ ಸಿಎ.ವಿ/ಸಿಒವೈ/ಕರ್ನಾಟಕ, ಕೆಎನ್‌ಟಿಆರ್‌ಎ(1)/1030 ದಿನಾಂಕ: 16.08.2019 ರಂದು ನೇಮಕ ಮಾಡಲಾಗಿದೆ.

ವೆಚ್ಚ ಲೆಕ್ಕ ಪರಿಶೋಧಕರು

ನಿರ್ದೇಶಕರುಗಳ ಮಂಡಳಿ ದಿನಾಂಕ: 21.10.2019 ರಂದುತನ್ನ 117ನೇ ಸಭೆಯಲ್ಲಿ ಕವಿಪ್ರನಿನಿಯ ಆರ್ಥಿಕ ವರ್ಷ 2019–20 ರ ವೆಚ್ಚ ಲೆಕ್ಕ ದಾಖಲೆಗಳನ್ನು ಪರಿಶೀಲಿಸಲು ಮೆ॥ ಕೆಪಿಆರ್ &ಅಸೋಸಿಯೇಟ್ಸ್, ಬೆಂಗಳೂರು ಇವರನ್ನು ವೆಚ್ಚ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

ಸೆಕ್ರೆಟೇರಿಯಲ್ ಪರಿಶೋಧಕರು

ಕಂಪನಿ ಕಾಯ್ದೆ, 2013 ರ ಅನುಸೂಚಿ 204 ರ ಅಡಿಯಲ್ಲಿ ನಿರ್ದೇಶಕರುಗಳ ಮಂಡಳಿಯು ಶ್ರೀ ಅಂಕುಶ್ ಸೇತಿ, ಅಭ್ಯಾಸನಿರತ ಕಂಪನಿ ಕಾರ್ಯದರ್ಶಿ ಇವರನ್ನು ದಿನಾಂಕ: 28.06.2019 ರಂದು ತನ್ನ 115ನೇ ಸಭೆಯಲ್ಲಿ ಕವಿಪ್ರನಿನಿಯ ಆರ್ಥಿಕ ವರ್ಷ 2018–19, 2019–20 ಮತ್ತು 2020–21 ರ ಸೆಕ್ರೆಟೇರಿಯಲ್ ಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

ಕೃತಜ್ಞತೆಗಳು

ಕವಿಪ್ರನಿನಿಗೆ ಎಲ್ಲಾ ರೀತಿಯ ನೆರವು ಹಾಗೂ ಮಾರ್ಗದರ್ಶನ ನೀಡಿದ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ವಿದ್ಯುತ್ ವಿತ್ತೀಯ ನಿಗಮ ನಿಯಮಿತ, ವಾಣಿಜ್ಯ ಬ್ಯಾಂಕುಗಳು ಹಾಗೂ ಇತರ ಆರ್ಥಿಕ ಸಂಸ್ಥೆಗಳು, ನಿಗಮ ವ್ಯವಹರಣೆಗಳ ಸಚಿವಾಲಯ, ರಿಜಿಸ್ಟ್ರಾರ್ ಆಫ್ ಕಂಪನೀಸ್ ಹಾಗೂ ಸಾರ್ವಜನಿಕರಿಗೆ ನಿರ್ದೇಶಕ ಮಂಡಳಿಯು ತನ್ನ ಅಭಿನಂದನೆಯನ್ನು ಸಲ್ಲಿಸುತ್ತದೆ.

ಕಂಪನಿಯು ನಿರಂತರವಾಗಿ ಬೆಳೆದು ಅಭಿವೃದ್ಧಿ ಹೊಂದಲು ಎಲ್ಲಾ ಹಂತಗಳಲ್ಲಿ ಅವಿರತ ಪರಿಶ್ರಮ ಹಾಗೂ ಕೊಡುಗೆಯನ್ನು ನೀಡಿದ ಅಧಿಕಾರಿ ಹಾಗೂ ನೌಕರರ ವರ್ಗಕ್ಕೆ ನಿಗಮದ ಮಂಡಳಿಯು ಅಭಿನಂದಿಸುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–
(ಬಿ.ಎಸ್.ಯಡಿಯೂರಪ್ಪ)
ಅಧ್ಯಕ್ಷರು, ಕವಿಪ್ರನಿನಿ

ನಿರ್ದೇಶಕರ ವರದಿಯ ಅನುಬಂಧ–1

ನಮೂನೆ ಸಂಖ್ಯೆ ಎಂ.ಜಿ.ಟಿ–9

ದಿನಾಂಕ 31ನೇ ಮಾರ್ಚ್ 2020 ರಂದು ಮುಕ್ತಾಯಗೊಂಡ ಆರ್ಥಿಕ ವರ್ಷದ ವಾರ್ಷಿಕ ಸಲ್ಲಿಕೆಗಳ ಸಾರಾಂಶ

(ಕಂಪನಿ ಕಾಯ್ದೆ, 2013ರ ಪ್ರಕರಣ 92(3) ಹಾಗೂ ಕಂಪನಿ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನುಸರಣೆಯಾಗಿ)

I.ನೊಂದಾವಣಿ ಮತ್ತು ಇತರ ವಿವರಗಳು:

i.	ಸಿ.ಐ.ಎನ್.	U40109KA1999SGC025521
ii.	ನೋಂದಣಿ ದಿನಾಂಕ	28–07–1999
iii.	ಕಂಪನಿಯ ಹೆಸರು	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
iv.	ವರ್ಗ/ಕಂಪನಿಯ ಉಪ ವರ್ಗ	ಸರ್ಕಾರದ ಕಂಪನಿ
v.	ನೋಂದಣಿ ಕಛೇರಿಯ ವಿಳಾಸ ಹಾಗೂ ಸಂಪರ್ಕ ವಿವರ	ಕಂಪನಿ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು–560 009.
vi.	ಲಿಸ್ಟೆಡ್ ಕಂಪನಿಯೇ	ಲಿಸ್ಟೆಡ್ ಕಂಪನಿಯಲ್ಲ
vii.	ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಕಾರ್ಯಬಾರಿಯ ಹೆಸರು, ವಿಳಾಸ ಹಾಗೂ ಸಂಪರ್ಕ ವಿವರ	ಅನ್ವಯಿಸುವುದಿಲ್ಲ

II.ಕಂಪನಿಯ ಮೂಲ ವ್ಯವಹಾರಿಕ ಚಟುವಟಿಕೆಗಳು:

ಕಂಪನಿಯ ಒಟ್ಟಾರೆ ವಹಿವಾಟು ಗಳಿಕೆಯ ಶೇ. 10 ಅಥವಾ ಹೆಚ್ಚಿನ ಪಾಲಿರುವ ಎಲ್ಲಾ ವ್ಯವಹಾರಿಕ ಚಟುವಟಿಕೆಗಳನ್ನು ತೋರಿಸತಕ್ಕದ್ದು:

ಕ್ರ.ಸಂ	ಮುಖ್ಯ ಉತ್ಪಾದನೆ/ಸೇವೆಯ ಹೆಸರು ಹಾಗೂ ವಿವರ	ಉತ್ಪಾದಿತ/ಸೇವೆಯ ಎನ್.ಐ.ಸಿ ಸಂಕೇತ	ಕಂಪನಿಯ ಒಟ್ಟು ವಹಿವಾಟಿನ ಶೇಕಡಾ ಪಾಲು
1	ಪ್ರಸರಣ	35/07	100%

III. ಹೊಂದಿರುವಿಕೆ. ಪೂರಕ, ಸಹ ಕಂಪನಿಗಳ ವಿವರಗಳು:

ಕ್ರ.ಸಂ.	ಕಂಪನಿಯ ಹೆಸರು ಮತ್ತು ವಿಳಾಸ	ಸಿಐಎನ್/ ಜಿಎಲ್ಎನ್	ಹೊಂದುವಿಕೆ/ಪೂರಕ/ಸಹ ಕಂಪನಿ	ಹೋದಿರುವ ಷೇರಿನ ಶೇ. ಪ್ರಮಾಣ	ಅನ್ವಯಿತ ಪರಿಚ್ಛೇಧ
1	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ

IV. ಷೇರು ಹೊಂದಿರುವಿಕೆ ಸ್ವರೂಪ (ಸ್ವಾಮ್ಯ ಷೇರುಗಳ ಬಂಡವಾಳವನ್ನು ಒಟ್ಟು ಸ್ವಾಮ್ಯದ ಶೇಕಡಾ ಪ್ರಮಾಣದಂತೆ)

i. ಪ್ರವರ್ಗವಾರು ಷೇರು

ಷೇರುದಾರರ ಪ್ರವರ್ಗ	ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದ ಅಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ				ಪ್ರಸಕ್ತ ವರ್ಷದಲ್ಲಿ ಶೇಕಡಾ ಬದಲಾವಣೆ
	ಡೀಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	ಡೀಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	
ಎ. ಪ್ರವರ್ತಕ									
1) ಭಾರತೀಯ									
ಎ. ವೈಯಕ್ತಿಕ/ಹಿಂ.ಅ.ಕು.									
ಬಿ. ಕೇಂದ್ರ ಸರ್ಕಾರ									
ಸಿ. ರಾಜ್ಯ ಸರ್ಕಾರ(ಗಳು)	–	21823225	21823225	100%		21823225	21823225	100%	ಇಲ್ಲ
ಡಿ. ನಿಗಮ ಸಂಸ್ಥೆಗಳು									
ಇ. ಬ್ಯಾಂಕು/ಅ.ಸಂ.									
ಎಫ್. ಇತರೆ ಯಾವುದೇ									
ಉಪ ಮೊತ್ತ ಎ (1)	–	21823225	21823225	100%		21823225	21823225	100%	ಇಲ್ಲ
2) ವಿದೇಶಿ									
ಎ. ಅ.ಭಾ–ವ್ಯಕ್ತಿಗಳು									
ಬಿ. ಇತರೆ–ವ್ಯಕ್ತಿಗಳು									
ಡಿ. ನಿಗಮ ಸಂಸ್ಥೆಗಳು									
ಇ. ಬ್ಯಾಂಕು/ಅ.ಸಂ.									
ಎಫ್. ಇತರೆ ಯಾವುದೇ									
ಉಪ ಮೊತ್ತ ಎ (2)	–	ಇಲ್ಲ	ಇಲ್ಲ	ಇಲ್ಲ	–	ಇಲ್ಲ	ಇಲ್ಲ	ಇಲ್ಲ	ಇಲ್ಲ
ಬಿ. ಸಾರ್ವಜನಿಕ ಷೇರು ಹೊಂದಿರುವಿಕೆ									
1. ಆರ್ಥಿಕ ಸಂಸ್ಥೆಗಳು									
ಎ. ಮ್ಯುಚುವಲ್ ಫಂಡ್ಸ್									
ಬಿ. ಬ್ಯಾಂಕು/ಅ.ಸಂ.									
ಸಿ. ಕೇಂದ್ರ ಸರ್ಕಾರ									
ಡಿ. ರಾಜ್ಯ ಸರ್ಕಾರ(ಗಳು)									
ಇ. ವೆಂಚರ್ ಬಂಡವಾಳ ನಿಧಿ									
ಎಫ್. ವಿಮಾ ಕಂಪನಿಗಳು									
ಜಿ. ಎಫ್.ಐ.ಐ ಗಳು									

ಷೇರುದಾರರ ಪ್ರವರ್ಗ	ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದ ಅಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ				ಪ್ರಸಕ್ತ ವರ್ಷದಲ್ಲಿ ಶೇಕಡಾ ಬದಲಾವಣೆ
	ಡೀಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	ಡೀಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	
ಎಚ್. ವಿದೇಶಿ ವೆಂಚರ್ ಬಂಡವಾಳ. ನಿಧಿ									
ಐ. ಇತರೆ (ತಿಳಿಸಿ)									
ಉಪ ಮೊತ್ತ ಬಿ (1)	–	ಇಲ್ಲ	ಇಲ್ಲ	ಇಲ್ಲ	–	ಇಲ್ಲ	ಇಲ್ಲ	ಇಲ್ಲ	ಇಲ್ಲ
2. ಸಂಸ್ಥೇತರ									
ಎ. ನಿಗಮ ಸಂಸ್ಥೆಗಳು 1. ಭಾರತೀಯ 2. ಸಾಗರೋತ್ತರ									
ಬಿ. ವೈಯಕ್ತಿಕ (i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು (ii)ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು									
ಸಿ. ಇತರೆ (ತಿಳಿಸಿ)	–	ಇಲ್ಲ	ಇಲ್ಲ	ಇಲ್ಲ	–	ಇಲ್ಲ	ಇಲ್ಲ	ಇಲ್ಲ	ಇಲ್ಲ
ಉಪ ಮೊತ್ತ ಬಿ (2)									
ಒಟ್ಟು ಸಾರ್ವಜನಿಕ ಷೇರು ಹೊಂದಿರುವಿಕೆ ಬಿ = ಬಿ(1)+ಬಿ(2)									
ಸಿ. ಜಿ.ಡಿ.ಆರ್ ಗಳು ಮತ್ತು ಎ.ಡಿ.ಆರ್‌ಗಳಿಗಾಗಿ ಅಭಿರಕ್ಷಕರು ಹೊಂದಿರುವ ಷೇರು									
ಒಟ್ಟಾರೆ (ಎ+ಬಿ+ಸಿ)	–	**21823225**	**21823225**	**100%**	–	**21823225**	**21823225**	**100%**	ಇಲ್ಲ

ii. ಪ್ರವರ್ತಕರ ಷೇರು ಹೊಂದಿರುವಿಕೆ:

ಕ್ರ ಸಂ	ಷೇರುದಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು			ವರ್ಷದ ಅಂತ್ಯದಲ್ಲಿ ಹೊಂದಿದ್ದ ಷೇರುಗಳು			ಪ್ರಸಕ್ತ ವರ್ಷದಲ್ಲಿ ಹೊಂದಿರುವ ಷೇರುಗಳಲ್ಲಿ ಬದಲಾವಣೆ
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.ಪ್ರಮಾಣ	ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ಭೋಗ್ಯ ಇಟ್ಟ ಷೇರು ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.ಪ್ರಮಾಣ	ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ಭೋಗ್ಯ ಇಟ್ಟ ಷೇರು ಪ್ರಮಾಣ	
1	ಗೌ॥ ರಾಜ್ಯಪಾಲರು, ಕರ್ನಾಟಕ ರಾಜ್ಯ	21823218	100		21823218	100		–
2	ಡಾ॥ ಎಸ್. ಸೆಲ್ವ ಕುಮಾರ್	1	0		0	0		–100%
3	ಡಾ॥ ಎನ್. ಮಂಜುಳಾ	0	0		1	0		+100%
4	ಶ್ರೀ ಪಿ. ರವಿಕುಮಾರ್	1	0		0	0		–100%
5	ಶ್ರೀ ಮಹೇಂದ್ರ ಜೈನ್	0	0		1	0		+100%
6	ಶ್ರೀ ಐ.ಎಸ್.ಎನ್. ಪ್ರಸಾದ್	1	0		1	0		–
7	ಶ್ರೀ ವಿ. ಪೊನ್ನೂರಾಜ್	1	0		1	0		–
8	ಶ್ರೀಮತಿ ಸಿ. ಶಿಖಾ	1	0		0	0		–100%
9	ಶ್ರೀ ರಾಜೇಶ್ ಗೌಡ ಎಂ.ಬಿ.	0	0		1	0		+100%
10	ಶ್ರೀ ಆರ್. ನಾಗರಾಜ	0	0		1	0		+100%
11	ಶ್ರೀ ಅಶ್ವಿನ್ ಡಿ. ಗೌಡ	1	0		0	0		–100%
12	ಶ್ರೀ ಶಿವಕುಮಾರ ಕೆ.ವಿ.	1	0		0	0		–100%
13	ಶ್ರೀ ಕೆ. ಸಿದ್ದರಾಜು	0	0		1	0		+100%
	ಒಟ್ಟು	**21823225**	**100**%		**21823225**	**100**%		

iii. ಪ್ರವರ್ತಕರಲ್ಲಿ ಷೇರು ಹೊಂದಿರುವಿಕೆ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ, ದಯವಿಟ್ಟು ತಿಳಿಸಿ)

ಕ್ರ ಸಂ		ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು		ಪ್ರಸಕ್ತ ವರ್ಷದಲ್ಲಿ ಸಂಚಿತಗೊಂಡ ಷೇರುಗಳು	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ. ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ. ಪ್ರಮಾಣ
1	ವರ್ಷದ ಪ್ರಾರಂಭದಲ್ಲಿ	21823225	100	21823225	100
2	ಪ್ರಸಕ್ತ ವರ್ಷದಲ್ಲಿ ಪ್ರವರ್ತಕರ ಷೇರುಗಳ ದಿನಾಂಕವಾರು ಏರಿಕೆ/ ಇಳಿಕೆ, ಏರಿಕೆ/ಇಳಿಕೆಗೆ ಕಾರಣ ತಿಳಿಸುವುದು (ಉದಾ: ಹಂಚಿಕೆ / ವರ್ಗಾವಣೆ/ ಬೋನಸ್/ ರಿಯಾಯಿತಿ ದರದ ಸ್ವಾಮ್ಯ)	ಇಲ್ಲ	ಇಲ್ಲ	ಇಲ್ಲ	ಇಲ್ಲ
	ವರ್ಷಾಂತ್ಯದಲ್ಲಿ	21823225	100	21823225	100

ಋಣದ ಮೊತ್ತ:

ಬಾಕಿ ಇರುವ/ಸಂಚಿತಗೊಂಡ ಆದರೆ ಪಾವತಿಗೆ ಬಾಕಿ ಇರದ ಬಡ್ಡಿಯನ್ನೂ ಒಳಗೊಂಡು ಕಂಪನಿಯ ಸಾಲದ ಮೊಬಲಗು:

ವಿವರಗಳು	ಠೇವಣಿಯನ್ನು ಹೊರತುಪಡಿಸಿದ ಸುರಕ್ಷಿತ ಸಾಲಗಳು	ಸುರಕ್ಷಿತಗೊಳಿಸದ ಸಾಲಗಳು	ಠೇವಣಿಗಳು	ಒಟ್ಟು ಸಾಲದ ಮೊಬಲಗು
ಆರ್ಥಿಕ ವರ್ಷದ ಪ್ರಾರಂಭದಲ್ಲಿ ಇದ್ದ ಸಾಲದ ಮೊಬಲಗು				
i)ಮೂಲ ಮೊಬಲಗು	59893614943	1523823607	0	61417438550
ii)ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು	0	0	0	0
iii)ಸಂಚಿತಗೊಂಡ ಬಡ್ಡಿ, ಆದರೆ ಪಾವತಿಯಾಗದಿರುವುದು	63459320	589046	0	64048366
ಒಟ್ಟು (i+ii+iii)	**59957074263**	**1524412653**	**0**	**61481486916**
ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲದ ಮೊಬಲಗಿನಲ್ಲಿ ಬದಲಾವಣೆ				
ಸೇರ್ಪಡೆ	14420000000	13000000000	0	27420000000
ಇಳಿತ	7323696307	6506001444	0	13829697751
ನಿವ್ವಳ ಬದಲಾವಣೆ	**7096303693**	**6493998556**	**0**	**13590302249**
ಬಡ್ಡಿ ಮೊಬಲಗು				
ಸೇರ್ಪಡೆ				
ಇಳಿತ				
ನಿವ್ವಳ ಬದಲಾವಣೆ				
ಆರ್ಥಿಕ ವರ್ಷದ ಅಂತ್ಯದಲ್ಲಿ ಸಾಲದ ಮೊಬಲಗು				
I)ಮೂಲ ಮೊಬಲಗು	66989918636	8017822163	0	75007740799
ii)ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು	0	0	0	0
iii)ಸಂಚಿತಗೊಂಡ ಬಡ್ಡಿ, ಆದರೆ ಪಾವತಿಯಾಗದಿರುವುದು	47021442	412568	0	47434010
ಒಟ್ಟು(i+ii+iii)	**67036940078**	**8018234731**	**0**	**75055174809**

V. ನಿರ್ದೇಶಕರು ಹಾಗೂ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ:

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರು:

ಕ್ರ ಸಂ.	ಸಂಭಾವನೆಯ ವಿವರ	ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು	ಒಟ್ಟು ಮೊಬಲಗು
1.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಡಾ॥ ಎಸ್. ಸೆಲ್ವ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, (05.08.2019 ರವರೆಗೆ)	ರೂ.90,706.00
2.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಡಾ॥ ಎನ್. ಮಂಜುಳ, ವ್ಯವಸ್ಥಾಪಕ ನಿರ್ದೇಶಕರು, (20.08.2019 ರಿಂದ 31.03.2020 ರವರೆಗೆ)	ರೂ.16,91,044.00
3.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಡಾ॥ ಗೋಪಾಲ ಕೃಷ್ಣ ಹೆಚ್.ಎನ್, ನಿರ್ದೇಶಕರು(ಆ ಮತ್ತು ಮಾ.ಸಂ), (20.08.2019 ರವರೆಗೆ)	ರೂ.5,35,486.00
4.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಡಾ॥ ಪ್ರವೀಣ್ ಕುಮಾರ್ ಜಿ.ಎಲ್, ನಿರ್ದೇಶಕರು(ಆ ಮತ್ತು ಮಾ.ಸಂ), (20.08.2019 ರಿಂದ 01.10.2019 ರವರೆಗೆ)	ರೂ.1,63,714.00

ಕ್ರ. ಸಂ.	ಸಂಭಾವನೆಯ ವಿವರ	ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು	ಒಟ್ಟು ಮೊಬಲಗು
5.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಶ್ರೀ. ಗಂಗಾಧರ ಸ್ವಾಮಿ ಜಿ.ಎಂ, ನಿರ್ದೇಶಕರು(ಆ ಮತ್ತು ಮಾ.ಸಂ), (15.10.2019 ರಿಂದ 31.03.2020 ರವರೆಗೆ)	ರೂ.6,83,155.00
6.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಶ್ರೀ ಆರ್. ನಾಗರಾಜ, ನಿರ್ದೇಶಕರು(ಹಣಕಾಸು), (01.04.2019 ರಿಂದ 03.06.2019 ರವರೆಗೆ) & (04.09.2019 ರಿಂದ 31.03.2020 ರವರೆಗೆ)	ರೂ.15,298.00 ರೂ.77,508.00
7.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಶ್ರೀ. ಅಶ್ವಿನ್ ಡಿ. ಗೌಡ, ನಿರ್ದೇಶಕರು(ಹಣಕಾಸು), (04.06.2019 ರಿಂದ 31.07.2019 ರವರೆಗೆ)	ರೂ.1,72,512.00
8.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಶ್ರೀ ಶಿವಕುಮಾರ ಕೆ.ವಿ, ನಿರ್ದೇಶಕರು (ಪ್ರಸರಣ), (30.11.2019 ರವರೆಗೆ)	ರೂ.43,17,922.00

ಕ್ರ. ಸಂ.	ಸಂಭಾವನೆಯ ವಿವರ	ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು	ಒಟ್ಟು ಮೊಬಲಗು
9.	ಒಟ್ಟು ಸಂಬಳ ಆರ್ಥಿಕ ವರ್ಷ 2019–20 ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆದ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ	ಶ್ರೀ. ಕೆ. ಸಿದ್ದರಾಜು, ನಿರ್ದೇಶಕರು (ಪ್ರಸರಣ), (07.12.2020 ರಿಂದ 31.03.2020 ರವರೆಗೆ)	ರೂ.9,57,213.00
10.	**ಒಟ್ಟು**		ರೂ.8704558.00
11.	ಷೇರುಗಳ ಆಯ್ಕೆ		**----**
12.	ರಿಯಾಯಿತಿ ದರದ ಸ್ವಾಮ್ಯ		**----**
13.	ಕಾರ್ಯಭಾರಿ ಶುಲ್ಕ – ಲಾಭದ ಶೇಕಡಾ ಪ್ರಮಾಣದಂತೆ – ಇತರೆ, ತಿಳಿಸಿ		**----**
14.	ಇತರೆ, ತಿಳಿಸಿ		**----**
15.	ಒಟ್ಟು (ಎ)		ರೂ.8704558.00
	ಅಧಿನಿಯಮದ ಪ್ರಕಾರ ಮಿತಿ		

ಇತರ ನಿರ್ದೇಶಕರುಗಳಿಗೆ ಸಂಭಾವನೆ:

<table>
<tr><th>ಕ್ರ. ಸಂ</th><th>ಸಂಭಾವನೆಯ ವಿವರಗಳು</th><th colspan="3">ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು</th><th>ಒಟ್ಟು ಮೊಬಲಗು</th></tr>
<tr><td>(1)</td><td>ಸ್ವಾಯತ್ತ ನಿರ್ದೇಶಕರು
• ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ
• ಕಾರ್ಯಭಾರಿ ಶುಲ್ಕ
• ಇತರೆ, ತಿಳಿಸಿ</td><td colspan="3"><table>
<tr><th>ಕ್ರ.ಸಂ</th><th>ನಿರ್ದೇಶಕರ ಹೆಸರು</th><th>ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ</th></tr>
<tr><td>1.</td><td>ಶ್ರೀ. ಪಿ. ರವಿಕುಮಾರ್</td><td>5000/–</td></tr>
<tr><td>2.</td><td>ಶ್ರೀ. ಐ.ಎಸ್.ಎನ್ ಪ್ರಸಾದ್</td><td>12000/–</td></tr>
<tr><td>3.</td><td>ಶ್ರೀ. ಮಹೇಂದ್ರ ಜೈನ್</td><td>14000/–</td></tr>
<tr><td>4.</td><td>ಶ್ರೀ. ವಿ. ಪೊನ್ನೂರಾಜ್</td><td>5000/–</td></tr>
<tr><td>5.</td><td>ಶ್ರೀ. ಎಂ.ಬಿ ರಾಜೇಶ್ ಗೌಡ</td><td>5000/–</td></tr>
<tr><td>6.</td><td>ಶ್ರೀಮತಿ. ಸಿ. ಶಿಖಾ</td><td>1000/–</td></tr>
<tr><td>7.</td><td>ಶ್ರೀ. ಇ.ವಿ ರಮಣಾ ರೆಡ್ಡಿ</td><td>1000/–</td></tr>
</table></td><td></td></tr>
<tr><td></td><td>ಒಟ್ಟು (1)</td><td colspan="3"></td><td>ರೂ.43,000/–</td></tr>
</table>

ಕ್ರ ಸಂ	ಸಂಭಾವನೆಯ ವಿವರಗಳು	ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು	ಒಟ್ಟು ಮೊಬಲಗು
(2)	ಇತರೆ ಕಾರ್ಯವಾಹಿಯೇತರ ನಿರ್ದೇಶಕರು • ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ	ಕ್ರ ಸಂ / ನಿರ್ದೇಶಕರ ಹೆಸರು / ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ 1. ಶ್ರೀ. ಟಿ.ಆರ್. ರಾಮಕೃಷ್ಣಯ್ಯ — 6000/– 2. ಶ್ರೀ. ಶಿವಪ್ರಕಾಶ್ ಟಿ.ಎಂ. — 5000/–	
	ಒಟ್ಟು (2)		**ರೂ. 11,000/–**
	ಒಟ್ಟು (1+2)		**ರೂ.54,000/–**
	ವ್ಯವಸ್ಥಾಪಕ ಮಂಡಳಿಯ ಒಟ್ಟು ಸಂಭಾವನೆ (ಎ+ಬಿ)		**ರೂ.87,58,558/-**
	ಅಧಿನಿಯಮದ ಪ್ರಕಾರ ಒಟ್ಟಾರೆ ಮಿತಿ		

ಸಿ. ವ್ಯ.ನಿ/ಪೂ.ನಿ/ವ್ಯವಸ್ಥಾಪಕರನ್ನು ಹೊರತುಪಡಿಸಿದಂತೆ ಇತರ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ

ಕ್ರ.ಸಂ	ಸಂಭಾವನೆಯ ವಿವರ	ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ			
		ಸಿ.ಇ.ಒ.	ಕಂಪನಿ ಕಾರ್ಯದರ್ಶಿ	ಸಿ.ಎಫ್.ಒ	ಒಟ್ಟು
1.	ಒಟ್ಟು ಸಂಬಳ ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ		ಶ್ರೀಮತಿ. ರಮ್ಯ ಕಣ್ಣನ್, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ		ರೂ.16,14,302.00
2.	ಷೇರುಗಳ ಆಯ್ಕೆ				**----**
3.	ರಿಯಾಯಿತಿ ದರದ ಸ್ವಾಮ್ಯ				**----**
4.	ಕಾರ್ಯಭಾರಿ ಶುಲ್ಕ – ಲಾಭದ ಶೇಕಡಾ ಪ್ರಮಾಣದಂತೆ – ಇತರೆ, ತಿಳಿಸಿ				**----**
5.	ಇತರೆ, ತಿಳಿಸಿ				**----**
6.	ಒಟ್ಟು				ರೂ.16,14,302.00

I.ದಂಡ/ಶಿಕ್ಷೆ/ಅಪರಾಧಗಳಿಗೆ ಒಟ್ಟುಗೂಡಿತ ದಂಡ

ಸ್ವರೂಪ	ಕಂಪನಿ ಕಾಯ್ದೆಯ ಪ್ರಕರಣ	ಸಂಕ್ಷಿಪ್ತ ವಿವರಣೆ	ವಿಧಿಸಲ್ಪಟ್ಟ ದಂಡ/ಶಿಕ್ಷೆ/ಒಟ್ಟುಗೂಡಿತ ದಂಡಗಳ ವಿವರ	ಪ್ರಾಧಿಕಾರ(ಆರ್.ಡಿ/ಎನ್.ಸಿ.ಎಲ್.ಟಿ/ ನ್ಯಾಯಾಲಯ)	ಸಲ್ಲಿಸಿದ ಮನವಿ(ಇದ್ದರೆ, ವಿವರ ಒದಗಿಸಿ)
ಎ. ಕಂಪನಿ					
ದಂಡ					
ಶಿಕ್ಷೆ					
ಒಟ್ಟುಗೂಡಿದ ದಂಡ					
ಬಿ. ನಿರ್ದೇಶಕರು					
ದಂಡ				ಇಲ್ಲ	
ಶಿಕ್ಷೆ					
ಒಟ್ಟುಗೂಡಿದ ದಂಡ					
ಸಿ. ತಪ್ಪಿತಸ್ಥ ಇತರ ಅಧಿಕಾರಿಗಳು					
ದಂಡ					
ಶಿಕ್ಷೆ					
ಒಟ್ಟುಗೂಡಿದ ದಂಡ					

ಅನುಬಂಧ II

2019–20ರ ವರ್ಷಕ್ಕೆ ಕಂಪನಿಯ ಆರ್ಥಿಕ ವರದಿಯ ಲೆಕ್ಕಪತ್ರಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ಅಭಿಪ್ರಾಯ/ಗಮನಿತ ಅಂಶಗಳಿಗೆ ಆಡಳಿತ ವರ್ಗದ ಉತ್ತರಗಳು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
(I)	ಕವಿಪ್ರನಿನಿ ಹಾಗೂ ವಿ.ಸ.ಕಂಪನಿಗಳ ಪಿಂಚಣಿ ಹಾಗೂ ಉಪದಾನ ನ್ಯಾಸವು (ಕೆ.ಇ.ಪಿ.ಜಿ.ಟಿ) ಕಾಲಕಾಲಕ್ಕೆ ವಾಸ್ತವಿಕ ಮೌಲ್ಯಮಾಪನ ಮಾಡಿ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಕೆ.ಇ.ಪಿ.ಜಿ.ಟಿ.ಗೆ ಯಾವ ದರದ ಪ್ರಕಾರ ಪಿಂಚಣಿ ಹಾಗೂ ಉಪದಾನದ ವಂತಿಗೆಯನ್ನು ಪಾವತಿಸಬೇಕು ಎಂದು ತಿಳಿಸುತ್ತದೆ. ಕವಿಪ್ರನಿನಿಯು, ಕೆ.ಇ.ಪಿ.ಜಿ.ಟಿಯು ನಿಗದಿಪಡಿಸಿರುವ ದರದ ಪ್ರಕಾರ ಪಿಂಚಣಿ ಹಾಗೂ ಉಪದಾನದ ವಂತಿಗೆಯನ್ನು ಲೆಕ್ಕಾಚಾರ ಮಾಡಿ ಕವಿಪ್ರನಿನಿಯ ಲೆಕ್ಕಪದ್ಧತಿ ಕಾರ್ಯನೀತಿಯಂತೆ ಅವಕಾಶವನ್ನು ಕಲ್ಪಿಸುತ್ತಿದೆ. 2018–19ರರವರೆವಿಗೂ ಶಾಸನಬದ್ಧ ಲೆಕ್ಕಪರಿಶೋಧಕರು ಹಾಗೂ ಮಹಾಲೇಖಪಾಲರ ಲೆಕ್ಕಪರಿಶೋಧಕರು ಯಾವುದೇ ಗಂಭೀರ ಆಕ್ಷೇಪಣೆಗಳನ್ನು ಮಾಡದೆ ಕಂಪನಿಯ ಈ ಅವಕಾಶದ ಲೆಕ್ಕವನ್ನು ಅಂಗೀಕರಿಸುತ್ತಿವೆ. ಆ.ವ. 2019–20ರ ಲೆಕ್ಕಪತ್ರಗಳ ಪರಿಶೋಧನೆಯ ಸಮಯದಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು, ಆ.ವ.2019–20ರ ಸಾಲಿಗೆ ಭಾ.ಲೆ.ಪ.ತತ್ವ 19ರ ಅವಕಾಶಗಳ ಅನುಸಾರ ವಾಸ್ತವಿಕ ಮೌಲ್ಯಮಾಪನ ಮಾಡುವಂತೆ ಕವಿಪ್ರನಿನಿಗೆ ನಿರ್ದಿಷ್ಟಪಡಿಸುತ್ತಾ, ಪಿಂಚಣಿ ಮತ್ತು ಉಪದಾನದ ಸಂಬಂಧವಾದ ವೆಚ್ಚಗಳು, ಇತರ ಸಮಗ್ರ ಆದಾಯ ಹಾಗೂ ಹೊಣೆಗಾರಿಕೆಗಳನ್ನು ಕೆ.ಇ.ಪಿ.ಜಿ.ಟಿ.ಯು ಒದಗಿಸಿರುವ ದರದಂತೆ ಲೆಕ್ಕಾಚಾರ ಮಾಡದೆ ವಾಸ್ತವಿಕ ಮೌಲ್ಯಮಾಪನ ವರದಿಯ ಪ್ರಕಾರ ಲೆಕ್ಕಕ್ಕೊಳಪಡಿಸುವಂತೆ ತಿಳಿಸಿದರು. ವಿದ್ಯುತ್ ಸರಬರಾಜು ಕಂಪನಿಗಳ ಉದ್ಯೋಗಿಗಳನ್ನು ಕವಿಪ್ರನಿನಿಯಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿಯೋಜನೆಗೊಂಡವರು ಎಂದು ಪರಿಗಣಿಸಲಾಗಿದೆ ಎಂದು ಕೆ.ಇ.ಪಿ.ಜಿ.ಟಿ. ಶಾಸನಬದ್ಧ ಲೆಕ್ಕಪರಿಶೋಧಕರಿಗೆ ತಿಳಿಸಿತು. ಇಂಜಿನಿಯರುಗಳ ಸಂಘವು ಉದ್ಯೋಗಿಗಳನ್ನು ಹೀಗೆ ಪರಿಗಣಿಸಿ ಪ್ರತ್ಯೇಕಿಸಿರುವ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಕವಿಪ್ರನಿನಿಯು ಸಲ್ಲಿಸಿದ್ದ ರಿಟ್ ಮನವಿಯನ್ನು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪೆಟಿಷನ್ ಸಂಖ್ಯೆ 27495/2022ಮೂಲಕ ದಿನಾಂಕ 18.10.2010ರಂದು ತಿರಸ್ಕರಿಸಿತು. ದಿನಾಂಕ 26.04.2011ರಂದು ನಡೆದ ನಿರ್ದೇಶಕ ಮಂಡಳಿಯ 78ನೆಯ ಸಭೆಯಲ್ಲಿ ಈ ತೀರ್ಪಿನ ವಿಷಯವನ್ನು ಮಂಡಿಸಲಾಯಿತು. ಕವಿಪ್ರನಿನಿಯಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿಯೋಜನೆಗೊಂಡ ಉದ್ಯೋಗಿಗಳೆಂದೇ ಪರಿಗಣಿಸಬೇಕೆಂದು ಸಭೆಯಲ್ಲಿದ್ದ ಸದಸ್ಯರ ಸಮ್ಮುಖದಲ್ಲಿ ನಿರ್ಣಯಿಸಲಾಯಿತು. ಆದ್ದರಿಂದ, ಸೇವಾ ಹೊಣೆಗಾರಿಕೆಯನ್ನು ಕಂಪನಿವಾರು ತೋರಿಸಲು ಆಗುವುದಿಲ್ಲ. ನ್ಯಾಸದಲ್ಲಿ ಹೊಂದಿರುವ ಯೋಜಿತ ಆಸ್ತಿಗಳು ದೀರ್ಘಾವಧಿಯ ಒಟ್ಟಾರೆ ಮೊಬಲಗಾಗಿದ್ದು, ಕಂಪನಿವಾರು ಪ್ರತ್ಯೇಕತೆಯನ್ನು ಹೊಂದಿಲ್ಲ. ಹೀಗಾಗಿ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಮಾನ ದರದ ವಂತಿಗೆಯನ್ನು ಅನ್ವಯಿಸಲಾಗುತ್ತಿದೆ. ನ್ಯಾಸವನ್ನು ರಚಿಸಿದಾಗಿನಿಂದಲೂ ಈ ಕಾರ್ಯಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿದೆ. ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಕಂಪನಿಗಳಿಂದ ಸಮಾನ ದರದ ವಂತಿಗೆಯನ್ನು ಸ್ವೀಕರಿಸಲು ವಾಸ್ತವಿಕ ಮೌಲ್ಯಮಾಪನವನ್ನು ಪ್ರಸ್ತಾಪಿಸಲಾಗಿದೆ ಎಂದು ಕೆ.ಇ.ಪಿ.ಜಿ.ಟಿಯು ಹೇಳಿಕೆ ನೀಡಿದೆ. ಕಂಪನಿವಾರು ಯೋಜಿತ ಆಸ್ತಿಗಳು, ವಿವರಿತ ಪ್ರಯೋಜನ ಹೊಣೆಗಾರಿಕೆ, ಕೊರತೆಗಳ ಅನುಪಸ್ಥಿತಿಯಲ್ಲಿ, ಕವಿಪ್ರನಿನಿಯನ್ನು ಗಮನದಲ್ಲಿಟ್ಟುಕೊಂಡು 2019–20ರ ಸಾಲಿಗೆ ಕಾಲ್ಪನಿಕ ದತ್ತಾಂಶದನ್ವಯ ವಾಸ್ತವಿಕ ಮೌಲ್ಯಮಾಪನವನ್ನು ಅನ್ವಯಿಸಿದರೂ, ಯಾವುದೇ ಉದ್ದೇಶದ ಸಾಧನೆಯಾಗುವುದಿಲ್ಲ. ಕವಿಪ್ರನಿನಿಯ ಲೆಕ್ಕಪುಸ್ತಕಗಳಲ್ಲಿ ಇದನ್ನೇ ಲೆಕ್ಕೀಕರಿಸುವುದರಿಂದ ಶಿಲ್ಕುಗಳ ತಪ್ಪು ನಿರೂಪಣೆಗೆ ಅವಕಾಶವಾಗುತ್ತದೆ. ಹೀಗಾಗಿ, ಕವಿಪ್ರನಿನಿಯು ಕಾಲ್ಪನಿಕ ಆಧಾರದನ್ವಯ ಲೆಕ್ಕೀಕರಣ ಮಾಡಲು ಸಾಧ್ಯವಿಲ್ಲ. 2019–20ರ ಸಾಲಿಗೆ, ಕಾಲ್ಪನಿಕ ದತ್ತಾಂಶವನ್ನು ಆಧರಿಸಿ ಸಿದ್ಧಪಡಿಸಿರುವ ಕವಿಪ್ರನಿನಿಯ ಸ್ವತಂತ್ರ ವಾಸ್ತವಿಕ ವರದಿಯ ಕರಡನ್ನು ಆಧರಿಸಿದ ಆಸ್ತಿಹೊಣೆಗಾರಿಕೆ ಪಟ್ಟಿಯಲ್ಲಿ ಪಿಂಚಣಿ ಸಂಬಂಧವಾದ ಹೊಣೆಗಾರಿಕೆ ಎಂದು ರೂ.1155.74 ಕೋಟಿಯನ್ನೂ, ಅನುದಾನ ಸಂಬಂಧವಾದ ಹೊಣೆಗಾರಿಕೆ ಎಂದು ರೂ.85.41ಕೋಟಿಯನ್ನು ಮಾನ್ಯಗೊಳಿಸಬೇಕೆಂದು ಶಾಸನಬದ್ಧ ಲೆಕ್ಕಪರಿಶೋಧಕರು ಉಲ್ಲೇಖಿಸಿದ್ದಾರೆ. ಕವಿಪ್ರನಿನಿಯು, ಕೆ.ಇ.ಪಿ.ಜಿ.ಟಿ.ಯು ಒದಗಿಸಿರುವ ವಂತಿಗೆ ದರವನ್ನು ಆಧರಿಸಿ, ಆ.ವ.2019–20ರ ಸಾಲಿಗೆ ರೂ.188.31 ಕೋಟಿಯನ್ನು(ರೂ.182.94 ಕೋಟಿ ಪ್ರಸಕ್ತ ವರ್ಷಕ್ಕೆ, ರೂ.5.36 ಕೋಟಿ ಹಿಂದಿನ ವರ್ಷಗಳಿಗೆ) ಹಿಂದಿನ ವರ್ಷಗಳಲ್ಲಿ ಆಚರಣೆಯಲ್ಲಿದ್ದ ಪದ್ಧತಿಯಂತೆ ಕವಿಪ್ರನಿನಿ ಲೆಕ್ಕಪದ್ಧತಿ ತತ್ವಗಳನುಸಾರ ಪಿಂಚಣಿ ಹಾಗೂ ಅನುದಾನದ ಪ್ರಯುಕ್ತ ಎಂದು ಲೆಕ್ಕಕ್ಕೊಳಪಡಿಸಿದ್ದು, ಇದು ಕಾಲ್ಪನಿಕ ದತ್ತಾಂಶವನ್ನು ಆಧರಿಸಿ ಕಲ್ಪಿಸುವ ಅವಕಾಶಕ್ಕಿಂತ ಹೆಚ್ಚು ಯುಕ್ತಾತೀತವಾಗಿದ್ದು, ನ್ಯಾಯೋಚಿತ ಚಿತ್ರಣವನ್ನು ನೀಡುತ್ತದೆ. ಕವಿಪ್ರನಿನಿ ಲೆಕ್ಕಪತ್ರಗಳ ಪ್ರಕಾರ, ದಿನಾಂಕ 31.03.2020ರಂದಿಗೆ ಪಿಂಚಣಿ ಹಾಗೂ ಅನುದಾನದ ಒಟ್ಟು ಹೊಣೆಗಾರಿಕೆ ರೂ.644.44 ಕೋಟಿ. ನ್ಯಾಸ ಹಕ್ಕುಪತ್ರದಲ್ಲಿ ನಮೂದಿಸಿರುವ ಗರಿಷ್ಠ ವಂತಿಗೆಗೆ ಸಂಬಂಧಿಸಿ, ಅಂದರೆ ಶೇ.27, ಹಿಂದಿನ ಸೇವೆಗೆ ಸಂಬಂಧಿಸಿದ ವಂತಿಗೆಯು ಉದ್ಯೋಗಿಯ ಹಿಂದಿನ ಸೇವೆಗಳ ಪ್ರತಿ ವರ್ಷದ ವೇತನದ ಶೇ.27ರ ಪ್ರಮಾಣವನ್ನು ಮೀರಿರಬಾರದು ಎಂದು ತಿಳಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳ ರಚನೆಯಾಗುವುದಕ್ಕೂ ಮುಂಚಿತವಾಗಿ, ಅಂದರೆ 2000 ಇಸವಿಯ ನವೆಂಬರ್ ತಿಂಗಳ 23ನೇ ದಿನಾಂಕದಂದು ನ್ಯಾಸ ಹಕ್ಕುಪತ್ರವನ್ನು ನಿರ್ವಹಣೆಗೊಳಿಸಲಾಯಿತು. ಇತ್ತೀಚಿನ ಹಿಂದಿನ ಅವಧಿಯಲ್ಲಿ ವಾಸ್ತವಿಕ ಮೌಲ್ಯೀಕರಣದ ಶೇಕಡಾ ಪ್ರಮಾಣವು ಹೆಚ್ಚಳಗೊಂಡಿರುವ ಕಾರಣ, ತದನುಸಾರವಾಗಿ ನ್ಯಾಸ ಹಕ್ಕುಪತ್ರವನ್ನು ಮಾರ್ಪಾಡುಗೊಳಿಸಬೇಕೆಂದು ನ್ಯಾಸವನ್ನು ಕೋರಲಾಗುವುದು.
(ii)	ಆರ್ಥಿಕ ವರ್ಷ 2019ರ ಮುಂದೂಡಿದ ಕೊರತೆಯ ಮೊತ್ತ ರೂ.436.71 ಕೋಟಿಗಳಷ್ಟು 2020–21ರ ಅವಧಿಯಲ್ಲಿ ವಿಸಕಂಗಳಿಂದ ಪ್ರಸರಣ ಶುಲ್ಕವೆಂದು ವಸೂಲು ಮಾಡಬೇಕಾದ ಮೊತ್ತವನ್ನು ಕ.ವಿ.ನಿ.ಆ ಜಕಾತಿ ಆದೇಶ 2020ರ ದಿನಾಂಕ: 04.011.2020 ರಲ್ಲಿ ಅನುಮೋದಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳು (ಭಾ.ಲೆ.ಮಾ) 114 ಮತ್ತು 115ರ ನಿಬಂಧನೆಗಳ ಪ್ರಕಾರ ಇದನ್ನು ನಿಯಂತ್ರಿತ ಮುಂದೂಡಿದ ಆಸ್ತಿ ಎಂದು ಲೆಕ್ಕಿಸಲಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	ಕ.ವಿ.ನಿ.ಆ ಯಿಂದ ಅನುಮೋದಿತ ಪ್ರಸರಣ ಶುಲ್ಕದ (19.42 ಪೈಸೆಗಳು ಪ್ರತಿ ಯೂನಿಟ್‌ಗೆ) ಮತ್ತು 2006–07 ರ ಅವಧಿಯಲ್ಲಿ ಎ.ಟಿ.ಇ ನ ಆದೇಶದ ದಿನಾಂಕ: 29.08.2006 (26.23 ಪೈಸೆಗಳು ಪ್ರತಿ ಯೂನಿಟ್‌ಗೆ) ದ ಅನ್ವಯ ತಾತ್ಕಾಲಿಕ ಆಧಾರದಲ್ಲಿ ಕವಿಪ್ರನಿನಿ ಯಿಂದ ಬಿಲ್ ಮಾಡಲಾದ ಪ್ರಸರಣ ಶುಲ್ಕದ ವ್ಯತ್ಯಾಸದ ಮೊತ್ತ ರೂ. 262.44 ಕೋಟಿಗಳನ್ನು ಕವಿಪ್ರನಿನಿ ಯು ಲೆಕ್ಕಕ್ಕೆ ತಗೆದುಕೊಂಡಿದೆ. ಕ.ವಿ.ನಿ.ಆ ವು ತನ್ನ ಆದೇಶದ ದಿನಾಂಕ:31.12.2007 ರಲ್ಲಿ ನಿರ್ಧರಿಸಿದ ಪ್ರಸರಣ ಜಕಾತಿಯನ್ನು ವಿದ್ಯುತ್ಚಕ್ತಿಮೇಲ್ಮನವಿ ಪ್ರಾಧಿಕಾರ, ನವದೆಹಲಿಗೆ ಕವಿಪ್ರನಿನಿಯಿಂದ ಮನವಿ ಮಾಡಲಾಗಿದೆ. ಆರ್ಥಿಕ ವರ್ಷ 2007ರ ಗೌರವಾನ್ವಿತ ಎ.ಟಿ.ಇ ಹೊರಡಿಸಿದ ಆದೇಶದಲ್ಲಿ ಟ್ರೂಯಿಂಗ್ ಅಪ್ ಪ್ರಕ್ರಿಯೆಯನ್ನು ಕೈಗೊಳ್ಳಲು ಕ.ವಿ.ನಿ.ಆ ಕ್ಕೆ ನಿರ್ದೇಶಿಸಿದೆ. ಕ.ವಿ.ನಿ.ಆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಎ.ಟಿ.ಇ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಆಧ್ಯತೆ ನೀಡಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 11.04.2018 ರ ಆದೇಶದ ಪ್ರಕಾರ ಮೇಲ್ಮನವಿಯನ್ನು ವಜಾಗೊಳಿಸಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಮನವಿಯನ್ನು ವಿಲೇವಾರಿ ಮಾಡಿದ ನಂತರ, ಮಾನ್ಯ ಎಟಿಇ ತನ್ನ ಆದೇಶದ ದಿನಾಂಕ: 05.10.2020 ರ ಪ್ರಕಾರ ದಿನಾಂಕ: 16.01.2020ರ ತನ್ನ ಆದೇಶದಲ್ಲಿ ಆಯೋಗವು ಅನುಮೋದಿಸಿದಂತೆ ಆರ್ಥಿಕ ವರ್ಷ 2006–07ರ ಕವಿಪ್ರನಿನಿ ಎಆರ್‌ಆರ್‌ನ್ನು ಟ್ರೂಯಿಂಗ್ ಅಪ್ ಪ್ರಕ್ರಿಯೆಯನ್ನು ಎತ್ತಿಹಿಡಿದಿದೆ. ಆರ್ಥಿಕ ವರ್ಷ 2006–07 ರ ಟ್ರೂಯಿಂಗ್ ಅಪ್ ಪ್ರಕ್ರಿಯೆಯ ಅವಧಿಯಲ್ಲಿ ಆದ ಆದಾಯ ಕೊರತೆ ರೂ.72.90 ಕೋಟಿಗಳನ್ನು ಕ.ವಿ.ನಿ.ಆ ವು ಅನುಮೋದಿಸಿದೆ ಮತ್ತು 2020–21 ರ ಅವಧಿಯಲ್ಲಿ ಸದರಿ ಮೊತ್ತವನ್ನು ವಸೂಲಿ ಮಾಡಲು ತನ್ನ ಜಕಾತಿ ಆದೇಶ 2020 ದಿನಾಂಕ: 04.11.2020 ರಲ್ಲಿ ನಿರ್ದೇಶಿಸಿದೆ. ಭಾ.ಲೆ.ಮಾ 10 ಮತ್ತು ಭಾ.ಲೆ.ಮಾ 115 ರ ನಿಬಂಧನೆಗಳ ಪ್ರಕಾರ ಪ್ರಸರಣ ಶುಲ್ಕಗಳನ್ನು ಕವಿಪ್ರನಿನಿಯು ರೂ.72.90 ಕೋಟಿಗಳನ್ನು 2019–20 ರಲ್ಲಿ ಲೆಕ್ಕಕ್ಕೆ ಪಡೆದಿದೆ ಹಾಗೂ ಹೊಣೆಗಾರಿಕೆ ಆ ಮಟ್ಟಿಗೆ ಹೊಣೆಗಾರಿಕೆಯನ್ನು ರೂ.189.54 ಕ್ಕೆ ತಗ್ಗಿಸಿ, ಅದನ್ನು ಮುಂಬರುವ ವರ್ಷಗಳಲ್ಲಿ ವಿಸಕಂಗಳಿಗೆ ಮರು ಪಾವತಿ ಮಾಡಲಾಗುವುದು. ಎ.ಜಿ.ಲೆಕ್ಕ ಪರಿಶೋಧಕರುತಮ್ಮ ಪೂರಕ ಲೆಕ್ಕಪರಿಶೋಧನೆ ಸಮಯದಲ್ಲಿ ರೂ.436.71 ಕೋಟಿ ಮತ್ತು ರೂ.72.90 ಕೋಟಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಕ್ಕಾಗಿ ಆಡಿಟ್ ಪ್ರಶ್ನೆ ಉದ್ಭವಿಸಿದೆ. ಎ.ಜಿ.ಲೆಕ್ಕ ಪರಿಶೋಧಕರ ವಿವಾದ ಏನೆಂದರೆ, ಭಾ.ಲೆ.ಮಾ ಗಳ 114 ರ ಪ್ರಕಾರ ಘಟಕವು(ಎ) ದರ–ನಿಯಂತ್ರಣ ಚಟುವಟಿಕೆಗಳನ್ನು ನಡೆಸಿದ್ದರೆ ಮಾತ್ರ ಮತ್ತು (ಬಿ)ಅದರ ಹಿಂದಿನ GAAP ಗೆ ಅನುಗುಣವಾಗಿ ಅದರ ಹಣಕಾಸಿನ ಹೇಳಿಕೆಗಳಲ್ಲಿ ನಿಯಂತ್ರಿತ ಮುಂದೂಡುವಿಕೆಯ ಖಾತೆಯ ಬಾಕಿಗೆ ಅರ್ಹತೆ ಪಡೆದ ಮೊತ್ತಗಳನ್ನು ಮಾತ್ರ ನಿಯಂತ್ರಣ ಸಮತೋಲನ ಮಾನದಂಡವನ್ನು ಅನುಸರಿಸಲು ಅನುಮತಿಸಲಾಗಿದೆ. ಮೇಲ್ಕಂಡ ಸಮಸ್ಯೆಯನ್ನುಕವಿಪ್ರನಿನಿಯ ಭಾ.ಲೆ.ಮಾಗಳ ಸಮಾಲೋಚಕರೊಂದಿಗೆ ಚರ್ಚಿಸಿ, ಭಾ.ಲೆ.ಮಾಗಳ 114 ಮತ್ತು 115ರ ನಿಬಂಧನೆಗಳನ್ನು ಆಧರಿಸಿ ಆ ಪ್ರಶ್ನೆಗಳಿಗೆ ಪ್ರತ್ಯುತ್ತರಗಳ ಕರಡು ಮಾಡುವಂತೆ ಕೋರಲಾಗಿದೆ. ಭಾ.ಲೆ.ಮಾ ಗಳ ಸಮಾಲೋಚಕರು ಆಡಿಟ್ ಪ್ರಶ್ನೆಗಳಿಗೆ ಭಾ.ಲೆ.ಮಾಗಳ 114 ಮತ್ತು 115ರ ನಿಬಂಧನೆಗಳನ್ನು ಆಧರಿಸಿ ವಿವರವಾಗಿ ಉತ್ತರವನ್ನು ಒದಗಿಸಿದ್ದಾರೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಎ.ಜಿ ಕಛೇರಿಯವರು ಪ್ರತ್ಯುತ್ತರಗಳನ್ನು ಎ.ಜಿ.ಕಛೇರಿಯ ತಾಂತ್ರಿಕ ಕೋಶದ ಮುಂದೆ ಅಭಿಪ್ರಾಯಕ್ಕಾಗಿ ಇರಿಸಿದ್ದಾರೆ. ತಾಂತ್ರಿಕ ಕೋಶ, ಎ.ಜಿ ಕಛೇರಿಯವರು ವ್ಯಕ್ತಪಡಿಸಿದ ಅಭಿಪ್ರಾಯವನ್ನಾಧಿರಿಸಿ, ಎ.ಜಿ ಕಛೇರಿ ಕವಿಪ್ರನಿನಿಗೆ ರೂ.436.71 ಕೋಟಿ ಮೊತ್ತದ ಕೊರತೆಗೆ ಸಂಬಂಧಿಸಿದಂತೆ ನಿಯಂತ್ರಿತ ಆದಾಯವನ್ನುಹಿಂತೆಗೆದುಕೊಳ್ಳುವಂತೆ ಸೂಚಿಸಿ, ಆರ್ಥಿಕ ವರ್ಷ 2006–07 ರಲ್ಲಿ ಕಂಡುಬಂದ ಕೊರತೆಯ ರೂ.72.9 ಕೋಟಿ ಮತ್ತು ಸಂಬಂಧಿಸಿದ ಲೆಕ್ಕ ಪದ್ದತಿಗಳು ಮತ್ತು ಕವಿಪ್ರನಿನಿಯ ಲೆಕ್ಕ ಪತ್ರಗಳಪರಿಷ್ಕರಿಸಲು ಅದರ ಹಿಂದಿನ GAAP ಗೆ ಅನುಗುಣವಾಗಿ ತನ್ನ ಹಣಕಾಸಿನ ಹೇಳಿಕೆಗಳಲ್ಲಿ ನಿಯಂತ್ರಿತ ಮುಂದೂಡಿಕೆ ಖಾತೆ ಬಾಕಿ ಎಂದು ಅರ್ಹತೆ ಪಡೆದ ಮೊತ್ತವನ್ನು ಗುರುತಿಸುತ್ತಿಲ್ಲ. ಇದರ ಪ್ರಕಾರ ಕವಿಪ್ರನಿನಿ ಆರ್ಥಿ ವರ್ಷ 2019 ರ ನಿಯಂತ್ರಿತ ಆದಾಯಕ್ಕೆ ಸಂಬಂಧಿಸಿದ ಕೊರತೆಯನ್ನು ಹಿಂಪಡೆಯಲಾದ ಮೊತ್ತ ರೂ.436.71 ಕೋಟಿಗಳು ಮತ್ತು ಆರ್ಥಿಕ ವರ್ಷ 2006–07 ರಲ್ಲಿ ಪತ್ತೆಯಾದ ಟ್ರೂಯಿಂಗ್ ಅಪ್‌ಕೊರತೆಯ ಮೊತ್ತ ರೂ.72.90 ಕೋಟಿಗಳು ಹಾಗೂ ಅದನ್ನು ಕಂಟಿನ್ಜೆಂಟ್ ಆಸ್ತಿಯೆಂದು ತೋರಿಸಲಾಗಿದೆ.
(iii)	ಹಿಂದಿನ ಅವಧಿಯ ಲೋಪದೋಶಗಳಿಗೆ ಸಂಬಂಧಿಸಿದಂತೆ, ಕಂಪನಿಯು ಭಾ.ಲೆ.ಪ.ತತ್ವ. 8ರನ್ವಯ ಹೊಸ ಕಾರ್ಯನೀತಿಗಳನ್ನು ರೂಪಿಸಿ, ಅದರ ಅನುಸಾರ ಅಗತ್ಯ ಬದಲಾವಣೆ/ಕ್ರಮಗಳನ್ನು ಕೈಗೊಂಡಿದೆ. ಹಿಂದಿನ ಎಲ್ಲಾ ಅವಧಿಗಳಲಿನ ಲೋಪದೋಶಗಳ ಸಂಬಂಧವಾಗಿ ಮಾಡಿರುವ ಹೊಂದಾಣಿಕೆ ಹಾಗೂ ವಿವರಗಳನ್ನು ಟಿಪ್ಪಣಿ ಸಂಖ್ಯೆ 37.37ರಲ್ಲಿ ಪ್ರಕಟಿಸಿದೆ. ಮುಂದುವರಿಸಿ, ಎಂಸಿ.ಎ. ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.111(ಇ) ದಿನಾಂಕ 16.02.2015ರ ಸಾಮಾನ್ಯ ಸೂಚನೆ(2)ರ ಪ್ರಕಾರ ಭೌತಿಕ ಅಂಶಗಳಿಗೆ ಮಾತ್ರ ಭಾರತೀಯ ಲೆಕ್ಕಪದ್ಧತಿ ತತ್ವಗಳನ್ನು ಅನ್ವಯಿಸತಕ್ಕದ್ದು. ಹಿಂದಿನ ಅವಧಿಗಳ ಲೋಪದೋಶಗಳ ಹೊಂದಾಣಿಕೆಗೆ ಸಂಬಂಧಿಸಿ, ಕಂಪನಿಯು ಭಾ.ಲೆ.ಪ. ತತ್ವ.8ರ ಎಲ್ಲ ಅಗತ್ಯತೆಗಳನ್ನು ಭೌತಿಕವಾಗಿ ಅನ್ವಯಿಸಿದೆ.
(iv)	ಫೈಬರ್ ಆಪ್ಟಿಕ್ ಕೇಬಲ್ಲುಗಳನ್ನು ಗುರುತಿಸಿ ಮರುವರ್ಗೀಕರಿಸಿ, ಕೇಂ.ವಿ.ನಿ.ಆಯೋಗದ ಅಧಿಸೂಚನೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ಲೆಕ್ಕಕ್ಕೊಳಪಡಿಸುವಂತೆ ದಿನಾಂಕ 12.12.2017ರಂದು ಲೆಕ್ಕ ಘಟಕಗಳಿಗೆ ಸೂಚನೆಗಳನ್ನು ನೀಡಲಾಗಿದೆ. ತದನುಸಾರವಾಗಿ 2019–20ರವರೆಗೆ ರೂ.26.03 ಕೋಟಿ ಮೌಲ್ಯದ ಫೈಬರ್ ಆಪ್ಟಿಕ್ ಕೇಬಲ್ಲುಗಳನ್ನು ಗುರುತಿಸಿ ಲೆಕ್ಕಕ್ಕೊಳಪಡಿಸಲಾಗಿದೆ. ಬಹುತೇಕ ಲೆಕ್ಕಘಟಕಗಳು, ಅವರವರ ವ್ಯಾಪ್ತಿಯಲ್ಲಿನ ಫೈಬರ್ ಆಪ್ಟಿಕ್ ಕೇಬಲನ್ನು ಗುರುತಿಸಿ ಮರುವರ್ಗೀಕರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.
(v)	ಆಸ್ತಿಗಳ ಮೂಲ ಬೆಲೆಯನ್ನು ಗೊತ್ತುಪಡಿಸಿಕೊಳ್ಳುವುದಕ್ಕೆ ಹಾಗೂ ಒಂದು ನಿರ್ದಿಷ್ಟ ಆಸ್ತಿಯನ್ನು ಕಾರ್ಯಕ್ಷೇತ್ರದಲ್ಲಿ ಕಳಚಿ ಉಗ್ರಾಣದಲ್ಲಿ ಇರಿಸಿದಾಗ ಸಂಚಿತ ಸವಕಳಿಯನ್ನೂ ಗೊತ್ತುಪಡಿಸಿಕೊಳ್ಳುವುದಕ್ಕೆ ಕಾರ್ಯತಃ ತೊಂದರೆಗಳಿರುವುದರಿಂದ, ಕಾರ್ಯವಿಮುಕ್ತಿಗೊಳಿಸಿದ ಆಸ್ತಿಗಳನ್ನು ಇಳಿತಗೊಳಿಸಿದ ಮೌಲ್ಯದಲ್ಲಿ ಲೆಕ್ಕಕ್ಕೊಳಪಡಿಸಲಾಗುತ್ತದೆ, ತದನಂತರದಲ್ಲಿ ಇಳಿತಗೊಳಿಸಿದ ದರದಲ್ಲೇ ಮರುಬಳಕೆ ಮಾಡಲಾಗುತ್ತದೆ. ಹಿಂದಿನ ಮಾತೃಸಂಸ್ಥೆ ಕ.ವಿ.ಮಂಡಳಿ ಇದ್ದಾಗಿನಿಂದಲೂ ಇದೇ ವಿಧಾನವನ್ನು ನಿರಂತರವಾಗಿ ಅನುಸರಿಸಲಾಗುತ್ತಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
(vi)	ಎಂಸಿ.ಎ. ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.111(ಇ) ದಿನಾಂಕ 16.02.2015ರ ಸಾಮಾನ್ಯ ಸೂಚನೆ(2)ರ ಪ್ರಕಾರ ಭೌತಿಕ ಅಂಶಗಳಿಗೆ ಮಾತ್ರ ಭಾರತೀಯ ಲೆಕ್ಕಪದ್ಧತಿ ತತ್ವಗಳನ್ನು ಅನ್ವಯಿಸತಕ್ಕದ್ದು. ಕಾರ್ಯತಃ ತೊಂದರೆಗಳ ಕಾರಣ, ಸಲಹಾ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ತಪಾಸಣಾ ಶುಲ್ಕಗಳು, ಅರ್ಥ್‌ಮ್ಯಾಟ್ ವಿನ್ಯಾಸದ ಶುಲ್ಕಗಳು ಮತ್ತು ಮಂಟಪ ಕೀಪರ್ ಶುಲ್ಕಗಳನ್ನು ಮುಂಗಡವಾಗಿ ವಸೂಲಿ ಮಾಡಲಾಗಿದೆಹಾಗೂ ಲೆಕ್ಕ ಪದ್ಧತಿ ನೀತಿ ಅನ್ವಯ ನಗದು ಆಧಾರದಲ್ಲಿ ಸ್ವೀಕೃತಿ ಆದಾಗ ಆದಾಯ ಎಂದು ಲೆಕ್ಕೀಕರಿಸಲಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಆರ್ಥಿಕ ವರ್ಷ ಮುಗಿಯುವ ಮುಂಚಿತವಾಗಿ ಸೇವೆಯನ್ನು ಒದಗಿಸಲಾಗಿರುತ್ತದೆ. ಹೀಗಾಗಿ, ಕಂಪನಿಯ ಸ್ವರೂಪ ಮತ್ತು ಗಾತ್ರಕ್ಕೆ ಸಂಬಂಧಿಸಿದಂತೆ, ಸದರಿ ಶುಲ್ಕಗಳನ್ನು ನಗದು ಆಧಾರದಲ್ಲಿ ಲೆಕ್ಕಕ್ಕೊಳಪಡಿಸುವುದು ಭೌತಿಕವಲ್ಲ, ಹಾಗೂ ಕವಿಪ್ರನಿನಿಯ ಒಟ್ಟಾರೆ ಆದಾಯಕ್ಕೆ ಹೋಲಿಸಿದಲ್ಲಿ ಲೆಕ್ಕಗಳ ಮೇಲೆ ಅಂತಹ ಭೌತಿಕ ಪರಿಣಾಮವೇನೂ ಇಲ್ಲ.
(vii)	ಕವಿಪ್ರನಿನಿಯು, ಸಾಲ ಪಡೆಯುವಿಕೆಯ ವೆಚ್ಚವನ್ನು ಬಂಡವಾಳೀಕರಿಸಲು ಕರಾರುಬದ್ಧ ಬಡ್ಡಿ ದರವನ್ನು ಅನ್ವಯಿಸುತ್ತಿದೆ. ಕಪಿಪ್ರನಿನಿಯ ಪ್ರಕರಣದಲ್ಲಿ, ವ್ಯವಹರಣೆಯ ವೆಚ್ಚವಿದ್ದಾಗ, ಇ.ಐ.ಆರ್.ದರವು ಕರಾರುಬದ್ಧ ಬಡ್ಡೀ ದರಕ್ಕಿಂತ ಭಿನ್ನವಾಗಿರುತ್ತದೆ. ವ್ಯವಹರಣೆಯ ವೆಚ್ಚ ಎಂದರೆ, ಸಾಲ ಪಡೆಯಲು ತಗಲುವ ವೆಚ್ಚ. ಒಂದು ವೇಳೆ ಸಾಲದಲ್ಲಿ ವ್ಯವಹರಣೆಯ ವೆಚ್ಚವಿದ್ದರೆ, ಕವಿಪ್ರನಿನಿಯು ಇ.ಐ.ಆರ್.ದರವನ್ನು ಲೆಕ್ಕಾಚಾರ ಮಾಡಬೇಕಾಗುತ್ತದೆ. ಇಲದೆಹೋದಲ್ಲಿ, ಇ.ಐ.ಆರ್.ದರವು ಕರಾರುಬದ್ಧ ಬಡ್ಡಿ ದರಕ್ಕೆ ಸಮಾನವಾಗಿರುತ್ತದೆ. ಸಾಲ ಪಡೆಯುವಿಕೆಯ ವೆಚ್ಚದ ಲೆಕ್ಕಾಚಾರದ ಉದ್ದೇಶಕ್ಕಾಗಿ ಇ.ಐ.ಆರ್.ದರವನ್ನು ಪರಿಗಣಿಸಬೇಕಾಗುತ್ತದೆ. ಸಾಲ ಪಡೆಯಲು ಭರಿಸಿದ ವೆಚ್ಚವು ಭೌತಿಕವಾಗಿರದ ಕಾರಣ, ಕವಿಪ್ರನಿನಿಯ ಪ್ರಕರಣದಲ್ಲಿ ಕರಾರುಬದ್ಧ ಬಡ್ಡಿ ದರವು ಇ.ಐ.ಅರ್.ದರಕ್ಕೆ ಸಮನಾಗಿದೆ. ಹೀಗಾಗಿ ಕವಿಪ್ರನಿನಿಯು ತೆಗೆದುಕೊಂಡಿರುವ ಕ್ರಮವು ನಿಯಮಬದ್ಧವಾಗಿದೆ.
(viii)	ಕವಿಪ್ರನಿನಿಯ ಪ್ರಕರಣದಲ್ಲಿ, ಇತರ ಸಮಗ್ರ ಆದಾಯದ ಉಪಾಂಗಗಳು ವಿವರಿತ ಯೋಜನೆ ಪ್ರಯೋಜನೆಗಳ (ಭಾ.ಲೆ.ಪ.ತತ್ವ 19, ಸಿಬ್ಬಂದಿ ಸೌಲಭ್ಯ) ಪುನರ್ ಅಳತೆಯನ್ನು ಮಾತ್ರ ಒಳಗೊಂಡಿವೆ. ಕಂಪನಿಯು ತನ್ನ ವಿವರಿತ ಯೋಜನೆಗಳ ಪ್ರಯೋಜನದ ವಾಸ್ತವಿಕ ಮೌಲ್ಯೀಕರಣವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಲಿದೆ. ಕರ್ನಾಟಕ ಸರ್ಕಾರವು ಆದೇಶವೊಂದನ್ನು (ಆದೇಶ ಸಂಖ್ಯೆ ಎಇ 34 ಪಿಇಎನ್ 2018, ಬೆಂಗಳೂರು ದಿನಾಂಕ 23.06.2018) ಹೊರಡಿಸಿದೆ, ದಿನಾಂಕ 01.04.2018ರಿಂದ ಜಾರಿಗೆ ಬರುವಂತೆ ಎನ್.ಡಿ.ಸಿ.ಪಿ.ಎಸ್. ಯೋಜನೆಯನ್ನು ಮಾರ್ಪಾಡುಗೊಳಿಸಿ, ಎನ್.ಡಿ.ಸಿ.ಪಿ.ಎಸ್. ಯೋಜನೆಯಲ್ಲಿ ಒಳಪಟ್ಟಿರುವ ಉದ್ಯೋಗಿಗಳಿಗೆ ಇರುವ ಹಾಲಿ ಸೌಲಭ್ಯಗಳ ಜೊತೆ ನಿವೃತ್ತ ಉದ್ಯೋಗಿಗಳಿಗೆ / ಎನ್.ಡಿ.ಸಿ.ಪಿ.ಎಸ್. ಯೋಜನೆಯಲ್ಲಿ ಒಳಪಟ್ಟಿದ್ದ ಮರಣ ಹೊಂದಿದ ಉದ್ಯೋಗಿಗಗಳ ಪ್ರಕರಣದಲ್ಲಿ ಗರಿಷ್ಠ ರೂ.20 ಲಕ್ಷದ ಅನುದಾನದ ಅರ್ಹತೆಯನ್ನು ಒದಗಿಸಿತು. ಕರ್ನಾಟಕ ಸರ್ಕಾರದ ಈ ಆದೇಶವನ್ನು ಅಳವಡಿಸಿಕೊಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಸೆಪ್ಟೆಂಬರ್ 9, 2020 ರಂದು ನಡೆದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಈ ಯೋಜನೆಯನ್ನು ಮಂಡಿಸಲಾಯಿತು. ನಿಯಮಾನುಸರಣೆ/ಕಾರ್ಯನಿರ್ವಹಣಾ ಪದ್ಧತಿಯ ಪೂರ್ಣಗೊಳುವಿಕೆಯು ಬಾಕಿ ಇದ್ದಂತೆ, ಭಾರತೀಯ ಜೀವವಿಮಾ ನಿಗಮವು ಸಲ್ಲಿಸಿರುವ ತಾತ್ಕಾಲಿಕ ಮೌಲ್ಯೀಕರಣವನ್ನು ಆಧರಿಸಿ, ರೂ.147.51ಕೋಟಿ ಮೊಬಲಗನ್ನು ಅನುದಾನದ ಪ್ರಯುಕ್ತ ಅವಕಾಶ ಕಲ್ಪಿಸಲಾಗಿದೆ. ಕವಿಪ್ರನಿನಿಯು ಕರ್ನಾಟಕ ಸರ್ಕಾರದ ಆದೇಶವನ್ನು ಆಳವಡಿಸಿಕೊಳುವುದರಿಂದ, ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಆಧರಿಸಿ, ಇರಬಹುದಾದ ಯಾವುದೇ ವ್ಯತ್ಯಾಸವನ್ನು ಆ.ವ.2020–21ರಲ್ಲಿ ಲೆಕ್ಕಕ್ಕೊಳಪಡಿಸಲಾಗುವುದು. ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಸ್ವೀಕರಿಸಿದ ಕೂಡಲೇ ಕಂಪನಿಯು ಇತರ ಸಮಗ್ರ ಆದಾಯವನ್ನು ಲೆಕ್ಕಕ್ಕೊಳಪಡಿಸುತ್ತದೆ.
(ix)	ಭಾ.ಲೆ.ಮಾ7 ರ"ನಗದು ಹರಿವಿನ ಪಟ್ಟಿ"ಯಲ್ಲಿರುವಂತೆ ಕಂಪನಿಯು ಆಸ್ತಿ, ಪರೋಕ್ಷ ವಿಧಾನದ ಅಡಿಯಲ್ಲಿ "ನಗದು ಹರಿವಿನ ಪಟ್ಟಿ" ಯನ್ನು ಸಿದ್ಧಪಡಿಸಲಾಗಿದೆ. ಆಸ್ತಿ, ಸ್ಥಾವರ ಹಾಗೂ ಯಂತ್ರೋಪಕರಣ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಸಾಲಗಳು, ಅಸುರಕ್ಷಿತಸಾಲಗಳು ಇತ್ಯಾದಿಗಳ ಎಲ್ಲಾ ಬದಲಾವಣೆಗಳನ್ನು ಕಂಪನಿಯು ಬಹಿರಂಗಪಡಿಸಿದೆ.
(x)	ಆಯವ್ಯಯ ಪಟ್ಟಿ ದಿನಾಂಕದೊಂದಿಗೆ ದುರ್ಬಲಗೊಳಿಸುವುದು ಅಥವಾ ಇಳಿತಗೊಳಿಸುವುದರ ಸೂಚಕವು ಇದ್ದಲ್ಲಿ ಮಾತ್ರ ದುರ್ಬಲಗೊಳಿಸುವಿಕೆ ಅಥವಾ ಇಳಿತಗೊಳಿಸುವಿಕೆಯ ಅಗತ್ಯವಿರುತ್ತದೆ ಎಂದು ಭಾ.ಲೆ.ಪ.ತತ್ವ 36 ಸ್ಪಷ್ಟಪಡಿಸುತ್ತದೆ. ಕವಿಪ್ರನಿನಿಯು ಒಂದು ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ಪ್ರಸರಣೆಯ ಸಂಬಂಧವಾದ ಎಲ್ಲಾ ಯಂತ್ರೋಪಕರಣಗಳು ವಿದ್ಯುತ್ ಪ್ರಸರಣೆಯ ಚಟುವಟಿಕೆಯನ್ನು ನಿರ್ವಹಿಸಲು ಇಡೀ ವರ್ಷ ಬಳಕೆಯೋಗ್ಯ ಸ್ಥಿತಿಯಲ್ಲಿರಬೇಕಾಗಿರುತ್ತದೆ. ಪ್ರಸರಣ ಉಪಕರಣಗಳ ದುರ್ಬಲಗೊಳ್ಳುವಿಕೆಯ ಪ್ರಸಂಗಗಳು ಉದ್ಭವಿಸದಿರಬಹುದು. ಆದರೂ, ಭಾ.ಲೆ.ಪ.ತತ್ವ36ರಲ್ಲಿ ತಿಳಿಸಿರುವಂತೆ, ಕಂಪನಿಯು ಬಾಹ್ಯ ಹಾಗೂ ಒಳ ಸೂಚಕಗಳ ಪೂರ್ವಭಾವಿ ನಿರ್ಧರಣವನ್ನು ಕೈಗೊಂಡಿದ್ದು, ಯಾವುದೇ ಸೂಚಕಗಳು ಪೂರ್ವಭಾವಿ ನಿರ್ಧರಣದ ಪ್ರಕಾರ ದುರ್ಬಲವೆಂದು ಕಂಡುಬಂದಿಲ್ಲ. ಅಂತಹ ದುರ್ಬಲ ಸೂಚಕಗಳು ಇಲ್ಲದಿರುವುದರಿಂದ, ಕಂಪನಿಯು ಆಯವ್ಯಯ ಪಟ್ಟಿಯ ದಿನಾಂಕದಂದಿಗೆ ದುರ್ಬಲಗೊಳಿಸುವಿಕೆಯ ಮಾನ್ಯಗೊಳಿಸಿಲ್ಲ. ಮುಂದಿನ ವರ್ಷಗಳಲ್ಲಿ ದುರ್ಬಲ ಸೂಚಕಗಳು ಇವೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿವರವಾದ ಕಾರ್ಯಪ್ರಕ್ರಿಯೆಯ ಪ್ರಯತ್ನವನ್ನು ಮಾಡಲಾಗುವುದು. ಮುಂಬರುವ ವರ್ಷಗಳಲ್ಲಿ ಈ ಸೂಚಕಗಳು ದುರ್ಬಲವೆಂದು ಕಂಡುಬಂದಲ್ಲಿ, ಕಂಪನಿಯು ಅಂತಹವುಗಳ ಬಗ್ಗೆ ವಿವರವಾದ ದುರ್ಬಲತೆಯ ಲೆಕ್ಕಾಚಾರವನ್ನು ಮಾಡುತ್ತದೆ.
(xi)	ಕಂಪನಿಯ ಬಹುತೇಕ ಭೂಮಿಯನ್ನು ಈಗಾಗಲೇ ಭೋಗ್ಯಕ್ಕೆ ಹೊಂದಿರುವ/ಉಚಿತವಾಗಿ ಹೊಂದಿರುವ ಭೂಮಿ ಎಂದು ಪುನರ್ ವರ್ಗೀಕರಿಸಲಾಗಿದೆ. ಭೂಮಿಯ ಸಂಬಂಧವಾಗಿ ಲೆಕ್ಕಪುಸ್ತಕಗಳಲ್ಲಿ ಹೆಚ್ಚುವರಿ ಭೂಮಿಯ ಸೇರ್ಪಡೆ ಆಗಿದೆಯೇ, ಎಂಬುದನ್ನು ಪರಿಶೀಲಿಸಲು ಕೇಂದ್ರ ಕಚೇರಿಯು ಲೆಕ್ಕಪಟಕಗಳಿಂದ ಭೂ ಸಂಬಂಧಿತ ದಾಖಲೆಗಳನ್ನು ಪಡೆದುಕೊಳ್ಳುತ್ತಿದೆ. ಭೋಗ್ಯಕ್ಕೆ ಹೊಂದಿರುವ/ಉಚಿತವಾಗಿ ಹೊಂದಿರುವ ಭೂಮಿಗಳ ವರ್ಗೀಕರಣವು ನಿಖರವಾಗಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುತ್ತಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
(xii)	ಉಚಿತವಾಗಿ ಹೊಂದಿರುವ ಭೂಮಿಯನ್ನು ಲೆಕ್ಕೀಕರಿಸುವ ಬಗ್ಗೆ ಕಾರ್ಯನೀತಿಯೊಂದನ್ನು ರೂಪಿಸಲಾಗಿದೆ. ಭೂಮಿಯ ವಿವರಗಳನ್ನು ಪರಿಶೀಲಿಸಲಾಗುವುದು ಹಾಗೂ ಆ.ವ.2020–21ರಲ್ಲಿ ಅಂತಹ ಭೂಮಿಗಳನ್ನು ಲೆಕ್ಕಕ್ಕೊಳಪಡಿಸುವ ಪ್ರಕ್ರಿಯೆಯ ಮಾರ್ಗದರ್ಶಕವನ್ನು ಲೆಕ್ಕಘಟಕಗಳಿಗೆ ವಿತರಿಸಲಾಗುವುದು.
(xiii)	ನಿರಂತರ ಜ್ಯೋತಿ ಯೋಜನೆಯನ್ನು ಪಾಲಿಸುವುದು ವಿತರಣ ಕಂಪನಿಗಳ ಹೊಣೆಗಾರಿಕೆಯಾಗಿದೆ. ವಿತರಣ ಕಂಪನಿಗಳು ಈ ಯೋಜನೆಯನ್ನು ಪೂರ್ಣಗೊಳಿಸಲು ಕವಿಪ್ರನಿನಿಯು ತನ್ನ ವಿದ್ಯುತ್ ಕೇಂದ್ರಗಳಲ್ಲಿ ಕೆಲವು ಯಂತ್ರೋಪಕರನ ಸಲಕರಣೆಗಾ ಸೌಲಭ್ಯವನ್ನು ಒದಗಿಸಿದೆ. ಈ ಯೋಜನೆಯ ನಿಮಿತ್ತ ಕವಿಪ್ರನಿನಿಯು ಭರಿಸಿರುವ ವೆಚ್ಚದ ಮಾಹಿತಿಯು, ಕ್ಸ್ವಿಪ್ರನಿನಿಯ ಆಯಾ ಲೆಕ್ಕ ಘಟಕಗಳಲ್ಲಿ ನಿರ್ವಹಿಸುತ್ತಿರುವ ವೆಚ್ಚ ನಮೂದು ಪುಸ್ತಕದಲ್ಲಿ ಲಭ್ಯವಿದೆ. ಕವಿಪ್ರನಿನಿಯು ಭರಿಸಿರುವ ವೆಚ್ಚವನ್ನು ಹಿಂಪಾವತಿಸುವಂತೆ ವಿದ್ಯುತ್ ಸರಬರಾಜು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಪತ್ರವನ್ನು ಬರೆಯಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿಕ್ರಯಿಸಬೇಕಿದೆ. ಸದರಿ ಯೋಜನೆಯ ಎಲ್ಲಾ ಲಭ್ಯ ಮಾಹಿತಿಗಳನ್ನು ಕಂಪನಿಯು ಒದಗಿಸಿದೆ. "ಕಂಪನಿಯು ಸಾಕಷ್ಟು ಪ್ರಮಾಣದ ಮಾಹಿತಿಗಳನ್ನು ಒದಗಿಸಿಲ್ಲ, ಹೀಗಾಗಿ ನಾವು ಯೋಜನೆಯ ನಿಖರತೆ ಅಥವಾ ಪರಿಪೂರ್ಣತೆಯನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ ಹಾಗೂ ಭಾ.ಲೆ.ಪ.ತತ್ವದ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರಬಹುದಾದ ತತ್ಪರಿಣಾಮವನ್ನು ಅಂಗೀಕರಿಸಲು ಅಸಾಧ್ಯ " ಎಂದು ಲೆಕ್ಕಪರಿಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
(xiv)	ನಿಗಮದ ಅನುಮೋದನೆಯೊಂದಿಗೆ ಸ್ವ ನಿರ್ವಹಣಾ ಕಾಮಗಾರಿಗಳನ್ನು ಗ್ರಾಹಕರೇ ಕೈಗೊಂಡಿದ್ದು, ಕಾಮಗಾರಿಯು ಅನುಷ್ಠಾನಗೊಂಡ ನಂತರ, ಜಂಟಿ ತಪಶೀಲು ಪರಿಶೀಲನೆ ಕಾರ್ಯದ ನಂತರ ಆ ಆಸ್ತಿಯನ್ನು ನಿಗಮದ ಸ್ವಾಧೀನಕ್ಕೆ ಹಸ್ತಾಂತರಿಸುತ್ತಾರೆ. ಕಾರ್ಯಾನುಷ್ಠಾನಗೊಂಡ ಆಸ್ತಿಯ ಜಂಟಿ ತಪಶೀಲು ಪರಿಶೀಲನೆ ಹಾಗೂ ವರ್ಗೀಕರಣವನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಪ್ರಕ್ರಿಯೆಯನ್ನು ಕವಿಪ್ರನಿನಿ/ಬಿ19/245/85–86, ದಿನಾಂಕ 30.11.2019ರಂದು ಆದೇಶಿಸಲಾಯಿತು. ತದನುಸಾರವಾಗಿ, ರೂ.337.24 ಕೋಟಿ ಮೌಲ್ಯದ ಸ್ವ ನಿ. ಕಾಮಗಾರಿ ಹಾಗೂ ಡಿಸಿ ಕಾಮಗಾರಿಗಳನ್ನು 2019–20ರಲ್ಲಿ ಬಂಡವಾಳೀಕರಿಸಲಾಯಿತು. ಕವಿಪ್ರನಿನಿಯು, ಸ್ಥಿರಾಸ್ತಿ ಲೆಕ್ಕವನ್ನು ಡೆಬಿಟ್ ಮಾಡಿ, ಗ್ರಾಹಕರ ಕೊಡುಗೆಯ ವಂತಿಗೆಯನ್ನು ಬಂಡವಾಳ ಆಸ್ತಿಗಳ ವೆಚ್ಚವೆಂದು ಕ್ರೆಡಿಟ್ ಮಾಡುವ ಮೂಲಕ ಅಂತಹ ಆಸ್ತಿಗಳನ್ನು ತನ್ನ ಲೆಕ್ಕಪುಸ್ತಕಗಳಲ್ಲಿ ವರ್ಗೀಕರಿಸಿತು. ಅಂತಹ ಬಂಡವಾಳ ಆಸ್ತಿ ವೆಚ್ಚದ ಪ್ರಯುಕ್ತದ ಗ್ರಾಹಕ ಕೊಡುಗೆಯ ವಂತಿಗೆಯನ್ನು ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, ಪ್ರಸಕ್ತದ್ದಲ್ಲದ ಹೊಣೆಗಾರಿಕೆಯ ಅಡಿ ಗುರುತಿಸಿ, ಗ್ರಾಹಕ ಕೊಡುಗೆ ವಂತಿಗೆಯಿಂದ ಪಡೆದ ಅಂತಹ ಆಸ್ತಿಗಳಿಗೆ ಅದೇ ವರ್ಷದಲ್ಲಿ ಸವಕಳಿಯನ್ನು ವಿಧಿಸುವುದರಿಂದ ತದನಂತರದಲ್ಲಿ ಅದೇ ಪ್ರಮಾಣದಲ್ಲಿ ಆದಯವೆಂದು ಹೊಂದಾಣಿಕೆ ಮಾಡಲ್ಪಡುತ್ತದೆ. ಕಂಪನಿಯು ಅನುಸರಿಸುತ್ತಿರುವ ಈ ಪ್ರಕ್ರಿಯೆಯು ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರ ಇದೆ ಎಂದು ಕವಿಪ್ರನಿನಿಯ ಭಾ.ಎ.ಪ.ತತ್ವ ಸಮಾಲೋಚಕರು ಅಭಿಪ್ರಾಯಿಸಿದ್ದಾರೆ. ಆದ್ದರಿಂದ, ಸ್ವ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ನಿರ್ವಹಣ ಕಾಮಗಾರಿಯಿಂದ ರಚಿಸಲ್ಪಟ್ಟ ಅಂತಹ ಆಸ್ತಿಗಳ ಋಣಮುಕ್ತತೆಯು ಸಹ ಸಮಂಜಸವಾಗಿದೆ. ಅಲ್ಲದೆ, ಈ ವ್ಯವಹರಣೆಗಳು ಲಾಭ ಮತ್ತು ನಷ್ಟದ ಲೆಕ್ಕದ ಮೇಲೆ ಪರಿಣಾಮ ಬೀರುವುದಿಲ್ಲ. ಕವಿಪ್ರನಿನಿಯ ಹಾಲಿ ಮೂಲಸೌಕರ್ಯಗಳನ್ನು ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಒದಗಿಸಿರುವೆಡೆ, ಅಂತಹ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸಮಾನ ಮೂಲಸೌಕರ್ಯ ಶುಲ್ಕವನ್ನು ವಸೂಲಿ ಮಾಡುವ ಬಗ್ಗೆ ಸಂಖ್ಯೆ ಕವಿಪ್ರನಿನಿ/ಬಿ28(ಎ)/32543/12–13, ದಿನಾಂಕ 11.12.2020ರ ಆದೇಶದ ಮೂಲಕ, ಸೂಚನೆಯನ್ನು ನೀಡಲಾಗಿದೆ. ಕವಿಪ್ರನಿನಿಯ ಭೂಮಿಯನ್ನು ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಪರಭಾರೆ ಮಾಡಿರುವ ಪ್ರಕರಣಗಳಲ್ಲಿ, ಅಂತಹ ಉತ್ಪಾಕರಿಂದ ವಸೂಲಿ ಮಾಡಿರುವ ಏಕಕಾಲಿಕ ಮರುಪಾವತಿಸದ ಶುಲ್ಕವನ್ನು ಆ ವರ್ಷದ ಆದಾಯವೆಂದು ಪರಿಗಣಿಸಲಾಗಿದೆ.
(xv)	ಅನುಬಂಧ 5ಎನಲ್ಲಿ ತಿಳಿಸಿರುವಂತೆ, ಕಳಚಲ್ಪಟ್ಟ ಆಸ್ತಿಗಳನ್ನು ಇಳಿತಗೊಳಿಸಿದ ಮೌಲ್ಯದಲ್ಲಿ(ಒಟ್ಟು ವೆಚ್ಚದಲ್ಲಿ ಸವಕಳಿಯನ್ನು ಕಳೆದು) ಲೆಕ್ಕಕ್ಕೊಳಪಡಿಸಲಾಗುತ್ತಿದೆ. ಇಳಿತಗೊಳಿಸಿದ ಮೌಲ್ಯ ಹಾಗೂ ಮಾರಾಟದಿಂದ ಒದಗಿದ ಮೌಲ್ಯದ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ವಿಧಿಸಲ್ಲಾಗುತ್ತದೆ. "ಬಿಡುಗಡೆಗೊಳಿಸಿದ ಭಾಗಗಳಿಗೆ ಕಂಪನಿಯು ಹಂಗಾಮಿ ಮೌಲ್ಯಗಳನ್ನು ಅನ್ವಯಿಸಿದೆ, ಇದು ಅಂಗೀಕಾರ್ಹವಲ್ಲ" ಎಂದು ಲೆಕ್ಕಪರಿಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
(xvi)	ಪ್ರಸ್ತುತ, ವಿವರವಾದ ಕಾರ್ಯಯೋಜನೆಯಲ್ಲಿ ಯಾವುದೇ ಉತ್ತೇಜಕ ಕಲಮು ಇಲ್ಲ, ಹೀಗಾಗಿ ಅವಕಾಶ ಕಲ್ಪಿಸಿಲ್ಲ. ಬಹುತೇಕ ಪ್ರಕರಣಗಳಲ್ಲಿ, ದರ ವ್ಯತ್ಯಾಸ ಹಾಗೂ ಪರಿಮಾಣ ವ್ಯತ್ಯಾಸಗಳನ್ನು ಲೆಕ್ಕಕ್ಕೊಳಪಡಿಸಾಗಿದೆ. ಸಿಬ್ಬಂದಿ ವೆಚ್ಚ, ಆಡಳಿತ ಹಾಗೂ ಸಾಮಾನ್ಯ ವೆಚ್ಚಗಳು, ಇತರ ಮೇಲುವೆಚ್ಚಗಳನ್ನು ಅನುಬಂಧ 1 ಎ ಸುತ್ತೋಲೆಯಲ್ಲಿ ವರ್ಗೀಕರಿಸಲಾಗಿದೆ. ಮೇಲುಸ್ತುವಾರಿ ಕೆಲಸದ ಪ್ರಮಾಣವನ್ನು ಆಧರಿಸಿ, ಅಂತಹ ಮೇಲುಸ್ತುವಾರಿಯ ಶುಲ್ಕವನ್ನು ಆದಾಯವೆಂದು ಲೆಕ್ಕಕ್ಕೊಳಪಡಿಸಬೇಕೆಂದು ಸಂಖ್ಯೆ ಆಸ(ಆಮತ್ತುಕಂ)/ಕೆಸಿಒ–21/6936/2013–14/ಸಂ–03, ದಿನಾಂಕ 08.04.2020ರ ಮೂಲಕ ಸುತ್ತೋಲೆಯನ್ನು ಹೊರಡಿಸಿದ್ದು, ಅಂತಹ ಆದಾಯವನ್ನು ಸಿಬ್ಬಂದಿ ವೆಚ್ಚದಿಂದ ಕಡಿಮೆಗೊಳಿಸಲಾಗುವುದು. ಈ ವಿಧಾನವನ್ನು ಆ.ವ.2019–20ರಲ್ಲೂ ಅನುಸರಿಸಲಾಗಿದೆ. ವಿದ್ಯುತ್ ಉಪಕರಣಗಳ ಪ್ರಕರಣಗಳಲ್ಲಿ ಅಂತಹ ಉಪಕರಣಾದ ಕಾರ್ಯಸ್ಥಗಿತಗೊಳಿಸುವಿಕೆಯ ದಿನಾಂಕವನ್ನು ಊಹಿಸಲು ಆಗದಿರುವುದರಿಂದ, ಅಂತಹ ಕಾರ್ಯಸ್ಥಗಿತಗೊಳಿಸುವಿಕೆಯ ಅಂದಾಜು ವೆಚ್ಚದ ಪ್ರಸಕ್ತ ಮೌಲ್ಯದ ಬಂಡವಾಳೀಕರಿಸುವುದರ ಲೆಕ್ಕಾಚಾರ ಕಾರ್ಯತಃ ಸಾಧ್ಯವಿಲ್ಲ. ಮುಂದುವರಿಸಿ, ಕೇಂ.ವಿ.ನಿ.ಆಯೋಗ ಅಥವಾ ಕವಿನಿ ಆಯೋಗವು ಪ್ರತಿಯೊಂದು ವಿದ್ಯುತ್ ಉಪಕರಣದ ಕಾರ್ಯಸ್ಥಗಿತ ನಿವೃತ್ತಿಯ ದಿನಾಂಕವನ್ನು ಗೊತ್ತುಪಡಿಸಿಕೊಳುವ ಬಗ್ಗೆ ಯಾವುದೇ ನಿರ್ದೇಶನ ಅಥವಾ ಅಧಿಸೂಚನೆಯನ್ನು ನೀಡಿಲ್ಲ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಬಳಕೆಯ ಉದ್ದೇಶಕ್ಕೆ ಸಿದ್ಧವಿರುವ ಆಸ್ತಿಯನ್ನು ಬಂಡವಾಳೀಕರಣಕ್ಕೆ ಪರಿಗಣಿಸಲಾಗುತ್ತಿದೆ. ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಕೇಂದ್ರ ಕಚೇರಿಯಲ್ಲಿ ಕಂಪನಿಯ ಲೆಕ್ಕ ಘಟಕಗಳಿಂದ ಬಂಡವಾಳ ಬಿಡಿಭಾಗಗಳ ವಿವರಗಳನ್ನು ಪಡೆದು ಲೆಕ್ಕೀಕರಣ ಪ್ರಕ್ರಿಯೆ ಮೂಲಕ ಕವಿಪ್ರನಿನಿಯ ಲೆಕ್ಕಪುಸ್ತಕಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.
(xvii)	ಲೆಕ್ಕ ಘಟಕಗಳಲ್ಲಿ ವೆಚ್ಚ ನಮೂದು ಪುಸ್ತಕ ಹಾಗೂ ಅನುಸೂಚಿ ಪಟ್ಟಿಗಳ ನಿರ್ವಹಣೆಯ ಮೂಲಕ ಠೇವಣಿ ವಂತಿಗೆ ಕಾಮಗಾರಿಗಳ (ಡಿ.ಸಿ.ಡಬ್ಲ್ಯು) ಉಸ್ತುವಾರಿ ಮಾಡಲಾಗುತ್ತಿದೆ. ವಸೂಲು ಮಾಡಿದ ಮೊಬಲಗು, ಕಾಮಗಾರಿಗಳ ಮೇಲಿನ ಖರ್ಚು, ಕಾರ್ಯಸ್ಥಿತಿಗಳನ್ನು ಲೆಕ್ಕಘಟಕಗಳಲ್ಲಿ ನಿರ್ವಹಿಸಲಾಗುತ್ತಿದೆ. ಡಿ.ಸಿ.ಡಬ್ಯುಗಳ ವರ್ಗೀಕರಣವನ್ನು ಖಚಿತಪಡಿಸಿಕೊಳ್ಳಲು ಆರ್ಥಿಕ ವರ್ಷಾಂತ್ಯಕ್ಕೆ ಇದ್ದಂತೆ, ಪ್ರತಿಯೊಂದು ಡಿಸಿಡಬ್ಯುಗಳ ಕಾರ್ಯಸ್ಥಿತಿಯ ಮಾಹಿತಿಯನ್ನು ಕೇಂದ್ರ ಕಚೇರಿಯಲ್ಲಿ ಪಡೆದುಕೊಂಡು ಅದನ್ನೇ ಲೆಕ್ಕಪರಿಶೋಧಕರಿಗೆ ಒದಗಿಸಲಾಗುತ್ತಿದೆ. ಡಿಸಿಡಬ್ಲ್ಯುನಿಂದ ಸೃಷ್ಟಿಸಲ್ಪಟ್ಟ ಆಸ್ತಿಗಳನ್ನು, ಕವಿಪ್ರನಿನಿಯು, ಸ್ಥಿರಾಸ್ತಿ ಲೆಕ್ಕವನ್ನು ಡೆಬಿಟ್ ಮಾಡಿ, ಗ್ರಾಹಕರ ಕೊಡುಗೆಯ ವಂತಿಗೆಯನ್ನು ಬಂಡವಾಳ ಆಸ್ತಿಗಳ ವೆಚ್ಚವೆಂದು ಕ್ರೆಡಿಟ್ ಮಾಡುವ ಮೂಲಕ ತನ್ನ ಲೆಕ್ಕಪುಸ್ತಕಗಳಲ್ಲಿ ವರ್ಗೀಕರಿಸಿತು. ಅಂತಹ ಬಂಡವಾಳ ಆಸ್ತಿ ವೆಚ್ಚದ ಪ್ರಯುಕ್ತದ ಗ್ರಾಹಕ ಕೊಡುಗೆಯ ವಂತಿಗೆಯನ್ನು ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, ಪ್ರಸಕ್ತದ್ದಲ್ಲದ ಹೊಣೆಗಾರಿಕೆಯ ಅಡಿ ಗುರುತಿಸಿ, ಗ್ರಾಹಕ ಕೊಡುಗೆ ವಂತಿಗೆಯಿಂದ ಪಡೆದ ಅಂತಹ ಆಸ್ತಿಗಳಿಗೆ ಅದೇ ವರ್ಷದಲ್ಲಿ ಸವಕಳಿಯನ್ನು ವಿಧಿಸುವುದರಿಂದ ತದನಂತರದಲ್ಲಿ ಅದೇ ಪ್ರಮಾಣದಲ್ಲಿ ಆದಾಯವೆಂದು ಹೊಂದಾಣಿಕೆ ಮಾಡಲ್ಪಡುತ್ತದೆ. ಕವಿಪ್ರನಿನಿಯು, ತನ್ನ ಇತರ ಬಂಡವಾಳ ಕಾಮಗಾರಿಗಳಿಗೆ ನಿಧಿ ಹವಣಿಸುವ ರೀತಿಯಲ್ಲಿ ಠೇವಣಿ ವಂತಿಗೆ ಕಾಮಗಾರಿಗಳನ್ನು ಸಮಗ್ರ ಗುತ್ತಿಗೆ ಅಧಾರದಂತೆ ಕೈಗೊಳುತ್ತಿದೆ. ಆದ್ದರಿಂದ, ನ್ಯಾಯಯುತ ದರದ ಪ್ರಕಾರ ಆಸ್ತಿಗಳ ವರ್ಗೀಕರಣದ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರಯೋಜನಗಳನ್ನು ನಿಯಂತ್ರಿಸಲು ಸಂಸ್ಥೆಯೊಂದರ ಸಾಮರ್ಥ್ಯವು ಕಾನೂನು ಹಕ್ಕುಗಳ ಫಲಿತವಾದರೂ, ಆಸ್ತಿಗಳಿಂದ ಲಭ್ಯವಾಗುತ್ತವೆ ಎಂದು ನಿರೀಕ್ಷೆಯಲ್ಲಿರುವ ಪ್ರಯೋಜನಗಳನ್ನು, ಅಂದರೆ ಇತರ ಗ್ರಾಹಕರಿಗೆ ವಿದ್ಯುತ್ ಪ್ರಸರಣೆಗಾಗಿ ಮಾರ್ಗ/ವಿದ್ಯುತ್ ಕೇಂದ್ರವನ್ನು ಉಪಯೋಗಿಸಬಹುದು, ಅವರ ಉದ್ದೇಶದಂತೆ ಮಾರ್ಗವನ್ನು ಕಾರ್ಯಾಚರಣೆಗೊಳಿಸಬಹುದು, ಗಣನೀಯ ಜೀವಿತಾವಧಿಯವರೆಗೆ ಆಸ್ತಿಯ ಬಳಕೆ ಮಾಡಬಹುದು ಇತ್ಯಾದಿಗಳನ್ನು ಕಂಪನಿಯು ನಿಯಂತ್ರಿಸಬಹುದಾಗಿದ್ದರೆ, ಮಾಲಿಕತ್ವದ ಹಕ್ಕಿನ ನಿಯಂತ್ರಣವನ್ನು ಹೊಂದುವ ಅವಶ್ಯಕತೆ ಇಲ್ಲ. ಕಂಪನಿಯು ಆಸ್ತಿಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದರೆ, ಕಂಪನಿಯು ಅನುಸರಿಸುತ್ತಿರುವ ಈ ಪ್ರಕ್ರಿಯೆಯು ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರ ಇದೆ ಎಂದು ಕವಿಪ್ರನಿನಿಯ ಭಾ.ಎ.ಪ.ತತ್ವ ಸಮಾಲೋಚಕರು ಅಭಿಪ್ರಾಯಿಸಿದ್ದಾರೆ. ಇದು ಭಾ.ಲೆ.ಪ.ತತ್ವಗಳನುಸಾರ ಇರುವುದರಿಂದ ಗ್ರಾಹಕ ವಂತಿಗೆ ಕೊಡುಗೆಯ ಅಡಿಯಲ್ಲಿ ಲೆಕ್ಕಕ್ಕೊಳಪಡಿಸುವ ಹಾಲಿ ಕ್ರಮವನ್ನು ಮುಂದುವರಿಸಬಹುದಾಗಿದೆ. ಮುಂದುವರಿಸಿ, ಲೆಕ್ಕಪರಿಶೋಧಕರು ಹೇಳಿರುವಂತೆ, ಠೇವಣಿ ವಂತಿಗೆ ಕಾಮಗಾರಿಗಳಿಗೆ ಯಾವುದೇ ಒಪ್ಪಂದದ ಅವಧಿ ಇಲ್ಲ. ಮೇಲಿನ ಹಿನ್ನೆಲೆಯಲ್ಲಿ, "ಅಂತಹ ಕಾಮಗಾರಿಗಳ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಕಾರ್ಯಸ್ಥಿತಿಯ ಬಗ್ಗೆ ಕಂಪನಿಯು ಸಾಕಷ್ಟು ಮಾಹಿತಿಗಳನ್ನು ಹೊಂದಿಲ್ಲ" ಹಾಗೂ " ಒಪ್ಪಂದದ ಅವಧಿಯ ಬದಲಾಗಿ ಬಳಕೆಯುಕ್ತ ಜೀವಿತಾವಧಿಯ ಮೇಲೆ ಋಣಮುಕ್ತತೆಯನ್ನು" ಅಂಗೀಕರಿಸತಕ್ಕದ್ದಲ್ಲ ಎಂದು ಲೆಕ್ಕಪರಿಶೋಧಕರು ಅಭಿಪ್ರಾಯಿಸಿದ್ದಾರೆ.
(xviii)	ಪಿ.ಎಸ್.ಡಿ.ಎಫ್. ಕಾಮಗಾರಿಗಳು, ರಿಲೇ ಬದಲಾವಣೆ, ವಿದ್ಯುತ್ ಪರಿವರ್ತಕಗಳು ಇತ್ಯಾದಿಗಳ ಬದಲಾವಣೆಗಳನ್ನು ಒಳಗೊಂಡಿದೆ. ಈ ಕಾಮಗಾರಿಗಳನ್ನು ಕವಿಪ್ರನಿನಿಯ ವಿದ್ಯುತ್ ಕೇಂದ್ರಗಳಲ್ಲಿ ಕೈಗೊಳಲಾಗುತ್ತದೆ ಹಾಗೂ ಅಂತಹ ಉಪಕರಣ ಸಲಕರಣೆಗಳ ಸ್ಥಾಪನೆಗೆ ಹಲವಾರು ಸಾಮಗ್ರಿಗಳನ್ನು ಒಳಗೊಂಡಿರುತ್ತದೆ. ಜಿ.ಇ.ಸಿ. ಕಾಮಗಾರಿಯು ರಾಜ್ಯದೊಳಗಿನ ಅಂತರ ರಾಜ್ಯ ವಿದ್ಯುತ್ ಪ್ರಸರಣ ಕಾರ್ಯಜಾಲದ ಮಾರ್ಗಗಳನ್ನು ಬಲಪಡಿಸುವ ಕಾರ್ಯವನ್ನು ಒಳಗೊಂಡಿದೆ. ಈ ಕಾಮಗಾರಿಗಳಿಗಾಗಿ ಸಂಬಂಧಿತ ಸಚಿವಾಲಯಗಳಿಂದ ಸ್ವೀಕರಿಸಿದ ಅನುದಾನವನ್ನು ಮೀಸಲಿತ ಬ್ಯಾಂಕ್ ಖಾತೆಯ ಮೂಲಕ ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ ಹಾಗೂ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನದ ಬಾಕಿ ಶಿಲ್ಕು ಉಳಿದಿರುವುದಿಲ್ಲ. ಪಿ.ಎಸ್.ಡಿ.ಎಫ್. ಹಾಗೂ ಜಿ.ಇ.ಸಿ. ಕಾಮಗಾರಿಗಳ ಅನುದಾನವನ್ನು ಬಳಸಿಕೊಂಡಿರುವುದರ ದೃಢೀಕರಣದ ಪ್ರತಿಯನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸಲಾಗಿದೆ. ಈ ವೆಚ್ಚಗಳನ್ನು ಲೆಕ್ಕಘಟಕದ ಹಂತದಲ್ಲೇ ಭರಿಸಿ, ಸಂಬಂಧಿತ ಲೆಕ್ಕಗಳನ್ನು ಆಯಾ ಲೆಕ್ಕಶೀರ್ಷಿಕೆಯಡಿಯಲ್ಲಿ ಲೆಕ್ಕಕ್ಕೊಳಪಡಿಸಲಾಗುತ್ತದೆ. ಸದರಿ ಮಾಹಿತಿಯನ್ನೂ ಸಹ ಆಯಾ ಲೆಕ್ಕಘಟಕಗಳು ಲೆಕ್ಕಪರಿಶೋಧಕರಿಗೆ ಸಲ್ಲಿಸಿವೆ. ಆದುದರಿಂದ, ಈ ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಆಯಾ ಲೆಕ್ಕಘಟಕಗಳು ಲೆಕ್ಕಪರಿಶೋಧನೆಯ ಸಮಯದಲ್ಲಿ ಸಲ್ಲಿಸುತ್ತವೆ.
(xix)	ಪರಿಹಾರ ನೀಡಿಕೆಯು ವಿವರವಾದ ಕಾರ್ಯಾದೇಶದ ಭಾಗವಲ್ಲ. ಕಾರ್ಯಕ್ಷೇತ್ರದ ಸ್ಥಿತಿಗತಿಯನ್ನು ಅವಲಂಬಿಸಿ ಪರಿಹಾರಗಳನ್ನು ನಿರ್ಧರಿಸಬೇಕಾಗುತ್ತದೆ. ಪರಿಹಾರವನ್ನು ನಿರ್ಧರಿಸಿ, ಅದನ್ನೂ ವಿತರಿಸುವುದಕ್ಕೂ ಮುಂಚಿತವಾಗಿ ಮೊಕದ್ದಮೆ ಹೂಡಿರುವ ಪ್ರಕರಣಗಳಿವೆ. ಗುತ್ತಿಗೆದಾರ/ಏಜೆನ್ಸಿಯು ಅರ್ಹರಿಗೆ ಪರಿಹಾರವನ್ನು ನೀಡಿ, ಅದನ್ನು ಕವಿಪ್ರನಿನಿಯಿಂದ ಕ್ಲೇಮು ಮಾಡತಕ್ಕದ್ದಾಗಿರುತ್ತದೆ. ಹೀಗಾಗಿ, ಅರ್ಹರಿಗೆ ಪರಿಹಾರವನ್ನು ನೀಡಿದ ನಂತರ, ಅಂತಹ ನಿಖರ ಪರಿಹಾರದ ಮೊಬಲಗನ್ನು ಲೆಕ್ಕಕ್ಕೊಳಪಡಿಸಲಾಗುತ್ತಿದೆ. ಎಂ.ಸಿ.ಎ.ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 111(ಇ),ದಿನಾಂಕ 16.02.2015ರ ಸಾಮಾನ್ಯ ಸೂಚನೆ(2)ರ ಪ್ರಕಾರ, "ಭೌತಿಕ ಅಂಶಗಳಿಗೆ ಮಾತ್ರ ಭಾರತೀಯ ಲೆಕ್ಕಪದ್ಧತಿ ತತ್ವ"ಗಳನ್ನು ಅನ್ವಯಿಸತಕ್ಕದ್ದು. ಕಂಪನಿಯ ಸ್ವರೂಪ ಹಾಗೂ ಗಾತ್ರವನ್ನು ಉಲ್ಲೇಖಿಸಿದಂತೆ, ನಗದು ಆಧಾರದಲ್ಲಿ ಮಾನ್ಯಗೊಳಿಸಿರುವ ವೆಚ್ಚವು ಭೌತಿಕವಲ್ಲ.
(xx)	ಕವಿಪ್ರನಿನಿಯು ಗೌರವಾನ್ವಿತ ಕವಿನಿ ಆಯೋಗದ ಮುಂದೆ ಅನುಸೂಚಿ 86(1)[ಎಫ್] ಅಡಿಯಲ್ಲಿ 26.08.2019 ರಂದು ಸಲ್ಲಿಸಿರುವ ಮನವಿಯು ತೀರ್ಪಿಗೆ ಬಾಕಿ ಇದೆ. ಈ ನಿಟ್ಟಿನಲ್ಲಿ ಕವಿನಿ ಆಯೋಗದ ನಿರ್ಣಯದ ನಂತರವಷ್ಟೇ ಕಂದಾಯ ಹಾಗೂ ವ್ಯವಹರಣೆ ಸ್ವೀಕೃತಿಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಬಹುದಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
(xxi)	ಭಾರತೀಯ ಲೆಕ್ಕಪದ್ಧತಿ ತತ್ವಗಳು 19ರ ಕಂಡಿಕೆ 153ರ ಪ್ರಕಾರ, ಇತರ ದೀರ್ಘಾವಧಿ ಸಿಬ್ಬಂದಿ ಸೌಲಭ್ಯಗಳು ಮುಂದೆ ತಿಳಿಸಿರುವಂತಹವುಗಳನ್ನು ಒಳಗೊಂಡಿದ್ದು, ಒಂದು ವೇಳೆ ಒಳಗೊಂಡಿರದಿದ್ದಲ್ಲಿ, ಸಿಬ್ಬಂದಿಯು ಸಲಿಸಿರುವ ಇಂತಹ ಸಂಬಂಧಿತ ಸೇವೆಯ ವಾರ್ಷಿಕ ವರದಿ ಸಲ್ಲಿಕೆಯು ಮುಕ್ತಾಯಗೊಂಡ ನಂತರದ ಹನ್ನೆರಡು ತಿಂಗಳುಗಳು ಮುಗಿಯುವ ಮುಂಚಿತವಾಗಿ ಪೂರ್ಣ ಪ್ರಮಾಣದಲ್ಲಿ ಇತ್ಯರ್ಥಗೊಳಿಸತಕ್ಕದ್ದು. (ಎ) ದೀರ್ಘಾವಧಿ ಸೇವೆ ಅಥವಾ ವಿಶ್ರಾಂತಿ ರಜೆಯಂತಹ ದೀರ್ಘಾವಧಿ ಗೈರುಹಾಜರಿಗೆ ಪಾವತಿಸಿರುವುದು (ಬಿ) ಉತ್ಸವ ಅಥವಾ ಇತರ ದೀರ್ಘಾವಧಿ ಸೇವೆಯ ಪ್ರಯೋಜನಗಳು (ಸಿ) ದೀರ್ಘಾವಧಿ ವಿಕಲಚೇತನ ಸೌಲಭ್ಯಗಳು (ಡಿ) ಲಾಭ ಹಂಚಿಕೆ ಹಾಗೂ ಬೋನಸ್ **ಮತ್ತು** (ಇ) ಮುಂದೂಡಲ್ಪಟ್ಟ ಸಂಭಾವನೆ ಇತರ ದೀರ್ಘಾವಧಿ ಸಿಬ್ಬಂದಿ ಸೌಲಭ್ಯಗಳ ಬಗ್ಗೆ ಕಂಡಿಕೆ 158ರ ನಿರ್ದಿಷ್ಟತೆಗಳು , ನಿರ್ದಿಷ್ಟ ಪ್ರಕಟಣೆಗಳನ್ನು ಅಗತ್ಯಪಡಿಸದಿದ್ದರೂ, ಭಾ.ಲೆ.ಪ.ತತ್ವದ ಇತರ ಕಂಡಿಕೆಗಳು ಅಗತ್ಯಪಡಿಸಬಹುದು. ಉದಾಹರಣೆಗೆ: ಭಾ.ಲೆ.ಪ. ತತ್ವದ ಕಂಡಿಕೆ 24: ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸೌಲಭ್ಯವನ್ನು ಪ್ರಕಟಪಡಿಸಬೇಕೆಂದು ಅಗತ್ಯಪಡಿಸುತ್ತದೆ. ಭಾ.ಲೆ.ಪ. ತತ್ವದ ಕಂಡಿಕೆ 1: ಸಿಬ್ಬಂದಿಯ ಸೌಲಭ್ಯದ ವೆಚ್ಚವನ್ನು ಪ್ರಕಟಪಡಿಸಬೇಕೆಂದು ಅಗತ್ಯಪಡಿಸುತ್ತದೆ. ಭಾ.ಲೆ.ಪ. ತತ್ವದ ಕಂಡಿಕೆ 19: ಇತರ ದೀರ್ಘಾವಧಿ ಸಿಬ್ಬಂದಿ ಸೌಲಭ್ಯಗಳ ಬಗ್ಗೆ ಪ್ರಕಟಪಡಿಸಬೇಕೆಂದು ಅಗತ್ಯಪಡಿಸುವುದಿಲ್ಲ. ಹೀಗಾಗಿ, ಕಂಪನಿಯು ಈ ಬಗ್ಗೆ ಪ್ರಕಟಪಡಿಸಿಲ್ಲ. ಮುಂದುವರಿಸಿ, 2019–20ರಲ್ಲಿ ಕವಿಪ್ರನಿನಿ ಉದ್ಯೋಗಿಗಳ ವಿವರಗಳನ್ನು ನಿಗಮದೊಳಗೇ ಅಭಿವೃದ್ಧಿಗೊಳಿಸಿದ ತಂತ್ರಾಂಶದ ಮೂಲಕ ಆನ್ ಲೈನ್‌ನಲ್ಲಿ ಪಡೆದುಕೊಳ್ಳಲಾಯಿತು, ಇದನ್ನೇ ತಜ್ಞರಿಗೆ ಸಲ್ಲಿಸುವ ಮುನ್ನ ಶಾಸನಬದ್ಧ ಲೆಕ್ಕಪರಿಶೋಧಕರೊಂದಿಗೆ ಹಂಚಿಕೊಳ್ಳಲಾಯಿತು. ಇತರ ವೃತ್ತಿಪರ ತಜ್ಞರು ಭಾವಿಸುವಂತೆ, ತಜ್ಞರು ಕೈಗಾರಿಕಾ ಗುಣಮಟ್ಟ ಊಹಿತಗಳನ್ನು ಪರಿಗಣಿಸಿದ್ದಾರೆ. ಕವಿಪ್ರನಿನಿಯು ತಜ್ಞರ ಪರಿಗಣಿಸುವಿಕೆಯನ್ನು ಪ್ರಶ್ನಿಸಲಾಗುವುದಿಲ್ಲ. ಹೀಗಾಗಿ, ಲೆಕ್ಕಪರಿಶೋಧಕರ ಅಭಿಪ್ರಾಯವನ್ನು ಅಂಗೀಕರಿಸಲಾಗುವುದಿಲ್ಲ.
(xxii)	ಈ ಪ್ರಕರಣವನ್ನು ಕವಿಪ್ರನಿನಿ, ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಕರ್ನಾಟಕ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಪರಿಹರಿಸಿಕೊಳ್ಳಬೇಕಾಗಿದೆ. ಕರ್ನಾಟಕ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮೊಬಲಗನ್ನು ಲೆಕ್ಕಸಮನ್ವಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
(xxiii)	ಕವಿಪ್ರನಿನಿಯು ಕವಿನಿನಿಗೆ ವಿದ್ಯುತ್ ಖರೀದಿ ಹೊಣೆಗಾರಿಕೆಯ ನಿಮಿತ್ತ 2020–21ರಲ್ಲಿ ರೂ.276.40ಕೋಟಿಯನ್ನು ಪಾವತಿಸಿದೆ. ಕವಿನಿನಿಗೆ ವಿದ್ಯುತ್ ಖರೀದಿ ಹೊಣೆಗಾರಿಕೆಯ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ನಿಮಿತ್ತ ಪಾವತಿಗಾಗಿ ಉಳಿದಿರುವ ಬಾಕಿ ರೂ.92.13ಕೋಟಿ. ಹೊಣೆಗಾರಿಕೆಯ ಉಳಿಕೆ ಬಾಕಿ ರೂ.15.73 ಕೋಟಿಗೆ ಸಂಬಂಧಿಸಿದಂತೆ, ಸಂಬಂಧಿತ ವಿದ್ಯುತ್ ಉತ್ಪಾದಕರೊಂದಿಗೆ ಲೆಕ್ಕಸಮನ್ವಯಗೊಳಿಸುವ ಕ್ರಮ ಕೈಗೊಳ್ಳಲಾಗುವುದು.
(xxiv)	ಅಂತ್ಯಗೊಳಿಸಿದ ಹಾಗೂ ಮುಂಚಿತವಾಗಿ ಮುಕ್ತಾಯಗೊಳಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ/ಸರಬರಾಜಿನಲ್ಲಿ ವಿಳಂಬಕ್ಕಾಗಿ ಸರಬರಾಜುದಾರರು/ ಗುತ್ತಿಗೆದಾರರಿಂದ ವಸೂಲಿ ಮಾಡಿದ ದಂಡವನ್ನು ಪ್ರಕ್ರಿಯೆಗೆ ಒಳಪಡಿಸಲು ನಿಗಮ ಕಾರ್ಯಾಲಯವು ಸುತ್ತೋಲೆ ಸಂಖ್ಯೆ **ಆಸ(ಲೆ ಮತ್ತು ಸಂ)**/ಕೆಸಿಒ–21/6936/2013–14/ಸಂ3, ದಿನಾಂಕ 03.02.2020ರ ಮೂಲಕ ನಿರ್ದೇಶನಗಳನ್ನು ನೀಡಿದೆ. ತದನುಸಾರವಾಗಿ, 2019–20ರಲ್ಲಿ ರೂ.2.29ಕೋಟಿಯನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗಿದೆ. ಈ ಬಗ್ಗೆ ಲೆಕ್ಕಪರಿಶೋಧಕರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಲಾಗಿದೆ.
(xxv)	ಅಂ.ಘ.ಲೆಕ್ಕ ವ್ಯವಹರಣೆಯಲ್ಲಿನ ಹಳೆಯ ಪ್ರಕರಣಗಳನ್ನು ಲೆಕ್ಕಸಮನ್ವಯಗೊಳಿಸಲಾಗುತ್ತಿದೆ. 01/04/2015ರಿಂದ ಹಾಗೂ ಮುಂದಕ್ಕೆ ಅಂ.ಘ.ಲೆಕ್ಕಗಳ ವ್ಯವಹರಣೆಗೆ ಹೊಸ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಿ, ಅದೇ ದಿನಾಂಕದಿಂದ ಆನ್ ಲೈನ್ ವ್ಯವಹರಣೆಯ ಮೂಲಕ ಕಾರ್ಯಾನುಷ್ಠಾನಗೊಳಿಸಲಾಗಿದೆ. ಹಳೆಯ ಶಿಲ್ಕುಗಳ ಸಮನ್ವಯಗೊಸುವಿಕೆಗಾಗಿ ಮತ್ತಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.
(xxvi)	ಲೆಕ್ಕಸಮನ್ವಯದ ಪ್ರಕ್ರಿಯೆ ಪ್ರಗತಿಯಲಿದೆ. ಬಹುತೇಕ ಅಂಶಗಳು ಗುರುತಿಸಲ್ಪಟ್ಟಿದ್ದು, ಲೆಕ್ಕಸಮನ್ವಯವು ಪೂರ್ಣಗೊಂಡನಂತರ, ಲೆಕ್ಕಕ್ಕೊಳಪಡಿಸುವ ಅಗತ್ಯ ಕ್ರಿಯೆಯನ್ನು ಕೈಗೊಳ್ಳಲಾಗುವುದು.
(xxvii)	ನಿಗಮ ಕಾರ್ಯಾಲಯವು ಬಂಡವಾಳ ವೆಚ್ಚ, ಅಂದಾಜುಪಡಿಸಿರುವ ವೆಚ್ಚ, ಲೆಕ್ಕಪುಸ್ತಕಗಳಲ್ಲಿ ಎಕ್ಕಕ್ಕೊಳಪಡಿಸಿದ ವೆಚ್ಚ ಇತ್ಯಾದಿಗಳ ವಿವರಗಳನ್ನು ಪಡೆದುಕೊಂಡಿದೆ. ಪ್ರತಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ(ಐ.ಪಿ.ಪಿ) ಸಂಬಂಧಿಸಿ, ಪ್ರಸಕ್ತ ವರ್ಷದಲ್ಲಿ ಹಕ್ಕುಕೇಳಿಕೆ ಮಾಡಲಾದ ಕಾರ್ಯ ಮತ್ತು ಪಾಲನೆ ಶುಲ್ಕ, ಲೆಕ್ಕಘಟಕಗಳ ವಾರ್ಷಿಕ ಲೆಕ್ಕಗಳ ವಿವರಗಳನ್ನು ಲೆಕ್ಕಪರಿಶೋಧಕರಿಗೆ ಒದಗಿಸಲಾಯಿತು. ಕ.ವಿ.ನಿ ಆಯೋಗವು ಅನುಮೋದಿಸಿರುವ ದರಗಳ ಪ್ರಕಾರ ಕಾರ್ಯ ಮತ್ತು ಪಾಲನಾ ಶುಲ್ಕವನ್ನು ಹೇಳಿಕೆ ಮಾಡಲಾಗಿದೆ.
(xxviii)	ಮೂಲದಲ್ಲಿಯೇ ತೆರಿಗೆಯನ್ನು ಹಿಡಿದುಕೊಳ್ಳುವ ವ್ಯವಹರಣೆಗಳನ್ನು ಕವಿಪ್ರನಿನಿಯ ಲೆಕ್ಕಘಟಕಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಈ ವ್ಯವಹರಣೆಗಳು ಬೃಹತ್ ಪ್ರಮಾಣ ಗಾತ್ರದ್ದಾಗಿವೆ. ತೆರಿಗೆ ಕಡಿತ ಮಾಡಿಸಿಕೊಂಡವರು ಯಾರು ಎಂದು ಕಂಡುಹಿಡಿಯಲು ಅಂತಹ ತೆರಿಗೆ ಕಡಿತ ಮಾಡಿಸಿಕೊಂಡವರ ತೆರಿಗೆಯ ಲೆಕ್ಕಖಾತೆ ಸಂಖ್ಯೆ(TAN) ಹಾಗೂ ಯಾವ ಲೆಕ್ಕಘಟಕದಲ್ಲಿ ತೆರಿಗೆ ಕಡಿತ ಮಾಡಿಸಿಕೊಳ್ಳಲಾಗಿದೆ ಎಂಬ ವಿವರ ನಮೂನೆ 26ಎಎಸ್ ನಲ್ಲಿ ತೋರುವುದಿಲ್ಲ. ಬಾಕಿ ಶಿಲ್ಕುಗಳನ್ನು ಲೆಕ್ಕಸಮನ್ವಯಗೊಳಿಸುವ ಸಲುವಾಗಿ, ಸುತ್ತೋಲೆ ಸಂಖ್ಯೆ:ಆಸ(ಲೆ ಮತ್ತು ಸಂ)/ಕೆಸಿಒ–18/96298/2018–19, ದಿನಾಂಕ:

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	27.12.2019ರ ಮೂಲಕ ಕಾರ್ಯವಿಧಾನವನ್ನು ಶಿಸ್ತುಬದ್ಧವಾಗಿ ಪಾಲಿಸಬೇಕೆಂದು ಆದೇಶಿಸಲಾಗಿದೆ. ಆದಾಯ, ಆದಾಯ ತೆರಿಗೆ, ಪಾವತಿಸಿರುವ ಮುಂಗಡ ಆದಾಯ ತೆರಿಗೆ, ಸ್ವ ನಿರ್ಧರಣ ಹಾಗೂ ನಿರ್ಧರಣದ ಆದೇಶದನ್ವಯ ಮರುಪಾವತಿ ಇವುಗಳ ಲೆಕ್ಕಸಮನ್ವಯಗೊಳಿಸಲು ಯಥೋಚಿತ ಕ್ರಮ ಕೈಗೊಳ್ಳಲಾಗುವುದು.
(xxix)	ನಿಯಂತ್ರಕರಿಂದ ಅನುಮೋದನೆಗೊಳ್ಳದ ಹೊರತು ಯಾವುದೇ ಮೊಬಲಗು ಸ್ವೀಕೃತಿ ಎಂದೆನಿಸುವುದಿಲ್ಲ. ಆದ್ದರಿಂದ, ಕವಿನಿ ಆಯೋಗದಿಂದ ಅನುಮೋದನೆಗೊಳ್ಳಬೇಕಿರುವ ಆ.ವ.2019–20ರ ಪ್ರೋತ್ಸಾಹ ಧನವನ್ನು ಸ್ವೀಕೃತಿ ಎಂದು ಪರಿಗಣಿಸಲಾಗುವುದಿಲ್ಲ. ಕವಿನಿ ಆಯೋಗವು ವಿದ್ಯುತ್ ದರ ಆದೇಶಗಳನ್ನು ಹೊರಡಿಸುವಾಗ, ವ್ಯವಸ್ಥೆಯ ಲಭ್ಯತೆಯ ವಿಚಾರವಾಗಿ ಗೊತ್ತುಪಡಿಸಿರುವ ಗುರಿ 98%ಗಿಂತಲೂ ಹೆಚ್ಚಿನ ಸಾಧನೆಗಾಗಿ, ಪ್ರೋತ್ಸಾಹ ಧನವನ್ನು ಅನುಮತಿಸಿದೆ. ಕವಿನಿಆಯೋಗವು ಪ್ರೋತ್ಸಾಹ ಧನವನ್ನು ಅನುಮತಿಸುವಾಗ, ಈ ಪ್ರೋತ್ಸಾಹ ಧನವನ್ನು ಕೆಳಗೆ ತಿಳಿಸಿರುವಂತೆ ಖಾರ್ಚು ಮಾಡಬೇಕೆಂದು ಕವಿಪ್ರನಿನಿಗೆ ನಿರ್ದೇಶನ ನೀಡಿತು: ಯಂತ್ರಗಳು ಹಾಗೂ ಯಂತ್ರೋಪಕರಣಗಳಲ್ಲಿ ತಂತ್ರಾತ್ಮಿಕ ಉನ್ನತೆಯನ್ನು ಆಳವಡಿಸಿಕೊಳ್ಳಲು, ಕಾರ್ಯನಿರ್ವಹಣೆಯಲಿ ಹೆಚ್ಚಿನ ಕ್ಷಮತೆ ಸಾಧಿಸಲು ತನ್ನ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಉನ್ನತ ಮಟ್ಟದ ತರಬೇತಿ ನೀಡಲು ಬಳಸಿ, ತತ್ಸಂಬಂಧ ಅನುಪಾಲನಾ ವರದಿಯನ್ನು ಆಯೋಗಕ್ಕೆ ಸಲ್ಲಿಸುವುದು. ಕವಿನಿಯ ಮೇಲಿನ ನಿರ್ದೇಶನಗಳನ್ವಯ, ಕವಿಪ್ರನಿನಿಯು ಪ್ರೋತ್ಸಾಹ ಧನವನ್ನು ಬಳಕೆ ಮಾಡಿಕೊಂಡು ಲೆಕ್ಕಕ್ಕೊಳಪಡಿಸಿ ಆಯೋಗಕ್ಕೆ ವರದಿ ಸಲ್ಲಿಸುವ ಅಗತ್ಯತೆ ಇದೆ. ಪ್ರೋತ್ಸಾಹ ಧನವು ಸಂಸ್ಥೆಗೆ ಆದಾಯವಾಗಿರುತ್ತದೆ. ಇದು ಕಾರ್ಯದಕ್ಷತೆಯ ಅಂಶದಿಂದ ಒದಗಿಬಂದ ಅಂತರಿಕ ಸಂಪನ್ಮೂಲವಾಗಿದೆ. ಹೀಗಾಗಿ, ಆ.ವ.2019–20ರ ಸಾಲಿಗೆ ಅನುಮತಿಸಬೇಕಾದ ಪ್ರೋತ್ಸಾಹ ಧನದ ಬಳಕೆಯ ಬಗ್ಗೆ ಕವಿಪ್ರನಿನಿಯು ಯಾವ ರೀತಿಯ ಸಲಹೆ ನೀಡುತ್ತದೆ ಎಂಬುದಾಗಿ ಈಗಲೇ ಊಹಿಸಲಾಗುವುದಿಲ್ಲ. ಈ ಕಾರಣದಿಂದ ಇದನ್ನು ಲೆಕ್ಕಪತ್ರಗಳಿಗೆ ಇತರೆ ಟಿಪ್ಪಣಿಯ ಅಡಿಯಲ್ಲಿ, ಟಿಪ್ಪಣಿ ಸಂಖ್ಯೆ 37ರಲ್ಲಿ ಸಾದಿಲ್ವಾರು ಆಸ್ತಿ ಎಂದು ತೋರಿಸಲಾಗಿದೆ.
(xxx)	ವಿದ್ಯುತ್ ಸರಬರಾಜು ಕಂಪನಿಗಳಿಂದ ಬರಬೇಕಾದ ವ್ಯವಹರಣೆಗಳ ಸ್ವೀಕೃತಿಗಳನ್ನು 31.03.2020ರಂದಿಗೆ ಇದ್ದಂತೆ ಲೆಕ್ಕಸಮನ್ವಯಗೊಳಿಸಿ, ಸ್ಥಿರೀಕರಣ ಪಡೆಯಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳೊಂದಿಗಿನ ಇತರೆ ಸ್ವೀಕೃತಿ ಹಾಗೂ ಪಾವತಿಗಳ ಲೆಕ್ಕಸಮನ್ವಯಗೊಳಿಸುವಿಕೆಯನ್ನು ಲೆಕ್ಕ ಘಟಕದ ಮಟ್ಟದಲ್ಲಿ ಹಾಗೂ ನಿಗಮ ಕಾರ್ಯಾಲಯದಲ್ಲಿ ಮಾಡಲಾಗುತ್ತಿದೆ. ಸ್ವೀಕೃತಿ ಹಾಗೂ ಪಾವತಿಗಳ ಲೆಕ್ಕಸಮನ್ವಯಗೊಳಿಸುವಿಕೆಯ ವಿಷಯವಾಗಿ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಪ್ರಸರಣ ವಲಯ ಮಟ್ಟದಲಿ ಸಭೆಯನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು.
(xxxi)	ಕರ್ನಾಟಕ ಸರ್ಕಾರವು, ದಿನಾಂಕ 10.05.2005ರ ತನ್ನ ಆದೇಶದ ಮೂಲಕ ಪ್ರಸರಣ ಶುಲ್ಕಕ್ಕೆ ಸಂಬಂಧಿಸಿದಂತೆ ಕವಿಪ್ರನಿನಿಯೊಂದಿಗೆ ಒಂದು ಷರತ್ತು ಒಪ್ಪಿಗೆಯ ಲೆಕ್ಕ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಖಾತೆಯನ್ನು ಹೊಂದಬೇಕೆಂದು ವಿದ್ಯುತ್ ಸರಬರಾಜು ಕಂಪನಿಗಳಿಗೆ ಆದೇಶಿಸಿತು. ಗೌರವಾನ್ವಿತ ಆಯೋಗವು ಅನುಮೋದಿಸಿರುವಂತೆ, ಪ್ರಮಾಣಕ ಪ್ರಸರಣ ಒಪ್ಪಂದದ ಕಲಮು 8.7ರ ಪ್ರಕಾರ, ಅನುಚ್ಛೇಧ 8.5 ರಿಯಾಯಿತಿ ಕಲಮು ಹಾಗೂ 8.6 ದಂಡ ಕಲಮು ವಿದ್ಯುತ್ ಸರಬರಾಜು ಕಂಪನಿಗಳಿಗೆ/ಪ್ರಸರಣ ಶುಲ್ಕವನ್ನು ಪಾವತಿಸಲು ಪ್ರಮಾಣಕ ಪ್ರಸರಣ ಒಪ್ಪಂದದ ವ್ಯವಸ್ಥೆಯನ್ನು ಹೊಂದಿರುವ ಮುಕ್ತ ಪ್ರವೇಶಾವಕಾಶ ಗ್ರಾಹಕರಿಗೆ ಅನ್ವಯಿಸುವುದಿಲ್ಲ. ಆದ್ದರಿಂದ, ವಿದ್ಯುತ್ ಸರಬರಾಜು ಕಂಪನಿಗಳಿಗೆ ತಡ ಪಾವತಿಗಾಗಿ ಮೇಲುಕರವನ್ನು ವಿಧಿಸದಿರುವುದು, ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮಾಡಿಕೊಂಡಿರುವ ಪ್ರಸರಣ ಒಪ್ಪಂದದ ಪ್ರಕಾರ ಸರಿಯಾಗಿದೆ.
(xxxii)	ಪ್ರಸಕ್ತ ವರ್ಷದಲ್ಲಿ, ಕಂಪನಿಯು ಮುಂದೆ ತಿಳಿಸಿರುವಂತೆ ಕಾರ್ಯನೀತಿಯನ್ನು ರೂಪಿಸಿದೆ ಕಾರ್ಯಸಾಧನೆ ಮಾಡಿದ್ದಕ್ಕಾಗಿ ಅಥವಾ ದೋಶಪೂರಿತ ಸಾಮಗ್ರಿಗಳನ್ನು ಸರಬರಾಜು ಮಾಡಿದ್ದಕ್ಕಾಗಿ ಸರಬರಾಜುದಾರರು/ಗುತ್ತಿಗೆದಾರರಿಂದ ನಗದೀಕರಿಸಿಕೊಂಡ ಬ್ಯಾಂಕ್ ಖಾತರಿಯನ್ನು ಆಸ್ತಿಯ ವೆಚ್ಚದಿಂದ ಹೊಂದಾಣಿಕೆ ಮಾಡಲಾಗಿದೆ. ಇವನ್ನು ಯೋಜನೆಗನುಸಾರ ನೇರವಾಗಿ ಗುರುತಿಸಬಹುದಾಗಿದ್ದಲ್ಲಿ ಹಾಗೂ ಕಂಪನಿಯು ಭರಿಸಬೇಕಾಗಬಹುದಾದ ಯೋಜನೆಯ ಹೆಚ್ಚುವರಿ ವೆಚ್ಚವನ್ನು ಕಡಿಮೆಗೊಳಿಸಲು ಸ್ವೀಕರಿಸಿದ್ದಲ್ಲಿ, ಇದನ್ನು ಆಸ್ತಿಯ ವೆಚ್ಚದ ಭಾಗವಾಗಿ ಬಂಡವಾಳೀಕರಿಸಲಾಗುವುದು. ಇಲ್ಲದಿದ್ದಲಿ, ಇದನ್ನು ಆದಾಯವೆಂದು ಲೆಕ್ಕಕ್ಕೊಳಪದಿಸಬೇಕಾಗುತದೆ. ಕಂಪನಿಯು 2020–21ರಲ್ಲಿ ಅಳವಡಿಸಿಕೊಂಡ ಹೊಸ ಕಾರ್ಯನೀತಿಯ ಪ್ರಕಾರ, ಎಲಾ ಬ್ಯಾಂಕ್ ಖಾತರಿ ನಗದೀಕರಣವನ್ನು ಲೆಕ್ಕಕ್ಕೊಳಪಡಿಸಿದೆ.
(xxxiii)	ಆರ್ಥಿಕ ಲಾಭಗಳನ್ನು ಸಾಕಾರಗೊಳಿಸುವ ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯ ಕ್ಷೀಣವಾಗಿರದ ಹೊರತು ಭಾ.ಲೆ.ಮಾ ತತ್ವ 37, ಕಂಡಿಕೆ 28 ಎ ಪ್ರಕಾರಕಂಡಿಕೆ 86 ಅಗತ್ಯಪಡಿಸುವಂತೆ ಅನಿಶ್ಚಿತ ಹೊಣೆಗಾರಿಕೆಯನ್ನು ಬಹಿರಂಗಪಡಿಸಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಮುಂದಿನ ವರ್ಷದಲ್ಲಿ ಯಾವುದೇ ಸಂಪನ್ಮೂಲದ ಆರ್ಥಿಕ ಹೊರಹರಿವು ವೆಚ್ಚವನ್ನು ಭರಿಸುವುದಿಲ್ಲವೆಂದು ಕಂಪನಿಯು ಭಾವಿಸಿದೆ ಹಾಗೂ ಸಾಧ್ಯತೆಯೂ ಸ್ಪಷ್ಟವಾಗಿಲ ಎಂದು ತೋರುತ್ತದೆ. ಹೀಗಾಗಿಕಂಪನಿಯು ಇದನ್ನು ಅನಿಶ್ಚಿತ ಹೊಣೆಗಾರಿಕೆ ಎಂದು ಬಹಿರಂಗಪಡಿಸಿರುವುದಿಲ್ಲ.
(xxxiv)	ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಂತರ ರಾಜ್ಯ ಪ್ರಸರಣ ಶುಲ್ಕವನ್ನು ಹಂಚಿಕೊಳ್ಳುವುದು) ನಿಬಂಧನೆಗಳು 2010(IIIತಿದ್ದುಪಡಿ 2015) ಅನುಬಂಧ–1ರ ಕಲಮು 2.1.3 ಪ್ರಕಾರ ಅಂತರ ರಾಜ್ಯ ವಿದ್ಯುತ್ತನ್ನು ಪ್ರವಹಿಸುವ ಅಂತರರಾಜ್ಯಪ್ರಸರಣ ಮಾರ್ಗಗಳನ್ನು ದಕ್ಷಿಣ ಪ್ರಾದೇಶಿಕ ವಿದ್ಯುತ್ ಸಮಿತಿಯು (ಎಸ್.ಆರ್.ಪಿ.ಸಿ)ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯ ಸರಬರಾಜು ಮಾರ್ಗಗಳಲ್ಲಿ(ನಾನ್–ಐ.ಎಸ್.ಟಿ.ಎಸ್ ಮಾರ್ಗ) ಎಂದು ದೃಢೀಕರಿಸಿದೆ. ಈ ಮಾರ್ಗಗಳ ವರ್ಷವಾರು ಪ್ರಸರಣ ಶುಲ್ಕವನ್ನು ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿರ್ಧರಿಸತಕ್ಕದ್ದು. ನಾನ್–ಐ.ಎಸ್.ಟಿ.ಎಸ್. ಮಾರ್ಗ ದೃಢೀಕರಣ ಸೌಲಭ್ಯವನ್ನು ಪಡೆಯುವ ರಾಜ್ಯಗಳು ಅಂತಹ ಮಾರ್ಗಗಳ ಪ್ರಸರಣಾ ಶುಲ್ಕವನ್ನು ಭರಿಸತಕ್ಕದ್ದು. ಈ ಹಿನ್ನೆಲೆಯಲ್ಲಿ, 9 ನಾನ್–ಐ.ಎಸ್.ಟಿ.ಎಸ್. ಮಾರ್ಗಗಳ ವಾರ್ಷಿಕ ಕಂದಾಯ ಅಗತ್ಯತೆಯನ್ನು ಲೆಕ್ಕಾಚಾರ ಮಾಡಿ ಆ.ವ.2017–18ರ ಸಾಲಿಗೆ ರೂ.15.60 ಕೋಟಿ ಹಾಗೂ ಆ.ವ.2018–19ರ ಸಾಲಿಗೆ ರೂ.16.26 ಕೋಟಿ ಕ್ಲೇಮು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಮಾಡುತ್ತಾ ವಾರ್ಷಿಕ ಪ್ರಸರಣ ಶುಲ್ಕವನ್ನು ನಿರ್ಧರಿಸಲು ಗೌರವಾನ್ವಿತ ಕ.ವಿ.ನಿ.ಆಯೋಗಕ್ಕೆ ಸಲ್ಲಿಸಲಾಯಿತು. ಆದರೂ, ಪ್ರಾಪ್ತವಾದ ಆಧಾರದ ಮೇಲೆ, ವಿದ್ಯುತ್ ಪ್ರಸರಣೆಯಿಂದ ಲಭ್ಯವಾಗುವ ಕಂದಾಯ ಮಾನ್ಯತೆಯ ಲೆಕ್ಕಪದ್ಧತಿ ತತ್ವಗಳನ್ನು ಪರಿಗಣಿಸಿ, 2018–19ರಲ್ಲಿ ಆದಾಯವೆಂದು ಲೆಕ್ಕಕ್ಕೊಳಪಡಿಸಲಾಯಿತು. ಮುಂದುವರಿಸಿ, ಕವಿಪ್ರನಿನಿಯು 12 ನಾನ್–ಐ.ಎಸ್.ಟಿ.ಎಸ್. ಮಾರ್ಗಗಳಿಗೆ ರೂ.23.41ಕೋಟಿ ಪ್ರಸರಣ ಶುಲ್ಕವನ್ನು ಕ್ಲೇಮು ಮಾಡುವುದರೊಂದಿಗೆ ಆ.ವ.2019–20ರ ಸಾಲಿಗೆ ವಿದ್ಯುತ್ ದರ ನಿರ್ಧರಣೆಗಾಗಿ ಗೌರವಾನ್ವಿತ ಕ.ವಿ.ನಿ.ಆಯೋಗಕ್ಕೆ ಮನವಿಯನ್ನು ಸಲ್ಲಿಸಿತು. .ಕವಿನಿ ಆಯೋಗವು ಆ.ವ.2017–18, 2018–19 ಹಾಗೂ 2019–20ರ ಸಾಲಿನ ಪ್ರಸರಣ ಶುಲ್ಕಗಳನ್ನು ಅನುಮೋದಿಸಬೇಕಾಗಿದ್ದು, ನಾನ್–ಐ.ಎಸ್.ಟಿ.ಎಸ್. ಮಾರ್ಗಗಳ ಪ್ರಸರಣ ಶುಲ್ಕಗಳ ಅನುಮೋದನೆಯೂ ಬಾಕಿ ಇದ್ದು ಹಾಗೂ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಿ ಮಂಡಿಸಲು ಕಾರ್ಯಚೌಕಟ್ಟಿನ ಪ್ರಕಾರ ವಿವೇಚನಾಯುತ ತತ್ವಗಳನ್ವಯ ಭಾ.ಎ.ಪ.ತತ್ವ 115ರ ಪ್ರಕಾರ ಆದಾಯವನ್ನು ಮಾನ್ಯಗೊಳಿಸಿಲ್ಲ. ಭಾ.ಲೆ.ಪ.ತತ್ವ 114ರ ಪ್ರಕಾರ, ಕಂಡಿಕೆ 11–12, ಸಂಸ್ಥೆಯು, ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳ ಶಿಲ್ಕುಗಳ ಮಾನ್ಯಗೊಳಿಸುವಿಕೆ, ಅಳತೆ, ದುರ್ಬಲಗೊಳಿಸುವುದು ಹಾಗೂ ಅಮಾನ್ಯಗೊಳಿಸುವುದರ ವಿಚಾರವಾಗಿ ತನ್ನ ಹಿಂದಿನ ಜಿ.ಎ.ಎ.ಪಿ. ಲೆಕ್ಕಪದ್ಧತಿ ತತ್ವಗಳನ್ನು ಅನ್ವಯಿಸಿ ಮುಂದುವರಿಸುವುದನ್ನು ಅಗತ್ಯಪಡಿಸುತ್ತದೆ ಎಂದು ಭಾ.ಲೆ.ಪ.ತತ್ವಗಳ ಸಮಾಲೋಚಕರು ಅಭಿಪ್ರಾಯಿಸಿದ್ದಾರೆ, ಅಂದರೆ ದರ ನಿಯಂತ್ರಿತ ಚಟುವಟಿಕೆಗಳಿಗೆ ಲೆಕ್ಕೀಕರಣದ ಮಾರ್ಗದರ್ಶಕ ಟಿಪ್ಪಣಿಯು ಅನ್ವಯಿಸುತ್ತದೆ. ಮಾರ್ಗದರ್ಶಕ ಟಿಪ್ಪಣಿಯ ಕಂಡಿಕೆ 31ರ ಪ್ರಕಾರ, ಭರಿಸಿದ ವೆಚ್ಚವನ್ನು ವಸೂಲು ಮಾಡುವುದು ನಿಯಂತ್ರಕರ ವಿವೇಚನೆಗೆ ಒಳಪಟ್ಟಿದ್ದಲ್ಲಿ, ಲೆಕ್ಕಪದ್ಧತಿ ತತ್ವ 29, ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆ ಹಾಗೂ ಸಾದಿಲ್ವಾರು ಆಸ್ತಿಗಳು ಪ್ರಕಾರ ಅದನ್ನು ಸಾದಿಲ್ವಾರು ಆಸ್ತಿ ಎಂದು ಹೇಳುವುದು ಸೂಕ್ತ. ಅಂತಹ ಪ್ರಕರಣದಲ್ಲಿ, ನಿಯಂತ್ರಕರ ಅನುಮೋದನೆ ಲಭ್ಯವಾಗುವವರೆಗೂ ಆಸ್ತಿಯನ್ನು ಮಾನ್ಯಗೊಳಿಸುವುದು ಸೂಕ್ತವಲ್ಲ. ಕಂಪನಿಯು, ನಿಯಂತ್ರಿತ ದರಗಳನ್ವಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಕಂಪನಿಯು, ಪ್ರತಿ ವರ್ಷ ವಿಧಿಸುವ ವಿದ್ಯುತ್ ದರಗಳು ನಿಯಂತ್ರಣ ಪ್ರಾಧಿಕಾರದ, ಅಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕವಿನಿ ಆಯೋಗ)ದ ಅನುಮೋದನೆಗೆ ಒಳಪಟ್ಟಿರುತ್ತದೆ. ಮುಂದುವರಿಸಿ, ಮಾರ್ಗದರ್ಶಕ ಟಿಪ್ಪಣಿಯ ಪ್ರಕಾರ, ಯುಕ್ತ ಖಚಿತತೆ ಇದ್ದಲ್ಲಿ ಮಾತ್ರ ನಿಯಂತ್ರಿತ ಆಸ್ತಿಯನ್ನು ಸೃಷ್ಟಿಸಬಹುದಾಗಿದೆ. ಅನುಮತಿಸುವುದು ಅಥವಾ ಅನುಮತಿಸದಿರುವುದು ನಿಯಂತ್ರಕರ ನಿರ್ಧಾರಕ್ಕೊಳಪಟ್ಟಿರುತ್ತದೆ. ಆದ್ದರಿಂದ, ತತ್ಸಮಕ್ಕೆ ಸಂಬಂಧಿಸಿದಂತೆ, ಯುಕ್ತ ಖಚಿತತೆ ಇಲ್ಲ. ಯುಕ್ತ ಮಾಹಿತಿ ಹಾಗೂ ಖಚಿತತೆಯ ಅನುಪಸ್ಥಿತಿಯಲ್ಲಿ, ಭಾ.ಲೆ.ಪ.ತತ್ವ 114 ಹಾಗೂ ಸಂಬಂಧಿತ ಮಾರ್ಗದರ್ಶಕ ಟಿಪ್ಪಣಿಗಳನುಸಾರ ಕಂಪನಿಯು ಆ.ವ.2019–20ರ ಸಾಲಿಗೆ ನಾನ್–ಐ.ಎಸ್.ಟಿ.ಎಸ್. ಮಾರ್ಗಗಳಿಗೆ ಒದಗಿ ಬಂದ ಆದಾಯವನ್ನು ಮಾನ್ಯಗೊಳಿಸಿಲ್ಲ. ಪ್ರಾಪ್ತವಾದ ಆಧಾರದ ಮೇಲೆ ಆ.ವ.2017–18 ಹಾಗು 2018–19ರ ಸಾಲಿನಲ್ಲಿ ಲೆಕ್ಕಕ್ಕೊಳಪಡಿಸಿದ ಪ್ರಸರಣ ಶುಲ್ಕಗಳನ್ನು ಆ.ವ.2019–20ರಲ್ಲಿ ಹಿಂತೆಗೆದಿದ್ದು, ಆ.ವ.2019–20ರ ಪ್ರಸರಣ ಶುಲ್ಕವನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಲೆಕ್ಕಕ್ಕೊಳಪಡಿಸಿಲ್ಲ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	**ಆಡಳಿತ ವರ್ಗದ ಉತ್ತರಗಳು**
	ಹಿಂದಿನ ಎರಡು ವರ್ಷಗಳಿಂದ ವ್ಯವಸ್ಥಾಪಕ ಮಂಡಳಿಯು ಅನುಭವಿಸಿರುವಂತೆ, ಕವಿನಿ ಆಯೋಗವು ಯಾವುದೇ ಕ್ರಮವನ್ನು ಕೈಗೊಂಡಿಲ್ಲ, ಈ ನಿಟ್ಟಿನಲ್ಲಿ ಒಂದೂ ಆಲಿಕೆಯನ್ನೂ ಏರ್ಪಡಿಸಲಿಲ್ಲ. ಆದಾಯವನ್ನು ಮಾನ್ಯಗೊಳಿಸುವುದಕ್ಕೆ ಸಂಬಂಧಿಸಿದಂತೆ, ಮೇಲಿನ ಕಾರಣಗಳ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ಮಂಡಳಿಯು ಪ್ರಸಕ್ತ ವರ್ಷದಲ್ಲಿ ತನ್ನ ಅಂದಾಜು ವಿಧಾನವನ್ನು ಬದಲಾಯಿಸಿಕೊಂಡಿದೆ. ಆ.ವ.2019–20ರ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ ಆ.ವ.2017–28, 2018–19 ಹಾಗೂ ಆ.ವ.2019–20ರ ಸಾಲಿನ ನಾನ್–ಐ.ಎಸ್.ಟಿ.ಎಸ್. ಮಾರ್ಗಗಳ ಪ್ರಸರಣ ಶುಲ್ಕಗಳನ್ನು ಸಾದಿಲ್ವಾರು ಆಸ್ತಿಗಳೆಂದು ಪ್ರಕಟಿಸಲಾಗಿದೆ. ಆ.ವ. 2017–18, 2018–19 ಹಾಗೂ ಆ.ವ.2019–20ರ ಸಾಲಿಗೆ ಸಂಬಂಧಿಸಿ, ನಾನ್–ಐ.ಎಸ್.ಟಿ.ಎಸ್. ಮಾರ್ಗಗಳ ಪ್ರಸರಣ ಶುಲ್ಕಗಳನ್ನೂ ಒಳಗೊಂಡಂತೆ, ಕವಿಪ್ರನಿನಿಯ ಇಡೀ ಪ್ರಸರಣ ಕಾರ್ಯಜಾಲದ ಪ್ರಸರಣ ಆದಾಯವನ್ನು ಈಗಾಗಲೇ ಲೆಕ್ಕಕ್ಕೊಳಪಡಿಸಲಾಗಿದೆ. ಆ.ವ.2019–20ರ ಸಾಲಿಗೆ ಕಾಲಕಾಲಕ್ಕೆ ಆದೇಶಿಸಪಡುವ ವಿದ್ಯುತ್ ದರಗಳ ಪ್ರಕಾರ ಅನುಮೋದಿತ ಪ್ರಸರಣ ಶುಲ್ಕಗಳನ್ನು ಆಧರಿಸಿ ಲೆಕ್ಕಕ್ಕೊಳಪಡಿಸಲಾಗಿದ್ದು, ಇದು ಕವಿಪ್ರನಿನಿಯ ಆದಾಯದ ಮೇಲೆ ಪರಿಣಾಮ ಬೀರುವುದಿಲ್ಲ ಎಂಬುದನ್ನು ಗಮನಿಸಬೇಕಾಗಿದೆ.
(xxxvi)	ಐ.ಪಿ.ಡಿ.ಎಸ್. ಯೋಜನೆಯ ಅಡಿಯಲ್ಲಿ, 50 ಎಂ.ಯು.ಎಸ್.ಎಸ್. ಕೇಂದ್ರಗಳಲ್ಲಿ, ಪೂರಕ ಸಾಮಗ್ರಿಗಳ ಸಹಿತ 11 ಕೆವಿ ಸ್ವಿಚ್ಚುಗೇರು ಪ್ಯಾನೆಲುಗಳನ್ನು ಒದಗಿಸುವ ಕಾಮಗಾರಿಯನ್ನು ಕೈಗೊಳಬೇಕೆಂದು ಬೆವಿಕಂಪನಿಯು ಕವಿಪ್ರನಿನಿಗೆ ಮನವಿ ಸಲ್ಲಿಸಿತು. ತದನಂತರದಲ್ಲಿ ಎಂ.ಯು.ಎಸ್.ಎಸ್. ಸಂಖ್ಯೆಯನ್ನು 66ಕ್ಕೆ ಹೆಚ್ಚಿಸಿ, ಅದರ ಪೈಕಿ 31 ಎಂ.ಯು.ಎಸ್.ಎಸ್. ಕೇಂದ್ರದಾ ಕಾಮಗಾರಿಯನ್ನು ದೀನದಯಾಳ್ ಉಪಧ್ಯಾಯ ಗ್ರಾಮ ಜ್ಯೋತಿ ಯೋಜನೆಯ ಅಡಿಯಲ್ಲಿ ವಾಸ್ತವಿಕ ಅಗತ್ಯತೆಯ ಅಧಾರದಂತೆ ಬೆಂಗಳೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕೈಗೊಳುವಂತೆ ಪರಿಷ್ಕರಿಸಿತು. ಠೇವಣಿ ವಂತಿಗೆ ಕಾಮಗಾರಿಯ ಅಡಿಯಲ್ಲಿ ಕಾಮಗಾರಿಯನ್ನು ವಹಿಸಿಕೊಳ್ಳಲಾಯಿತು, ಬೆವಿಕಂಪನಿಯು ಪ್ರಾರಂಭಿಕವಾಗಿ ಐ.ಪಿ.ಡಿ.ಎಸ್.ಯೋಜನೆಯ ನಿಮಿತ್ತ ರೂ.4 ಕೋಟಿ ಹಾಗೂ ದೀ.ದ.ಉ.ಗ್ರಾ.ಜ್ಯೋ.ಯೋಜನೆಯ ನಿಮಿತ್ತ ರೂ.2 ಕೋಟಿಯನ್ನು ಪಾವತಿಸಿತು. ವಿದ್ಯುತ್ ಕೇಂದ್ರಗಳಲ್ಲಿ ಉಪಯೋಗಿಸದೆ ಇರುವ 29 ಸ್ವಿಚ್ಚುಗೇರುಗಳನ್ನು ಐ.ಪಿ.ಡಿ.ಎಸ್. ಯೋಜನೆಯ ಅಡಿಯಲ್ಲಿ ಅನುಷ್ಠಾನಗೊಳಿಸಿ ಬೆವಿಕಂಪನಿಗೆ ತಿಳಿಸಲಾಯಿತು. ಉಳಿದ ಸ್ವಿಚ್ಚುಗೇರುಗಳನ್ನು ಪಡೆಯುವ ಸಲುವಾಗಿ ಖರೀದಿ ಆದೇಶವನ್ನು ಹೊರಡಿಸಿ, ಉಳಿದ ಮೊಬಲಗನ್ನು ಪಾವತಿಸುವಂತೆ ಬೆವಿಕಂಪನಿಯನ್ನು ಕೋರಲಾಯಿತು. ಅನುಷ್ಠಾನಗೊಳಿಸಿದ ಸ್ವಿಚ್ಚುಗೇರುಗಳನ್ನು ತಪಾಸಣೆಗೊಳಿಸಿದ ನಂತರ ಬೆವಿಕಂಪನಿಯು ರೂ.43.65 ಲಕ್ಷವನ್ನು ಪಾವತಿಸಿ, ಬೆವಿಕಂಪನಿ ವ್ಯಾಪ್ತಿಯಲ್ಲಿ ಕೇವಲ 14 ಸ್ವಿಚ್ಚುಗೇರುಗಳನ್ನು ಅನುಷ್ಠಾನಗೊಳಿಸಿರುವಿರಿ ಎಂದು ತಿಳಿಸಿತು. ಈ ಪ್ರಕರಣವನ್ನು ಬಗೆಹರಿಸಲು ಕವಿಪ್ರನಿನಿಯ ಬೆಂಗಳೂರು ಪ್ರಸರಣ ವಲಯವು ಬೆವಿಕಂಪನಿಯೊಂದಿಗೆ ಪತ್ರ ವ್ಯವಹಾರ ನಡೆಸಿದೆ. ಬೆವಿಕಂಪನಿಯೊಂದಿಗೆ, ಅನುಷ್ಠಾನಗೊಳಿಸಿರುವ ಸ್ವಿಚ್ಚುಗೇರುಗಳ ಲೆಕ್ಕಪರಿಶೀಲನೆಯ ನಂತರ ಈ ಮೌಲ್ಯವನ್ನೇ ಆ.ವ.2020–21ರ ಸಾಲಿನಲ್ಲಿ ಕವಿಪ್ರನಿನಿಯ ಲೆಕ್ಕಪುಸ್ತಕಗಳಲ್ಲಿ ಗ್ರಾಹಕ ವಂತಿಗೆಯಿಂದ ಸೃಷ್ಟಿಸಲ್ಪಟ್ಟ ಆಸ್ತಿಗಳೆಂದು ಲೆಕ್ಕಕ್ಕೊಳಪಡಿಸಲಾಗುವುದು.

ಐ.ಎಫ್.ಸಿ. ಮೇಲೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಉತ್ತರ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
A.	ವಿದ್ಯುತ್ ಸರಬರಾಜು ಕಂಪನಿಗಳಲ್ಲಿರುವ ಉದ್ಯೋಗಿಗಗಳನ್ನು ಕಂಪನಿವಾರು ವಿಭಜನೆಗೊಳಿಸಿರುವುದು ಸ್ಪಷ್ಟವಾಗುವವರೆಗೂ, ಕವಿಪ್ರನಿನಿಯಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿಯೋಜನೆಗೊಂಡಿರುವವರು ಎಂದು ಪರಿಗಣಿಸಲಾಗಿದೆ ಎಂದು ಕೆ.ಇ.ಪಿ.ಜಿ.ಟಿ.ಯು ಶಾಸನಬದ್ಧ ಲೆಕ್ಕಪರಿಶೋಧಕರಿಗೆ ತಿಳಿಸಿತು. ಇಂಜಿನಿಯರುಗಳ ಸಂಘವು ಉದ್ಯೋಗಿಗಳನ್ನು ಹೀಗೆ ಪರಿಗಣಿಸಿ ಪ್ರತ್ಯೇಕಿಸಿರುವ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಕವಿಪ್ರನಿನಿಯು ಸಲ್ಲಿಸಿದ್ದ ರಿಟ್ ಮನವಿಯನ್ನು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪೆಟಿಷನ್ ಸಂಖ್ಯೆ 27495/2022 ಮೂಲಕ ದಿನಾಂಕ 18.10.2010ರಂದು ತಿರಸ್ಕರಿಸಿತು. ದಿನಾಂಕ 26.04.2011ರಂದು ನಡೆದ ನಿರ್ದೇಶಕ ಮಂಡಳಿಯ 78ನೆಯ ಸಭೆಯಲ್ಲಿ ಈ ತೀರ್ಪಿನ ವಿಷಯವನ್ನು ಮಂಡಿಸಲಾಯಿತು. ಕವಿಪ್ರನಿನಿಯಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿಯೋಜನೆಗೊಂಡ ಉದ್ಯೋಗಿಗಳೆಂದೇ ಪರಿಗಣಿಸಬೇಕೆಂದು ಸಭೆಯಲ್ಲಿದ್ದ ಸದಸ್ಯರ ಸಮ್ಮುಖದಲ್ಲಿ ನಿರ್ಣಯಿಸಲಾಯಿತು. ಆದ್ದರಿಂದ, ಸೇವಾ ಹೊಣೆಗಾರಿಕೆಯನ್ನು ಕಂಪನಿವಾರು ತೋರಿಸಲು ಆಗುವುದಿಲ್ಲ. ನ್ಯಾಸದಲ್ಲಿ ಹೊಂದಿರುವ ಯೋಜಿತ ಆಸ್ತಿಗಳು ದೀರ್ಘಾವಧಿಯ ಒಟ್ಟಾರೆ ಮೊಬಲಗಾಗಿದ್ದು, ಕಂಪನಿವಾರು ಪ್ರತ್ಯೇಕತೆಯನ್ನು ಹೊಂದಿಲ್ಲ. ಹೀಗಾಗಿ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಮಾನ ದರದ ವಂತಿಗೆಯನ್ನು ಅನ್ವಯಿಸಲಾಗುತ್ತಿದೆ. ನ್ಯಾಸವನ್ನು ರಚಿಸಿದಾಗಿನಿಂದಲೂ ಈ ಕಾರ್ಯಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿದೆ. ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಂದ ಸಮಾನ ದರದ ವಂತಿಗೆಯನ್ನು ಸ್ವೀಕರಿಸಲು ವಾಸ್ತವಿಕ ಮೌಲ್ಯಮಾಪನವನ್ನು ಪ್ರಸ್ತಾಪಿಸಲಾಗಿದೆ ಎಂದು ಕೆ.ಇ.ಪಿ.ಜಿ.ಟಿಯು ಹೇಳಿಕೆ ನೀಡಿದೆ.
B. (I)	(ಎ) ಆಸ್ತಿ, ಸ್ಥಾವರ ಹಾಗೂ ಯಂತ್ರೋಪಕರಣಗಳ ರಿಜಿಸ್ಟರನ್ನು ಕವಿಪ್ರನಿನಿಯ ಲೆಕ್ಕಘಟಕಗಳಲ್ಲಿ ನಿರ್ವಹಿಸಿ ಪರಿಪೂರ್ಣಗೊಳಿಸಲಾಗುತ್ತಿದೆ. ಈ ರಿಜಿಸ್ಟರಿನ ಪರಿಪೂರ್ಣತೆಯು ನಿರಂತರ ಪ್ರಕ್ರಿಯೆಯಾಗಿದ್ದು, ಆಸ್ತಿಗಳನ್ನು ವರ್ಗೀಕರಿಸಿದಾಗಲೆಲ್ಲಾ ಪರಿಪೂರ್ಣಗೊಳಿಸಲಾಗುತ್ತದೆ. (ಬಿ) ಕಂಪನಿಯು ವಿದ್ಯುತ್ ಪ್ರಸರಣೆಯ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ, ವರ್ಷದ 365 ದಿನಗಳೂ ಕಂಪನಿಯು ತನ್ನ ಆಸ್ತಿಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸುತ್ತಿದೆ, ಹೀಗಾಗಿ, ವರದಿ ಸಲ್ಲಿಸುವ ದಿನಾಂಕದಂದಿಗೆ ಆಸ್ತಿಗಳು ದುರ್ಬಲಗೊಂಡಿರುವ ಸಾಧ್ಯತೆ ಇಲ್ಲ. (ಸಿ)ಮತ್ತುಡಿ) ಪ್ರಸರಣ ಸಂಬಂಧವಾದ ವಿದ್ಯುತ್ ಮಾರ್ಗ, ಇತ್ಯಾದಿ ಸಾಮಗ್ರಿಗಳು ಬೆಟ್ಟಗುಡ್ಡ, ಅರಣ್ಯ ಪ್ರದೇಶದಲ್ಲಿ ಹಾದುಹೋಗಿ ಇಡೀ ರಾಜ್ಯಾದ್ಯಂತ ವಿಸ್ತರಿಸಿರುವುದರಿಂದ ಕಂಪನಿಯು ಇವುಗಳ ಭೌತಿಕ ಪರಿಶೀಲನೆಯನ್ನು ನಡೆಸಲು ಕಾರ್ಯತಃ ಸಾಧ್ಯವಿಲ್ಲ. ವಿದ್ಯುತ್ ಪ್ರಸರಣ ಹಾಗೂ ಸಂಬಂಧಿತ ಕಾರ್ಯಾಚರಣೆಯು ನಿರಂತರವಾಗಿ ನಿರ್ವಹಣೆಯಲ್ಲಿರುವವರೆಗೂ ಈ ಆಸ್ತಿಗಳು ಭೌತಿಕವಾಗಿ ಲಭ್ಯವಿವೆ ಎಂದು ಪರಿಗಣಿಸಲಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	(ಇ) ವಿದ್ಯುತ್ ಉಪಕರಣಗಳ ಪ್ರಕರಣಗಳಲ್ಲಿ ಅಂತಹ ಉಪಕರಣದ ಕಾರ್ಯಸ್ಥಗಿತಗೊಳಿಸುವಿಕೆಯ ದಿನಾಂಕವನ್ನು ಊಹಿಸಲು ಆಗದಿರುವುದರಿಂದ, ಅಂತಹ ಕಾರ್ಯಸ್ಥಗಿತಗೊಳಿಸುವಿಕೆಯ ಅಂದಾಜು ವೆಚ್ಚದ ಪ್ರಸಕ್ತ ಮೌಲ್ಯದ ಬಂಡವಾಳೀಕರಿಸುವುದರ ಲೆಕ್ಕಾಚಾರ ಕಾರ್ಯತಃ ಸಾಧ್ಯವಿಲ್ಲ. ಮುಂದುವರಿಸಿ, ಕೇಂ.ವಿ.ನಿ.ಆಯೋಗ ಅಥವಾ ಕವಿನಿ ಆಯೋಗವು ಪ್ರತಿಯೊಂದು ವಿದ್ಯುತ್ ಉಪಕರಣದ ಕಾರ್ಯಸ್ಥಗಿತ ನಿವೃತ್ತಿಯ ದಿನಾಂಕವನ್ನು ಗೊತ್ತುಪಡಿಸಿಕೊಳುವ ಬಗ್ಗೆ ಯಾವುದೇ ನಿರ್ದೇಶನ ಅಥವಾ ಅಧಿಸೂಚನೆಯನ್ನು ನೀಡಿಲ್ಲ.
(ii)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (x)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು
(iii)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (xi)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು
(iv)	(ಎ) ಕವಿಪ್ರನಿನಿಯು, ಆಸ್ತಿಯನ್ನು ಕಾರ್ಯಾನುಷ್ಠಾನಗೊಳಿಸಿದ ದಿನಾಂಕದಂದಿಗೆ ವೆಚ್ಚ ನಮೂದು ಪುಸ್ತಕದಲ್ಲಿ ಲೆಕ್ಕಕ್ಕೊಳಪಡಿಸಿರುವಂತೆ, ಅಂತಹ ಆಸ್ತಿಯ ನಿರ್ಮಾಣಕ್ಕೆ ಸಂಬಂಧಿಸಿದ ವೆಚ್ಚ ಹಾಗೂ ಇತರ ಖರ್ಚುಗಳನ್ನು ಬಂಡವಾಳೀಕರಿಸುತ್ತಿದೆ. ತದನಂತರದಲ್ಲಿ ಸ್ವೀಕರಿಸಿದ ಬಿಲ್ಲುಗಳು ಹಾಗೂ ಲೆಕ್ಕಕ್ಕೊಳಪಡಿಸಿದ ವೆಚ್ಚಗಳನ್ನು ಸಹ ಅದೇ ಆಸ್ತಿಯ ಲೆಕ್ಕಕ್ಕೆ ಬಂಡವಾಳೀಕರಿಸಲಾಗುವುದು, ತದನ್ವಯ ಕಾರ್ಯಾನುಷ್ಠಾನಗೊಳಿಸಿದ ದಿನಾಂಕದಿಂದ ಅನ್ವಯಿತವಾದಂತೆ ಸವಕಳಿಯನ್ನು ವಿಧಿಸಲಾಗುತ್ತದೆ. ವಿವರವಾದ ಕಾರ್ಯಾದೇಶಕ್ಕೆ ಸಂಬಂಧಿಸಿದಂತೆ, ವರದಿ ಸಲ್ಲಿಸಿದ ದಿನಾಂಕದಂದಿಗೆ ಪೂರ್ಣಗೊಳಿಸಿದ ಕಾಮಗಾರಿಗಳ ಸಂಬಂಧವಾದ ಉಳಿಕೆ ವೆಚ್ಚಕ್ಕೂ ಅವಕಾಶ ಕಲ್ಪಿಸಲಾಗುತ್ತಿದೆ. (ಬಿ) ವೆಚ್ಚ ನಮೂದು ಪುಸ್ತಕಗಳನ್ನು ಕಂಪನಿಯ ನೀತಿನಿಯಮಗಳ ಪ್ರಕಾರ ಲೆಕ್ಕಘಟಕಗಳಲ್ಲಿ ನಿರ್ವಹಿಸಲಾಗುತ್ತಿದೆ.
(v)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (vi)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು
(vi)	ಸ್ಥಾಪಿಸುವಿಕೆ, ಸಿವಿಲ್ ವೆಚ್ಚಗಳ ಬಂಡವಾಳೀಕರಣ, ವ್ಯವಸ್ಥೆಗೊಳಪಡಿಸಿದ ವೆಚ್ಚ, ಸಿಬ್ಬಂದಿ ವೆಚ್ಚ, ಆಡಳಿತಾತ್ಮಕ ವೆಚ್ಚ ಇವುಗಳ ಬಂಡವಾಳೀಕರಣ ಹಾಗೂ ಪಾಲು ಮಾಡುವಿಕೆ, ಇತರ ಸಾಮಾನ್ಯ ಮೇಲುವೆಚ್ಚಗಳು, ಸಾಅ ಪಡೆಯುವಿಕೆಯ ವೆಚ್ಚಗಳು ಇವುಗಳ ಬಗ್ಗೆ ಎಲ್ಲಾ ಲೆಕ್ಕಘಟಕಗಳಿಗೆ ದಿನಾಂಕ 08.02.2018ರ ಮೂಲಕ ಸುತ್ತೋಲೆಯ ಸೂಚನೆಯನ್ನು ವಿತರಿಸಲಾಗಿದೆ. ಯಥಾನುಷ್ಠಾನಗೊಳಿಸಲಾಗಿದೆ. ಸಿಬ್ಬಂದಿ ವೆಚ್ಚ, ಆಡಳಿತ ಹಾಗೂ ಸಾಮಾನ್ಯ ವೆಚ್ಚಗಳು, ಸಾಲ ಪಡೆಯುವಿಕೆ ವೆಚ್ಚ, ಇತರ ಮೇಲು ವೆಚ್ಚಗಳನ್ನು, ಅನುಬಂಧ 1ಎ ಅನ್ವಯ ಕಾರ್ಯರೀತಿ ಹಾಗೂ ಸಾಮಗ್ರಿವಾರು ರೀತ್ಯಾ ಹಂಚಲಾಗುತ್ತಿದೆ.
(vii)	ಬಂಡವಾಳೀಕರಣದ ವಾಸ್ತವಿಕ ದಿನಾಂಕದ ಬಗ್ಗೆಯೂ ಸುತ್ತೋಲೆ ಸಂಖ್ಯೆ ಕವಿಪ್ರನಿನಿ/ಆಸ (ಆಮತ್ತುಸಂ)/ಕೆಸಿಒ–21/6936/2013–14, ದಿನಾಂಕ 16.01.2018ರ ಸುತ್ತೋಲೆಯ ಮೂಲಕ ಮಾರ್ಗದರ್ಶಕವನ್ನು ಹೊರಡಿಸಲಾಗಿದ್ದು, ತದನುಸಾರ ಲೆಕ್ಕಕ್ಕೊಳಪಡಿಸಲಾಗಿದೆ. ಸಿಬ್ಬಂದಿ ವೆಚ್ಚ, ಆ ಮತ್ತು ಸಾ ವೆಚ್ಚಗಳು ಹಾಗೂ ಇತರ ಮೇಲು ವೆಚ್ಚಗಳನ್ನು ಅನುಬಂಧ 1 ಎ ಅನ್ವಯ ಹಂಚಲಾಗುತ್ತಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
(viii)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiv)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು
(ix)	ಉಸ್ತುವಾರಿ ವೆಚ್ಚಗಳನ್ನು, ಪೂರ್ಣಗೊಳಿಸಿದ ಉಸ್ತುವಾರಿಯ ಶೇಕಡಾವಾರು ಪ್ರಮಾಣವನ್ನು ಆಧರಿಸಿ ಆದಾಯಕ್ಕೆ ವಿಧಿಸಬೇಕೆಂದು ಸಂಖ್ಯೆ ಆಸ(ಲೆಮತ್ತುಸಂ)/ಕೆಸಿಒ–21/6936/2013–14/ಸಂ–3, ದಿನಾಂಕ 08.04.2020ರ ಮೂಲಕ ಸುತ್ತೋಲೆಯ ಸೂಚನೆಯನ್ನು ಹೊರಡಿಸಲಾಗಿದೆ. ಅಂತಹ ಆದಾಯವನ್ನು ಸಿಬ್ಬಂದಿ ವೆಚ್ಚದಿಂದ ಕಡಿಮೆಗೊಳಿಸಲಾಗುತ್ತಿದೆ. ಆರ್ಥಿಕ ವರ್ಷ 2019–20ರಲ್ಲೂ ಇದನ್ನೇ ಅನುಸರಿಸಲಾಗುತ್ತಿದೆ.
(x)	ಲೆಕ್ಕಪದ್ಧತಿ ತತ್ವ 1.10ರ ಅನ್ವಯ ಹೂಡಿಕೆ ಆಸ್ತಿಗಳಿಗೆ ಹೊಸ ಕಾರ್ಯನೀತಿಯನ್ನು ಅನ್ವಯಿಸಲಾಗಿದ್ದು, 2020–21ರ ಅವಧಿಯಲ್ಲಿ ಅನುಸರಣೆ ಮಾಡಲಾಗುವುದು.
(xi)	ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವಾಗ, ಚಾಲ್ತಿಯಲ್ಲಿರುವ ನಿರ್ಧಾರಿತ ದರವನ್ನು ಅನ್ವಯಿಸಿ ಯೋಜನೆಯ ಒಟ್ಟು ವೆಚ್ಚವನ್ನು ಲೆಕ್ಕಾಚಾರ ಮಾಡಲಾಗುವುದು. ವೆಚ್ಚ ಪ್ರಯೋಜನ ಅನುಪಾತ, ಹಿಂಪಾವತಿ ಅವಧಿ ಇವುಗಳನ್ನು ನಿರ್ಧಾರಿತ ದರವನ್ನು ಅನ್ವಯಿಸಿ ಲೆಕ್ಕಾಚಾರ ಮಾಡಿದ ವೆಚ್ಚದ ಮೇಲೆ ನಿರ್ಧರಿಸಲಾಗುವುದು. ಯೋಜನೆಯನ್ನು ಪೂರ್ಣಗೊಳಿಸಿದ ನಂತರ, ಮುಖ್ಯ ಇಂಜಿನಿಯರ್(ಪ್ರಸರಣ ವಲಯ)ರವರು ಬೃಹತ್ ಕಾಮಗಾರಿ ವಿಭಾಗದೊಂದಿಗೆ ಸಮಾಲೋಚಿಸಿ ವಾಸ್ತವವನ್ನು ಆಧರಿಸಿ ಯೋಜನೆಯ ವೆಚ್ಚವನ್ನು ಪರಿಷ್ಕರಿಸುತ್ತಾರೆ. ಎಲ್ಲ ಮಾಹಿತಿಗಳನ್ನು ಯೋಜನಾ ಶಾಖೆ, ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿ ವಾಸ್ತವಿಕ ವೆಚ್ಚ ಪ್ರಯೋಜನ ಅನುಪಾತ, ಹಿಂಪಾವತಿ ಅವಧಿ ಇವುಗಳನ್ನು ಪರಿಷ್ಕರಿಸಲಾಗುವುದು.
(xii)	ನಿರ್ಮಾಣದ ಅವಧಿಯಲ್ಲಿನ ಬಡ್ಡಿಯನ್ನು ಬಂಡವಾಳೀಕರಿಸುವುದಕ್ಕಾಗಿ ದಿನಾಂಕ 12/02/2015ರ ಮೂಲಕ ಸೂಚನೆಗಳನ್ನು ನೀಡಲಾಗಿದ್ದು, ಕಟ್ಟುನಿಟ್ಟಾಗಿ ಅನುಸರಿಸಲು ಒತ್ತು ನೀಡಲಾಗುವುದು.
C. (xiii)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiii)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು.
(xiv)	ಅನುಮೋದನೆಗಾಗಿ ಅಂತರಸಂಪರ್ಕ ಒಪ್ಪಂದದ ಕರಡನ್ನು ಕವಿನಿ ಆಯೋಗಕ್ಕೆ ಮಂಡಿಸಲಾಗಿದೆ. ಇದೇ ರೀತಿ ಸ್ವ ಕಾರ್ಯನಿರ್ವಹಣೆ, ಠೇವಣಿ ವಂತಿಗೆ ಕಾಮಗಾರಿ, ಆಸ್ತಿಗಳನ್ನು ಉಳಿಸಿಕೊಳ್ಳುವುದು ಇವುಗಳ ಸಂಬಂಧವಾದ ಷರತ್ತು ಹಾಗೂ ನಿಬಂಧನೆಗಳನ್ನು ಅನುಮೋದನೆಗಾಗಿ ಕವಿನಿ ಆಯೋಗಕ್ಕೆ ಸಲಿಸಲಾಗುತ್ತಿದೆ. ಕವಿಪ್ರನಿನಿಯ ಎಲ್ಲ ವಿಭಾಗಗಳಲ್ಲಿ ಸಮಾನರೂಪ ಕಾರ್ಯವಿಧಾನವನ್ನು ಅನುಸರಿಸಲು ಖಚಿತಪಡಿಸುತ್ತದೆ. ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ(ಥ)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು.
(xv)	ಉಸ್ತುವಾರಿ ವೆಚ್ಚಗಳನ್ನು, ಪೂರ್ಣಗೊಳಿಸಿದ ಉಸ್ತುವಾರಿಯ ಶೇಕಡಾವಾರು ಪ್ರಮಾಣವನ್ನು ಆಧರಿಸಿ ಆದಾಯಕ್ಕೆ ವಿಧಿಸಬೇಕೆಂದು ಸಂಖ್ಯೆ ಆಸ(ಲೆಮತ್ತುಸಂ)/ಕೆಸಿಒ–21/6936/2013–14/ಸಂ–3, ದಿನಾಂಕ 08.04.2020ರ ಮೂಲಕ ಸುತ್ತೋಲೆಯ ಸೂಚನೆಯನ್ನು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	ಹೊರಡಿಸಲಾಗಿದೆ. ಅಂತಹ ಆದಾಯವನ್ನು ಸಿಬ್ಬಂದಿ ವೆಚ್ಚದಿಂದ ಕಡಿಮೆಗೊಳಿಸಲಾಗುತ್ತಿದೆ. ಆರ್ಥಿಕ ವರ್ಷ 2019–20ರಲ್ಲೂ ಇದನ್ನೇ ಅನುಸರಿಸಲಾಗುತ್ತಿದೆ.
(xvi)	ಕಾಲಿಕ ಕೇಳಿಕೆ, ವಸೂಲಿ, ತಡ ಪಾವತಿ ಶುಲ್ಕವನ್ನು ಕ್ಲೇಮು ಮಾಡುವುದು, ಹಾಗೂ ಕವಿನಿ ಆಯೋಗದ ನಿರ್ದೇಶನಗಳ ಪ್ರಕಾರ ಬಂಡವಾಳ ವೆಚ್ಚವನ್ನು ಲೆಕ್ಕಾಚಾರ ಮಾಡುವುದರ ಸಂಬಂಧವಾಗಿ ಸುತ್ತೋಲೆ ಸಂಖ್ಯೆ ಕವಿಪ್ರನಿನಿ/ಬಿ28(ಎ)/32543/2012–13, ದಿನಾಂಕ 01.04.2019ರ ಮೂಲಕ ಸುತ್ತೋಲೆಯನ್ನು ಹೊರಡಿಸಲಾಗಿದೆ.
(xvii)	ಲೆಕ್ಕಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiii)ಕ್ಕೆ ನೀಡಿರುವ ಉತ್ತರವನ್ನು ಅನ್ವಯಿಸುವುದು.
(xviii)	ಕವಿಪ್ರನಿನಿಯ ಹಾಲಿ ಮೂಲ ಸೌಕರ್ಯಗಳನ್ನು ಪಡೆದಿರುವ ಸ್ವ.ವಿ.ಉತ್ಪಾದಕರಿಂದ ಸಮಾನ ಮೂಲಸೌಕರ್ಯ ವೆಚ್ಚದ ವಸೂಲಿ ಬಗ್ಗೆ ಅಂತಹ ವಿದ್ಯುತ್ ಉತ್ಪಾದಕರಿಗೆ ಆದೇಶ ಸಂಖ್ಯೆ ಕವಿಪ್ರನಿನಿ/ಬಿ28(ಎ)/32543/12–13, ದಿನಾಂಕ 11.12.2020ರ ಮೂಲಕ ಸೂಚನೆಯನ್ನು ನೀಡಲಾಗಿದೆ.
D. (xix)	(ಎ) ಕಾಮಗಾರಿಯು ಪ್ರಗತಿ ಹೊಂದಿದಂತೆಲ್ಲಾ ಎಲ್ಲಾ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಬೇಕೆಂದು ಕಾರ್ಯಕ್ಷೇತ್ರ ಸಿಬ್ಬಂದಿಗೆ ಅವಶ್ಯಪಡಿಸಲಾಗಿದೆ. (ಬಿ) ಕಾಮಗಾರಿಯು ಪೂರ್ಣಗೊಂಡಿರುವ ಬಹುತೇಕ ಪ್ರಕರಣಗಳಲ್ಲಿ ವರದಿಯನ್ನು ಸಲ್ಲಿಸುವ ದಿನಾಂಕದಂದಿಗೆ ಅವಕಾಶವನ್ನು ಕಲ್ಪಿಸಲಾಗುತ್ತಿದೆ. (ಸಿ) ಪರಿಮಾಣ ವ್ಯತ್ಯಯದ ಕೇಮುಗಳನ್ನು ಲೆಕ್ಕ ಘಟಕಗಳಲ್ಲಿ ಪ್ರಕ್ರಿಯೆಗೊಳಿಸಿ ಅನುಮೋದನೆಗಾಗಿ ಉನ್ನತ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ. ಪಾವತಿಗಾಗಿ ಅನುಮತಿಸುವ ಮುಂಚೆ ಈ ಬಿಲ್ಲುಗಳನ್ನು ವಿವಿಧ ಹಂತಗಳಲ್ಲಿ ಅನುಮೋದಿಸಬೇಕಾಗಿದ್ದು, ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳುತ್ತಿದೆ. ಐ.ಇ.ಇ.ಎಂ.ಎ.ಯು ತ್ರೈಮಾಸಿಕವಾಗಿ ಹೊರಡಿಸುವ ಐ.ಇ.ಇ.ಎಂ.ಎ. ಸೂಚ್ಯಂಕದ ಸ್ವೀಕೃತಿಯ ನಂತರ ದರ ವ್ಯತ್ಯಯ ಬಿಲ್ಲುಗಳನ್ನು ಸಿದ್ಧಪಡಿಸಲಾಗುತ್ತದೆ. ಹೀಗಾಗಿ ದರ ವ್ಯತ್ಯಯ ಬಿಲ್ಲುಗಳ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ. (ಡಿ) ವೋಚರುಗಳ ಲೆಕ್ಕಪರಿಶೋಧನೆಯ ಸಮಯದಲ್ಲಿ(ಪರಿಶೋಧನಾ ನಂತರ ಪ್ರಕ್ರಿಯೆಯ ಆಧಾರದಲ್ಲಿ) ಆರ್.ಎ. ಬಿಲ್ಲುಗಳನ್ನು ಪರಿಶೋಧನೆಗೆ ಒಳಪಡಿಸಲಾಗುತ್ತದೆ ಹಾಗೂ ಅಂತಿಮ ಬಿಲ್ಲುಗಳನ್ನು (ಪರಿಶೋಧನಾ ಪೂರ್ವ ಪ್ರಕ್ರಿಯೆಯ ಆಧಾರದಲ್ಲಿ) ಲೆಕ್ಕಪರಿಶೋಧನೆಗೆ ಒಳಪಡಿಸಲಾಗುತ್ತದೆ.
(xx)	ಈ ಪ್ರಕರಣವನ್ನು ಶೋಧಿಸಲಾಗಿದೆ. ಪ್ರಸ್ತುತ, ಗುತ್ತಿಗೆ ಏಜೆನ್ಸಿಗಳು ಸ್ವತಃ ತಯಾರಿಸಿದ ಸಾಮಗ್ರಿಗಳಿಗೆ ಮಾತ್ರ ದರ ವ್ಯತ್ಯಯವನ್ನು ಅನುಮತಿಸಲಾಗುತ್ತಿದ್ದು, ಕೊಂಡುತಂಡ ಸಾಮಗ್ರಿಗಳಿಗೆ ಅನುಮತಿಸುತ್ತಿಲ್ಲ. ಈ ಸಂಬಂಧದ ಸುತ್ತೋಲೆಯನ್ನು (ಅನುಬಂಧ–I) ಎಂದು ಕಡತದಲ್ಲಿ ಇರಿಸಲಾಗಿದೆ. ಆದಾಗ್ಯೂ, ಪರಿಗಣಿಸಬೇಕಾದ ಮೂಲ ದರಕ್ಕೆ ಅನ್ವಯಿಸಿದಂತೆ, ದರ ವ್ಯತ್ಯಯವನ್ನು ಸಮ್ಮತಿಸುವುದಕ್ಕೆ ಸಂಬಂಧಿಸಿದ ಹಾಲಿ ಟೆಂಡರು ಷರತ್ತುಗಳು ಕವಿಪ್ರನಿನಿಯಿಂದ ಪರಿಶೀಲನೆಗೆ ಒಳಪಟ್ಟಿವೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
(xxi)	ಅನುಮೋದಿತ ವಿನ್ಯಾಸ/ರೇಖಾನಕ್ಷೆಯನ್ನು ಆಧರಿಸಿದ ವಾಸ್ತವಿಕ ಅಗತ್ಯ ಪ್ರಮಾಣಕ್ಕೆ ಮಾತ್ರ ಸಾಮಗ್ರಿ ತಪಾಸಣೆ ಹಾಗೂ ಅನಂತರದ ರವಾನೆ ಸೂಚನೆಗಳನ್ನು ಹೊರಡಿಸುವ ಪ್ರಕ್ರಿಯೆ ಕೈಗೊಳ್ಳಬೇಕು ಹಾಗೂ ಈ ಪ್ರಮಾಣಕ್ಕೆ ಮಾತ್ರ ಪಾವತಿಗಳನ್ನು ಸೀಮಿತಗೊಳಿಸಬೇಕೆಂದು ಸಂಖ್ಯೆ ಕವಿಪ್ರನಿನಿ/ಬಿ19/345/85–86, ದಿನಾಂಕ 08.01.2020ರ ಸುತ್ತೋಲೆಯ ಮೂಲಕ ಕಾರ್ಯಕ್ಷೇತ್ರ ಸಿಬ್ಬಂದಿಗೆ ಯಥೋಚಿತ ಸೂಚನೆಗಳನ್ನು ನೀಡಲಾಗಿದೆ.
(xxii)	ಯಂತ್ರೋಪಕರಣ ಹಾಗೂ ಕೂಲಿಗಳ ಬಳಕೆ ಮಾಡಿರುವ ಕಾಮಗಾರಿಗಳಲ್ಲಿ, ಸ್ಥಾಪನೆ ಕೆಲಸಕ್ಕೆ ಕೇವಲ ಕೂಲಿ ವೆಚ್ಚ ಅನುಮತಿಸಿರುವೆಡೆ ದರ ವ್ಯತ್ಯಯವನ್ನು ಅನುಮತಿಸುವುದಿಲ್ಲವೆಂದು ಸಂಖ್ಯೆ ಕವಿಪ್ರನಿನಿ/ಬಿ8/2344/09–10(10), ದಿನಾಂಕ 08.02.2011ರ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಸುತ್ತೋಲೆಯ ಪ್ರತಿ, ಅನಂತರದ ತಿದ್ದುಪಡಿಗಳ ಪ್ರತಿಗಳನ್ನು ಕಡತದಲಿ ಇರಿಸಿದ್ದು, ಯಾವುದೇ ಸಂದಿಗ್ಧತೆ ಇಲ್ಲ (ಅನುಬಂಧ–3).
E. (xxiii)	ನಿಗಮವು ಕಾಲಕಾಲಕ್ಕೆ ಹೊರಡಿಸುವ ಲೆಕ್ಕಪರಿಶೋಧನೆ ಕೈಪಿಡಿ ಹಾಗೂ ತತ್ವಗಳ ಪ್ರಕಾರ ಆರ್ಥಿಕ ಸಲಹೆಗಾರರು(ಆಂ.ಪ)ರವರ ಉಸ್ತುವಾರಿಯಲ್ಲಿ ಆಂತರಿಕ ಪರಿಶೋಧನೆ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ಪರಿಶೋಧನೆಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತಿದೆ. ನಗದು ವ್ಯವಹಾರಗಳು, ಲೆಕ್ಕಪತ್ರಗಳು,ಉಗ್ರಾಣ ವ್ಯವಹರಣೆಗಳು, ಸಾಮಗ್ರಿ ಸಂಗ್ರಹ ಪ್ರಸ್ತಾವನೆಗಳು, ಎಸ್.ಎಲ್.ಡಿ.ಸಿ. ವ್ಯವಹರಣೆಗಳು,ಪ್ರಸರಣ ಬಿಲ್ ಪ್ರಕ್ರಿಯೆಗಳ ಪರಿಶೀಲನೆ ಜೊತೆ ಪರಿಶೋಧನಾ ಪೂರ್ವ ಹಾಗೂ ಪರಿಶೋಧನಾ ನಂತರ ಪ್ರಕ್ರಿಯೆಗಳು. ಪ್ರಸ್ತುತ ಆಂತರಿಕ ಪರಿಶೋಧನಾ ಘಟಕವು ವಲಯ ಮಟ್ಟದಲ್ಲಿ ಮೂಲ ಸಿಬ್ಬಂದಿಯಿಂದ ನಿರ್ವಹಿತಗೊಳ್ಳುತ್ತಿದೆ. ಮೇಲಿನ ಅಂಶಗಳ ಕಾರಣದಿಂದ ಅಂತರಿಕ ಪರಿಶೋಧನಾ ಘಟಕವನ್ನು ಮತ್ತಷ್ಟು ಸದೃಢಗೊಳಿಸುವ ಉದ್ದೇಶವಿದ್ದು, ಲೆಕ್ಕ ಘಟಕಗಳ ವ್ಯಾಪ್ತಿ ಸಹಿತ ವ್ಯವಹರಣೆಗಳ ಉದ್ದೇಶ ಹಾಗೂ ಪರಿಮಾಣವನ್ನು ಪರಿಗಣಿಸಿ ವಿವರವಾದ ಪ್ರಸ್ತಾವನೆಯನ್ನು ಟಿಪ್ಪಣಿ ಸಂಖ್ಯೆ ಕೆಸಿಒ–46/43892/12–13/240, ದಿನಾಂಕ 19.10.2012ರ ಮೂಲಕ ಕಂಪನಿಯ ಆಡಳಿತಾತ್ಮಕ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ. ಅಲ್ಲದೆ, ಅಂತರಿಕ ಪರಿಶೋಧನಾ ದಳವನ್ನು ಬಲಪಡಿಸುವ ಅವಶ್ಯಕತೆಯನ್ನು ವಿಶೇಷಾಂಶ ರೂಪದಲ್ಲಿ ವಿವರಿಸಿರುವ ಟಿಪ್ಪಣಿಯೊಂದನ್ನು ಆರ್ಥಿಕ ಸಲಹೆಗಾರರು(ಆ ಮತ್ತು ಸಂ) ಹಾಗೂ ಅಂತರಿಕ ಮಾನವಶಕ್ತಿ ಸಮಿತಿಯ ಅಧ್ಯಕ್ಷರಿಗೆ ಟಿಪ್ಪಣಿ ಸಂಖ್ಯೆ ಕೆಸಿಒ–46/31582/2015–16/141, ದಿನಾಂಕ 04.02.2016ರ ಮೂಲಕ ಸಲ್ಲಿಸಿ ವರದಿಯಲ್ಲಿ ಸೇರಿಸುವಂತೆ ಕೋರಲಾಗಿದೆ. ಮಹಾಲೇಖಪಾಲರು ಹಾಗೂ ಶಾಸನಬದ್ಧ ಲೆಕ್ಕ ಪರಿಶೋಧಕರ ಅಭಿಪ್ರಾಯದ ಅನುಸಾರ, ಕಂಪನಿಯ ಉದ್ದೇಶ, ವ್ಯಾಪ್ತಿ ಹಾಗೂ ಕಾರ್ಯನಿರ್ವಹಣೆಯನ್ನು ಪರಿಗಣಿಸಿ ಕವಿಪ್ರನಿನಿಯ ಕಾರ್ಯಹೊರೆ ಹಾಗೂ ಮಾನವಶಕ್ತಿ ಅಧ್ಯಯನದ ಎ.ಎಸ್.ಸಿ.ಐ, ವರದಿ ಬಗ್ಗೆ ಆಂತರಿಕ ಸಮಿತಿಯು, ಪರಮಾದ್ಯತೆಯ ಮೇರೆಗೆ ಅಂತರಿಕ ಪರಿಶೋಧನಾ ದಳವನ್ನು ಸದೃಢಗೊಳಿಸುವಂತೆ ಶಿಫಾರಸ್ಸು ಮಾಡಿದೆ. ವ್ಯವಸ್ಥಾಪಕ ಮಂಡಳಿಯು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಅಂತರಿಕ ಪರಿಶೋಧನಾ ದಳವನ್ನು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	ಸದೃಢಗೊಳಿಸುವಂತೆ ಪುನಃ ಮನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ ಇವರಿಗೆ ಸಂಖ್ಯೆ ಆ.ಸ(ಅಂ.ಪ)/ಕೆಸಿಒ–43/97435/2018–19/545, ದಿನಾಂಕ 05.03.2019ರ ಮೂಲಕ ಟಿಪ್ಪಣಿಯನ್ನು ಸಲ್ಲಿಸಲಾಗಿದೆ. ನಿಗಮ ಕಚೇರಿಯ ಸುತ್ತೋಲೆ ಸಂಖ್ಯೆ ಕವಿಪ್ರನಿನಿ/ಬಿ8/2344/09–10(6), ದಿನಾಂಕ 24.03.2010ರ ಪ್ರಕಾರ ವೋಚರುಗಳ ಲೆಕ್ಕಪರಿಶೋಧನೆಯ ಸಮಯದಲ್ಲಿ(ಪರಿಶೋಧನಾ ನಂತರ ಪ್ರಕ್ರಿಯೆಯ ಆಧಾರದಲ್ಲಿ) ಆರ್.ಎ. ಬಿಲ್ಲುಗಳನ್ನು ಪರಿಶೋಧನೆಗೆ ಒಳಪಡಿಸಲಾಗುತ್ತದೆ ಹಾಗೂ ಅಂತಿಮ ಬಿಲ್ಲುಗಳನ್ನು (ಪರಿಶೋಧನಾ ಪೂರ್ವ ಪ್ರಕ್ರಿಯೆಯ ಆಧಾರದಲ್ಲಿ) ಲೆಕ್ಕಪರಿಶೋಧನೆಗೆ ಒಳಪಡಿಸಲಾಗುತ್ತದೆ. ಆಸ್ತಿ ಸ್ವತ್ತುಗಳ ಬಂಡವಾಳೀಕರಣ, ತಪಾಸಣೆ ಹಾಗೂ ಲೆಕ್ಕಪರಿಶೋಧನೆಯ ಅವಧಿಯ ಆದಾಯ ಹಾಗೂ ವೆಚ್ಚಗಳನ್ನು ವಲಯ ಉಪ ನಿಯಂತ್ರಣಾಧಿಕಾರಿಗಳು ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು ನಿಯತವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಆದರೂ, ಆಸ್ತಿ ಸ್ವತ್ತುಗಳ ಬಂಡವಾಳೀಕರಣ, ತಪಾಸಣೆ ಹಾಗೂ ಲೆಕ್ಕಪರಿಶೋಧನೆಯ ಅವಧಿಯ ಆದಾಯ ಹಾಗೂ ವೆಚ್ಚಗಳ ಮಾನ್ಯಗೊಳಿಸುವಿಕೆಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕೆಂದು ಸೂಚನೆ ನೀಡಲಾಗುವುದು. ಆಂತರಿಕ ಪರಿಶೋಧನಾ ದಳದ ಸಿಬ್ಬಂದಿಯ ತರಬೇತಿ ಕಾರ್ಯಕ್ರಮದ ಬಗ್ಗೆ ಕವಿಪ್ರನಿನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಶಾಖೆಯು ಉಸ್ತುವಾರಿ ನಡೆಸುತ್ತಿದ್ದು, ವಿವಿಧ ವಿಷಯಗಳ ಬಗ್ಗೆ ನಿಯತವಾಗಿ ತರಬೇತಿಯನ್ನು ನೀಡಲಾಗುತ್ತಿದೆ.
(xxiv)	ಶಾಸನಬದ್ಧ ಬಾಕಿಗಳನ್ನು ಲೆಕ್ಕಕ್ಕೊಳಪಡಿಸಿ, ನಿಗದಿತ ದಿನಾಂಕದೊಳಗೆ ಸಂಬಂಧಿತ ಇಲಾಖೆಗಳಿಗೆ ಪಾವತಿಸಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ವಿಳಂಬವನ್ನು ಗಮನಿಸಿದ್ದು, ಇಂತಹ ವಿಳಂಬವನ್ನು ತಪ್ಪಿಸಲು ಪ್ರಯತ್ನಿಸಲಾಗುವುದು.
F. (xxv)	ಕಾರ್ಯ ಮತ್ತು ಪಾಲನೆ ಶುಲ್ಕ, ಪ್ರಸರಣ ಶುಲ್ಕಗಳನ್ನು ಒದಗಿ ಬಂದ ಆಧಾರದಂತೆ ಲೆಕ್ಕಕ್ಕೊಳಪಡಿಸಲಾಗುತ್ತಿದೆ. ಪ್ರೋತ್ಸಾಹ, ದಂಡ ವಸೂಲಿ, ಆವರಣ ಶುಲ್ಕಗಳನ್ನು ಕವಿಪ್ರನಿನಿಯ ಲೆಕ್ಕಪದ್ಧತಿ ತತ್ವಗಳನುಸಾರ ನಗದು ಆಧಾರದಂತೆ ಲೆಕ್ಕಕ್ಕೊಳಪಡಿಸಲಾಗುತ್ತಿದೆ.
(xxvi)	ತಡ ಪಾವತಿ ಮೇಲು ಶುಲ್ಕ/ರಿಯಾಯಿಯನ್ನು ಗೌರವಾನ್ವಿತ ಆಯೋಗವು ಅನುಮೊದಿಸಿರುವ ನಿರ್ಧಾರಿತ ಪ್ರಸರಣ ಒಪ್ಪಂದದ ನಿವೇದನೆಯ ಪ್ರಕಾರ ವ್ಯವಹರಿಸಲಾಗುತ್ತಿದೆ.
(xxvii)	ಪ್ರಸರಣ ಶುಲ್ಕಗಳನ್ನು ಕವಿನಿ ಆಯೊಗವು ಕಾಲಕಾಲಕ್ಕೆ ಹೊರಡಿಸುವ ನಿಬಂಧನೆಗಳ ಪ್ರಕಾರ ಲೆಕ್ಕಾಚಾರ ಮಾಡಲಾಗುತ್ತದೆ, ತದನ್ವಯ ಅನುಮೋದನೆಗಾಗಿ ಆಯೋಗಕ್ಕೆ ಮಂಡಿಸಲಾಗುತ್ತದೆ. ಆಯೋಗವು ಕಾಲಕಾಲಕ್ಕೆ ಹೊರಡಿಸುವ ತನ್ನ ವಿದ್ಯುತ್ ದರ ಆದೇಶದಲ್ಲಿ ಪ್ರಸರಣ ಶುಲ್ಕವನ್ನು ಅನುಮೋದಿಸುತ್ತದೆ, ಅದನ್ನೇ ಕವಿಪ್ರನಿನಿಯ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಕಂದಾಯವೆಂದು ಲೆಕ್ಕಕ್ಕೊಳಪಡಿಸಲಾಗುತ್ತದೆ.
G. (xxviii)	ಭಾ.ಲೆ.ಪ.ತತ್ವಗಳ ಅವಕಾಶಗಳ ಪಾಲನೆಗಾಗಿ ಸಾಕಷ್ಟು ಕಾರ್ಯನೀತಿ ಹಾಗೂ ಕಾರ್ಯವಿಧಾನಗಳನ್ನು ರೂಪಿಸಲಾಗಿದೆ. ಇದನ್ನೇ ಅನುಷ್ಠಾನಗೊಳಿಸಲಾಗಿದೆ. ಅಲ್ಲದೆ, 2019–20ರಲ್ಲಿ ಕಂಪನಿಯು ತನ್ನ ಭಾ.ಲೆ.ಪ.ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಭಾ.ಲೆ.ಪ.ತತ್ವ ಸಮಾಲೋಚಕರ ಸೇವೆಯನ್ನೂ ಬಳಸಿಕೊಂಡಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
(xxix)	ಕವಿಪ್ರನಿನಿಯ ಟೆಂಡರಿಂಗ್ ಹಾಗೂ ಸಂಗ್ರಹಣೆ ಶಾಖೆಯು ಕೈಗೊಳುತ್ತಿರುವ ಎಲ್ಲಾ ಟೆಂಡರಿಂಗ್ ಹಾಗೂ ಸಂಗ್ರಹಣೆ ಚಟುವಟಿಕೆಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ,(ಕೆ.ಟಿ.ಪಿ.ಪಿ)1999ರಲ್ಲಿ ನಿಗದಿಪಡಿಸಿರುವ ನಿರ್ಧಾರಿತ ಕಾರ್ಯವಿಧಾನ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಅನುಸರಿಸಲಾಗುತ್ತಿದೆ. ಕೆ.ಟಿ.ಪಿ.ಪಿ. ಕಾಯಿದೆಯ ಪಾಲನೆಯ ಸಮುಚಿತತೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ನಿರ್ಧಾರಿತ ಕಾರ್ಯಾಚರಣೆ ವಿಧಾನಗಳ ಅಗತ್ಯತೆ ಇಲ್ಲವೆಂದು ಭಾವಿಸಲಾಗಿದೆ.
(xxx)	ನಿರ್ಮಾಣ ಹಾಗೂ ಮೂಲ ಸೌಕರ್ಯಗಳ ನಿರ್ವಹಣೆಯು ಕವಿಪ್ರನಿನಿಯ ನಿರಂತರ ಪ್ರಕ್ರಿಯೆಯಾಗಿದ್ದು, ವರ್ಷದಿಂದ ವರ್ಷಕ್ಕೆ ಬೃಹತ್ ಪ್ರಮಾಣದ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯಪಡಿಸುತ್ತದೆ. ಕವಿಪ್ರನಿನಿಯು ಈ ಕಾಮಗಾರಿಗಳನ್ನು ಗುತ್ತಿಗೆದಾರರು/ ಸಂಸ್ಥೆಗಳ ಮೂಲಕ ನಿರ್ವಹಿಸುತ್ತಿರುವುದರಿಂದ, ಕವಿಪ್ರನಿನಿಯು ಗುತ್ತಿಗೆದಾರರು/ಸಂಸ್ಥೆಗಳಿಂದ ಮುಂಗಡ ಭದ್ರತಾ ಠೇವಣಿ ಹಾಗೂ ಇತರ ಠೇವಣಿಗಳನ್ನು ವಸೂಲಿ ಮಾಡುತ್ತಿದೆ. ವಸೂಲಿಯ ಉಸ್ತುವಾರಿ ಹಾಗೂ ಠೇವಣಿಗಾ ಮರುಪಾವತಿಯ ಸಲುವಾಗಿ ಆಯಾ ಕಾಮಗಾರಿ ಪ್ರಕಾರ, ಗುತ್ತಿಗೆದಾರ/ಸಂಸ್ಥೆವಾರು ಅನುಸೂಚಿಯನ್ನು ನಿರ್ವಹಿಸುತ್ತಿದೆ. ಅನುಸೂಚಿಯಲ್ಲಿ ಅಪಾರ ಪ್ರಮಾಣದ ವ್ಯವಹರಣೆಗಳ ಪ್ರಯುಕ್ತ, ಪ್ರತಿಯೊಬ್ಬ ಗುತ್ತಿಗೆದಾರ/ಸಂಸ್ಥೆಯಿಂದ ಸ್ಥಿರೀಕರಣವನ್ನು ಪಡೆಯುವುದು ಕಾರ್ಯತಃ ಸಾಧ್ಯವಿಲ್ಲ. ಕ್ಲೇಮು ಮಾಡಿಲ್ಲದ ಮುಂಗಡ ಭದ್ರತಾ ಠೇವಣಿಯ ವಿಷಯದಲ್ಲಿ, ಕವಿಪ್ರನಿನಿಯ ಲೆಕ್ಕಪುಸ್ತಕಗಳಲ್ಲಿ ಮರುಪಾವತಿಗಾಗಿ ಉಳಿದಿರುವ ಕ್ಲೇಮು ಮಾಡಿಲ್ಲದ ಮುಂಗಡ ಭದ್ರತಾ ಠೇವಣಿಯನ್ನು ಇತರೆ ಆದಾಯಕ್ಕೆ ವರ್ಗಾವಣೆ ಮಾಡುವುದಕ್ಕೆ ಮುಂಚಿತವಾಗಿ ಕ್ಲೇಮು ಮಾಡಬೇಕೆಂದು ಸಂಬಂಧಿತ ಗುತ್ತಿಗೆದಾರ/ಏಜೆನ್ಸಿ/ಸಂಸ್ಥೆಗಳಿಗೆ ಪತ್ರಗಳನ್ನು ಬರೆಯಲಾಗಿದೆ. 2019–20ರಿಂದ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಈ ಮಟ್ಟಿಗೆ, ಈ ಕಚೇರಿಯಿಂದ ಸಂಖ್ಯೆ ಆ.ಸ(ಲೆಮತ್ತುಸಂ)/ಕೆಸಿಒ–21/6963/2013–14, ದಿನಾಂಕ 20.12.2019ರ ಮೂಲಕ ಸುತ್ತೋಲೆಯನ್ನು ಹೊರಡಿಸಲಾಗಿದೆ.
(xxxi)	ಕಂಪನಿಯು ಕೈಗೊಂಡ ಕ್ಲಿಷ್ಟಕರ ಅಂದಾಜು ಹಾಗೂ ತೀರ್ಮಾನಗಳೆಲ್ಲವನ್ನೂ ಆರ್ಥಿಕ ನಿರೂಪಣಾ ಪಟ್ಟಿಯ ಟಿಪ್ಪಣಿ 37.17ರಲ್ಲಿ ಪ್ರಕಟಿಸಲಾಗಿದೆ. ಪ್ರತಿ ವರ್ಷಾಂತ್ಯದಲ್ಲಿ ಈ ಅಂದಾಜುಗಳನ್ನು ಪುನರ್ ಪರಿಶೀಲಿಸಲಾಗುತ್ತದೆ. ಸಮುಚಿತತೆಯನ್ನು ಖಚಿತಪಡಿಸಿಕೊಳ್ಳಲು, ಆರ್ಥಿಕ ವರ್ಷದ ಅಂತ್ಯದಲ್ಲಿ ಕವಿಪ್ರನಿನಿಯ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸುವಾಗ ಪುನರ್ ಪರಿಶೀಲನೆಯನ್ನು ನಡೆಸಲಾಗುತ್ತದೆ. ಯಾವುದೇ ಗಮನಾರ್ಹ ಬದಲಾವಣೆ ಇದ್ದಲ್ಲಿ, ಅಂತಹವುಗಳನ್ನು ಕವಿಪ್ರನಿನಿಯು ತನ್ನ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಲೆಕ್ಕಕ್ಕೊಳಪಡಿಸಿದೆ. ಲೆಕ್ಕ ಪದ್ಧತಿ ತತ್ವದ ಟಿಪ್ಪಣಿ ಸಂಖ್ಯೆ 1.3ರಲ್ಲಿ ಕ್ಲಿಷ್ಟಕರ ಅಂದಾಜುಗಳನ್ನು ಪ್ರಕ್ರಿಯೆಗೊಳಿಸಿರುವುದರ ವಿವರವಾದ ಮಾಹಿತಿಯನ್ನು ಪ್ರಕಟಿಸಿದ್ದು, ಈ ಬಗ್ಗೆ ಗಮನ ಸೆಳೆಯಲಾಗಿದೆ.
(xxxii)	ಪ್ರಸ್ತುತ, ಕವಿಪ್ರನಿನಿಯು ಎಫ್.ವಿ.ಟಿ.ಪಿ.ಎಲ್ ಹಾಗೂ ಎಫ್‌ವಿಒಸಿಐನಂತೆ ನ್ಯಾಯಯುತ ಮೌಲ್ಯದಂತೆ ಇರಬೇಕಾದ ಯಾವುದೇ ಆರ್ಥಿಕ ಸ್ವತ್ತು ಹಾಗೂ ಹೊಣೆಗಾರಿಕೆಗಳನ್ನು ಕವಿಪ್ರನಿನಿಯು ಹೊಂದಿಲ್ಲ. ಋಣಮುಕ್ತತೆಗೊಳಿಸಿದ ವೆಚ್ಚ, ಎಫ್.ವಿ.ಟಿ.ಪಿ.ಎಲ್ ಅಥವಾ ಎಫ್‌ವಿಒಸಿಐ ಎಂದು ಸಾಲು ಸಾಲಾಗಿ ವರ್ಗೀಕರಿಸಿರುವ ಎಲ್ಲಾ ಆರ್ಥಿಕ ಸ್ವತ್ತು ಹಾಗೂ ಹೊಣೆಗಾರಿಕೆಗಳ ವಿವರಗಳನ್ನು

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	ಆರ್ಥಿಕ ನಿರೂಪಣಾ ಪಟ್ಟಿಯ ಟಿಪ್ಪಣಿ 37.18ರಲ್ಲಿ ಪ್ರಕಟಪಡಿಸಲಾಗಿದ್ದು, ಎಲ್ಲಾ ಆರ್ಥಿಕ ಸ್ವತ್ತು ಹಾಗೂ ಹೊಣೆಗಾರಿಕೆಗಳನ್ನು ಋಣಮುಕ್ತತೆಗೊಳಿಸಿದ ವೆಚ್ಚದ ಅಧಾರದ ಮೇಲೆ ವರ್ಗೀಕರಿಸಲಾಗಿದೆ ಎಂದು ಕಂಪನಿಯು ತಿಳಿಸಿದೆ. ಅಲ್ಲದೆ, ಮುಂದೆ ತಿಳಿಸಿರುವಂತೆ ಕಂಪನಿಯು ಆರ್ಥಿಕ ಸ್ವತ್ತು ಹಾಗೂ ಹೊಣೆಗಾರಿಕೆಗಳನ್ನು ವರ್ಗೀಕರಿಸಲು ವಿವರಣಾತ್ಮಕ ವಿಶ್ಲೇಷಣೆಯನ್ನು ಮಾಡಿದೆ: ಎಫ್.ವಿ.ಟಿ.ಪಿ.ಎಲ್. ದರದಲ್ಲಿ ವರ್ಗೀಕರಿಸಬೇಕಾದ ಆರ್ಥಿಕ ಹೊಣೆಗಾರಿಕೆಗಳ ಉದಾಹರಣೆಗಳು ಉತ್ಪನ್ನ ಎಫ್‌ವಿಟಿಪಿಎಲ್ ರದ್ದುಪಡಿಸುತ್ತದೆ ಎಂದು ತಿಳಿಸುವಿಕೆ ಅಥವಾ ಅಳತೆಯನ್ನು ಅಥವಾ ಅಸಂಬದ್ಧ ಮಾನ್ಯಗೊಳಿಸುವಿಕೆಯನ್ನು ಗಮನಾರ್ಹವಾಗಿ ಇಳಿತಗೊಳಿಸುವುದು ಆರ್ಥಿಕ ಖಾತರಿಯ ಗುತ್ತಿಗೆಗಳು ಆರ್ಥಿಕ ಸ್ವತ್ತೊಂದನ್ನು ವರ್ಗಾಯಿಸುವಾಗ ಅಮಾನ್ಯಗೊಳಿಸುವಿಕೆಗೆ ಅರ್ಹವಾಗದ ಸಂದರ್ಭದಲ್ಲಿ ಅಥವಾ ಮುಂದುವರಿದ ಅನುಸಂಧಾನಿತ ಒಳಪಡಿಸುವಿಕೆಯಲ್ಲಿ ಉದ್ಭವಿಸುವ ಆರ್ಥಿಕ ಹೊಣೆಗಾರಿಕೆ ಸಾದಿಲ್ವಾರು ಪರಿಗಣನೆ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದ ಬಡ್ಡಿಗೆ ಸಾಲ ಒದಗಿಸುವ ಬದ್ಧತೆ ಮೇಲಿನ ಅಂಶಗಳನ್ನು ಆಧರಿಸಿ, ಎಫ್.ವಿ.ಟಿ.ಪಿ.ಎಲ್ ಎಂದು ವರ್ಗೀಕರಿಸಬೇಕಾದ ಯಾವುದೇ ಆರ್ಥಿಕ ಹೊನೆಗಾರಿಕೆ ಇಲ್ಲ. (ಬಿ) ಆರ್ಥಿಕ ಆಸ್ತಿ(ಸ್ವತ್ತು)ಗಳು ಆರ್ಥಿಕ ಸ್ವತ್ತುಗಳಲ್ಲಿ ಮೂರು ಪ್ರವರ್ಗಗಳಿವೆ: ಎ) ಋಣಮುಕ್ತತೆಗೊಳಿಸಿದ ವೆಚ್ಚ ಕೆಳಕಂಡ ಎರಡೂ ಷರತ್ತುಗಳು ತೃಪ್ತಿಕರವಾಗಿ ಅನ್ವಯಿತವಾದಲ್ಲಿ ಆರ್ಥಿಕ ಸ್ವತ್ತನ್ನು ಋಣಮುಕ್ತತೆಗೊಳಿಸಿದ ವೆಚ್ಚವೆಂದು ವರ್ಗೀಕರಿಸುವ ಅಗತ್ಯತೆ ಇದೆ ವ್ಯವಹರಣೆಯ ಮಾದರಿಯಲ್ಲಿ ಆರ್ಥಿಕ ಸ್ವತ್ತನ್ನು ಹೊಂದಿದ್ದು, ಅಂತಹ ಸ್ವತ್ತು ಪರಿಪಕ್ವತೆಯಾಗುವವರೆಗೂ ಲಭ್ಯವಾಗುವ ಕರಾರುಬದ್ಧ ನಗದು ಹರಿಯುವಿಕೆಯನ್ನು ವಸೂಲು ಮಾಡಲು ಕಂಪನಿಯು ಹೊಂದಿರುವ ಉದ್ದೇಶ ಆರ್ಥಿಕ ಸ್ವತ್ತುಗಳು ಕಂಪನಿಗೆ ಕೇವಲ ಅಸಲು ಹಾಗೂ ಬಡ್ಡಿಯ ಪಾವತಿಯನ್ನು ಕಲ್ಪಿಸುವಂತಹವು ಉದಾಹರಣೆಗೆ: ಸಿಬ್ಬಂದಿಗೆ ನೀಡಿದ ಸಾಲದ ಪ್ರಕರಣಗಳಲ್ಲಿ, ಕವಿಪ್ರನಿನಿಯು ಕರಾರುಬದ್ಧ ಹಣವನ್ನು ವಸೂಲಿ ಮಾಡಲು ಉದ್ದೇಶಿಸಿರುತ್ತದೆ, ಅಂದರೆ ಸಾಲದ ಮೊಬಾಗು ಮುಗಿಯುವವರೆಗೂ ಅಸಲು ಹಾಗೂ ಬಡ್ಡಿಯನ್ನು ವಸೂಲು ಮಾಡುವುದು. ಹೀಗಾಗಿ ಇಂತಹವುಗಳನ್ನು ಋಣಮುಕ್ತತೆಗೊಳಿಸಿದ ವೆಚ್ಚವೆಂದು ವರ್ಗೀಕರಿಸತಕ್ಕದ್ದು.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	(ಬಿ) ಎಫ್.ವಿ.ಒ.ಸಿ.ಐ. ಕೆಳಕಂಡ ಎರಡೂ ಷರತ್ತುಗಳು ತೃಪ್ತಿಕರವಾಗಿ ಅನ್ವಯಿತವಾದಲ್ಲಿ ಆರ್ಥಿಕ ಸ್ವತ್ತನ್ನು ಎಫ್.ವಿ.ಒ.ಸಿ.ಐ. ಎಂದು ವರ್ಗೀಕರಿಸುವ ಅಗತ್ಯತೆ ಇದೆ ವ್ಯವಹರಣೆಯ ಮಾದರಿಯಲ್ಲಿ ಆರ್ಥಿಕ ಸ್ವತ್ತನ್ನು ಹೊಂದಿದ್ದು, ಅಂತಹ ಸ್ವತ್ತು ಕರಾರುಬದ್ಧ ನಗದು ಹರಿಯುವಿಕೆಯನ್ನು ಮತ್ತು ಅಂತಹ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಒದಗುವ ನಗದು ಇವೆರಡನ್ನೂ ವಸೂಲು ಮಾಡಲು ಕಂಪನಿಯು ಹೊಂದಿರುವ ಉದ್ದೇಶ ಆರ್ಥಿಕ ಸ್ವತ್ತುಗಳು ಕಂಪನಿಗೆ ಅಸಲು ಹಾಗೂ ಬಡ್ಡಿಯ ಪಾವತಿಯನ್ನು ಕಲ್ಪಿಸುವಂತಹವು ಉದಾಹರಣೆ: ಕರಾರುಬದ್ಧ ಹಣ ಹರಿಯುವಿಕೆಯನ್ನು ಗಳಿಸುವ ಉದ್ದೇಶದಿಂದ ಮಾರಾಟಕ್ಕಗಿ ಪ್ರಕಟಿಸಲ್ಪಟ್ಟ ಬಾಂಡುಗಳನ್ನು ಪದೇಪದೇ ಖರೀದಿಸುವುದು ಹಾಗೂ ಅಂತಹ ಬಾಂಡುಗಳ ಮಾರುಕಟ್ಟೆ ಮೌಲ್ಯ ಹೆಚ್ಚಾದಾಗ ಮಾರಿ ಹಣ ಗಳಿಸುವ ಉದ್ದೇಶ (ಸಿ) ಎಫ್.ವಿ.ಟಿ.ಪಿ.ಎಲ್. ಋಣಮುಕ್ತಗೊಳಿಸಿದ ವೆಚ್ಚ ಅಥವಾ ಎಫ್.ವಿ.ಒ.ಸಿ.ಐ. ಎಂದು ವರ್ಗೀಕರಿಸಿಲ್ಲದ ಆರ್ಥಿಕ ಸ್ವತ್ತುಗಳನ್ನು ಎಫ್.ವಿ.ಟಿ.ಪಿ.ಎಲ್. ಎಂದು ವರ್ಗೀಕರಿಸತಕ್ಕದ್ದು. ಆರ್ಥಿಕ ಸ್ವತ್ತುಗಳ ಪರಿಶೀಲನೆಯಿಂದ, ಎಲ್ಲಾ ಆರ್ಥಿಕ ಸ್ವತ್ತುಗಳನ್ನು ಋಣಮುಕ್ತತೆಗೊಳಿಸಿದ ವೆಚ್ಚವೆಂದೇ ವರ್ಗೀಕರಿಸತಕ್ಕದ್ದು.
(xxxiii)	ಲೆಕ್ಕ ಘಟಕಗಳಿಂದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ದತ್ತಾಂಶಗಳನ್ನು ಪಡೆದುಕೊಳ್ಳಲು ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ಪ್ರತ್ಯೇಕ ಅನುಬಂಧವನ್ನು ನಿಗದಿಪಡಿಸಲಾಗಿದೆ. ಲೆಕ್ಕ ಘಟಕಗಳಿಂದ ಪಡೆದುಕೊಂಡಿರುವ ಮಾಹಿತಿಗಳ ಪ್ರಕಾರ 2019–20ರ ಅವಧಿಯಲ್ಲಿ ಯಾವುದೇ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳೊಂದಿಗೆ ಯಾವುದೇ ವ್ಯವಹಾರ ನಡೆಸಿಲ್ಲ.
(xxxiv)	ಕವಿಪ್ರನಿನಿಯ ಪ್ರತಿಯೊಂದು ಲೆಕ್ಕ ಘಟಕದಿಂದ ಪ್ರಸಕ್ತ/ಪ್ರಸಕ್ತದ್ದಲ್ಲದ ಆಸ್ತಿಗಳು/ ಹೊಣೆಗಾರಿಕೆಗಳ ದತ್ತಾಂಶ ಮಾಹಿತಿಗಳನ್ನು ಪಡೆದುಕೊಂಡು ಅವುಗಳನ್ನು 2019–20ರ ವಾರ್ಷಿಕ ಲೆಕ್ಕಗಳಲ್ಲಿ ಒಳಪಡಿಸಲಾಗಿದೆ.
(xxxv)	ಮಾರ್ಚ್ ಅಂತಿಮ ಲೆಕ್ಕಗಳಿಗೆ ಅನುಬಂಧವನ್ನು ನಿಗದಿಪಡಿಸಲಾಗಿದ್ದು, ಪ್ರಸಕ್ತ ವರ್ಷದಲ್ಲಿ ಲೆಕ್ಕಕ್ಕೊಳಪಡಿಸಿದ ಪೂರ್ವಾವಧಿ ಅಂಶಗಳ ದತ್ತಾಂಶ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. 2019–20ರ ಅವಧಿಯಲ್ಲಿ ಪೂರ್ವಾವಧಿ ಅಂಶಗಳನ್ನು ಪುನರ್ ನಿರೂಪಣೆಗಿಳಿಸಲಾಗಿದೆ.
(xxxvi)	ಕೇಂ.ವಿ.ನಿ.ಆಯೋಗ, ಕ.ವಿ.ನಿ. ಆಯೋಗಗಳು ಹೊರಡಿಸಿರುವ ನಿಬಂಧನೆಗಳು/ ಆದೇಶಗಳು/ನಿರ್ದೇಶನಗಳನ್ನು, ಅವುಗಳ ವಿಷಯಾಂಶ ಹಾಗೂ ಸ್ವರೂಪವನ್ನು ಅವಲಂಬಿಸಿ, ವ್ಯವಸ್ಥಾಪಕ ನಿರ್ದೆಶಕರು/ನಿರ್ದೆಶಕರು(ಹಣಕಾಸು)/ ನಿರ್ದೆಶಕರು(ತಾಂತ್ರಿಕ) ರವರಿಂದ ಸಂಬಂಧಿತ ಶಾಖಾ ಮುಖ್ಯಸ್ಥರಿಗೆ ರವಾನಿಸಲಾಗುತ್ತಿದೆ. ಆಯಾ ಶಾಖೆಗಳಲ್ಲಿ ಅಗತ್ಯ ಕ್ರಮ ತೆಗೆದುಕೊಂಡು ಸಕಾಲಿಕವಾಗಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ನಿಬಂಧನೆಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕವಿಪ್ರನಿನಿಯಲ್ಲಿ ಪ್ರತ್ಯೇಕ ಕಾರ್ಯವಿಧಾನ/ಆಡಳಿತಗಳನ್ನು ಹೊರಡಿಸುತ್ತಿಲ್ಲ. ನಿಬಂಧನೆಗಳಿಗೆ

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
	ಯಾವುದೇ ಸ್ಪಷ್ಟೀಕರಣ ಅಥವಾ ಮಾರ್ಪಾಡುಗಳ ಅಗತ್ಯತೆ ಇದ್ದಲ್ಲಿ, ನಿಯಂತ್ರಣ ವ್ಯವಹಾರಗಳ ಶಾಖೆಯು ಸೂಕ್ತ ರೀತಿಯಲ್ಲಿ ವ್ಯವಹರಿಸುತ್ತಿದೆ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಕಂದಾಯ ಮಾನ್ಯತೆ ಹಾಗೂ ಪ್ರಸಕ್ತ ಆಸ್ತಿಗಳ ಭೌತಿಕ ತಪ್ಪು ನಿರೂಪಣೆಗಳಿಲ್ಲವೆಂದು ಖಚಿತಪಡಿಸುತ್ತದೆ.
(xxxvii)	ವಿಳಂಬ ಮನ್ನಾ ಅರ್ಜಿಗಳನ್ನು ದಾಖಲಿಸಿ ಉಸ್ತುವಾರಿ ನಡೆಸಲು ಕ್ರಮ ತೆಗೆದುಕೊಳ್ಳುವುದಕ್ಕಾಗಿ ದಿನಾಂಕ 15.12.2017ರ ಮೂಲಕ ಸೂಚನೆಗಳನ್ನು ನೀಡಲಾಗಿದೆ. ಇದನ್ನೇ ಅನುಸರಿಸಲಾಗುತ್ತಿದೆ.
(xxxviii)	ಮಾರ್ಚ್ ಅಂತಿಮ ಲೆಕ್ಕಗಳಿಗಾಗಿ ಅನುಬಂಧದ ರೂಪದಲ್ಲಿ ಸಿಬ್ಬಂದಿವಾರು ವಿವರಗಳನ್ನು ಪ್ರತಿ ಲೆಕ್ಕ ಘಟಕದಿಂದ ಪಡೆದುಕೊಳಲಾಗುತ್ತಿದೆ, ಈ ಮಾಹಿತಿಗಳನ್ನೇ ಸಿಬ್ಬಂದಿ ಸೌಲಭ್ಯಗಳ ನಿಮಿತ್ತವಾದ ಹೊಣೆಗಾರಿಕೆಯ ಅಂದಾಜು ವೆಚ್ಚವನ್ನು ಲೆಕ್ಕಾಚಾರ ಮಾಡಲು ತಜ್ಞರಿಗೆ ಸಲ್ಲಿಸಲಾಗುತ್ತಿದೆ. ವಾಸ್ತವಿಕ ಮೌಲ್ಯೀಕರಣ ವರದಿಯನ್ನು ಆಧರಿಸಿ ಸಿಬ್ಬಂದಿ ಸೌಅಭ್ಯಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.
(xxxix)	ಅನುದಾನದ ಸ್ವೀಕೃತಿ ಹಾಗೂ ಅದರ ಬಳಕೆಯ ವಿವರ ಮತ್ತು ಪಾವತಿ ಮಾಡಿದಾಗಲೆಲ್ಲಾ ಲೆಕ್ಕಕ್ಕೊಳಪಡಿಸಿ, ನಿರ್ವಹಿಸಲು, ಮಾರ್ಗದರ್ಶನದಲ್ಲಿ ನಿಗದಿಪಡಿಸಿರುವ ರೀತ್ಯಾ ಕಂಪನಿಯು ಅದಕ್ಕಾಗಿಯೇ ಮೀಸಲಿತ ಪ್ರತ್ಯೇಕ ಲೆಕ್ಕವನ್ನು ನಿರ್ವಹಿಸಿ ಪ್ರತ್ಯೇಕ ನಗದು ಪುಸ್ತಕವನ್ನು ನಿರ್ವಹಿಸುತ್ತಿದೆ. ವರ್ಷಾನುವರ್ಷದ ಆಧಾರದ ಮೇಲೆ ಬಳಕೆಯ ಪ್ರಮಾಣ ಪತ್ರದ ಅನುಸರಣೆಯನ್ನು ಸಂಬಂಧಿತರಿಗೆ ಒದಗಿಸಲಾಗುತ್ತಿದೆ.
(xL)	ಮೂಲದಲ್ಲೇ ಹಿಡಿದುಕೊಂಡ ತೆರಿಗೆಗೆ ಸಂಬಂಧಿಸಿದ ವ್ಯವಹರಣೆಗಳನ್ನು ಕವಿಪ್ರನಿನಿಯ ಲೆಕ್ಕಘಟಕಗಳು ನಿರ್ವಹಿಸುತ್ತಿದ್ದು, ಈ ವ್ಯವಹರಣೆಗಳು ಅಪಾರ ಪ್ರಮಾಣದ್ದಾಗಿದೆ. ತೆರಿಗೆ ಹಿಡಿಸಿಕೊಂಡಿರುವವರು ಯಾರು ಎಂದು ಗೊತ್ತುಪಡಿಸಿಕೊಳ್ಳಲು ಅಂತಹವರ ತೆರಿಗೆ ಖಾತೆ ಲೆಕ್ಕ ಸಂಖ್ಯೆ ಹಾಗೂ ಯಾವ ಲೆಕ್ಕ ಘಟಕದಲ್ಲಿ ತೆರಿಗೆ ಹಿಡಿಯಲ್ಪಟ್ಟಿದೆ ಎಂದು ನಮೂನೆ 26 ಎಎಸ್ ನಲ್ಲಿ ಕಂಡುಬಂದಿಲ್ಲ. ಶಿಲ್ಕುಗಳನ್ನು ಲೆಕ್ಕಸಮನ್ವಯಗೊಳಿಸಲು, ಕಡ್ಡಾಯವಾಗಿ ಅನುಪಾಲಿಸಲು ಸಂಖ್ಯೆ ಆ.ಸ(ಆ ಮತ್ತುಸಂ)/ಕೆಸಿಒ–18/96298/2018–19,ದಿನಾಂಕ 27.12.2019ರ ಸುತ್ತೋಲೆ ಮೂಲಕ ಆದೇಶಿಸಲಾಗಿದೆ. ಲೆಕ್ಕಸಮನ್ವಯಗೊಳಿಸಲು ಯಥೋಚಿತ ಕ್ರಮ ತೆಗೆದುಕೊಳ್ಳಲಾಗುವುದು.
(xLi)	ವಿದ್ಯುತ್ ಕೇಂದ್ರಗಳು, ಪ್ರಸರಣ ಮಾರ್ಗಗಳ ನಿರ್ವಹಣೆ ಹಾಗೂ ಸಣ್ಣ ಬಂಡವಾಳ ಕಾಮಗಾರಿಗಳಿಗಾಗಿ ಕವಿಪ್ರನಿನಿಯು ಸಾಮಗ್ರಿಗಳನ್ನು ಖರೀದಿಸಿ ಸಂಗ್ರಹಿಸುತ್ತದೆ. ಸಾಮಗ್ರಿಗಳನ್ನು ಸಂಗ್ರಹಿಸುವ ಸಮಯದಲ್ಲಿ, ಅಂತಹ ಸಾಮಗ್ರಿಗಳನ್ನು ದುರಸ್ತಿ ಹಾಗೂ ನಿರ್ವಹಣೆ/ಬಂಡವಾಳ ಕಾಮಗಾರಿಗಳಿಗೆ ಬಳಸುವುದಕ್ಕೆ ಸಂಬಂಧಿಸಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ಇದೇ ಮಾದರಿಯ ಸಾಮಗ್ರಿಗಳನ್ನು ದುರಸ್ತಿ ಹಾಗೂ ನಿರ್ವಹಣೆ ಮತ್ತು ಬಂಡವಾಳ ಕಾಮಗಾರಿಗಳಿಗಾಗಿ ಉಪಯೋಗಿಸಬಹುದಾಗಿದೆ. ಕವಿಪ್ರನಿನಿಯು ಪ್ರತಿ ವರ್ಷ ಭರಿಸುತ್ತಿರುವ ಅಧಿಕ ಪ್ರಮಾಣದ ಬಂಡವಾಳ ವೆಚ್ಚಕ್ಕೆ ಹೋಲಿಸಿದಲ್ಲಿ, ಸಾಮಗ್ರಿ ಸಂಗ್ರಹಣೆ ಸಮಯದಲ್ಲಿ ಬಂಡವಾಳ ಬಿಡಿಭಾಗಗಳ ಬಂಡವಾಳೀಕರಿಸದಿರುವುದು ಲೆಕ್ಕಪತ್ರಗಳ ಮೇಲೆ ಭೌತಿಕ ಪರಿಣಾಮ ಬೀರದಿರಬಹುದು.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪ್ರಕಾರದ ಅಭಿಪ್ರಾಯ ಸಂಖ್ಯೆ	ಆಡಳಿತ ವರ್ಗದ ಉತ್ತರಗಳು
(xLii)	ಸ್ವೀಕೃತಿ ಹಾಗೂ ಪಾವತಿ ಲೆಕ್ಕಗಳ ಪರಿಶೀಲನೆ ಉಸ್ತುವಾರಿಗಾಗಿ ಪ್ರತಿ ಲೆಕ್ಕ ಘಟಕವು ಸಂಸ್ಥೆವಾರು ಹಾಗೂ ಕಾಮಗಾರಿವಾರು ಅನುಸೂಚಿಗಳನ್ನು ನಿರ್ವಹಿಸುತ್ತಿದೆ. ಈ ಅನುಸೂಚಿಗಳಲ್ಲಿ ವಸೂಲು ಮಾಡಿದ/ಸ್ವೀಕರಿಸಿದ/ಸ್ವೀಕರಿಸಬೇಕಾದ/ ಪಾವತಿಸಬೇಕಾದ/ ಪಾವತಿಸಿದ ಮೊಬಲಗನ್ನು ದಾಖಲಿಸಲಾಗುತ್ತಿದೆ. ಅಂತಹ ಅನುಸೂಚಿಗಳಲ್ಲಿ ಅಪಾರ ಸಂಖ್ಯೆಯ ವ್ಯವಹರಣೆಗಳಿರುವುದರಿಂದ, ಪ್ರತಿ ಗುತ್ತಿಗೆದಾರ/ಸಂಸ್ಥೆ/ಸರಬರಾಜುದಾರವಾರು ಶಿಲ್ಕುಗಳನ್ನು ಸಮನ್ವಯಗೊಳಿಸಲು ಕಾರ್ಯಸಾಧ್ಯವಿಲ್ಲ.
(xLiii)	ವಿದ್ಯುತ್ ಸರಬರಾಜು ಕಂಪನಿಗಳ ಉದ್ಯೋಗಿಗಳು ವಾಸವಾಗಿರುವ ವಸತಿ ಗೃಹಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಕವಿಪ್ರನಿನಿಯು ಭರಿಸಿರುವ ವೆಚ್ಚವನ್ನು ದಿನಾಂಕ 29.05.2003ರ ಆದೇಶದ ಪ್ರಕಾರ ಅನುಮೋದಿಸಿರುವ ಔಪಚಾರಿಕ ಒಪ್ಪಂದದನ್ವಯ ಹಂಚಿಕೊಳ್ಳಬೇಕು. ಬಹುತೇಕ ಪ್ರಕರಣಗಳಲ್ಲಿ ಕವಿಪ್ರನಿನಿಯು ನಿರ್ವಹಣ ವೆಚ್ಚವನ್ನು ಕ್ಲೇಮು ಮಾಡುತ್ತದೆ. ತದನ್ವಯ ಲೆಕ್ಕಘಟಕಗಳು ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲಿ ಮಾಡಲು ಪತ್ರ ವ್ಯವಹಾರಗಳನ್ನು ಮಾಡುತ್ತಿದೆ.
(xLiv)	ಲೆಕ್ಕಪತ್ರಗಳಿಗೆ ಟಿಪ್ಪಣಿಯಲ್ಲಿ ಸಾದಿಲ್ವಾರು ಹೊಣೆಗಾರಿಕೆಗಳನ್ನು ಪ್ರಕಟಪಡಿಸಲು, ಲೆಕ್ಕಘಟಕಗಳಿಂದ ಲೆಕ್ಕಗಳ ಸಹಿತ ಮಾಹಿತಿಗಳನ್ನು ಪಡೆಯಲಾಗಿದೆ. ಅಲದೆ, ಕಾನೂನು ಶಾಖೆಯಿಂದ ನ್ಯಾಯಾಲಯ ಮೊಕದ್ದಮೆಗಳ ವಿವರಗಳನ್ನೂ ಪಡೆಯಲಾಗುತ್ತಿದೆ. ಸಾದಿಲ್ವಾರು ಹೊಣೆಗಾರಿಕೆಗಳನ್ನು ಗೊತ್ತುಪಡಿಸಿಕೊಳ್ಳಲು ಈ ಎರಡೂ ಮಾಹಿತಿಗಳನ್ನು ಕ್ರೋಡೀಕರಿಸಿ, ಲೆಕ್ಕಪತ್ರಗಳಲ್ಲಿ ಪ್ರಕಟಿಸಲಾಗುತ್ತಿದೆ. ಲೆಕ್ಕ ಘಟಕಗಳಲ್ಲಿ ಸಾದಿಲ್ವಾರು ಆಸ್ತಿಗಳು ಇರುವ ಸಾಧ್ಯತೆ ಕ್ಷೀಣ.
(xLv)	ಅಗೋಚರ ಆಸ್ತಿಗಳಿಗೆ ಸಂಬಂಧಿಸಿದ ಮಾರ್ಪಾಡುಗೊಳಿಸಿದ ಲೆಕ್ಕೀಕರಣ ತತ್ವ 1.22ರ ಪ್ರಕಾರ ಅಗೋಚರ ಆಸ್ತಿಗಳನ್ನು ಗುರುತಿಸಿ, ಬಂಡವಾಳೀಕರಿಸಿ ಋಣಮುಕ್ತತೆಗೊಳಿಸಲಾಗುತ್ತಿದೆ.
H. (xLvi)	ವರದಿ ಸಲ್ಲಿಕೆ ಸ್ವರೂಪವನ್ನು ವ್ಯವಸ್ಥಾಪಕ ಮಂಡಳಿಯು ಪರಿಶೀಲಿಸುತ್ತದೆ.
I. (xLvii) (xLviii)	ಕವಿಪ್ರನಿನಿಯ ಬಹುತೇಕ ವ್ಯವಹರಣೆಗಳನ್ನೊಳಗೊಂಡ ಇ.ಆರ್.ಪಿ.ಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು ಈಗಾಗಲೇ ಅನುಮೋದಿಸಲಾಗಿದೆ. ಇ.ಆರ್.ಪಿ.ಯನ್ನು ಅನುಷ್ಠಾನಗೊಳಿಸಲು ಕವಿಪ್ರನಿನಿಯು ಟೆಂಡರನ್ನು ಆಹ್ವಾನಿಸಿದೆ.

ಅನುಬಂಧ–3

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ

ಒಳಾಂಶ ಕೋಷ್ಟಕ:
1. ಹಿನ್ನೆಲೆ
2. ಉದ್ದೇಶ
3. ಸಾ.ಸಾ.ಹೊ.ಸಮಿತಿಯ ಆಧಾರಿತ ವಿಷಯಗಳು
4. ಸಾ.ಸಾ.ಹೊ ಚಟುವಟಿಕೆ/ಯೋಜನೆ
5. ಸಾ.ಸಾ.ಹೊ. ಮೊಬಲಗು
6. ಸಾ.ಸಾ.ಹೊ. ಮೊಬಲಗಿನ ಖರ್ಚುವೆಚ್ಚಗಳು
7. ಆಡಳಿತ
8. ಮಾಹಿತಿಯ ಪ್ರಚಾರ

1. ಹಿನ್ನೆಲೆ:

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು, ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯಲ್ಲಿನ ಸಮುದಾಯ ಹಾಗೂ ವಾತಾವರಣದ ಜವಾಬ್ದಾರಿಯುತ ಸಾಮಾನ್ಯ ಪ್ರಜ್ಞೆಯಾಗಿದೆ. ಇದು, ನೀತಿವಂತಿಕೆ ವ್ಯವಹರಣೆಯ ಮೂಲಕ ಸಮಾಜದ ಆರ್ಥಿಕ ಬೆಳವಣಿಗೆಗೆ ಬೃಹತ್ ಪ್ರಮಾಣದಲ್ಲಿ ಕೊಡುಗೆ ನೀಡಿ, ಜೀವನಾಧಾರಕ್ಕೆ ಆಧಾರವಾಗಬಹುದಾದ ಸಾಮಾರ್ಥ್ಯವನ್ನು ನೆಲೆಗೊಳಿಸಿ ನಿರಂತರ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯವಹರಣೆಯನ್ನು ಜವಾಬ್ದಾರಿ, ನ್ಯಾಯಾಯುತ ಹಾಗೂ ಅತ್ಯಂತ ಪಾರದರ್ಶಕತೆಯ ವಿಧಾನದ ಮೂಲಕ ನಡೆಸಲು ನಂಬಿಕೆಯುಳ್ಳದ್ದಾಗಿದೆ. ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯ ಸಮಾಜ ಹಾಗೂ ವಾತಾವರಣದ ಮೇಲೆ, ಸಾಮಾಜಿಕ ಉದ್ದೇಶಗಳ ಅಂಗವಾಗಿ, ಒಟ್ಟಾರೆ ಸಕಾರಾತ್ಮಕ ಪರಿಣಾಮವನ್ನು ಬೀರಲು ಕಂಪನಿಯು ನಿರಂತರವಾಗಿ ವಿಹಿತ ವಿಧಾನಗಳತ್ತ ಅನ್ವೇಷಿಸಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ರಾಜ್ಯದ ಒಂದು ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ತನ್ನ ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳ ಮೂಲಕ ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣೆಯನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಕ.ವಿ.ಪ್ರ.ನಿ.ನಿಯು, ಸಾರ್ವಜನಿಕ ನಾಗರೀಕರಿಗೆ ಸೇವೆಯನ್ನು ನೀಡುವಲ್ಲಿ, ಸ್ಪರ್ಧಾತ್ಮಕ ದರದ, ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ಕೆಳಕಂಡ ಧ್ಯೇಯೋದ್ದೇಶವನ್ನು ಹೊಂದಿದೆ:

1. ವಿದ್ಯುತ್ ಪ್ರಸರಣೆಯಲ್ಲಿ ಉತ್ತಮ ಕಾರ್ಯಾಚರಣೆಗೆ ಪ್ರೋತ್ಸಾಹ;
2. ತನ್ನ ಎಲ್ಲಾ ತಾಂತ್ರಿಕ ಸೌಲಭ್ಯಗಳು ಉನ್ನತಮಟ್ಟದ ನಿರ್ವಹಣೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು;
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳುವುದು;

2. ಉದ್ದೇಶ:

ಈ ನೀತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಒಂದು ಪ್ರಮುಖ ವ್ಯವಹರಣ ಪ್ರಕ್ರಿಯೆಯನ್ನಾಗಿಸಲು ಮಾರ್ಗದರ್ಶಕಗಳನ್ನು ಅಣಿಗೊಳಿಸುತ್ತದೆ. ಭಾರತದಲ್ಲಿ ನಿಗಮದ ಕಾರ್ಯಚಟುವಟಿಕೆಗಳ ಸಾಮಾಜಿಕ ಹಾಗೂ ವಾತಾವರಣದ ಮೇಲಿನ ಪರಿಣಾಮವನ್ನು ಆಧರಿಸಿ, ಸಮಾಜದ ಕ್ಷೇಮಾಭಿವೃದ್ಧಿ

ಚಟುಚಟಿಕೆಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VIIರ ಪ್ರಕಾರ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ದಿಷ್ಟಪಡಿಸುತ್ತದೆ. ಅನುಷ್ಠಾನಗೊಳಿಸುವಿಕೆಯ ವರ್ಷಗಳಲ್ಲಿ, ಕೈಗೊಳ್ಳಬೇಕಾದ ಯೋಜನೆ ಹಾಗೂ ಉದ್ದೇಶಗಳನ್ನು ಹೊರಸೂಸುವುದರೊಂದಿಗೆ, ಆಯ್ಕೆ ಮಾಡಿರುವ ಕ್ಷೇತ್ರ/ಪ್ರದೇಶಗಳಲ್ಲಿ ಅನಿಷ್ಠಾನಗೊಳಿಸುವಿಕೆಯ ಕಾರ್ಯಕ್ರಮ ಹಾಗೂ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ–7 ರಲ್ಲಿ ವಿಷದೀಕರಿಸಿರುವ ಚಟುವಟಿಕೆಗಳಿಗೆ ಒಳಪಟ್ಟು, ಕಂಪನಿಯು ವಿವಿಧ ಸನ್ನೀವೇಶ ಹಾಗೂ ಸವಾಲುತನಗಳಿಗೆ ಸೂಕ್ತ ಹಾಗೂ ಸುಲಭ ರೀತಿಯಲ್ಲಿ ಸ್ಪಂದಿಸಲು ನೀತಿಯ ಉದ್ದೇಶವನ್ನು ಸಾಧ್ಯವಾದಷ್ಟೂ ವಿಸ್ತೃತವಾಗಿಸಲಾಗಿದೆ. ಆದರೆ, ಭಾರತದಾಚೆ ಕೈಗೊಳ್ಳುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ರೀತಿಯ ಕೊಡುಗೆ, ವಂತಿಗೆಗಳನ್ನು ನೀಡುವುದಿಲ್ಲ.

3. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಆಧಾರಿತ ವಿಷಯಗಳು:

ಕ.ವಿ.ಪ್ರ.ನಿ.ನಿ.ಯ ನಿರ್ದೇಶನ ಮಂಡಳಿಯು, ಕೆಳಕಂಡ ಆಧಾರಿತ ವಿಷಯಗಳೊಂದಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಿದೆ:

i) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ii) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

iii) ಕಾಲಕಾಲಕ್ಕೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

iv) ಕಂಪನಿಯು ಕೈಗೊಳ್ಳುವ ಚಟುಚಟಿಕೆಗಳು ಅಥವಾ ಸಾ.ಸಾ.ಹೊ. ಯೋಜನೆಗಳು/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

ನಿಗಮದ ಸಾ.ಸಾ.ಹೊ. ಸಮಿತಿಯು, ಯೋಜಿತ ಉದ್ದೇಶಗಳನ್ನು ಕಾರ್ಯಕಲ್ಪಗೊಳಿಸಲು ಕೆಳಕಂಡಂತೆ ಪ್ರಕ್ರಿಯೆಗೊಳಿಸುತ್ತದೆ:

- ಸಾ.ಸಾ.ಹೊಣೆಗಾರಿಕೆ ಉಪಕ್ರಮಗಳ ಅನುಬಂಧವಾಗಿ, ನಿಗಮವು ಕೈಗೊಳ್ಳಬೇಕಾದ ಚಟುಚಟಿಕೆಗಳನ್ನು ಸೂಚಿಸುವ ಕಾರ್ಯನೀತಿಯನ್ನು ರೂಪಿಸಿ ಪರಿಶೀಲಿಸುವುದು;
- ಸಾ.ಸಾ.ಹೊಣೆಗಾರಿಕೆ ಚಟುಚಟಿಕೆಗಳಿಗಾಗಿ ಭರಿಸಬೇಕಾದ ವೆಚ್ಚಕ್ಕೆ ಶಿಫಾರಸ್ಸು ಮಾಡುವುದು;
- ನಿಗಮವು ಕೈಗೊಳ್ಳಬೇಕಾದ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನ ಅಥವಾ ನಿ.ಸಾ.ಹೊ. ನಿಮಿತ್ತವಾಗಿ ಭರಿಸಿದ ಕಟ್ಟಕಡೆಯ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕ ಮೇಲ್ವಿಚಾರಣಾ ಕಾರ್ಯನೀತಿಯನ್ನು ರೂಪಿಸುವುದು;
- ಕಾಲಕಾಲಕ್ಕೆ ಈ ನೀತಿಯನ್ನು ಮೇಲ್ವಿಚಾರಣೆಗೆ ಒಳಪಡಿಸಿ ಅನುಷ್ಠಾನಗೊಳಿಸುವುದು;
- ಸಾ.ಸಾ.ಹೊ. ಚಟುವಟಿಕೆಗಳ ಬಗ್ಗೆ ಹಾಗೂ ಆ ನಿಮಿತ್ತವಾಗಿ ನಿಗಮದ ಕೊಡುಗೆಯ ಬಗ್ಗೆ ವಾರ್ಷಿಕವಾಗಿ ಮಂಡಳಿಗೆ ವರದಿಯನ್ನು ಸಲ್ಲಿಸುವುದು;
- ಕಾಯ್ದೆಯ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರ ಯಾವುದೇ ಅಗತ್ಯತೆ ಹಾಗೂ ತತ್ಸಂಬಂಧ ಹೊರಡಿಸಿರುವ ನಿಯಮಗಳ ಪಾಲನೆ.

4. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆ/ಯೋಜನೆ:

ಕಂಪನಿ ಕಾಯ್ದೆ, 2013ರ ಅನುಸೂಚಿ VII, ಕಂಪನಿಗಳು ತಮ್ಮ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಲ್ಲಿ ಕೆಳಗೆ ಸೂಚಿಸಿರುವ ಚಟುವಟಿಕೆಗಳನ್ನು ಒಳಪಡಿಸಿಕೊಳ್ಳಬೇಕೆಂದು ಅಗತ್ಯಪಡಿಸುತ್ತದೆ:

i. ತೀವ್ರಮಟ್ಟದ ಹಸಿವು, ಬಡತನ ಮತ್ತು ಅಪೌಷ್ಟಿಕತೆ ನಿರ್ಮೂಲನೆ ಮಾಡುವುದು, ನೈರ್ಮಲ್ಯದ ಪ್ರಚಾರಕ್ಕಾಗಿ ಮತ್ತು ಸುರಕ್ಷಿತವಾಗಿ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಕೋಶಕ್ಕೆ ದೇಣಿಗೆ ನೀಡಿದ ಕೊಡುಗೆ ಸೇರಿದಂತೆ ಮುಂಜಾಗ್ರತಾ ಕ್ರಮಗಳು ಮತ್ತು ನೈರ್ಮಲ್ಯ ಸೇರಿದಂತೆ ಆರೋಗ್ಯ ಸುರಕ್ಷತೆಯನ್ನು ಉತ್ತೇಜಿಸುವುದು.

ii. ವಿಶೇಷವಾಗಿ ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಭಿನ್ನ ಶಕ್ತರ ಜೀವನ ಉನ್ನತೀಕರಣ ಯೋಜನೆಯಲ್ಲಿ ವೃತ್ತಿ ಕೌಶಲ್ಯಗಳನ್ನು ಒಳಗೊಂಡಂತೆ ಶಿಕ್ಷಣವನ್ನು ಉತ್ತೇಜಿಸುವುದು.

iii. ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಆಶ್ರಮ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು; ಹಿರಿಯ ನಾಗರಿಕರು ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳಿಗಾಗಿ ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು ಮತ್ತು ಇಂತಹ ಇತರೆ ಸೌಲಭ್ಯಗಳನ್ನು ಸ್ಥಾಪಿಸುವುದು.

iv. ಪರಿಸರ ಸಂರಕ್ಷಣೆ, ಪರಿಸರ ಸಮತೋಲನ, ಸಸ್ಯ ಸಂಪತ್ತು ಮತ್ತು ಪ್ರಾಣಿಗಳ ರಕ್ಷಣೆ, ಕೃಷಿ ಅರಣ್ಯ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿರ್ಮಲ ಗಂಗಾ ನಿಧಿಗೆ ಕೊಡುಗೆ ಸೇರಿದಂತೆ ಮಣ್ಣು, ವಾಯು ಮತ್ತು ನೀರಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.

v. ಐತಿಹಾಸಿಕ ಪ್ರಾಮುಖ್ಯತೆ ಹೊಂಡಿರುವ ಕಟ್ಟಡಗಳು ಮತ್ತು ತಾಣಗಳು ಸೇರಿದಂತೆ ರಾಷ್ಟ್ರೀಯ ಪರಂಪರೆಯ ಕಲೆ, ಸಂಸ್ಕೃತಿಯ ರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ಮತ್ತು ಅಭಿವೃದ್ಧಿ.

vi. ಸಶಸ್ತ್ರ ಪಡೆಗಳ ಶೂರರು, ಯುದ್ಧದಲ್ಲಿ ಮಡಿದ ಸೈನಿಕರ ವಿಧವೆಯರು ಮತ್ತು ಅವರ ಅವಲಂಬಿತ ಪ್ರಯೋಜನಕ್ಕಾಗಿ ಕ್ರಮಗಳು.

vii. ಗ್ರಾಮೀಣ ಕೀಡೆಗಳು, ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಕ್ರೀಡೆಗಳು, ಪ್ಯಾರಾಲಂಪಿಕ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ಉತ್ತೇಜನಕ್ಕಾಗಿ ತರಬೇತಿ.

viii. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರೂಪಿಸಿರುವ ಪರಿಹಾರ ನಿಧಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಮಹಿಳಾ ಕಲ್ಯಾಣಕ್ಕಾಗಿ ಕೊಡುಗೆ; ಮತ್ತು

ix. ಕೇಂದ್ರ ಸರ್ಕಾರದ ಅನುಮೋದನೆ, ಹೊಂದಿರುವ ಶೈಕ್ಷಣಿಕ ಸಂಸ್ಥೆಗಳೊಳಗೆ ಇರುವ ತಾಂತ್ರಿಕ ಇನಕ್ಯೂಬೇಟರ್‌ಗಳಿಗೆ ಕೊಡುಗೆಗಳು ಅಥವಾ ನಿಧಿಗಳು.

x. ಗ್ರಾಮೀಣ ಅಭಿವೃದ್ಧಿ ಯೋಜನೆಗಳು.

xi. ಕೊಳಗೇರಿ ಪ್ರದೇಶ ಅಭಿವೃದ್ಧಿ ಯೋಜನೆಗಳು.

ವಿವರಣೆ: ಈ ಅಂಶದ ಉದ್ದೇಶಕ್ಕಾಗಿ **"ಕೊಳಗೇರಿ ಪ್ರದೇಶ"**ಎಂಬ ಶಬ್ದವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿರುವ ಯಾವುದೇ ಸಿ.ಎಸ್.ಆರ್. ಚಟುವಟಿಕೆಗಳು ಮತ್ತು ಅದರ ಸಲುವಾಗಿ ಖರ್ಚು ಮಾಡಬಹುದಾದ ಮೊಬಲಗನ್ನು ನಿರ್ದಿಷ್ಟಪಡಿಸುವ ಕೈಪಿಡಿ ದಾಖಲೆಯಾಗಿರುತ್ತದೆ. ಸದರಿ ಅನುಸೂಚಿಯು ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಅನುಸೂಚಿ–7 ನ್ನು ಕ.ವಿ.ಪ್ರ.ನಿ.ನಿಯ ಸಿ.ಎಸ್.ಆರ್. ಕಾರ್ಯನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

5. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗು:

ಕಂಪನಿ ಕಾಯ್ದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆರ್ಥಿಕ ವರ್ಷ 2011–12, 2012–13 ಮತ್ತು 2013–14ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ. ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

6. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚು (ವೆಚ್ಚಗಳು):

ಸಾ.ಸಾ.ಹೊ. ಸಮಿತಿಯು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ನಿರ್ಧರಿಸುತ್ತದೆ:

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕ ಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;
- ಸಾ.ಸಾ.ಹೊ. ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಯಾವುದೇ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.
- ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ ಸಾ.ಸಾ.ಹೊ. ಚಟುವಟುಕೆಗಳಿಂದ ಒದಗಿದ ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.
- ನಿಗಮದ ಉದ್ಯೋಗಿಗಳ ಸಾ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ಸಾ.ಸಾ.ಹೊ. ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

7. ಆಡಳಿತ:

1) ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವಸಾ.ಸಾ.ಹೊ. ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚಗಳ ವಿವರಗಳ ಪ್ರಸ್ತಾಪವನ್ನು ಸಾ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ಸಾ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.

2) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಸಾ.ಸಾ.ಹೊ ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.

3) ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ಸಾ.ಸಾ.ಹೊ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.

4) ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ಸಾ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

8. ಮಾಹಿತಿಯ ಪ್ರಚಾರ:

ಸಾ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾ.ಹೊ.ಯೋಜನೆಗಳು/ ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಗಮವು

ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.kptcl.com/ePrasaran ದಲ್ಲಿ ತುಂಬಿಸಕ್ಕದ್ದು. ಮುಂದುವರೆಸಿ, ಸಾ.ಸಾ.ಹೊ ಕಾರ್ಯಚಟುಚಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚಾರಪಡಿಸುವುದು.

ಸಾ.ಸಾ.ಹೊ ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ಸಾ.ಸಾ.ಹೊ ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

2019–20ರ ನಿರ್ದೇಶಕರ ವರದಿಯ ಅನುಬಂಧ–4

2019–20 ರ ಮಂಡಳಿಯ ವರದಿಯಲ್ಲಿ ಒಳಪಡಿಸಬೇಕಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿ

ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ನೀತಿಯ ಸಂಕ್ಷಿಪ್ತ ನೋಟ, ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿರುವ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅವಲೋಕನ, ಇವುಗಳನ್ನು ಅನುಬಂಧ–3 ಎಂದು ಲಗತ್ತಿಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿ ಹಾಗೂ ಯೋಜನೆ/ಕಾರ್ಯಕ್ರಮಗಳ ಜಾಲತಾಣ ಸಂಪರ್ಕ: www.kptcl.karnataka.gov.in.

1. ಸಾಂಸ್ಥಿಕಸಾಮಾಜಿಕ ಹೊಣೆಗಾರಿಕೆ ಸಮಿತಿಯ ರಚನೆ ಹೀಗಿದೆ:

ಕ್ರ.ಸಂ.	ಹೆಸರು / ಶ್ರೀಯುತ	ಪದನಾಮ
1.	ಅಪಾರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ	ಅಧ್ಯಕ್ಷರು
2.	ಅಪಾರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ,	ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು
4.	ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ.	ಸಂಚಾಲಕರು

2. ಆರ್ಥಿಕ ವರ್ಷ 2019–20ಕ್ಕೆ, ಸಾಂಸ್ಥಿಕಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಬೇಕಾದ ಮೊತ್ತದ ಲೆಕ್ಕಾಚಾರ:

ಕ್ರ.ಸಂ	ಆರ್ಥಿಕ ವರ್ಷ	ತೆರಿಗೆಗೆ ಮುಂಚಿನ ನಿವ್ವಳ ಲಾಭ (ರೂ.ಗಳಲ್ಲಿ)
1	2016–17	19 15 08 07 018
2	2017–18	8 12 35 29 074
3	2018–19 (ಮರುಸ್ಥಾಪಿಸಲಾಗಿದೆ)	2 03 60 53 998
4	ಒಟ್ಟು	29 31 03 90 090
5	ಸರಾಸರಿ ನಿವ್ವಳ ಲಾಭ ಹಿಂದಿನ ಮೂರು ಆರ್ಥಿಕ ವರ್ಷಗಳು	9 77 01 30 030
6	ಸರಾಸರಿ ನಿವ್ವಳ ಲಾಭದ ಶೇಕಡ 2%	19 54 02 601
7	ಹಿಂದಿನ ಆ.ವ 2018–19 ರಲ್ಲಿ ಖರ್ಚು ಮಾಡದ ಮೊತ್ತ	5 35 89 337
8	ಆರ್ಥಿಕ ವರ್ಷ 2019–20ರ ಅವಧಿಗೆ ಖರ್ಚು ಮಾಡಬೇಕಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಮೊತ್ತ	24 89 91 938

ಕಳೆದ ಮೂರು ವರ್ಷಗಳ (ಆ.ವ.2016–17 ರಿಂದ 2018–19) ಕಂಪನಿಯ ಸರಾಸರಿ ನಿವ್ವಳ ಲಾಭ (ತೆರಿಗೆಗೆ ಮುಂಚಿನ ನಿವ್ವಳ ಲಾಭವನ್ನು ಪರಿಗಣಿಸಿದ ನಂತರ). ರೂ. 9 77 01 30 030/–.

3. ಆರ್ಥಿಕ ವರ್ಷ 2019–20ರ ಅವಧಿಗೆ ನಿಗದಿಪಡಿಸಿರುವ ಸಾಂಸ್ಥಿಕಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಬೇಕಾದ ಮೊತ್ತ :ರೂ. 24 89 91 938/–.

4. ಆರ್ಥಿಕ ವರ್ಷ 2019–20ರ ಅವಧಿಯಲ್ಲಿ ವ್ಯಯಿಸಿದ ಸಾಂಸ್ಥಿಕಸಾಮಾಜಿಕ ಹೊಣೆಗಾರಿಕೆಯ ಮೊತ್ತ.

ಎ) ಆರ್ಥಿಕ ವರ್ಷದ ಅವಧಿಯಲ್ಲಿ ವ್ಯಯಿಸಿದ ಒಟ್ಟು ಮೊತ್ತ : 25 01 73 602/–

ಬಿ) ಖರ್ಚು ಮಾಡದೆ ಉಳಿದಿರುವ ಮೊತ್ತ : ಯಾವುದು ಇಲ್ಲ

ಸಿ) ಆರ್ಥಿಕ ವರ್ಷದ ಅವಧಿಯಲ್ಲಿ ಖರ್ಚು ಮಾಡಿದ ಮೊತ್ತದ ವಿಧಾನ ಈ ಕೆಳಗಿನಂತಿದೆ:

(1)	(2)	(3)	(4)	(5)	(6)	(7)	(8)
ಕ್ರ ಸಂ.	ಸಿ.ಎಸ್.ಆರ್. ಯೋಜನೆ ಅಥವಾ ಗೊತ್ತುಪಡಿಸಿರುವ ಚಟುವಟಿಕೆ	ಯಾವ ಕ್ಷೇತ್ರದಲ್ಲಿ ಯೋಜನೆಯು ಒಳಗೊಂಡಿದೆ	ಯೋಜನೆ ಅಥವಾ ಕಾರ್ಯಕ್ರಮ (1) ಸ್ಥಳೀಯ ಪ್ರದೇಶ ಅಥವಾ ಇತರೆ (2) ಯೋಜನೆ ಅಥವಾ ಕಾರ್ಯಕ್ರಮವನ್ನು ಕೈಗೊಂಡ ರಾಜ್ಯ ಹಾಗೂ ಜಿಲ್ಲೆಯ ಹೆಸರನ್ನು ತಿಳಿಸಿ	ಯೋಜನೆ/ ಕಾರ್ಯಕ್ರಮವಾರು ವೆಚ್ಚದ ಮೊತ್ತ(ಬಜೆಟ್)	ಯೋಜನೆ/ ಕಾರ್ಯಕ್ರಮಗಳಿಗೆ ವ್ಯಯಿಸಿದ ಮೊತ್ತ ಉಪ ಲೆಕ್ಕಗಳು	ವರದಿಯ ಅವಧಿಗೆ ಸಂಚಿತ ವೆಚ್ಚ	ನೇರವಾಗಿ ಅಥವಾ ಅನುಷ್ಠಾನದ ಏಜೆನ್ಸಿ ಮೂಲಕ ಭರಿಸಿದ ವೆಚ್ಚ – ಅನುಷ್ಠಾನದ ಏಜೆನ್ಸಿಯ ವಿವರಗಳು
1.	ಕರ್ನಾಟಕ ರಾಜ್ಯದಲ್ಲಿ 2019ರ ಏಪ್ರಿಲ್ 18 ಮತ್ತು 23 ರಂದು ನಡೆದ ಸಾರ್ವತ್ರಿಕ ಲೋಕಸಭಾ ಚುನಾವಣೆಗಳಲ್ಲಿ ಮತದಾರರ ಶಿಕ್ಷಣವನ್ನು ಉತ್ತೇಜಿಸುವುದು	ಶಿಕ್ಷಣ ಕ್ಷೇತ್ರ	ಬೆಂಗಳೂರು, ಕರ್ನಾಟಕ	ರೂ. 1,73,602/–	ರೂ.1,73,602/–	ರೂ.1,73,602/–	ಕಂಪನಿಯಿಂದ (ಕವಿಪ್ರನಿನಿ) ನೇರವಾಗಿ ಮೊತ್ತವನ್ನು ವ್ಯಯಿಸಲಾಗಿದೆ
2.	ಭಾರತ ಸರ್ಕಾರವು ಘೋಷಿಸಿರುವಂತೆ ಕೋವಿಡ್–19 ಅಧಿಸೂಚಿತ ವಿಪತ್ತು, ಇದರ ನಿಯಂತ್ರಣಾ ಮತ್ತು ಇತರ ಕ್ರಮಗಳಿಗೆ ಕರ್ನಾಟಕ ಸರ್ಕಾರವು ಕೊಡುಗೆಯಾಗಿ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕರ್ನಾಟಕ ಸರ್ಕಾರಕ್ಕೆ ನೀಡಲಾಗಿದೆ.	ಆರೋಗ್ಯ ರಕ್ಷಣೆ	ಕರ್ನಾಟಕ	ರೂ. 25,00,00,000/–	ರೂ. 25,00,00,000/–	ರೂ. 25,01,73,602/–	ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕರ್ನಾಟಕ ಸರ್ಕಾರ
	ಒಟ್ಟು			ರೂ. 25,01,73,602/–	ರೂ. 25,01,73,602/–		

5. ಕಂಪನಿಯು ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭದ ಮೊಬಲಗನ್ನು ಅಥವಾ ಅದರ ಭಾಗಾಂಶವನ್ನು ಈ ನಿಮಿತ್ತವಾಗಿ ಖರ್ಚು ವ್ಯಯಿಸಲು ವಿಫಲಗೊಂಡರೆ, ಕಂಪನಿಯು ತನ್ನ ಮಂಡಳಿ ವರದಿಯಲ್ಲಿ ಖರ್ಚನ್ನು ವ್ಯಯಿಸದಿರುವುದರ ಕಾರಣವನ್ನು ತಿಳಿಸತಕ್ಕದ್ದು: ಆ.ವ 2019–20 ರ ಅವಧಿಗೆ ಕವಿಪ್ರನಿನಿಯು ರೂ. 25,01,73,602/– ಗಳಷ್ಟು ಮೊತ್ತವನ್ನು ವ್ಯಯಿಸಿದ್ದು, ನಿಗಧಿಪಡಿಸಿದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ವೆಚ್ಚ ರೂ. 25,80,96,391/– ಗಳ ಶೇ. 97% ರಷ್ಟು ವ್ಯಯಿಸಿದ್ದು ಉಳಿದ ಶೇ. 3% ರಷ್ಟು ರೂ. 79,22,789/– ಮೊತ್ತವನ್ನು ಆ.ವ 2020–21ಕ್ಕೆ ಮುಂದೆ ಸಾಗಿಸಲಾಗಿದೆ. ಕಂಪನಿಯು ಸಿ.ಎಸ್.ಆರ್. ಯೋಜನೆಗಳನ್ನು ಗುರುತಿಸಲು ತಡವಾದ್ದರಿಂದ ಯೋಜನೆಗಳಿಗೆ ಅನುಮೋದನೆ ನೀಡಲು ಸಾಧ್ಯವಾಗಲಿಲ್ಲ

6. ಸಿ.ಎಸ್.ಆರ್. ಸಮಿತಿಯ ಜವಾಬ್ದಾರಿಯುತ ಹೇಳಿಕೆ:

ಸಿಎಸ್.ಆರ್. ನೀತಿಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಕಂಪನಿಯು ಸಿ.ಎಸ್.ಆರ್. ಉದ್ದೇಶಗಳ ಮತ್ತು ನೀತಿಯ ಪ್ರಕಾರ ಅನುಸರಣೆಯಾಗಿದೆ ಎಂದು ಸದಸ್ಯರು ಹೇಳಿಕೆ ನೀಡಿದ್ದಾರೆ.

ಸಹಿ/–	ಸಹಿ/–
(ಡಾ॥ ಎನ್. ಮಂಜುಳ, ಭಾ.ಆ.ಸೇ.)	(ಕಪಿಲ್ ಮೋಹನ್, ಭಾ.ಆ.ಸೇ.)
ಡಿಐಎನ್: 07508345	ಡಿಐಎನ್: 03627128
ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ.	ಅಧ್ಯಕ್ಷರು, ಸಿ.ಎಸ್.ಆರ್. ಸಮಿತಿ, ಕವಿಪ್ರನಿನಿ.

ಕಂಪನಿ ಕಾಯ್ದೆ 2013ರ ಪ್ರಕರಣ 143(6)(ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇದರ 31ನೇ ಮಾರ್ಚ್ 2020ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಹಾಗೂ ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಪಾಲರು ರವರ ಅಭಿಪ್ರಾಯಗಳು.

ಕಂಪನಿ ಕಾಯ್ದೆ 2013ರಡಿಯಲ್ಲಿ ನಿಗದಿಪಡಿಸಿರುವ ಆರ್ಥಿಕ ಕಾರ್ಯ ನೀತಿ ಚೌಕಟ್ಟಿನ ಪ್ರಕಾರ, 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಆರ್ಥಿಕ ನಿರೂಪಣೆಯ ಲೆಕ್ಕಪತ್ರ ಪಟ್ಟಿಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿರುತ್ತದೆ. ಕಾಯಿದೆಯ ಪ್ರಕರಣ 139(5) ರ ಅಡಿಯಲ್ಲಿ ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಪಾಲರಿಂದ ನೇಮಿಸಲ್ಪಟ್ಟಿರುವ ಶಾಸನ ಬದ್ಧ ಲೆಕ್ಕ ಪರಿಶೋಧಕರು, ಕಾಯಿದೆಯ ಪ್ರಕರಣ 143(10) ರಲ್ಲಿ ನಿಗಧಿಪಡಿಸಿರುವ ಪರಿಶೋಧನೆ ಮತ್ತು ಖಚಿತ ಗುಣಮಟ್ಟಗಳ ಪ್ರಕಾರ, ಈ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರ ಪಟ್ಟಿಗಳ ಮೇಲೆ, ಸ್ವಾಯತ್ತ ಪರಿಶೋಧನೆ ನಡೆಸಿ ಕಾಯಿದೆಯ ಪ್ರಕರಣ 143ರ ಅಡಿಯಲ್ಲಿ ಅಭಿಪ್ರಾಯ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಪರಿಶೋಧನಾ ಕಾರ್ಯವನ್ನು ಸದರಿ ಶಾಸನ ಬದ್ಧ ಲೆಕ್ಕ ಪರಿಶೋಧಕರು ದಿನಾಂಕ: 30.11.2020 ರಂದು ಮಾಡಿದ ಲೆಕ್ಕ ಪರಿಶೋಧನಾ ವರದಿಯನ್ನು ಮೀರಿಸಿ, ದಿನಾಂಕ: 22.03.2021 ರಂದು ಹೊರಡಿಸಿರುವ ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿಯ ಮೂಲಕ ಪರಿಶೋಧನಾ ಕಾರ್ಯ ಪೂರ್ಣಗೊಳಿಸಿದ್ದಾರೆಂದು ನಿರೂಪಿಸಲ್ಪಟ್ಟಿದೆ.

ಕಾಯಿದೆ ಪ್ರಕರಣ 143(6)(ಎ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 31ನೇ ಮಾರ್ಚ್ 2020ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ ಪೂರಕ ಪರಿಶೋಧನೆ ನಡೆಸಿದ್ದೇನೆ. ಶಾಸನಬದ್ಧ ಲೆಕ್ಕ ಪರಿಶೋಧಕರ ಪರಿಶೋಧಿತ ಕಾರ್ಯನಿರೂಪಣಾ ಮಾಹಿತಯನ್ನು ಪರಾಮರ್ಶಿಸದೆ ಹಾಗೂ ಕೇವಲ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಂಪನಿ ಸಿಬ್ಬಂದಿಯೊಡನೆ ನಡೆಸಿದ ವಿಚಾರಣೆ ಹಾಗೂ ಕೆಲವು ಆಯ್ದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆ ಮೂಲಕ ವೈಯಕ್ತಿಕವಾಗಿ ಈ ಪೂರಕ ಲೆಕ್ಕ ಪರಿಶೋಧನಾ ಕಾರ್ಯವನ್ನು ನಿರ್ವಹಿಸಲಾಗಿದೆ.

ನನ್ನ ಪೂರಕ ಪರಿಶೋಧನಾ ಸಮಯದಲ್ಲಿ ಲೆಕ್ಕ ಪರಿಶೋಧನಾ ಅವಲೋಕನಗಳಿಗೆ ಪರಿಣಾಮ ಬೀರಲು ಆಡಳಿತ ಮಂಡಳಿಯಿಂದ ಪರಿಷ್ಕರಿಸಿದ ಆರ್ಥಿಕ ನಿರೂಪಣೆಗಳ ದೃಷ್ಟಿಕೋನದಲ್ಲಿ, ಹಣಕಾಸು ಹೇಳಿಕೆಗಳ ಟಿಪ್ಪಣಿ ಸಂಖ್ಯೆ: 37.38 ರಲ್ಲಿ ಸೂಚಿಸಿರುವಂತೆ ಹಾಗೂ ಪರಿಷ್ಕೃತ ಪರಿಶೋಧಕರ ವರದಿಯ ಪ್ರಕಾರ ನನ್ನ ಗಮನಕ್ಕೆ ಯಾವುದೇ ಟೀಕೆ ಅಭಿಪ್ರಾಯಗಳಾಗಲಿ ಅಥವಾ ಕಾಯ್ದೆ ಪ್ರಕರಣ 143(6)(ಬಿ) ಅಡಿಯಲ್ಲಿ ಲೆಕ್ಕ ಪರಿಶೋಧಕರ ವರದಿಗೆ ಸೇರಿಸಬೇಕಾದ ಯಾವುದೇ ತಿದ್ದುಪಡಿ ಇರುವುದಿಲ್ಲ.

ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಪಾಲರ ಪರವಾಗಿ

ಸಹಿ/–
(ಅನೂಪ್ ಫ್ರಾನ್ಸಿಸ್ ಡಂಗ್ ಡಂಗ್)
ಪ್ರಧಾನ ಲೆಕ್ಕಪರಿಶೋಧಕರು(ಪರಿಶೋಧನೆ–II)
ಕರ್ನಾಟಕ ಬೆಂಗಳೂರು.

ಸ್ಥಳ: ಬೆಂಗಳೂರು.
ದಿನಾಂಕ: 05.04.2021.

ಸ್ವಾಯತ್ತ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ

ಭಾರತೀಯ ಲೆಕ್ಕಪದ್ಧತಿ ಪ್ರಕಾರದ ಆರ್ಥಿಕ ನಿರೂಪಣೆಗಳ ಬಗ್ಗೆ ವರದಿ

ನಿಗಮದ ನಿರ್ದೇಶಕ ಮಂಡಳಿಯು 30.11.2020ರಂದು ಅನುಮೋದಿಸಿರುವ ಭಾರತೀಯ ಲೆಕ್ಕಪದ್ಧತಿ(ಭಾ.ಲೆ.ಪ) ಪ್ರಕಾರದ ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳು, ಲೆಕ್ಕಪತ್ರಗಳ ಬಗ್ಗೆ ಕಂಪನಿ ಕಾಯಿದೆಯ ಪ್ರಕರಣ 143(6)ರ ಅಡಿಯಲ್ಲಿ ಭಾರತ ಮಹಾಲೇಖಪಾಲರು ಹಾಗೂ ನಿಯಂತ್ರಕರು ಇವರು ಗಮನಿಸಿ ಟೀಕಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಪರಿಷ್ಕರಣೆಗೊಂಡಿವೆ. ಕಂಪನಿಯ ಆರ್ಥಿಕ ನಿರೂಪಣೆಗಳು ಹಾಗೂ ಲೆಕ್ಕಪತ್ರಗಳ ಬಗ್ಗೆ ಭಾರತ ಮಹಾಲೇಖಪಾಲರು ಹಾಗೂ ನಿಯಂತ್ರಕರು ಇವರು ಗಮನಿಸಿ ಟೀಕಿಸಿರುವ ಅಂಶಗಳನ್ನು ಅಳವಡಿಸಿಕೊಳ್ಳಲು ಈ ವರದಿಗಳನ್ನು ಪರಿಷ್ಕರಿಸಲಾಗಿದೆ. ಈ ಪರಿಷ್ಕರಣೆಯ ಪರಿಣಾಮವಾಗಿ ಕಂಪನಿಯ ಆರ್ಥಿಕ ನಿರೂಪಣೆಗಳು ಹಾಗೂ ಲೆಕ್ಕಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಟಿಪ್ಪಣಿ 37.38(ಇ)ರಲ್ಲಿ ಒದಗಿಸಲಾಗಿದೆ. ಈ ವರದಿಯು ದಿನಾಂಕ 30.11.2020ರ ನಮ್ಮ ಹಿಂದಿನ ವರದಿಯನ್ನು ಚ್ಯುತಿಗೊಳಿಸಿದೆ. ದಿನಾಂಕ 30.11.2020ರ ನಮ್ಮ ಮೂಲ ವರದಿಯ ತದನಂತರದಲ್ಲಿನ ಅಂಶಗಳ ಸಂಬಂಧವಾದ ನಮ್ಮ ಕಂಪನಿಯ ಲೆಕ್ಕಪರಿಶೋಧನಾ ಕಾರ್ಯವಿಧಾನಗಳು, ಭಾ.ಲೆ.ಪ. ಆರ್ಥಿಕ ನಿರೂಪಣಾ ಪಟ್ಟಿಗಳ ಬಗ್ಗೆ ಟಿಪ್ಪಣಿ 37.38(ಇ)ರಲ್ಲಿ ಮಾಡಿರುವ ತಿದ್ದುಪಡಿಗಳಿಗೆ ಸೀಮಿತವಾಗಿವೆ.

ಅಭಿಪ್ರಾಯ ನೀಡಿಕೆ ನಿರಾಕರಣೆ

ಮೆ॥ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕಂಪನಿ)ದ 31ನೇ ಮಾರ್ಚ್ 2020ರಂದು ಇದ್ದಂತೆ, ಆಸ್ತಿ–ಹೊಣೆ ಪಟ್ಟಿ ಹಾಗೂ ಆ ದಿನಾಂಕದ ವರ್ಷಾಂತ್ಯದವರೆಗಿನ ಲಾಭ ಮತ್ತು ನಷ್ಟದ ಲೆಕ್ಕ(ಇತರ ಸಮಗ್ರ ಆದಾಯಗಳನ್ನೂ ಒಳಗೊಂಡು), ಹಣ ಚಲಾವಣೆಯ ವರದಿ, ಆ ವರ್ಷಕ್ಕೆ ಕೊನೆಗೊಂಡಂತೆ ಸ್ವಾಮ್ಯದ ಬದಲಾವಣೆಯ ನಿರೂಪಣೆ, ಗಮನಾರ್ಹ ಲೆಕ್ಕಪದ್ಧತಿ ತತ್ವಗಳ ಸಾರಾಂಶಗಳು ಹಾಗೂ ಇತರ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡ ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳನ್ನು (ಇನ್ನು ಮುಂದೆ ಭಾ.ಲೆ.ಪ. ಆರ್ಥಿಕ ನಿರೂಪಣಾ ಪಟ್ಟಿಗಳೆಂದು ಉಲ್ಲೇಖಿಸಲ್ಪಡುತ್ತವೆ) ಪರಿಶೋಧನೆಗೊಳಪಡಿಸಲು ನಮ್ಮನ್ನು ತೊಡಗಿಸಿಕೊಳ್ಳಲಾಯಿತು.

ಭಾ.ಲೆ.ಪ.ತತ್ವಗಳನುಸಾರದ ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ಬಗ್ಗೆ ನಾವು ಅಭಿಪ್ರಾಯ ನೀಡುವುದಿಲ್ಲ. ನಮ್ಮ ವರದಿಯ ಅಭಿಪ್ರಾಯ ನೀಡಿಕೆ ನಿರಾಕರಣೆಯ ಭಾಗದಲ್ಲಿ ಅರ್ಹತಾದಾಯಕ ಅಂಶಗಳ ವಿವರಣೆಯ ಪ್ರಯುಕ್ತ ಅಗತ್ಯ ಪ್ರಮಾಣದ ಯುಕ್ತ ಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳಲು ಆಗದ ಕಾರಣ, ಕಂಪನಿಯ ಈ ಭ.ಲೆ.ಪತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳ ಬಗ್ಗೆ ಪರಿಶೋಧನಾ ಅಭಿಪ್ರಾಯವನ್ನು ನೀಡಲು ಆಗುವುದಿಲ್ಲ.

ಅಭಿಪ್ರಾಯ ನೀಡಿಕೆ ನಿರಾಕರಣೆಗೆ ಆಧಾರಗಳು :

ಹಿಂದಿನ ಆರ್ಥಿಕ ವರ್ಷದ, ಅಂದರೆ 2019ರ ಮಾರ್ಚ್ 31ರಂದಿಗೆ, ಭಾ.ಲೆ.ಪ.ತತ್ವಗಳನುಸಾರ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಸ್ವಾಯತ್ತ ಲೆಕ್ಕಪರಿಶೋಧಕರ ವರದಿಯ ಬಗ್ಗೆ ನಾವು ಅರ್ಹತಾದಾಯಕ ಅಭಿಪ್ರಾಯವನ್ನು ನೀಡಿದ್ದೆವು. ಈ ಅಭಿಪ್ರಾಯಿತ ಅಂಶಗಳು ಹಾಗೂ 2020ರ ಮಾರ್ಚ್ 31ರ ವರ್ಷಾಂತ್ಯದವರೆಗೆ ಗಮನಿಸಲ್ಪಟ್ಟ ಅಂಶಗಳು ಹೀಗಿವೆ:

i) ಟಿಪ್ಪಣಿ ಸಂಖ್ಯೆ 23(1){1}, 23.,23.2 ಮತ್ತು 23.3: ಪಿಂಚಣಿ ಮತ್ತು ಉಪದಾನ ಅವಕಾಶ ಕಲ್ಪಿಸುವಿಕೆಗಾಗಿ ಕವಿಪ್ರನಿನಿ ಹಾಗೂ ವಿ.ಸ.ಕಂಪನಿಗಳ ಪಿಂಚಣಿ ಮತ್ತು ಉಪದಾನ ನ್ಯಾಸ(ಕೆ.ಇ.ಪಿ.ಜಿ.ಟಿ)ಕ್ಕೆ ಪಾವತಿಸಬೇಕಾದ ಭಾರತೀಯ ಕರೆನ್ಸಿ 64,443.85ಲಕ್ಷ ರೂ.ಗಳ ವಿಚಾರದಲ್ಲಿ,

ದಿನಾಂಕ 31.03.2020ರಂದಿಗೆ ಆಯವ್ಯಯ ಪಟ್ಟಿಯಲ್ಲಿ ಆ.ವ.2019–20ಕ್ಕೆ ಸ್ವನಿರ್ವಹಿತ ಕರಡು ವಾಸ್ತವಿಕ ಮೌಲ್ಯಮಾಪನ ವರದಿಯ ಪ್ರಕಾರ, ನಿವ್ವಳ ಹೊಣೆಗಾರಿಕೆಯಲ್ಲಿ ಪಿಂಚಣಿ ಪ್ರಯುಕ್ತ ಭಾರತೀಯ ಕರೆನ್ಸಿ ಮೌಲ್ಯ 115574.23ಲಕ್ಷ(ಕರ್ನಾಟಕ ಸರ್ಕಾರದ ಹೊಣೆಗಾರಿಕೆ ರೂ.52779 ಲಕ್ಷವನ್ನು ಹೊರತುಪಡಿಸಿ), ಉಪದಾನದ ನಿಮಿತ್ತ ರೂ.8541.81 ಲಕ್ಷ ತೋರಿಸಬೇಕಾಗಿತ್ತು.

ಮುಂದುವರಿಸಿ, ಕರ್ನಾಟಕ ಸರ್ಕಾರವು ತನ್ನ ಹೊಣೆಗಾರಿಕೆ ಪಾಲಿನ ವಂತಿಗೆಯನ್ನು ಒದಗಿಸದ ಕಾರಣ, ಕಂಪನಿಯು ತನ್ನ ಯೋಜಿತ ಆಸ್ತಿಗಳ ಮೌಲ್ಯಗಳನ್ನು ಇಳಿತಗೊಳಿಸಿದ್ದು, ಇದು ದಿನಾಂಕ 31.05.2002ರಂದು ಕರ್ನಾಟಕ ಸರ್ಕಾರವು ಅಧಿಸೂಚಿಸಿರುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ನಿಯಮಗಳು, 2002(ಕವಿಪ್ರನಿನಿಯ ಉದ್ಯಮ ಹಾಗೂ ತನ್ನ ಉದ್ಯೋಗಿಗಳನ್ನು ವಿದ್ಯುಚ್ಛಕ್ತಿ ವಿತರಣೆ ಮತ್ತು ಸಗಟು ಸರಬರಾಜು ಕಂಪನಿಗಳಿಗೆ ವರ್ಗಾವಣೆ)ರ ಅನುಸಾರವಿಲ್ಲ. ಈ ಕ್ರಮವು, ಕೆ.ಇ.ಪಿ.ಜಿ.ಟಿ. ನ್ಯಾಸ ಡೀಡ್ ಪ್ರಕಾರ ಸೂಚಿತ ಗರಿಷ್ಟ ವಂತಿಗೆಯ ದರ ಶೇ.27ರ ಬದಲಾಗಿ ಪರೋಕ್ಷವಾಗಿ ಶೇ.57.30ರ ಅಧಿಕ ದರದ ವಂತಿಗೆಗೆ ಅವಕಾಶವಾಗಿದ್ದು, ವಿದ್ಯುತ್ ದರ ನಿಗದಿಪಡಿಸುವಿಕೆಯ ವೆಚ್ಚಗಳನ್ನು ಕ್ಲೇಮು ಮಾಡಲು ಕಾರಣವಾಗಿದೆ, ಇದು ಕ.ವಿ.ನಿ.ಆಯೋಗವು ಹೊರಡಿಸಿರುವ ನಿರ್ದೇಶನಗಳ ಪ್ರಕಾರವಿಲ್ಲ.

ಪರಿಪೂರ್ಣತೆ, ನಿಖರತೆ, ಅಂತಹ ಲೆಕ್ಕೀಕರಣಕ್ಕೊಳಪಡಿಸಿಲ್ಲದ ಅವಕಾಶಗಳ ಸಮರ್ಪಕ/ಅಸಮರ್ಪಕತೆ ಹಾಗೂ ತದನಂತರದಲ್ಲಿ ಅಂತಹ ವಿಷಯಾಧಾರಿತ ಲೆಕ್ಕಮೌಲ್ಯಗಳನ್ನು ಮುಂದುವರಿಸುವುದರ ಪರಿಣಾಮಗಳು ಹಾಗೂ ಭಾರತೀಯ ಲೆಕ್ಕಪದ್ಧತಿ ತತ್ತ್ವ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಫಲಿತಗಳ ಬೆಂಬಲಿತ ಹಾಗೂ ಆ ಸಂಬಂಧವಾಗಿ ಟೀಕೆ ಮಾಡುವ ಸಂಬಂಧವಾಗಿ ಸಾಕಷ್ಟು ಪ್ರಮಾಣದಲ್ಲಿ ಪರಿಶೋಧಯುಕ್ತ ಸಾಕ್ಷ್ಯ ಪುರಾವೆಗಳನ್ನು ಪಡೆದುಕೊಳ್ಳಲು ಆಗಿಲ್ಲ.

ii) ಟಿಪ್ಪಣಿ ಸಂಖ್ಯೆ 1.2(ಎ),1.8,1.12,1.20,4ಎ (ಕ್ರ.ಸಂ.) ಮತ್ತು 37.38(ಇ): ಕಂಪನಿ ಕಾಯಿದೆ,2013ರ ಅನುಸೂಚಿ III(ಭಾಗ II) ರೊಂದಿಗೆ ಅನ್ವಯಿಸಲಾದ ಕಂಪನಿ ಕಾಯಿದೆ 2013ರ ಅನುಸೂಚಿ 129, ಕಂಪನಿ ನಿಯಮಗಳು(ಭಾ.ಲೆ.ಪದ್ಧತಿ ತತ್ವಗಳು)2015, ಇವುಗಳ ಅಡಿಯಲ್ಲಿ ಹೊರಡಿಸಿರುವ ಹಾಗೂ ತದನಂತರದಲ್ಲಿ ತಿದ್ದುಪಡಿಗಳನುಸಾರ ಆದೇಶಿಸಿರುವ ಭಾರತೀಯ ಲೆಕ್ಕ ತತ್ವ 115 "ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದ ಮೂಲಕ ಗಳಿಸಿದ ಕಂದಾಯ", ಭಾರತೀಯ ಲೆಕ್ಕ ತತ್ವ 114 "ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳು" ಮತ್ತು ಭಾರತೀಯ ಲೆಕ್ಕ ತತ್ವ 1 "ಆರ್ಥಿಕ ನಿರೂಪಣಾ ಪಟ್ಟಿಗಳ ಮಂಡಿಸುವಿಕೆ" ಅನುಸಾರ ವಿದ್ಯುತ್ ದರ ಆದೇಶ–2020ರಲ್ಲಿ ಆ.ವ.2006–07ಕ್ಕೆ ಅನುಮೋದಿಸಿರುವ ಒದಗಿಬಂದ ಆದಾಯ/ಕಂದಾಯ ಕೊರತೆಯ ಮೊಬಲಗು ರೂ.7290ಲಕ್ಷ, ಆ.ವ.2019–20ಕ್ಕೆ ಲೆಕ್ಕಸಮನ್ವಯಗೊಳಿಸಿದ ಪ್ರಸರಣ ಕಂದಾಯದ ಪರಿಣಾಮ, ಆ.ವ.2018–19ರ ಸಾಲಿನಲ್ಲಿ ರೂ.43671ಲಕ್ಷ ಮೌಲ್ಯದ ಒದಗಿಬಂದ ಆದಾಯ/ಕಂದಾಯ ಕೊರತೆಯ ಕಾರ್ಯಸಾಧನೆ ಹೊಣೆಗಾರಿಕೆಯನ್ನು ಪೂರ್ಣಗೊಳಿಸಿದ್ದು, ಆ ವರ್ಷಕ್ಕೆ ಕಂಪನಿಯು ಒದಗಿಬಂದ ಪ್ರಸರಣ ಕಂದಾಯ/ಕಂದಾಯ ಕೊರತೆಗಳ ಲೆಕ್ಕ ಸಮನ್ವಯತೆಯನ್ನು ಮಾಪನಗೊಳಿಸಿಲ್ಲ, ಮಂಡಿಸಿಲ್ಲ, ಪ್ರಕಟಿಸಿಲ್ಲ ಹಾಗೂ ಮಾನ್ಯಗೊಳಿಸಿಲ್ಲ. ಈ ಕ್ರಮವು, ಭಾರತೀಯ ಲೆಕ್ಕಪದ್ಧತಿ ತತ್ವಗಳು 114 "ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳು" ಇದರಲ್ಲಿ ಉಲ್ಲೇಖಿಸಿರುವಂತೆ, ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳ ಸಮಸ್ವರೂಪದ ವಿವಿಧ ವ್ಯವಹರಣೆಗಳ ಲೆಕ್ಕಾಚಾರ, ಮಾನ್ಯಗೊಳಿಸುವಿಕೆಯನ್ನು ಅಳವಡಿಸಿಕೊಳ್ಳುವುದಕ್ಕೆ ಅಸ್ಥಿರತೆಯನ್ನುಂಟುಮಾಡುತ್ತದೆ. ಅಲ್ಲದೆ, ಕಂಪನಿಯು ಮೇಲೆ ತಿಳಿಸಿರುವ ರೂ.43671ಲಕ್ಷ ಹಾಗೂ ರೂ.7290 ಲಕ್ಷ ಮೌಲ್ಯದ ಒದಗಿಬಂದ ಕಂದಾಯವನ್ನು ಸಾದಿಲ್ವಾರು ಆಸ್ತಿಗಳೆಂದು ತೋರಿಸಿದ್ದು, ಇದು ಭಾರತೀಯ ಲೆಕ್ಕಪದ್ಧತಿ ತತ್ವಗಳು 37 "ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆ ಹಾಗೂ ಸಾದಿಲ್ವಾರು

ಆಸ್ತಿಗಳು" ಪ್ರಕಾರ ಇಲ್ಲ. ಹೀಗಾಗಿ, ಪರಿಪೂರ್ಣತೆ, ನಿಖರತೆ, ಅಂತಹ ಲೆಕ್ಕೀಕರಣಕ್ಕೊಳಪಡಿಸಿಲ್ಲದ ಅವಕಾಶಗಳ ಸಮರ್ಪಕ/ಅಸಮರ್ಪಕತೆ ಹಾಗೂ ತದನಂತರದಲ್ಲಿ ಅಂತಹ ವಿಷಯಾಧಾರಿತ ಲೆಕ್ಕಮೌಲ್ಯಗಳನ್ನು ಮುಂದುವರಿಸುವುದರ ಪರಿಣಾಮಗಳು, ಆದಾಯ ತೆರಿಗೆ, ಮುಂದೂಡಲ್ಪಟ್ಟ ತೆರಿಗೆ, ಪ್ರಸಕ್ತದ್ದಲ್ಲದ ಹೊಣೆಗಾರಿಕೆ, ಸಾದಿಲ್ವಾರು ಅಸ್ತಿಗಳ ಸಂಬಂಧವಾಗಿ ಟೀಕೆ ಮಾಡುವ ಸಂಬಂಧವಾಗಿ ಸಾಕಷ್ಟು ಪ್ರಮಾಣದಲ್ಲಿ ಪರಿಶೋಧಯುಕ್ತ ಸಾಕ್ಷ್ಯ ಪುರಾವೆಗಳನ್ನು ಪಡೆದುಕೊಳ್ಳಲು ಆಗಿಲ್ಲ.

iii) ಟಿಪ್ಪಣಿ ಸಂಖ್ಯೆ 1.6 ಗಮನಾರ್ಹ ಲೆಕ್ಕಪದ್ಧತಿ ತತ್ವಗಳು, ಸ್ವಾಮ್ಯ ಬದಲಾವಣೆಗಳ ಪಟ್ಟಿ, ಟಿಪ್ಪಣಿ ಸಂಖ್ಯೆ 2.5(ಬಿ) ಹಾಗೂ ಟಿಪ್ಪಣಿ ಸಂಖ್ಯೆ 33: ಪೂರ್ವಾವಧಿ ಆದಾಯ ರೂ.1264.96ಲಕ್ಷ ಹಾಗೂ ಉಳಿಸಿಕೊಂಡ ಗಳಿಕೆಯ ಪ್ರಾರಂಭಿಕ ಶಿಲ್ಕಿಗೆ ಎದಿರಾಗಿ ವೆಚ್ಚ ರೂ.16864.62ಲಕ್ಷ ಮತ್ತು ಲೋಪ ಉಂಟಾಗಿರುವೆಡೆ ತುಲನಾತ್ಮಕ ಮೊಬಲಗನ್ನು ಪುನರ್ ನಿರೂಪಿಸಿ, ಪೂರ್ವಾನ್ವಯವಾಗಿ ಲೋಪಗಳನ್ನು ತಿದ್ದುಪಡಿಗೊಳಿಸದಿರುವುದು ಅಥವಾ ಕಂಪನಿ ನಿಯಮಗಳು(ಭಾ.ಲೆ.ಪದ್ಧತಿ ತತ್ವಗಳು)2015, ಇವುಗಳ ಅಡಿಯಲ್ಲಿ ಹೊರಡಿಸಿರುವ ಹಾಗೂ ತದನಂತರದಲ್ಲಿ ತಿದ್ದುಪಡಿಗಳನುಸಾರ ಆದೇಶಿಸಿರುವ ಭಾ.ಲೆ.ಪ.ತತ್ವಗಳು 8"ಲೆಕ್ಕೀಕರಣ ಕಾರ್ಯನೀತಿ, ಲೆಕ್ಕೀಕರಣ ಅಂದಾಜುಗಳಲ್ಲಿ ಬದಲಾವಣೆ ಹಾಗೂ ಲೋಪಗಳು" ಇದರನುಸಾರ ಆಸ್ತಿಗಳು, ಹೊಣೆಗಾರಿಕೆಗಳ ಆರಂಭಿಕ ಶಿಲ್ಕು, ಹಿಂದಿನ ಅವಧಿಯ ಇತರೆ ಸ್ವಾಮ್ಯಗಳನ್ನು ಪುನರ್ ನಿರೂಪಿಸದೆ ಯುಕ್ತ ರೀತಿಯಲ್ಲಿ ಲೆಕ್ಕಾಚಾರ ಮಾಡದೆ ಹಾಗೂ ಪ್ರಮಾಣವನ್ನು ಗೊತ್ತುಪಡಿಸಿಕೊಳ್ಳದೆ ಪ್ರಸಕ್ತ ವರ್ಷದಲ್ಲಿ ಕಂಪನಿಯು ಹೊಂದಾಣಿಕೆ ಮಾಡಿದೆ. ಹೀಗಾಗಿ ಇದರ ತದನಂತರದ ಪರಿಣಾಮದ ಬಗ್ಗೆ ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

iv) ಟಿಪ್ಪಣಿ ಸಂಖ್ಯೆ 1.11 ಗಮನಾರ್ಹ ಲೆಕ್ಕಪದ್ಧತಿ ತತ್ವಗಳು ಹಾಗೂ ಟಿಪ್ಪಣಿ ಸಂಖ್ಯೆ 31.1: ಪಿ.ಪಿ.ಇನಲ್ಲಿ ಫೈಬರ್ ಆಪ್ಟಿಕ್ ಅನ್ನು ಗುರುತಿಸಿ ಪ್ರತ್ಯೇಕಪಡಿಸುವುದು, ಕಂಪನಿ ನಿಯಮಗಳು(ಭಾ.ಲೆ.ಪದ್ಧತಿ ತತ್ವಗಳು)2015, ಇವುಗಳ ಅಡಿಯಲ್ಲಿ ಹೊರಡಿಸಿರುವ ಭಾ.ಲೆ.ಪ.ತತ್ವಗಳು 16 " ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು", ಕೇಂ.ವಿ.ನಿ.ಆಯೋಗ(ವಿದ್ಯುತ್ ದರದ ನಿಬಂಧನೆಗಳು ಹಾಗೂ ಷರತ್ತುಗಳು)2019, ಕೇಂ.ವಿ.ನಿ.ಆಯೋಗದ ದಿನಾಂಕ 05.11.2015ರ ಅಧಿಸೂಚನೆ ಸಂಖ್ಯೆ ಎಲ್–1/144/2013/ಕೇಂ.ವಿ.ನಿ.ಆ. ಹಾಗೂ ತದನಂತರದಲ್ಲಿ ತಿದ್ದುಪಡಿಗಳನುಸಾರ ಶೇ.6.33ರ ಬದಲು ಶೇ.5.28ರ ದರದಲ್ಲಿ ಸವಕಳಿಯನ್ನು ವಿಧಿಸಿರುವುದರ ಸಂಬಂಧವಾಗಿ ಸಾಕಷ್ಟು ಪ್ರಮಾಣದ ದಾಖಲೆಗಳನ್ನು ಒದಗಿಸದ ಕಾರಣ, ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು, ಸವಕಳಿ ಹಾಗೂ ಲಾಭದ ಮೇಲಿನ ತದನಂತರದ ಪರಿಣಾಮದ ಬಗ್ಗೆ ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

v) ಟಿಪ್ಪಣಿ ಸಂಖ್ಯೆ 1.11(ಜಿ) ಗಮನಾರ್ಹ ಲೆಕ್ಕಪದ್ಧತಿ ತತ್ವಗಳು ಮತ್ತು ಟಿಪ್ಪಣಿ ಸಂಖ್ಯೆ 2ಎ.(ಬಿ)ಕಂಪನಿ ನಿಯಮಗಳು(ಭಾ.ಲೆ.ಪದ್ಧತಿ ತತ್ವಗಳು)2015, ಇವುಗಳ ಅಡಿಯಲ್ಲಿ ಹೊರಡಿಸಿರುವ ಭಾ.ಲೆ.ಪ.ತತ್ವಗಳು 16 " ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು",ಇದರ ಪ್ರಕಾರ ಮೂಲ ಆಸ್ತಿಯ ಕಳೆದುಳಿದ ಮೌಲ್ಯಾವಧಿಯ ಪ್ರಕಾರ ಸವಕಳಿಯನ್ನು ಒದಗಿಸಬೇಕಾಗಿದ್ದು, ಕಂಪನಿಯು ಸವಕಳಿಯ ಉದ್ದೇಶಕ್ಕಾಗಿ, ಬಿಡುಗಡೆಗೊಳಿಸಿದ ಆಸ್ತಿಗಳನ್ನು ಪುನರ್ ಬಳಕೆಗೆ ಉಪಯೋಗಿಸಿದಾಗ, ಅಂತಹ ಆಸ್ತಿಗಳನ್ನು ಇಳಿತಗೊಳಿಸಿದ ದರದಲ್ಲಿ ಹೊಸ ಆಸ್ತಿಗಳೆಂದು ಪರಿಗಣಿಸಿ, ತದನುಸಾರ ಸವಕಳಿಯನ್ನು ಕಲ್ಪಿಸಿದ್ದು, ಇದರಿಂದಾಗಿ ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು, ಹಾಗೂ ಸವಕಳಿ ಸಂಬಂಧವಾಗಿ ತತ್ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

vi) ಟಿಪ್ಪಣಿ ಸಂಖ್ಯೆ 1.12(ಇ) ಗಮನಾರ್ಹ ಲೆಕ್ಕಪದ್ಧತಿ ತತ್ವಗಳು: ಸಮಾಲೋಚನಾ ಶುಲ್ಕಗಳ ರೆವಿನ್ಯೂ ಮಾನ್ಯತೆ, ಬಿಡುಗಡೆಗೊಳಿಸಿದ ಭೂ ಸಂಬಂಧ ಶುಲ್ಕಗಳು, ತಪಾಸಣಾ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು ಹಾಗೂ ನಗದು ಅಧಾರದ ಮಂಡಪ್ ಕೀಪರ್ ಶುಲ್ಕಗಳು ಕಂಪನಿ ಕಾಯಿದೆ, 2013ರ ಅನುಸೂಚಿ 128, ಕಂಪನಿ ಕಾಯಿದೆ (ಭಾರತೀಯ ಲೆಕ್ಕಪದ್ಧತಿ ತತ್ವಗಳು)

ನಿಯಮಗಳು 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾರತೀಯ ಲೆಕ್ಕ ತತ್ವ 1 "ಆರ್ಥಿಕ ನಿರೂಪಣಾ ಪಟ್ಟಿಗಳ ಮಂಡನೆ", ಹಾಗೂ ಭಾರತೀಯ ಲೆಕ್ಕ ತತ್ವ 115 "ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದ ಮೂಲಕ ಗಳಿಸಿದ ಕಂದಾಯ", ರ ಅನುಸರಣೆಯಾಗಿಲ್ಲ. ಹೀಗಾಗಿ ಭಾ.ಲೆ.ಪ.ತತ್ವಗಳು ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

vii) ಟಿಪ್ಪಣಿ ಸಂಖ್ಯೆ 1.17 ಗಮನಾರ್ಹ ಲೆಕ್ಕಪದ್ಧತಿ ತತ್ವಗಳು : ಸರಾಸರಿ ಅಳತೆ ವಿಧಾನದ ಆಧಾರದ ಮೇಲೆ ಪಡೆದ ಸಾಲಗಳ ಮೇಲಿನ ಬಂಡವಾಳ ದರದ ಲೆಕ್ಕೀಕರಣ ಹಾಗೂ ಪರಿಣಾಮಕಾರಿ ಬಡ್ಡಿ ದರ ವಿಧಾನವನ್ನು ಅಳವಡಿಸಿಕೊಳ್ಳದಿರುವುದಕ್ಕೆ ಸಂಬಂಧಿಸಿದಂತೆ, ಇದು ಕಂಪನಿ ಕಾಯಿದೆ,2015 (ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 23"ಸಾಲ ಪಡೆಯುವಿಕೆಯ ವೆಚ್ಚಗಳು" ಇದರ ಅನುಸರಣೆಯಾಗಿಲ್ಲ. ತತ್ಪರಿಣಾಮವಾಗಿ, ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಹಾಗೂ ಸವಕಳಿ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

viii) ಟಿಪ್ಪಣಿ ಸಂಖ್ಯೆ 1.8 ಮತ್ತು 1.22(ಎ), ಗಮನಾರ್ಹ ಲೆಕ್ಕಪದ್ಧತಿ ತತ್ವಗಳು, ಟಿಪ್ಪಣಿ ಸಂಖ್ಯೆ 17 ಲಾಭ ಮತ್ತು ನಷ್ಟದ ಪಟ್ಟಿ: ಕಂಪನಿಯು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ಇತರೆ ಸಮಗ್ರ ಆದಾಯದ ಅಡಿಯಲ್ಲಿನ ಅಂಶಗಳನ್ನು ಗುರುತುಪಡಿಸಿಲ್ಲ, ಮಂಡಿಸಿಲ್ಲ ಅಥವಾ ಪುನರ್ ನಿರೂಪಿಸಿಲ್ಲ, ಇದು ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 1 "ಆರ್ಥಿಕ ನಿರೂಪಣಾ ಪಟ್ಟಿಗಳು", ಭಾ.ಲೆ.ಪ.ತತ್ವಗಳು 19 "ಸಿಬ್ಬಂದಿ ಸೌಲಭ್ಯಗಳು" ಮತ್ತು ಭಾ.ಲೆ.ಪ.ತತ್ವಗಳು 12"ಆದಾಯ ತೆರಿಗೆ" ಇವುಗಳು ಅಗತ್ಯಪಡಿಸಿರುವಂತೆ ಸಂಬಂಧಿತ ಪ್ರಕಟಗಳಿಗೆ ಅವಕಾಶ ಕಲ್ಪಿಸಿಲ್ಲ. ಇದರಿಂದಾಗಿ ಬೀರಬಹುದಾದ ಯಾವುದೇ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

ix) ಆಸ್ತಿಗಳು, ಸ್ಥಾವರಗಳು, ಉಪಕರಣಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ವಶಕ್ಕೆ ತೆಗೆದುಕೊಂಡು ಇತ್ಯರ್ಥಗೊಳಿಸಿ ಪ್ರತ್ಯೇಕಿಸದಿರುವುದು, ಸಾಲಪಡೆದಿರುವಿಕೆಯಿಂದ ಗಳಿಸಿದ ಆದಾಯವನ್ನು ವಿಂಗಡಿಸದಿರುವುದು, ಭದ್ರಗೊಳಿಸಿದ ಹಾಗೂ ಭದ್ರಗೊಳಿಸಿಲ್ಲದ ಸಾಲಗಳ ಮರುಪಾವತಿ, ಆರ್ಥಿಕ ಚಟುವಟಿಕೆಗಳಿಂದ ಉಂಟಾದ ಹೊಣೆಗಾರಿಕೆಗಳಿಗೆ ಆಯವ್ಯಯ ಪಟ್ಟಿಯಲ್ಲಿ ಆರಂಭಿಕ ಹಾಗೂ ಮುಕ್ತಾಯ ಶಿಲ್ಕಿನ ನಡುವೆ ಲೆಕ್ಕಸಮನ್ವಯವನ್ನು ಪ್ರಕಟಪಡಿಸದಿರುವುದು, ಇವುಗಳ ವಿಷಯದಲ್ಲಿ ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 1 "ಆರ್ಥಿಕ ನಿರೂಪಣಾ ಪಟ್ಟಿಗಳ ಮಂಡಿಸುವಿಕೆ" ಹಾಗೂ ಭಾ.ಲೆ.ಪ.ತತ್ವಗಳು 7 "ನಗದು ಹರವಿನ ಪಟ್ಟಿ" ಇವುಗಳು ಅಗತ್ಯಪಡಿಸಿರುವಂತೆ, ಕಂಪನಿಯು ನಗದು ಚಲಾವಣೆ ಪಟ್ಟಿಯನ್ನು ಸಿದ್ಧಪಡಿಸಿ ಮಂಡಿಸಿಲ್ಲ. ಹೀಗಾಗಿ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

x) ಟಿಪ್ಪಣಿ ಸಂಖ್ಯೆ 1.19 ಹಾಗೂ 37.5 ಗಮನಾರ್ಹ ಲೆಕ್ಕಪದ್ಧತಿ ತತ್ವಗಳು: ಕಂಪನಿ ಕಾಯಿದೆ,2015 (ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 1"ಆರ್ಥಿಕ ನಿರೂಪಣಾ ಪಟ್ಟಿಗಳ ಮಂಡಿಸುವಿಕೆ" ಅನುಸರಣವಾಗಿ, ಆಸ್ತಿಗಳ ಮೌಲ್ಯವನ್ನು ಇಳಿತಗೊಳಿಸುವ ವಿಷಯದಲ್ಲಿ ಪರೀಕ್ಷಾ ತಾಂತ್ರಿಕ ಮೌಲ್ಯೀಕರಣದ ದಾಖಲೆ ದಸ್ತಾವೇಜನ್ನು ಕಂಪನಿಯು ಒದಗಿಸಿಲ್ಲ. ಹೀಗಾಗಿ ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು ಹಾಗೂ ತತ್ಸಂಬಂಧ ಸವಕಳಿಯ ಮುಂದೊಯ್ಯುವ ವೆಚ್ಚದ ವಿಚಾರವಾಗಿ ಆಗಬಹುದಾದ ತಪ್ಪುವರದಿಗಳ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xi) ಟಿಪ್ಪಣಿ ಸಂಖ್ಯೆ 2.1 ಮತ್ತು 2.2(ಎ)[1] : ಭಾರತೀಯ ಲೆಕ್ಕಪದ್ಧತಿ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೋಗ್ಯದ ಮೇಲೆ ಹೊಂದಿರುವ/ಉಚಿತವಾಗಿ ಹೊಂದಿರುವ ಭೂಮಿಗಳ ವರ್ಗೀಕರಣ ಮತ್ತು ಮೌಲ್ಯೀಕರಣಗಳ ದಸ್ತಾವೇಜುಗೊಳಿಸಿ ಲೆಕ್ಕಸಮನ್ವಯಗೊಳಿಸುವಿಕೆ ಕಾರ್ಯವು ಬಾಕಿ ಇದ್ದು, ಇದು ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 16"ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು" ಹಾಗೂ ಭಾರತೀಯ ಲೆಕ್ಕಪದ್ಧತಿ ತತ್ವಗಳು 116 "ಭೋಗ್ಯ" ಇವುಗಳ ಅನುಸರಣೆಯಾಗಿ ಇಲ್ಲ. ಹೀಗಾಗಿ, ಇಂತಹ ಉಚಿತ/ಭೋಗ್ಯದ ಭೂಮಿಯ ಲೆಕ್ಕೀಕರಣ, ಇವುಗಳ ಋಣಮುಕ್ತತೆಯ ಮಂಡಿಸುವಿಕೆಯ ವಿಷಯದಲ್ಲಿ ತಪ್ಪು ವರದಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

*xii)*ಟಿಪ್ಪಣಿ ಸಂಖ್ಯೆ 2.2(ಎ): ಕಂಪನಿ ಕಾಯಿದೆ (ಭಾರತೀಯ ಲೆಕ್ಕಪದ್ಧತಿ ತತ್ವಗಳು) ನಿಯಮಗಳು 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾರತೀಯ ಲೆಕ್ಕ ತತ್ವ 115 "ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದ ಮೂಲಕ ಗಳಿಸಿದ ಕಂದಾಯ" ಹಾಗೂ ಭಾರತೀಯ ಲೆಕ್ಕ ತತ್ವ 16 "ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು" ರ ಪ್ರಕಾರ ಸರ್ಕಾರೇತರ ಮೂಲಗಳಿಂದ ರಿಯಾಯಿತಿ ದರದಲ್ಲಿ ಅಥವಾ ನ್ಯಾಯಸಮ್ಮತ ದರದಲ್ಲಿ ಉಚಿತವಾಗಿ ಪಡೆದ ಭೂಮಿಗಳನ್ನು ಲೆಕ್ಕಕ್ಕೊಳಪಡಿಸದಿರುವುದು ಭಾರತೀಯ ಲೆಕ್ಕಪದ್ಧತಿ ನಿರೂಪಣಾ ಪಟ್ಟಿಗಳಲ್ಲಿ ಆಸ್ತಿಗಳು,ಸ್ಥಾವರ ಹಾಗೂ ಉಪಕರಣಗಳು, ಋಣಮುಕ್ತತೆ,ಅನುದಾನ, ಗ್ರಾಹಕ ವಂತಿಗೆ ಹಾಗೂ ಇತರೆ ಆದಾಯಗಳ ವಿಷಯದಲ್ಲಿ ತಪ್ಪು ವರದಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

*xiii)*ಟಿಪ್ಪಣಿ ಸಂಖ್ಯೆ 2.4(ಸಿ) ಮತ್ತು 3.6: ವರದಿ ದಿನಾಂಕದಂದು ಇದ್ದಂತೆ, ಕಂಪನಿಯು ನಿರಂತರ ಜ್ಯೋತಿ ಯೋಜನೆಯ ಅಡಿಯಲ್ಲಿ ರೂ.2709.98ಲಕ್ಷ ವೆಚ್ಚವನ್ನು ಭರಿಸಿದೆ ಎಂದು ಅಂದಾಜು ಮಾಡಿದ್ದು, ಪ್ರಸ್ತುತ ಈ ವೆಚ್ಚವನ್ನು ಆಸ್ತಿಗಳು,ಸ್ಥಾವರ ಹಾಗೂ ಉಪಕರಣಗಳು ಮತ್ತು ಪ್ರಗತಿಯಲ್ಲಿರುವ ಬಂಡವಾಳ ವೆಚ್ಚಗಳ ಅಡಿಯಲ್ಲಿ ಲೆಕ್ಕಕ್ಕೊಳಪಡಿಸಿದ್ದು, ಈ ವೆಚ್ಚವನ್ನು ಯುಕ್ತಗೊತ್ತುಪಡಿಸಿಕೊಳ್ಳುವಿಕೆಯ ನಂತರ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲಿ ಮಾಡಬೇಕಿದೆ. ಕಂಪನಿಯು ಈ ನಿಟ್ಟಿನಲ್ಲಿ ಸಾಕಷ್ಟು ಮಾಹಿತಿಗಳನ್ನು ಒದಗಿಸದ ಕಾರಣ, ಈ ವಿಚಾರವಾಗಿ ನಿಖರತೆ ಅಥವಾ ಪರಿಪೂರ್ಣತೆಯನ್ನು ಹಾಗೂ ಭಾರತೀಯ ಲೆಕ್ಕಪದ್ಧತಿ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xiv) ಟಿಪ್ಪಣಿ ಸಂಖ್ಯೆ 2.4(ಇ) ಮತ್ತು 3.1,26(1)[i] ಹಾಗೂ 26.4: ಕಂಪನಿ ಕಾಯಿದೆ (ಭಾರತೀಯ ಲೆಕ್ಕಪದ್ಧತಿ ತತ್ವಗಳು) ನಿಯಮಗಳು 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾರತೀಯ ಲೆಕ್ಕ ತತ್ವ 115 "ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದ ಮೂಲಕ ಗಳಿಸಿದ ಕಂದಾಯ" ಅನುಸಾರ ಚಾಲ್ತಿಯಲ್ಲಿರುವ ಹಾಗೂ ಪೂರ್ಣಗೊಂಡ ಸ್ವನಿರ್ವಹಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕಂಪನಿಯು ಸಾಕಷ್ಟು ಮಾಹಿತಿಗಳನ್ನು ಹೊಂದಿಲ್ಲ. ನ್ಯಾಯ ಸಮ್ಮತ ಮೌಲ್ಯದಲ್ಲಿ ಬಂಡವಾಳೀಕರಿಸದಿರುವುದು, ಅನ್ವಯಿಸುವೆಡೆ ಒಪ್ಪಂದದ ಅವಧಿಯ ಬದಲಾಗಿ ಬಳಕೆಯುಕ್ತ ಅವಧಿಯಾಧಾರದಂತೆ ಋಣಮುಕ್ತತೆಗೊಳಿಸಿರುವುದು, ಮೂಲಸೌಕರ್ಯ ವೆಚ್ಚಗಳ ವಸೂಲಿಯ ಲೆಕ್ಕಾಚಾರ ಮಾಡಲು ಸಾಕಷ್ಟು ವಿಧಾನಗಳ ಕೊರತೆ, ಬಿಡುಗಡೆಗೊಳಿಸಿದ ಭೂಮಿ ಸಂಬಂಧವಾಗಿ ಹಿಂಪಡೆಯಲಾಗದ ಏಕಕಾಲಿಕ ಠೇವಣಿಯನ್ನು ಗೊತ್ತುಪಡಿಸಿಕೊಳ್ಳುವಲ್ಲಿ ಅಸಮರ್ಪಕತೆ ಇವುಗಳಿಂದಾಗಿ ನಾವು ನಿಖರತೆ ಅಥವಾ ಪರಿಪೂರ್ಣತೆಯನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಆಸ್ತಿ, ಸ್ಥಾವರ, ಉಪಕರಣ, ಸ್ವೀಕೃತಿ ಹಾಗೂ ಕಂದಾಯದ ಮೇಲೆ ಬೀರಬಹುದಾದ ಪರಿಣಾಮವನ್ನೂ ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಮುಂದುವರಿಸಿ, ಗೊತ್ತುಪಡಿಸಿಕೊಂಡಿರುವಷ್ಟರ ಮೇಲಿನ ನಮ್ಮ

ಲೆಕ್ಕಪರಿಶೋಧನೆಯನ್ನು ಆಧರಿಸಿ, ಕಂಪನಿಯು ಸ್ವನಿರ್ವಹಿತ ಕಾಮಗಾರಿಗಳ ಬಂಡವಾಳೀಕರಣದ ಬಗ್ಗೆ ಕಂಪನಿಯು ಖಚಿತಪಡಿಸಲಾಗಲಿಲ್ಲ, ಹೀಗಾಗಿ ಆಸ್ತಿಗಳು, ಸ್ಥಾವರ, ಉಪಕರಣ, ಹೊಣೆಗಾರಿಕೆ, ಸ್ವೀಕೃತಿ,ಕಂದಾಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಲಾಗುವುದಿಲ್ಲ.

xv) ಟಿಪ್ಪಣಿ ಸಂಖ್ಯೆ 2.5(ಎ) : ಆಸ್ತಿಗಳು, ಸ್ಥಾವರ, ಉಪಕರಣಗಳ ಲೆಕ್ಕಸಮನ್ವಯವು ಬಾಕಿ ಇರುವುದಕ್ಕೆ ಒಳಪಟ್ಟು, ಅಂತರ ಘಟಕ ವರ್ಗಾವಣೆಗಳಿಗೆ ಬಿಡುಗಡೆಗೊಳಿಸಲ್ಪಟ್ಟ ಅಂಗಾಂಗ ಭಾಗಗಳಿಗೆ, ಕಾರ್ಯಸ್ಥಗಿತಗೊಳಿಸಿದ ಹಾಗೂ ಆಸ್ತಿ ಮಾರಾಟಕ್ಕೆ ಕಂಪನಿಯು ತಾತ್ಕಾಲಿಕ ಮೌಲ್ಯವನ್ನು ಅಳವಡಿಸಿಕೊಂಡಿದೆ. ಕಂಪನಿ ಕಾಯಿದೆ (ಭಾರತೀಯ ಲೆಕ್ಕಪದ್ಧತಿ ತತ್ವಗಳು) ನಿಯಮಗಳು 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾರತೀಯ ಲೆಕ್ಕ ತತ್ವ 2 "ತಪಶೀಲು" ಹಾಗೂ ಭಾರತೀಯ ಲೆಕ್ಕ ತತ್ವ 16 "ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು" ರ ಪ್ರಕಾರ ಅಂತಹ ಅಂಗಾಂಗ ಭಾಗಗಳ ಮುಂದೊಯ್ಯುವ ಮೌಲ್ಯವನ್ನು ಗುರುತಿಸಲು ಆಗದ ಕಾರಣ, ಆಸ್ತಿಗಳು, ಸ್ಥಾವರ,ಉಪಕರಣ, ಮಾರಾಟಕ್ಕಾಗಿ ಉಳಿಸಿಕೊಂಡ ಆಸ್ತಿಗಳು, ಸವಕಳಿ ಹಾಗೂ ಆಸ್ತಿ ಮಾರಾಟದ ಲಾಭ/ನಷ್ಟಕ್ಕೆ ಸಂಬಂಧಿಸಿ ಭಾರತೀಯ ಲೆಕ್ಕಪದ್ಧತಿ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xvi) ಟಿಪ್ಪಣಿ ಸಂಖ್ಯೆ 2.1, 2.2, 2.5(ಸಿ) ಹಾಗೂ 3: ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಬಂಡವಾಳೀಕರಣ, ಮಾಲಿಕತ್ವ, ದಸ್ತಾವೇಜುಗೊಳಿಸುವುದು, ಭೌತಿಕ ನಿಯಂತ್ರಣ, ಉತ್ತೇಜಕಕ್ಕೆ ಅವಕಾಶ ಒದಗಿಸದಿರುವುದು, ವ್ಯತ್ಯಯಿತ ಪ್ರಮಾಣವನ್ನು ಗೊತ್ತುಪಡಿಸಿಕೊಳ್ಳದಿರುವುದು/ಅವಕಾಶ ಕಲ್ಪಿಸದಿರುವುದು, ಗುತ್ತಿಗೆದಾರರಿಗೆ/ಇಂದ ದರ ವ್ಯತ್ಯಾಸ, ಸಿಬ್ಬಂದಿ ಸಂಬಂಧಿತ ನಿರ್ವಹಣೆ ವೆಚ್ಚಗಳ ಬಂಡವಾಳೀಕರಣ ಹಾಗೂ ತತ್ಪ್ರಮಾಣವಾಗಿ ಭಾಗಸ್ಥಗೊಳಿಸುವುದು, ಆಡಳಿತ ವೆಚ್ಚ, ಸಿಬ್ಬಂದಿ ವೆಚ್ಚ, ಇತರ ಸಾಮಾನ್ಯ ಮೇಲು ವೆಚ್ಚ, ಸಾಲ ಪಡೆಯುವಿಕೆ ವೆಚ್ಚ, ಸ್ವನಿರ್ವಹಣೆ ಕಾಮಗಾರಿ ಸಂಬಂಧವಾಗಿ ಭರಿಸಿದ ಮೇಲ್ವಿಚಾರಣೆ ವೆಚ್ಚದ ವಸೂಲಿಯನ್ನು ಲೆಕ್ಕಶೀರ್ಷಿಕೆಯನುಸಾರ ಒಳಪಡಿಸುವುದು, ಪ್ರಾರಂಭಿಕ ಹಂತ ಹಾಗೂ ಬಂಡವಾಳೀಕರಿಸಿದ ವಾಸ್ತವಿಕ ದಿನಾಂಕದ ಸಮಯದಲ್ಲಿ ಕಾರ್ಯಸ್ಥಗಿತಗೊಳಿಸಿದ ಅಂದಾಜು ವೆಚ್ಚದ ಪ್ರಸಕ್ತ ಮೌಲ್ಯವನ್ನು ಬಂಡವಾಳೀಕರಿಸುವುದು, ಬಂಡವಾಳ ಬಿಡಿಭಾಗಗಳನ್ನು ಗುರುತುಪಡಿಸುವುದು, ವರದಿ ಸಲ್ಲಿಕೆಯ ಪ್ರಾರಂಭ ಹಾಗು ಅಂತ್ಯದಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಲೆಕ್ಕಸಮನ್ವಯ ಮಂಡಿಸುವಿಕೆ ಇವುಗಳು ಕಂಪನಿ ಕಾಯಿದೆ (ಭಾರತೀಯ ಲೆಕ್ಕಪದ್ಧತಿ ತತ್ವಗಳು) ನಿಯಮಗಳು 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾರತೀಯ ಲೆಕ್ಕ ತತ್ವ 16 "ಆಸ್ತಿಗಳು, ಸ್ಥಾವರ ಹಾಗೂ ಉಪಕರಣಗಳು" ರ ಅನುಸರಣೆಯಾಗಿಲ್ಲ. ಹೀಗಾಗಿ, ಪ್ರಗತಿಯಲ್ಲಿರುವ ಬಂಡವಾಲ ಕಾಮಗಾರಿಗಳು, ಆಸ್ತಿ, ಸ್ಥಾವರ, ಉಪಕರಣಗಳ ಲೆಕ್ಕೀಕರಣ ಹಾಗೂ ಲೆಕ್ಕಮಂಡಿಸುವಿಕೆ, ತತ್ಸಂಬಂಧ ಸವಕಳಿಯ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xvii) ಟಿಪ್ಪಣಿ ಸಂಖ್ಯೆ 3.1, 18.6, ಹಾಗೂ 22[ಕ್ರ.ಸಂ.(1) 4]: ಚಾಲ್ತಿಯಲ್ಲಿರುವ ಹಾಗೂ ಪೂರ್ಣಗೊಂಡ ಠೇವಣಿ ವಂತಿಗೆ ಕಾಮಗಾರಿಗಳ ವಿಷಯದಲ್ಲಿ, ಕಂಪನಿಯು ವಾಸ್ತವಾಂಶ ಮಾಹಿತಿಯನ್ನು ಹೊಂದಿರದ ಕಾರಣ, ನ್ಯಾಯಸಮ್ಮತ ದರದಲ್ಲಿ ಬಂಡವಾಳೀಕರಣ, ಅನ್ವಯಿಸುವೆಡೆ, ಒಪ್ಪಂದದ ಅವಧಿಯ ಬದಲಾಗಿ ಬಳಕೆಯುಕ್ತ ಅವಧಿಯಾಧಾರದ ಮೇಲೆ ಋಣಮುಕ್ತತೆಯನ್ನೂ ಒಳಗೊಂಡಂತೆ ನಿಖರತೆ ಅಥವಾ ಪರಿಪೂರ್ಣತೆಯನ್ನು ಹಾಗೂ ಆಸ್ತಿ,ಸ್ಥಾವರ, ಉಪಕರಣ, ಪ್ರಸಕ್ತ/ಪ್ರಸಕ್ತದಲ್ಲದ ಹೋಣೆಗಾರಿಕೆ, ಸ್ವೀಕೃತಿ, ಕಂದಾಯದ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xviii) ಟಿಪ್ಪಣಿ ಸಂಖ್ಯೆ 3.4, 3.5, 18.4, 18.6, 18.7 ಮತ್ತು 22.1: ಪಿ.ಎಸ್.ಡಿ.ಎಫ್. ವಂತಿಗೆಯಿಂದ ರೂ.5437.60 ಲಕ್ಷ ವೆಚ್ಚದಲ್ಲಿ ಕೈಗೊಂಡ 220ಕೆವಿ ಹಾಗೂ 400ಕೆವಿ ಸಾಮರ್ಥ್ಯದ ವಿವಿಧ

ಉಪಕೇಂದ್ರದ ಸುರಕ್ಷಾ ವ್ಯವಸ್ಥೆಯ ನವೀಕರಣ ಹಾಗೂ ಉನ್ನತೀಕರಣದ ಕಾಮಗಾರಿಯ ಸಮಗ್ರ ವೆಚ್ಚವನ್ನು ಗೊತ್ತುಪಡಿಸಿಕೊಳ್ಳದಿರುವುದು ಹಾಗೂ ಎನ್.ಸಿ.ಇ.ಎಫ್.ನಿಂದ ಪಡೆದ ರೂ.17119.10 ಲಕ್ಷ ಅನುದಾನದ ಮೂಲಕ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯಡಿಯಲ್ಲಿ ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯ ಅಭಿವೃದ್ಧಿ ವಿಷಯದಲ್ಲಿ, ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸಿಲ್ಲ. ಅಲ್ಲದೆ, ಕಂಪನಿಯು "ಬಂಡವಾಳ ಆಸ್ತಿ ವೆಚ್ಚದ ಪ್ರಯುಕ್ತ ವಂತಿಗೆ" ಹಾಗೂ "ಬಂಡವಾಳ ಕಾಮಗಾರಿ ಪ್ರಯುಕ್ತ ವಿಶೇಷ ಅನುದಾನ" ಇವುಗಳ ಲೆಕ್ಕ ಸಮನ್ವಯಗೊಳಿಸಿ, ಲೆಕ್ಕಪುಸ್ತಕದಲ್ಲಿನ ಶಿಲ್ಕಿಗೆ ವಿಂಗಡಿತ ವಿವರಗಳನ್ನು ಒದಗಿಸಿಲ್ಲ. ತದನುಸಾರವಾಗಿ, ಆಸ್ತಿ,ಸ್ಥಾವರ,ಉಪಕರಣ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಗ್ರಾಹಕವಂತಿಗೆ/ಸರ್ಕಾರದ ಅನುದಾನದಿಂದ ಸೃಷ್ಟಿಸಿದ ಆಸ್ತಿಗಳಿಂದ ಒದಗಿದ ಕಂದಾಯ, ದುರಸ್ತಿ ಹಾಗೂ ನಿರ್ವಹಣೆ, ಸವಕಳಿ ಮತ್ತು ಆ ವರ್ಷದ ಲಾಭದ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xix) ಟಿಪ್ಪಣಿ ಸಂಖ್ಯೆ 3.7: ಗೋಪುರ, ಆವರಣ ದಾರಿ, ತೋಟ,ಬೆಳೆ, ಮರ ಕಡೆಯುವಿಕೆ ಇತ್ಯಾದಿ ಪ್ರಯುಕ್ತ ನಗದು ರೂಪದ ಪರಿಹಾರ ನೀಡಿಕೆಯು, ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 1"ಆರ್ಥಿಕ ನಿರೂಪಣಾ ಪಟ್ಟಿಗಳ ಮಂಡಿಸುವಿಕೆ" ಕಂಪನಿ ಕಾಯಿದೆ,2013ರ ಅನುಸೂಚಿ 128ರ ಅನುಸರಣೆಯಾಗಿಲ್ಲ. ಹೀಗಾಗಿ, ಆಸ್ತಿ,ಸ್ಥಾವರ ಹಾಗೂ ಉಪಕರಣ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಸವಕಳಿ, ಹೊಣೆಗಾರಿಕೆಗಳನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xx) ಟಿಪ್ಪಣಿ ಸಂಖ್ಯೆ 7.2: ಕವಿನಿ ಆಯೋಗದ ವಿದ್ಯುತ್ ದರ ನಿಬಂಧನೆಗಳು,2006ರೊಂದಿಗೆ ಅನ್ವಯಿತವಾದಂತೆ, ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಉಂಟಾದ ವಿದ್ಯುತ್ ಪ್ರಸರಣ ಒಪ್ಪಂದದ ಪ್ರಕಾರ ಸಕಾಲಿಕ ಪಾವತಿಗಾಗಿ 2014ರ ಜನವರಿ ತಿಂಗಳಿನಿಂದ 2019ರ ಮಾರ್ಚ್ ತಿಂಗಳವರೆಗೆ ಬೆವಿಕಂಪನಿಯು ಕ್ಲೇಮು ಮಾಡಿದ ರಿಯಾಯಿತಿ ಮೊಬಲಗು ರೂ.9317.54ಲಕ್ಷ, 2015ರ ಜುಲೈ ತಿಂಗಳಿನಿಂದ 2017ರ ಜೂನ್ ತಿಂಗಳವರೆಗೆ ಮವಿಕಂಪನಿಯು ಕ್ಲೇಮು ಮಾಡಿದ ರಿಯಾಯಿತಿ ಮೊಬಲಗು ರೂ.637.94ಲಕ್ಷ ಮೊಬಲಗಿಗೆ ಸಂಬಂಧಿಸಿದಂತೆ, ಗೌರವಾನ್ವಿತ ಕವಿನಿ ಆಯೋಗದಲ್ಲಿ ಮನವಿ ಸಂಖ್ಯೆ 55/2019, ದಿನಾಂಕ 26.08.2019ರ ಪ್ರಕರಣವು ಆದೇಶಕ್ಕೆ ಬಾಕಿ ಇರುವುದರಿಂದ ಕಂದಾಯ ಮತ್ತು ವ್ಯವಹರಣೆಯಿಂದ ಸ್ವೀಕೃತಿ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxi) ಟಿಪ್ಪಣಿ ಸಂಖ್ಯೆ 16, 15ಎ.1 ಮತ್ತು 23: ರಜೆ ನಗದೀಕರಣ, ಅರ್ಧ ವೇತನ ರಜೆ, ಕುಟುಂಬ ಹಿತ ನಿಧಿ ಇವುಗಳ ವಾಸ್ತವಿಕ ಮೌಲ್ಯಮಾಪನ ಅವಕಾಶ ಕಲ್ಪಿಸಲು ಪರಿಗಣಿಸಿರುವ ಮಾಹಿತಿ, ಅಂದಾಜು ಹಾಗೂ ವರದಿಗಳು ಸೂಕ್ತವಾಗಿಲ್ಲ ಹಾಗೂ ಇವು ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 19" ಸಿಬ್ಬಂದಿ ಸೌಲಭ್ಯಗಳು" ಇವುಗಳ ಅನುಪಾಲನೆಯಾಗಿಲ್ಲ. ಹೀಗಾಗಿ ಇವುಗಳ ಮೇಲೆ ಹಾಗೂ ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxii) ಟಿಪ್ಪಣಿ ಸಂಖ್ಯೆ 18.3: ಕರ್ನಾಟಕ ಸರ್ಕಾರದಿಂದ ಪುನರ್ ಅಧಿಸೂಚನೆ ಪ್ರಯುಕ್ತ ಹೊಂದಾಣಿಕೆ ಬಾಕಿ ಇದ್ದು, ಪ್ರಸಕ್ತದ್ದಲ್ಲದ ಇತರೆ ಆರ್ಥಿಕ ಹೊಣೆಗಾರಿಕೆಗಳು ಅಡಿಯಲ್ಲಿ ಲೆಕ್ಕಪತ್ರಗಳಲ್ಲಿ ತೋರಿಸಿರುವ ರೂ.4239.10 ಲಕ್ಷವು ದಿನಾಂಕ 01.06.2002ರಂದು ಇದ್ದಂತೆ ಅಧಿಸೂಚಿಸಲ್ಪಟ್ಟ ಅಂತಿಮ ಪ್ರಾರಂಭಿಕ ಆಯವ್ಯಯ ಪಟ್ಟಿಯ ನಂತರದಲ್ಲಿ ಆದ ಹೊಂದಾಣಿಕೆ ಎಂದು ಬಿಂಬಿಸಲ್ಪಟ್ಟಿದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕನ್ನು ವಿದ್ಯುತ್ ಸರಬರಾಜು

ಕಂಪನಿಗಳೊಂದಿಗೆ ಲೆಕ್ಕಸಮನ್ವಯಗೊಳಿಸಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸುವಂತೆ ಕಂಪನಿಗೆ ನಿರ್ದೇಶನ ನೀಡಿದೆ. ದಿನಾಂಕ 31.03.2020ರಂದು ಇದ್ದಂತೆ, ಮೇಲಿನ ಶಿಲ್ಕುಗಳ ಲೆಕ್ಕಸಮನ್ವಯವು ಪ್ರಗತಿಯಲ್ಲಿರುವುದರಿಂದ ನಿವ್ವಳ ಮೌಲ್ಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxiii) ಟಿಪ್ಪಣಿ ಸಂಖ್ಯೆ 20: ವಿದ್ಯುತ್ ಖರೀದಿಗಾಗಿ ವಿವಿಧ ಬಾಕಿದಾರರು(ದೇಣೀದಾರರು) ವಿಷಯದಲ್ಲಿ ರೂ.1573.41ಲಕ್ಷ (ಕ.ವಿ.ಪ್ರ.ನಿ.ನಿ.ಗೆ ಪಾವತಿಸಬೇಕಾದ ಬಾಕಿ ಬಡ್ಡಿಯನ್ನು ಹೊರತುಪಡಿಸಿ) ಮೊಬಲಗನ್ನು 09.06.2005ರವರೆಗೆ ಖರೀದಿಸಿದ ವಿದ್ಯುಚ್ಛಕ್ತಿಗೆ ಪಾವತಿಸಬೇಕಾದ ಬಾಕಿ ಮೊಬಲಗು ಎಂದು ತೋರಿಸಿರುವುದನ್ನು ಹೊಣೆಗಾರಿಕೆಯ ನಿಖರವಾದ ಬಾಕಿಯೋ ಅಥವಾ ಯಾವುದಾದರೂ ಹೆಚ್ಚುವರಿ ಹೊಣೆಗಾರಿಕೆಯೋ ಎಂಬುದನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxiv) ಟಿಪ್ಪಣಿ ಸಂಖ್ಯೆ 18(ಕ್ರ.ಸಂ.3), 18.1, 22[1](3), 26.1(ಬಿ) ಮತ್ತು 26.3: ಅಂತಿಮ ಇತ್ಯರ್ಥಕ್ಕೊಳಪಟ್ಟು ಯಥಾವತ್ ಸ್ಥಿತಿಯಲ್ಲಿ ನಿಲ್ಲಿಸಿದ ಕಾಮಗಾರಿಗಳ ಮೇಲೆ ದಂಡ ವಿಧಿಸುವಿಕೆಗೆ ಸಾಕಷ್ಟು ನೀತಿನಿರ್ಣಯದ ಕೊರತೆ ಹಾಗೂ ದಂಡ ವಸೂಲಿಯ ವಿರುದ್ಧ ಗುತ್ತಿಗೆದಾರರು ಸಲ್ಲಿಸಿದ ದಂಡ ಮನ್ನಾ ಅರ್ಜಿಗಳಲ್ಲಿ ಸಾಕಷ್ಟು ಮಾಹಿತಿಗಳ ಅಲಭ್ಯತೆಗೆ ಸಂಬಂಧಿಸಿದಂತೆ, ಕಂಪನಿಯು ಪೂರಕ ಮಾಹಿತಿಗಳನ್ನು ಒದಗಿಸಿಲ್ಲದ ಕಾರಣ ಪ್ರಸಕ್ತದ್ದಲ್ಲದ ಇತರೆ ಆರ್ಥಿಕ ಹೊಣೆಗಾರಿಕೆ ನಿಮಿತ್ತದ ರೂ.10291.08 ಲಕ್ಷ, ಇತರೆ ಪ್ರಸಕ್ತ ಹೊಣೆಗಾರಿಕೆ ನಿಮಿತ್ತದ ರೂ.10712.83 ಲಕ್ಷ ಹಾಗೂ ಇತರೆ ಆದಾಯ–ಇತರೆ ವಸೂಲಿಗಳು ನಿಮಿತ್ತದ ರೂ.1407.31 ಲಕ್ಷ, ಇವುಗಳ ನಿಖರತೆ ಅಥವಾ ಪರಿಪೂರ್ಣತೆ ಮತ್ತು ಭಾರತೀಯ ಲೆಕ್ಕಪದ್ಧತಿ ತತ್ವ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxv) ಟಿಪ್ಪಣಿ ಸಂಖ್ಯೆ 22.2: ಅಂತರ ಘಟಕ ಲೆಕ್ಕಗಳ ಅಡಿಯಲ್ಲಿ ರೂ.1572.94 ಲಕ್ಷ ನಿವ್ವಳ ಕ್ರೆಡಿಟ್/ಡೆಬಿಟ್ ಕುರಿತು ಇತರೆ ಪ್ರಸಕ್ತ ಹೊಣೆಗಾರಿಕೆಗಳು : ಅಂ.ಘ.ಲೆಕ್ಕಗಳು–ಬಿಡುಗಡೆಗೊಳಿಸಲ್ಪಟ್ಟ ಆಸ್ತಿಗಳು ಅಡಿಯಲ್ಲಿ ಸಾಮಗ್ರಿಗಳು ಹಾಗೂ ರೂ.2127.51ಲಕ್ಷ : ಮತ್ತು ಟಿಪ್ಪಣಿ ಸಂಖ್ಯೆ 12.1 ಅಂ.ಘ.ಲೆಕ್ಕಗಳು 'ಇತರೆ ಪ್ರಸಕ್ತ ಆಸ್ತಿಗಳು' ಅಡಿಯಲ್ಲಿ: ರೂ.32.78 ಲಕ್ಷ ಡೆಬಿಟ್ ಶಿಲ್ಕು, ಅಂತರ ಘಟಕ ಲೆಕ್ಕಗಳು–ಸಿಬ್ಬಂದಿ ಅಡಿಯಲ್ಲಿ ಲೆಕ್ಕಸಮನ್ವಯಗೊಳಿಸಿಲ್ಲದ/ಪ್ರತಿಕ್ರಿಯೆಗೊಳಪಟ್ಟಿಲ್ಲದ ನಮೂದು ಜೊತೆಗೆ ಕೆಲವು ಹಳೆಯ ವ್ಯವಹರಣೆಗಳನ್ನೂ ಒಳಗೊಂಡ ರೂ.19.06 ಲಕ್ಷ. ಇವುಗಳಿಗೆ ಮಾಹಿತಿ ಕೊರತೆಯ ನಿಮಿತ್ತ, ಭಾ.ಲೆ.ಪ.ತತ್ವಗಳು ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxvi) ಟಿಪ್ಪಣಿ ಸಂಖ್ಯೆ 21.5: ನಿರ್ಧಾರಿತವಲ್ಲದ ಅಂತರ್ಗತ / ಮಾರ್ಗಪಲ್ಲಟ ಇತ್ಯರ್ಥ ಯಾಂತ್ರಿಕತೆ ನಿಮಿತ್ತ ರಾಜ್ಯ ವಿದ್ಯುತ್ ರವಾನೆ ಕೇಂದ್ರದಲ್ಲಿ ತೋರಿಸಿರುವ ರೂ.438.01ಲಕ್ಷ ಕ್ರೆಡಿಟ್ ಶಿಲ್ಕು ಲೆಕ್ಕಸಮನ್ವಯ ಬಾಕಿ ಹಾಗೂ ಬ್ಯಾಂಕಿನಲ್ಲಿ ನಿರ್ಧಾರಿತವಲ್ಲದ ಅಂತರ್ಗತ / ಮಾರ್ಗಪಲ್ಲಟ ಇತ್ಯರ್ಥ ಯಾಂತ್ರಿಕತೆ ನಿಮಿತ್ತ ತೋರಿಸಿರುವ ಡೆಬಿಟ್ ಶಿಲ್ಕು ರೂ.452.23 ಲಕ್ಷಕ್ಕೆ ಸಂಬಂಧಿಸಿದಂತೆ ಭಾ.ಲೆ.ಪ.ತತ್ವಗಳು ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxvii) ಟಿಪ್ಪಣಿ ಸಂಖ್ಯೆ 26 : ಇತರೆ ಆದಾಯ–ಇತರೆ ವಸೂಲಿಗಳು(ಕ್ರ.ಸಂ.16) ಹಾಗೂ 26.2: ಗೊತ್ತುಪಡಿಸಿರುವುದರ ಮಟ್ಟಿಗೆ ಸ್ವತಂತ್ರ ವಿದ್ಯುತ್ ಉತ್ಪಾದನೆ ಮೂಲ ಸೌಕರ್ಯದ ನಿಮಿತ್ತ ಕಾರ್ಯ ಮತ್ತು ಪಾಲನೆ ಶುಲ್ಕಗಳೆಂದು ರೂ.1023.18 ಲಕ್ಷ ಇತರೆ ವಸೂಲಿಗಳಲ್ಲಿ ಸೇರಿದ್ದು, ಈ ಶುಲ್ಕವನ್ನು ವಸೂಲಿ ಮಾಡುವ ನಿಮಿತ್ತ ಕಂಪನಿಯು ಪರಿಪೂರ್ಣತೆ/ಬಂಡವಾಳ ವೆಚ್ಚ/ಸ್ವ.ವಿ.ಉ. ಮೂಲಸೌಕರ್ಯಗಳನ್ನು ಉತ್ತಮಪಡಿಸುವ ವೆಚ್ಚಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ಒದಗಿಸಿಲ್ಲದ

ಕಾರಣ, ಇವುಗಳ ನಿಖರತೆ ಅಥವಾ ಪರಿಪೂರ್ಣತೆ ಮತ್ತು ಕಂದಾಯ ಹಾಗೂ ಸ್ವೀಕೃತಿಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxviii) ಟಿಪ್ಪಣಿ ಸಂಖ್ಯೆ 26.1(iv) : ಭಾರತೀಯ ಲೆಕ್ಕಪದ್ಧತಿ ತತ್ವಗಳು ಆರ್ಥಿಕ ನಿರೂಪಣಾ ಪಟ್ಟಿಗಳ ನಮೂನೆ 26 AS ಪ್ರಕಾರ ಆದಾಯವನ್ನು ಲೆಕ್ಕಸಮನ್ವಯಗೊಳಿಸದಿರುವುದಕ್ಕೆ ಸಂಬಂಧಿಸಿ, ಆ.ವ.2019–20ರ ಸಾಲಿನ ಸ್ವೀಕೃತಗೊಳ್ಳಬೇಕಾದ ಮೂಲದಲ್ಲೇ ತೆರಿಗೆ ಕಡಿತಕ್ಕೆ ಸಂಬಂಧಿಸಿದ ರೂ.77.65 ಲಕ್ಷವನ್ನು ಲೆಕ್ಕಸಮನ್ವಯಗೊಳಿಸಿಲ್ಲ ಹಾಗೂ ಆದಾಯವೆಂದು ಲೆಕ್ಕೀಕರಿಸಿಲ್ಲ. ಹೀಗಾಗಿ ಕಂದಾಯ, ಗ್ರಾಹಕರಿಂದ ಮುಂಗಡ ಹಾಗೂ ಸ್ವೀಕೃತ ವ್ಯವಹರಣೆಗಳ ಮೇಲೆ ಇದು ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

ಮುಂದುವರಿಸಿ, ಟಿಪ್ಪಣಿ ಸಂಖ್ಯೆ 4ಎ (ಕ್ರ.ಸಂ.4) ಹಾಗೂ 5(ಕ್ರ.ಸಂ.3) : ಸ್ವೀಕೃತವಾಗಬೇಕಾದ ಆದಾಯ ತೆರಿಗೆ ಮರುಪಾವತಿ, ಮುಂಗಡ ಆದಾಯ ತೆರಿಗೆ, ಸ್ವೀಕೃತವಾಗಬೇಕಾದ ಮೂಲದಲ್ಲೇ ಕಡಿತಗೊಳಿಸಿದ ತೆರಿಗೆ ಹಾಗೂ ತೆರಿಗೆಗೆ ಅವಕಾಶ ಇವುಗಳನ್ನು ಆದಾಯ ತೆರಿಗೆ ಲೆಕ್ಕ ಸಲ್ಲಿಕೆ ವರದಿ, ಆದಾಯ ತೆರಿಗೆ ನಿರ್ಧಾರಿತ ಆದೇಶ, ಸ್ವೀಕರಿಸಿದ/ಹೊಂದಾಣಿಕೆ ಮಾಡಿದ ಆದಾಯ ತೆರಿಗೆ ಮರುಪಾವತಿಯಲ್ಲಿ ಲೆಕ್ಕಸಮನ್ವಯಗೊಳಿಸಿಲ್ಲ. ಹೀಗಾಗಿ ವಸೂಲಿ ಮಾಡಬೇಕಾದ ಆದಾಯ ತೆರಿಗೆ, ಮುಂದೂಡಲ್ಪಟ್ಟ ತೆರಿಗೆ, ಮುಂಗಡ ತೆರಿಗೆ, ಸ್ವೀಕೃತವಾಗಬೇಕಾದ ಮೂಲದಲ್ಲೇ ತೆರಿಗೆ ಕಡಿತ ಹಾಗೂ ತೆರಿಗೆಗೆ ಅವಕಾಶದ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxix) ಟಿಪ್ಪಣಿ ಸಂಖ್ಯೆ 37.8 (ii) : ಲಭ್ಯ ಪ್ರಸರಣ ವ್ಯವಸ್ಥೆಯ ಕಾರ್ಯಸಮರ್ಥತೆ ಹಾಗೂ ಪ್ರಸರಣ ನಷ್ಟ ಪ್ರಮಾಣವನ್ನು ಇಳಿತಗೊಳಿಸಿರುವುದರ ಪ್ರಯುಕ್ತ ಆ.ವ.2019–20ರ ಸಾಲಿಗೆ ಸ್ವೀಕರಿಸಬೇಕಾದ ಉತ್ತೇಜಕ ಮೊಬಲಗು ರೂ.2906.13 ಲಕ್ಷವನ್ನು ಕವಿನಿ ಆಯೋಗದಿಂದ ಅನುಮೋದನೆಗೆ ಬಾಕಿ ಇರಿಸಿ ಲೆಕ್ಕಕ್ಕೊಳಪಡಿಸಿಲ್ಲದಿರುವುದಕ್ಕೆ ಸಂಬಂಧಿಸಿ, ಇದು ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 115 "ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದ ಮೂಲಕ ಕಂದಾಯ" ಇವುಗಳ ಅನುಪಾಲನೆಯಾಗಿಲ್ಲ. ಹೀಗಾಗಿ ಇದು ಕಂದಾಯ, ಸ್ವೀಕರಿಸಬೇಕಾದ ವ್ಯವಹರಣೆ, ತೆರಿಗೆಗೆ ಅವಕಾಶ, ಮೀಸಲು ಮತ್ತು ಅಧಿಕ್ಯ ಇವುಗಳ ಕಡಿಮೆ ನಿರೂಪಣೆಗೆ ಅವಕಾಶವಾಗುತ್ತದೆ.

xxx) ಟಿಪ್ಪಣಿ ಸಂಖ್ಯೆ 37.3 ಹಾಗೂ 37.9(ಬಿ): ವಿದ್ಯುತ್ ಸರಬರಾಜು ಕಂಪನಿಗಳಿಂದ ಸ್ವೀಕರಿಸಬೇಕಾದ ವ್ಯವಹರಣೆಗಳು ರೂ.105431.34 ಲಕ್ಷ (ಟಿಪ್ಪಣಿ ಸಂಖ್ಯೆ 7–ಸ್ವೀಕರಿಸಬೇಕಾದ ವ್ಯವಹರಣೆಗಳು–ಪ್ರಸಕ್ತ ಆರ್ಥಿಕ ಆಸ್ತಿಗಳು–ಕ್ರ.ಸಂ. I–1), ವಿ.ಸ.ಕಂಪನಿಗಳಿಂದ ಪಡೆಯಬೇಕಾದ ಇತರೆ ಸ್ವೀಕೃತಿಗಳು ರೂ.18261.74 ಲಕ್ಷ,(ಟಿಪ್ಪಣಿ ಸಂಖ್ಯೆ 11–ಇತರ ಪ್ರಸಕ್ತ ಆರ್ಥಿಕ ಆಸ್ತಿಗಳು–ಕ್ರ.ಸಂ.4ರಿಂದ8) ಮತ್ತು ವಿ.ಸ.ಕಂಪನಿಗಳ್ಗೆ ಪಾವತಿಸಬೇಕಾದ ರೂ.22124.54ಲಕ್ಷ (ಟಿಪ್ಪಣಿ ಸಂಖ್ಯೆ 21[I] –ಇತರೆ ಪ್ರಸಕ್ತ ಆರ್ಥಿಕ ಹೊಣೆಗಾರಿಕೆಗಳು–ಕ್ರ.ಸಂ.8ರಿಂದ 12) ಲೆಕ್ಕಗಳ ಬಗ್ಗೆ. ಈ ಶಿಲ್ಕುಗಳು ಸ್ಥಿರೀಕರಣಕ್ಕೆ ಒಳಪಟ್ಟು ಲೆಕ್ಕಸಮನ್ವಯಗೊಳಿಸುವಿಕೆಗೆ ಬಾಕಿ ಇವೆ. ಇದು ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxxi) ನಿಗದಿತ ಅವಧಿಯನ್ನು ಮೀರಿ ಮಾಡಿದ ತಡ ಪಾವತಿಗಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿಧಿಸಬೇಕಾದ ಶೇ1.25ದರದ ಅಧಿಕ ಕರದ ತಡಪಾವತಿಯನ್ನು ಲೆಕ್ಕಕ್ಕೊಳಪಡಿಸದಿರುವುದಕ್ಕೆ ಸಂಬಂಧಿಸಿ, ಇದು ಕವಿನಿ ಆಯೋಗದ ವಿದ್ಯುತ್ ದರ 2006ರೊಂದಿಗೆ ಅನ್ವಯಿತವಾದ ವಿದ್ಯುತ್ ಸರಬರಾಜು ಕಂಪನಿಗಳೊಂದಿಗಿನ ಪ್ರಸರಣ ಒಪ್ಪಂದದ ನಿವೇದನೆಯ ಪ್ರಕಾರವಿಲ್ಲ. ನಿಗದಿತ ಅವಧಿಯನ್ನು ಮೀರಿದ ನಂತರ ಸ್ವೀಕರಿಸಿದ ಪಾವತಿಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ಒದಗಿಸದ

ಕಾರಣ, ಮೊಮಲಗಿನ ಪ್ರಮಾಣವನ್ನು ನಾವು ಗೊತ್ತುಪಡಿಸಿಕೊಳ್ಳಲು ಆಗಿಲ್ಲ. ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯಲ್ಲೂ ಯಾವುದೇ ಶಿಲ್ಕನ್ನು ತೋರಿಸಿಲ್ಲದ ಕಾರಣ, ಕಂದಾಯ ಹಾಗು ಸ್ವೀಕರಿಸಬೇಕಾದ ವ್ಯವಹರಣೆಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಲು ಆಗುವುದಿಲ್ಲ.

xxxii) ಗಮನಾರ್ಹ ಲೆಕ್ಕಪದ್ಧತಿ ತತ್ವಗಳ ಟಿಪ್ಪಣಿ ಸಂಖ್ಯೆ 1.9(j) ಮತ್ತು ಟಿಪ್ಪಣಿ ಸಂಖ್ಯೆ 3.9: ಗುತ್ತಿಗೆದಾರರು ಸಲ್ಲಿಸಿರುವ ಬ್ಯಾಂಕ್ ಖಾತರಿ ಮೊಬಲಗು ರೂ.4364.74ಲಕ್ಷವನ್ನು ನಗದೀಕರಿಸಿಕೊಳ್ಳುವುದಕ್ಕೆ ಸಂಬಂಧಿಸಿ, ಕಂಪನಿಯು ಯೋಜನೆವಾರು ವಾಸ್ತವಾಂಶ ಹಾಗೂ ಕಾರ್ಯಸ್ಥಿತಿಯ ಸಂದರ್ಭಗಳನ್ನು ಗೊತ್ತುಪಡಿಸಿಲ್ಲ ಹಾಗೂ ಅವುಗಳನ್ನು ಪ್ರಸಕ್ತ ವರ್ಷದಲ್ಲಿ ಲೆಕ್ಕೀಕರಣ ಕಾರ್ಯನೀತಿಯನ್ವಯ ಕಂದಾಯವೆಂದಾಗಲಿ ಅಥವಾ ಆಯಾ ಆಸ್ತಿ,ಸ್ಥಾವರ,ಉಪಕರಣ/ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ(ಪ್ರ.ಬಂ.ಕಾ) ಎಂದು ಹೊಂದಾಣಿಕೆ ಮಾಡಿಲ್ಲ. ಹೀಗಾಘಿ, ಆಸ್ತಿ,ಸ್ಥಾವರ,ಉಪಕರಣ, ಪ್ರ.ಬಂ.ಕಾ., ಸವಕಳಿ, ಹಾಗೂ ತೆರಿಗೆಯ ಮೇಲಿನ ಮುಂದೊಯ್ಯಬೇಕಾದ ವೆಚ್ಚಗಳ ತಪ್ಪು ವರದಿ ಸಲ್ಲಿಕೆಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲುಆ ಆಗುವುದಿಲ್ಲ.

xxxiii) ಕಂಪನಿಯು, ದೀಪಕ್ ಕೇಬಲ್ಸ್(ಇಂಡಿಯಾ)ಪರಿಸಮಾಪ್ತರಿಂದ ರೂ.26895 ಲಕ್ಷವನ್ನು ಕೇಳಿಕೆ ಎಂದು ಸ್ವೀಕರಿಸಿದ್ದು, ಇದಕ್ಕೆ ಪ್ರತಿಯಾಗಿ ಕಂಪನಿಯು ಕೌಂಟರ್ ಕ್ಲೇಮ್ ಎಂದು ರೂ.28292.81ಲಕ್ಷ ಮೊಬಲಗನ್ನು (ರೂ.867.73ಲಕ್ಷವನ್ನು ನಿವ್ವಳವೆಂದು ಪರಿಗಣಿಸಿದ ನಂತರ ನಿವ್ವಳ ಸ್ವೀಕೃತಿಯಾಗಬೇಕಾದದ್ದು) ಎಂದು ಸಲ್ಲಿಸಿದೆ. ಕಂಪನಿಯು ಇದನ್ನು ಭಾರತೀಯ ಲೆಕ್ಕಪದ್ಧತಿ ತತ್ವಗಳು 37 'ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆಗಳು, ಮತ್ತು ಸಾದಿಲ್ವಾರು ಆಸ್ತಿಗಳು 'ಅನುಸಾರ ಪ್ರಕಟಪಡಿಸಿಲ್ಲ. ಹೀಗಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಹೊಣೆಗಾರಿಕೆಗಳು, ಸಾದಿಲ್ವಾರು ಹೊಣೆಗಾರಿಕೆ, ಸಾದಿಲ್ವಾರು ಆಸ್ತಿಗಳು, ಸ್ವೀಕೃತಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxxiv) ಟಿಪ್ಪಣಿ ಸಂಖ್ಯೆ 25.3: 2017ರ ಏಪ್ರಿಲ್ ತಿಂಗಳಿನಿಂದ 2019ರ ಮಾರ್ಚ್ ತಿಂಗಳವರೆಗೆ ಕಂಪನಿಯು ನಾನ್ ಐ.ಎಸ್.ಟಿ.ಎಸ್. ಮಾರ್ಗಗಳಿಗೆ ವಾರ್ಷಿಕ ಪ್ರಸರಣ ಶುಲ್ಕ ರೂ. 3185.48 ಮೊಬಲಗನ್ನು ನಿವರ್ತನಗೊಳಿಸಿದ್ದು, ಕವಿನಿ ಆಯೋಗದಿಂದ ಪ್ರಸರಣ ಶುಲ್ಕದ ಅನುಮೋದನೆಗೆ ಒಳಪಟ್ಟು, 2019–20ರ ಅವಧಿಗೆ ಸಂಬಂಧಿಸಿದ ರೂ.2341.45 ಲಕ್ಷವನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು, ಇದು ಕಂಪನಿ ಕಾಯಿದೆ,2015(ಭಾ.ಲೆ.ಪ.ತತ್ವಗಳು) ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಲಾದ ಭಾರತೀಯ ಲೆಕ್ಕಪದ್ಧತಿ ತತ್ವಗಳು 114 "ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳು" ಇವುಗಳ ಅನುಸಾರ ಇಲ್ಲ. ಹೀಗಾಗಿ ಕಂದಾಯ, ಲಾಭ,ಮುಂದೂಡಲ್ಪಟ್ಟ ನಿಯಂತ್ರಿತ ಲೆಕ್ಕಗಳಲ್ಲಿನ ಶಿಲ್ಕು, ಮೀಸಲು ಇವುಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

xxxv) ಟಿಪ್ಪಣಿ ಸಂಖ್ಯೆ 2.4[j] ಕಂಪನಿಯು ಐ.ಪಿ.ಡಿ.ಎಸ್. ಯೋಜನೆಯ ಅಡಿಯಲ್ಲಿ ರೂ.907.87 ಲಕ್ಷ ಹಾಗೂ ಡಿ.ಡಿ.ಯು.ಜಿ.ಜೆ.ವೈ. ಯೋಜನೆಯ ಅಡಿಯಲ್ಲಿ ರೂ.128.47 ಲಕ್ಷವನ್ನು ವೆಚ್ಚವೆಂದು ಗೊತ್ತುಪಡಿಸಿದ್ದು, ಈ ಪೈಕಿ ಬೆ.ವಿ.ಕಂಪನಿಯಿಂದ ಠೇವಣಿ ವಂತಿಗೆ ಕಾಮಗಾರಿಯ ಅಡಿಯಲ್ಲಿ ರೂ.400 ಲಕ್ಷವನ್ನು ವಸೂಲಿ ಮಾಡಿದೆ. ಈ ಬಗ್ಗೆ ಬೆಂಬಲಿತ ಪರಿಶೋಧನಾ ಯುಕ್ತ ಸಾಕ್ಷ್ಯಗಳನ್ನು ಪಡೆಯಲು ಆಗದ ಕಾರಣ ಇವುಗಳ ಪರಿಪೂರ್ಣತೆ, ನಿಖರತೆ, ಸಮರ್ಪಕತೆ/ಅಸಮರ್ಪಕತೆ ಬಗ್ಗೆ ಅಭಿಪ್ರಾಯ ಸಲ್ಲಿಸಲು ಆಗುವುದಿಲ್ಲ ಹಾಗೂ ವಿಷಯಸೂಚಿತ ಅಂಶಗಳ ಲೆಕ್ಕಗಳ ಮುಂದೊಯ್ಯಬಹುದಾದ ಮೌಲ್ಯ ಹಾಗೂ ಭಾ.ಲೆ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರಬಹುದಾದ ಪರಿಣಾಮವನ್ನೂ ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

ಮೇಲೆ ವಿವರಿಸಿರುವ ವಿಷಯಾಂಶಗಳ ಸಂಬಂಧವಾಗಿ, ಬಹುಅಂಶ ತಪ್ಪು ವರದಿ ಮತ್ತು ಕಂಡುಹಿಡಿಯಲಾಗದಿರುವ ಯಾವುದೇ ತಪ್ಪು ವರದಿಗಳ ಬಗ್ಗೆ ಸಂಭಾವ್ಯ ಪ್ರತಿಕ್ರಿಯೆಯಿಂದಾಗಿ ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ನಮ್ಮ ಅಭಿಪ್ರಾಯವನ್ನು ಒದಗಿಸಲು ನಮಗೆ ಸಾಕಷ್ಟು ಯುಕ್ತ ಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಲು ಆಗಿಲ್ಲ. ಹೀಗಾಗಿ, ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಇವು ಬೀರಬಹುದಾದ ಭೌತಿಕ ಹಾಗೂ ವ್ಯಾಪಕ ಸಂಚಿತ ಪರಿಣಾಮದ ಸಾಧ್ಯತೆಯು ನಮ್ಮ ಅಭಿಪ್ರಾಯ ನೀಡಿಕೆಯ ನಿರಾಕರಣೆಗೆ ಕಾರಣವಾಗಿವೆ.

ವಿಷಯಾಂಶಗಳ ಪ್ರಾಮುಖ್ಯತೆ

ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಕೆಳಕಂಡ ಟಿಪ್ಪಣಿಗಳ ಬಗ್ಗೆ ಗಮನ ಸೆಳೆಯಲಾಗಿದೆ:

a) ಟಿಪ್ಪಣಿ 1.15(ಬಿ)[III]: ದಿನಾಂಕ 31.03.2006ರವರೆಗೆ ಸೇವೆಗೆ ಸೇರಿದ ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಕಂಪನಿಯು ಪಿಂಚಣಿ ಹಾಗೂ ಉಪದಾನವನ್ನು ವಿವರಿತ ಸೌಲಭ್ಯ ಹೊಣೆಗಾರಿಕೆ ಯೋಜನೆ ಎಂದು ಪರಿಗಣಿಸದೆ ವಿವರಿತ ವಂತಿಗೆ ಯೋಜನೆ ಎಂದು ಪರಿಗಣಿಸಿದೆ. ಇದು ಕಂಪನಿ ಕಾಯಿದೆ(ಭಾ.ಲೆ.ಪ.ತತ್ವಗಳು) ನಿಯಮಗಳು, 2015 ಹಾಗೂ ತದನಂತರದಲ್ಲಿನ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾ.ಲೆ.ಪ.ತತ್ವ 19 ' ಸಿಬ್ಬಂದಿ ಸೌಲಭ್ಯಗಳು' ಅನುಸಾರವಿಲ್ಲ.

b) ಟಿಪ್ಪಣಿ ಸಂಖ್ಯೆ 4.3: ದಿನಾಂಕ 08.11.2019ರ ಕೇಂ.ವಿ.ನಿ.ಆಯೋಗದ ಆದೇಶದನ್ವಯ 2018ರ ಏಪ್ರಿಲ್ ತಿಂಗಳಿಂದ 2020ರ ಮಾರ್ಚ್ ತಿಂಗಳವರೆಗೆ ಪಿ.ಜಿ.ಸಿ.ಐ.ಎಲ್.ಗೆ ರೂ.3399.70ಲಕ್ಷವನ್ನು ಪ್ರತಿಭಟನೆಯಡಿ ಪಾವತಿಸಿ, ಇದರ ವಿರುದ್ಧ ಆಯೋಗದ ಆಯುಕ್ತರೊಂದಿಗೆ ಸಲ್ಲಿಸಲಾದ ಪರಿಶೀಲನಾ ಮನವಿಯ(ಮನವಿ ಸಂಖ್ಯೆ 361/ಟಿಟಿ/2018) ಬಗ್ಗೆ ತೀರ್ಮಾನಕ್ಕೆ ಒಳಪಟ್ಟು, ಪಾವತಿಸಿರುವ ಮೊಬಲಗನ್ನು ಕಂಪನಿಯು ಸ್ವೀಕೃತವಾಗಬೇಕಾಗಿರುವುದು ಎಂದು ತೋರಿಸಿದೆ.

c) ಟಿಪ್ಪಣಿ ಸಂಖ್ಯೆ 15 ಎ (II) [1], 15 ಎ (II) [3], 21 (I) [5], 21 (I) [6] ಮತ್ತು 26.1(iii): ಗುತ್ತಿಗೆದಾರರಿಗೆ ಮಾಹಿತಿ ನೀಡಿಕೆ ಬಾಕಿ ಇದ್ದು ಅಥವಾ ಅವರಿಂದ ಪ್ರತಿಕ್ರಿಯೆ ನಿರೀಕ್ಷೆಗೆ ಒಳಪಟ್ಟು, ಮೂರು ವರ್ಷಗಳಿಗೂ ಹಿಂದಿನಿಂದ ಉಳಿಸಿಕೊಂಡ ಹಣದ ಅಡಿಯಲ್ಲಿ ಕ್ಲೇಮು ಮಾಡದೆ ಇರುವ ಕ್ರೆಡಿಟ್ ಶಿಲ್ಕು ರೂ.90316.13ಲಕ್ಷ, ಭದ್ರತಾ ಠೇವಣಿ ಅಡಿಯಲ್ಲಿ ಕ್ಲೇಮು ಮಾಡದೆ ಇರುವ ಕ್ರೆಡಿಟ್ ಶಿಲ್ಕು ರೂ.2543.26ಲಕ್ಷ ಮೊಬಲಗನ್ನು ಕಂದಾಯವೆಂದು ವರ್ಗಾಯಿಸದೆ ಇರುವುದರ ಕಾರ್ಯನೀತಿ ಕೊರತೆಯ ಬಗ್ಗೆ.

d) ಟಿಪ್ಪಣಿ ಸಂಖ್ಯೆ 18(3), 18.1, 22(I) [3], 26.1 (II) ಮತ್ತು 26.7 : ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ (ಎಂ.ಇ.ಐ)ನ ಬಿಲ್ಲುಗಳ ಮೊಬಲಗು ರೂ.866.63ಲಕ್ಷವನ್ನು ಹಿಂದಿನ ವರ್ಷಗಳಲ್ಲಿ ಈಗಾಗಲೇ ಆದಾಯವೆಂದು ಪರಿಗಣಿಸಿದ್ದರೂ, ಇದೇ ಮೊಬಲಗನ್ನು ಸದರಿ ಸಂಸ್ಥೆಯ ಬಿಲ್ಲುಗಳಿಂದ ದಂಡವೆಂದು ವಸೂಲಿ ಮಾಡಿದ/ತಡೆಹಿಡಿದಿರುವ ಪ್ರಯುಕ್ತ, ಈ ಮೊಬಲಗನ್ನು ಹಿಂಪಾವತಿಸುವಂತೆ ದಿನಾಂಕ 20.06.2020ರ ಕರ್ನಾಟಕ ಸರ್ಕಾರದ ಪತ್ರದ ಆದೇಶವನ್ನು ಅಳವಡಿಸಿಕೊಳ್ಳಲು ಕಂಪನಿಯ ನಿರ್ಣಯವು ಬಾಕಿ ಇದೆ. ಹೊಣೆಗಾರಿಕೆಯ ಅಡಿಯಲ್ಲಿ ರೂ. 553.90ಲಕ್ಷ ಶಿಲ್ಕು ಇದೆ.

e) ಟಿಪ್ಪಣಿ ಸಂಖ್ಯೆ 18(8): ಮಂಜೂರಾದ ಷರತ್ತುಗಳನ್ವಯ, ಒಂದು ವರ್ಷದೊಳಗೆ 132ಕೆವಿ ಮತ್ತು ಅಧಿಕ ಸಾಮರ್ಥ್ಯದ ವಿದ್ಯುತ್ ಕೇಂದ್ರಗಳಲ್ಲಿ ಒ.ಪಿ.ಜಿ.ಡಬ್ಲ್ಯು.ಆಧಾರಿತ ರಿಲೈಯಬಲ್ ಕಮ್ಯುನಿಕೇಷನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿಲ್ಲದ ಕಾರಣ, ಕಾಲಮಿತಿಯನ್ನು ವಿಸ್ತರಿಸುವ ನಿರ್ಣಯ ಬಾಕಿ ಇದ್ದು, ಈ ನಿಟ್ಟಿನಲ್ಲಿ ಎನ್.ಎಲ್.ಡಿ.ಸಿ(ಪಿ.ಎಸ್.ಡಿ.ಎಫ್) ಸಂಸ್ಥೆಯಿಂದ ದಿನಾಂಕ 02.04.2019ರಂದು ಸ್ವೀಕರಿಸಿದ ಅನುದಾನದ ಮೊಬಲಗು ರೂ.1267.90ಲಕ್ಷವನ್ನು ಕಂಪನಿಯು ಹಿಂತಿರುಗಿಸಿಲ್ಲ.

f) ಟಿಪ್ಪಣಿ ಸಂಖ್ಯೆ 21(1): ಔಪಚಾರಿಕ ರೀತಿನೀತಿ ಹಾಗೂ ವಿಧಾನಗಳನ್ನು ಪೂರೈಸದ ಕಾರಣ ಪ್ರಸ್ತಾವಿತ ಸಿಬ್ಬಂದಿ ಕ್ಷೇಮಾಭಿವೃದ್ಧಿ ನ್ಯಾಸಕ್ಕೆ ರೂ.113.99ಲಕ್ಷವನ್ನು ವರ್ಗಾಯಿಸುವ ಕ್ರಿಯೆ ಬಾಕಿ ಇರುವ ಬಗ್ಗೆ.

g) ಟಿಪ್ಪಣಿ ಸಂಖ್ಯೆ 21(3): ಆ.ವ.2014–15ರಿಂದ ಪಾವತಿಸಿರುವ ಅನುಗ್ರಹ ಕೊಡುಗೆ ಮೊಬಲಗು ಕರ್ನಾಟಕ ಸರ್ಕಾರದಿಂದ ಘಟನೋತ್ತರ ಅನುಮೋದನೆ/ಅನುಸಮರ್ಥನೆಗೆ ಬಾಕಿ ಇರುವ ಬಗ್ಗೆ.

h) ಟಿಪ್ಪಣಿ ಸಂಖ್ಯೆ 21(4): ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ,2006 ಅಡಿಯಲ್ಲಿ ವೆಂಡರುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಬಹಿರಂಗಪಡಿಸಿರುವ ಬಗ್ಗೆ.

i) ಟಿಪ್ಪಣಿ ಸಂಖ್ಯೆ 23(II)[2], 27(II)[5] ಹಾಗೂ 27.6 : ಕಂಪನಿಯು, ಭಾರತೀಯ ಜೀವ ವಿಮಾ ನಿಗಮದ (ಎಲ್.ಐ.ಸಿ.ಆಫ್ ಇಂಡಿಯಾ) ಮೂಲಕ ವಿನೂತನ ವಿವರಿತ ಪಿಂಚಣಿ ವಂತಿಗೆ ಯೋಜನೆಯ(ಎನ್.ಡಿ.ಸಿ.ಪಿ.ಎಸ್) ಅಡಿಯಲ್ಲಿ ಒಳಪಟ್ಟಿರುವ ಉದ್ಯೋಗಿಗಳಿಗೆ 01.04.2006ರಿಂದ 31.03.2020ರ ಅವಧಿಗೆ ಆರ್ಥಿಕ ವರ್ಷ 2019–20ರಲ್ಲಿ ಮರಣ ಹಾಗೂ ನಿವೃತ್ತಿ ಉಪದಾನ ಯೋಜನೆಯಡಿ ಕಲ್ಪಿಸದೆ ಉಪದಾನ ಪಾವತಿ ಕಾಯಿದೆ,1972ರನ್ವಯ ತಾತ್ಕಾಲಿಕ ಆಧಾರದ ಮೇಲೆ ಉಪದಾನದ ಅವಕಾಶವನ್ನು ಕಲ್ಪಿಸಿದೆ. ದಿನಾಂಕ 23.06.2018ರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಇ 34 ಪಿಇಎನ್ 2018ನ್ನು ಅಳವಡಿಸಿಕೊಳ್ಳುವುದಕ್ಕೆ ಬಾಕಿ ಇದ್ದು, 01.04.2018ರಿಂದ 31.03.2020ರ ಅವಧಿಯಲ್ಲಿ ಮರಣ ಹೊಂದಿದ/ನಿವೃತ್ತರಾದ ಉದ್ಯೋಗಿಗಳಿಗೆ ಉಪದಾನದ ಅವಕಾಶವನ್ನು ಕಲ್ಪಿಸಿಲ್ಲ/ಪಾವತಿಸಿಲ್ಲ, ಇದರ ವಿವರಗಳೂ ಲಭ್ಯವಿಲ್ಲ. ಇದು ಕಂಪನಿ ಕಾಯಿದೆ(ಭಾ.ಲೆ.ಪ.ತತ್ವಗಳು) ನಿಯಮ,2015 ಹಾಗೂ ತದನಂತರದ ತಿದ್ದುಪಡಿಯನ್ವಯ ಹೊರಡಿಸಿದ ಭಾ.ಲೆ.ಪ.ತತ್ವ 37'ಅವಕಾಶಗಳು, ಸಾದಿಲ್ವಾರು ವೆಚ್ಚಗಳು ಹಾಗೂ ಸಾದಿಲ್ವಾರು ಆಸ್ತಿಗಳು' ಅನುಸಾರವಿಲ್ಲ. ಹೀಗಾಗಿ ಇವುಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಲಾಗುವುದಿಲ್ಲ.

j) ಟಿಪ್ಪಣಿ ಸಂಖ್ಯೆ 25.2 : ಕೇಂ.ವಿ.ನಿ.ಆಯೋಗದ ಆದೇಶಗಳನ್ವಯ ಕಂಪನಿಯು ಆರ್ಥಿಕ ವರ್ಷ 2014ರಿಂದ 2019ವರೆಗಿನ ಐ.ಎಸ್.ಟಿ.ಎಸ್. ಮಾರ್ಗಗಳ ಪ್ರಸರಣ ಶುಲ್ಕ ರೂ.15137.98ಲಕ್ಷವನ್ನು ಆರ್ಥಿಕ ವರ್ಷ 2018–19ರಲ್ಲಿ ನಿವರ್ತನಗೊಳಿಸಿದ್ದು, ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಿಕ ಮಂಡಲಿಯ ಮುಂದೆ ತೀರ್ಮಾನಕ್ಕೆ ಬಾಕಿ ಇದ್ದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

k) ಟಿಪ್ಪಣಿ ಸಂಖ್ಯೆ 29.4, 37.6 ಹಾಗೂ 37.10: ದಿನಾಂಕ 31.03.2020ರಂದು ಇದ್ದಂತೆ ಕಂಪನಿಯು ನಿಗಮ ಸಾಮಾಜಿಕ ಹೊಣೆಗಾರಿಕೆಗೆ (ಸಿ.ಎಸ್.ಆರ್) ಸಂಬಂಧಿಸಿದ ರೂ.79.26 ಲಕ್ಷವನ್ನು ಖರ್ಚು ಮಾಡಿಲ್ಲ. ಸಿ.ಎಸ್.ಆರ್.ಚಟುವಟಿಕೆಗಳಿಗೆ ಖರ್ಚು ಮಾಡಿರುವ ಹಣಕ್ಕೆ/ನೀಡಿರುವ ವಂತಿಗೆಗೆ ಪೂರ್ಣ ಬಳಕೆ ದೃಢೀಕರಣ ಪತ್ರವನ್ನು ಪಡೆದಿಲ್ಲ. ದಿನಾಂಕ 31.03.2020ರಂದು ಸಿ.ಎಸ್.ಆರ್.ಸಮಿತಿಯು ಕೋವಿಡ್–19 ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ.2500 ಲಕ್ಷವನ್ನು ನೀಡಲು ಅನುಮೋದಿಸಿದ್ದು, ಸಮಿತಿಯ ಅನುಮೋದನೆ ಪಡೆಯದೆ ಆ.ವ.2020–21ರಲ್ಲಿ ಈ ಮೊಬಲಗನ್ನು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರಕ್ಕೆ ನೀಡಿದ್ದು, ಸದರಿ ಪ್ರಾಧಿಕಾರದಿಂದ ಪಡೆದ ತಲುಪೊಪ್ಪಿಗೆ ರಸೀತಿಯನ್ನು ಪರಿಶೀಲನೆಗಾಗಿ ಲಭ್ಯವಾಗಿಸಿಲ್ಲ. ಕಂಪನಿ ಕಾಯಿದೆ2013ರ ಅನುಸೂಚಿ 135ನ್ನು ಉಲ್ಲಂಘಿಸಿರುವ ಕಾರಣ ಭಾ.ಲೆ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

l) ಟಿಪ್ಪಣಿ ಸಂಖ್ಯೆ 31.2 : ಸವಕಳಿ ದರಕ್ಕೆ ಸಂಬಂಧಿಸಿದಂತೆ, ಕಂಪನಿಯು ಕೇಂ.ವಿ.ನಿ.ಆಯೋಗದ 2019ರ ವಿದ್ಯುತ್ ದರ ನಿಯಮಾವಳಿಗಳನ್ನು ಅಳವಡಿಸಿಕೊಂಡಿಲ್ಲ, ಪರಿಶೀಲಿಸಿಲ್ಲ.

m) ಟಿಪ್ಪಣಿ ಸಂಖ್ಯೆ 37.9 : ಬ್ಯಾಂಕುಗಳಿಂದ, ಆರ್ಥಿಕ ಸಂಸ್ಥೆಗಳಿಂದ ಪಡೆದ ಸಾಲಕ್ಕೆ ಮಾತ್ರ ಶಿಲ್ಕು ಸ್ಥಿರೀಕರಣವನ್ನು ಪಡೆಯಲಾಗಿದೆ. ನೀಡಿರುವ ಬ್ಯಾಂಕ್ ಖಾತರಿ, ವಿತರಿಸಿರುವ ಖಾತರಿ ಪತ್ರ, ಸ್ವೀಕೃತಿಗಳು/ಪಾವತಿಯಾಗದವು/ಸಾಅಗಳು/ಮುಂಗಡಗಳು/ಇತರೆ ದಾಯಿತ್ವಗಳು/ದುರಸ್ತಿಗೆ ಕಳುಹಿಸಿರುವ ಸಾಮಗ್ರಿಗಳು, ಕಂಪನಿಯು ನೀಡಿರುವ ಸಾಲಗಳು ಇವುಗಳ ಶಿಲ್ಕನ್ನು ಲೆಕ್ಕಪತ್ರಗಳಲ್ಲಿ ತೋರಿಸಿದ್ದು, ಸ್ಥಿರೀಕರಣಕ್ಕೆ ಬಾಕಿ ಇದೆ.

n) ಟಿಪ್ಪಣಿ ಸಂಖ್ಯೆ 37.38(ಎ): ಭಾರತೀಯ ಲೆಕ್ಕ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ನಿಮಿತ್ತ ಹೊರಡಿಸಿರುವ ಕಂಪನಿ ಕಾಯಿದೆ 2013ರ ಅನುಸೂಚಿ III ಅಗತ್ಯಪಡಿಸಿರುವಂತೆ, ಈ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಕಂಡುಬಂದಿರುವ ಅಂಕಿಗಳು ಹತ್ತಿರದ ಲಕ್ಷ,ದಶ ಲಕ್ಷ ಅಥವಾ ಕೋಟಿಗೆ ಅಥವಾ ದಶಾಂಶಕ್ಕೆ ಪೂರ್ಣಗೊಳಿಸಿಲ್ಲ.

ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು

ಕಂಪನಿ(ಲೆಕ್ಕಗಳು)ನಿಯಮಗಳು, 2014ರ ನಿಯಮ 7ರೊಂದಿಗೆ ಅನ್ವಯಿಸಲ್ಪಟ್ಟ ಕಾಯಿದೆಯ ಪ್ರಕರಣ 133ರಲ್ಲಿ ನಿಗದಿಪಡಿಸಿರುವ ಭಾರತೀಯ ಲೆಕ್ಕಪದ್ಧತಿಗಳನ್ನೂ ಒಳಗೊಂಡಂತೆ, ಭಾರತದಲ್ಲಿ ಸರ್ವಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕೀಕರಣ ತತ್ವಗಳನುಸಾರ, ಕಂಪನಿ ಕಾಯಿದೆ 2013(ಕಾಯಿದೆ)ರ ಪರಿಚ್ಛೇದ 134(5)ರ ಅಗತ್ಯತೆಯಂತೆ, ಕಂಪನಿಯ ಆರ್ಥಿಕ ಸ್ಥಿತಿ, ಇತರೆ ಸಮಗ್ರ ಆದಾಯವನ್ನೂ ಒಳಗೊಂಡ ಆರ್ಥಿಕ ಸಾಧನೆ, ಹಣ ಚಲಾವಣೆ, ಸ್ವಾಮ್ಯ ಬದಲಾವಣೆಗಳ ಬಗ್ಗೆ ನೈಜ ಹಾಗೂ ತೃಪ್ತಿಕರ ಮಾಹಿತಿಯುಳ್ಳ ಈ ಭಾರತೀಯ ಲೆಕ್ಕಪದ್ಧತಿಯ ಆರ್ಥಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು ಅಧಿನಿಯಮದ ಅವಕಾಶಗಳ ಪ್ರಕಾರ ಅಗತ್ಯ ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲಾತೀತ ನಿರ್ವಹಣೆ, ಮೋಸ, ವಂಚನಾತೀತ ಹಾಗೂ ಇತರ ನಿಯಮ ವಿರುದ್ಧವಾದವುಗಳನ್ನು ಪತ್ತೆ ಹಚ್ಚಿ ತಡೆಗಟ್ಟುವುದು, ಯುಕ್ತ ಲೆಕ್ಕಪದ್ಧತಿ ತತ್ವಗಳನ್ನು ಆಯ್ಕೆ ಮಾಡಿ ಅನ್ವಯಿಸುವುದು, ವಿವೇಚನಾತೀತ ಹಾಗೂ ದೂರದೃಷ್ಟಿಯುಳ್ಳ ಅಂದಾಜು ಹಾಗೂ ತೀರ್ಮಾನ ತೆಗೆದುಕೊಳ್ಳುವುದು, ನಿಖರತೆ ಹಾಗೂ ಪರಿಪೂರ್ಣತೆಯ ಲೆಕ್ಕಪತ್ರ ದಾಖಲೆಗಳನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ವಿನ್ಯಾಸ, ಅನುಷ್ಠಾನ ಹಾಗೂ ನೈಜ ಮತ್ತು ತೃಪ್ತಿಕರ ಮಾಹಿತಿಗಳನ್ನು ಬಿಂಬಿಸುವ ಆಂತರಿಕ ಆರ್ಥಿಕ ನಿಯಂತ್ರಣ, ನೈಜ ಹಾಗೂ ನ್ಯಾಯಸಮ್ಮತ ದೃಷ್ಟಿಯನ್ನು ಬೀರುವ ಈ ಭಾರತೀಯ ಲೆಕ್ಕಪದ್ಧತಿಯ ಆರ್ಥಿಕ ನಿರೂಪಣೆಯನ್ನು ಸಿದ್ಧಪಡಿಸಿ, ಅವು ಮೋಸ, ವಂಚನೆ ಅಥವಾ ಭೌತಿಕ ಪರಿಣಾಮ ಬೀರುವಿಕೆಯಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡು, ಆರ್ಥಿಕ ನಿರೂಪಣಾ ಪಟ್ಟಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸುವುದು ಇಂತಹವುಗಳನ್ನು ಒಳಗೊಂಡಿದೆ.

ಆಡಳಿತ ಮಂಡಳಿಯು ಕಂಪನಿಯನ್ನು ದಿವಾಳಿತನಗೊಳಿಸುವುದು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಉದ್ದೇಶ ಹೊಂದಿರದ ಅಥವಾ ನೈಜ ಪರ್ಯಾಯ ವ್ಯವಸ್ಥೆ ಇಲ್ಲದ ಹೊರತು, ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸುವಲ್ಲಿ, ಕಂಪನಿಯನ್ನು ಮುಂದುವರಿಸುವ ಸಾಮರ್ಥ್ಯವನ್ನು ನಿರ್ಧರಿಸುವುದು, ಅನ್ವಯಿತ ವಿಷಯಗಳು ಹಾಗೂ ಮುಂದುವರಿಸುವ ಸಾಮರ್ಥ್ಯದ ಸಂಬಂಧವಾದ ವಿಷಯಾಂಶಗಳನ್ನು ಬಹಿರಂಗಪಡಿಸುವುದು, ಲೆಕ್ಕೀಕರಣಕ್ಕಾಗಿ ಮುಂದುವರಿಸುವ ಸಾಮರ್ಥ್ಯವನ್ನು ಬಳಕೆ ಮಾಡಿಕೊಳ್ಳುವ ಜವಾಬ್ದಾರಿ ಆಡಳಿತ ಮಂಡಳಿಯದ್ದಾಗಿದೆ.

ಕಂಪನಿಯ ಆರ್ಥಿಕ ವರದಿ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನೂ ಆಡಳಿತ ಮಂಡಳಿಯು ಹೊಂದಿದೆ.

ಭಾ.ಲೆ.ಪ. ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಲೆಕ್ಕಪರಿಶೋಧನೆ ನಡೆಸಲು ಲೆಕ್ಕಪರಿಶೋಧಕರ ಜವಾಬ್ದಾರಿ

ಲೆಕ್ಕಪರಿಶೋಧನೆ ತತ್ವಗಳನುಸಾರ, ಕಂಪನಿಯ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಪರಿಶೋಧನೆ ನಡೆಸಿ, ಪರಿಶೋಧನಾ ವರದಿ ಸಲ್ಲಿಸುವುದು ನಮ್ಮ ಜವಾಬ್ದಾರಿಯಾಗಿದೆ. ಆದರೂ, ನಮ್ಮ

ವರದಿಯ ಅಭಿಪ್ರಾಯ ನೀಡಿಕೆ ಭಾಗದಲ್ಲಿ ವಿವರಿಸಿರುವ ಅಭಿಪ್ರಾಯ ನೀಡಿಕೆ ನಿರಾಕರಣೆಗೆ ಆಧಾರವಾದ ಸಾಕಷ್ಟು ಸಾಕ್ಷ್ಯಗಳು ನಮಗೆ ಲಭ್ಯವಾಗದ ಕಾರಣ ಈ ಆರ್ಥಿಕ ನಿರೂಪಣಾ ವರದಿಗಳಿಗೆ ಸಂಬಂಧಿಸಿದ ಪರಿಶೋಧನಾ ಅಭಿಪ್ರಾಯವನ್ನು ನೀಡಲು ಆಗಲಿಲ್ಲ.

ಐ.ಸಿ.ಐ.ಎ. ಹೊರಡಿಸಿರುವ ನೀತಿ ಸಂಹಿತೆಗಳ ಅಗತ್ಯತೆಗನುಸಾರ, ಕಂಪನಿಗೆ ಅನ್ವಯಿಸುವ ಕಾನೂನು ಹಾಗೂ ನಿಬಂಧನೆಗಳ ಅಡಿಯಲ್ಲಿ ನಿಗದಿಪಡಿಸಿರುವ ನೀತಿ ಅಗತ್ಯತೆಗಳನುಸಾರ ನಾವು ಕಂಪನಿಯ ನಿರಾವಲಂಬಿತರು.

ಇತರ ಕಾನೂನಾತ್ಮಕ ಮತ್ತು ನಿಯಂತ್ರಿಯ ಅಗತ್ಯತೆಗಳ ಬಗ್ಗೆ ವರದಿ

ಅನುಸೂಚಿ 143(1)ಅಗತ್ಯಪಡಿಸಿ, ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಟಿಪ್ಪಣಿ 4.4ರಲ್ಲಿ ಉಲ್ಲೇಖಿಸಿರುವಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿ.ಡಿ.ಎ) ನೀಡಿರುವ ಸಾಲವನ್ನು ಸೂಕ್ತವಾಗಿ ಭದ್ರಗೊಳಿಸಿರುವ ಬಗ್ಗೆ ಅಭಿಪ್ರಾಯ ಸಲ್ಲಿಸಲು ಆಗುವುದಿಲ್ಲವೆಂದು ವರದಿ ಮಾಡಿದ್ದೇವೆ. ಈ ಸಾಲ ನೀಡಿರುವಿಕೆಯು ಕಂಪನಿಯ ಹಿತಾಸಕ್ತಿಗೆ ಪೂರ್ವಗ್ರಹಪೀಡಿತವಾಗಿರುವ ರೀತಿಯಲ್ಲಿ ಅಥವಾ ಇದರ ಸದಸ್ಯತನವು ಮುಚ್ಚಳಿಕೆ ಸಿದ್ಧಪಡಿಸುವಿಕೆಗೆ ಬಾಕಿ ಇದ್ದು ಜೊತೆಗೆ ಯೋಜನೆಯ ಪ್ರಗತಿಯನ್ನು ಆಧರಿಸಿ ಸಾಲ ವಿತರಣೆಯನ್ನು ಗಮನಹರಿಸದಿರುವ ರೀತಿಯಲ್ಲಿ ಮಂಜೂರಾಗಿರಬಹುದು.

1) ಅನುಸೂಚಿ 143(1)ಅಗತ್ಯಪಡಿಸಿ, ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಟಿಪ್ಪಣಿ 4.4ರಲ್ಲಿ ಉಲ್ಲೇಖಿಸಿರುವಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿ.ಡಿ.ಎ) ನೀಡಿರುವ ಸಾಲವನ್ನು ಸೂಕ್ತವಾಗಿ ಭದ್ರಗೊಳಿಸಿರುವ ಬಗ್ಗೆ ಅಭಿಪ್ರಾಯ ಸಲ್ಲಿಸಲು ಆಗುವುದಿಲ್ಲವೆಂದು ವರದಿ ಮಾಡಿದ್ದೇವೆ. ಈ ಸಾಲ ನೀಡಿರುವಿಕೆಯು ಕಂಪನಿಯ ಹಿತಾಸಕ್ತಿಗೆ ಪೂರ್ವಗ್ರಹಪೀಡಿತವಾಗಿರುವ ರೀತಿಯಲ್ಲಿ ಅಥವಾ ಇದರ ಸದಸ್ಯತನವು ಮುಚ್ಚಳಿಕೆ ಸಿದ್ಧಪಡಿಸುವಿಕೆಗೆ ಬಾಕಿ ಇದ್ದು ಜೊತೆಗೆ ಯೋಜನೆಯ ಪ್ರಗತಿಯನ್ನು ಆಧರಿಸಿ ಸಾಲ ವಿತರಣೆಯನ್ನು ಗಮನಹರಿಸದಿರುವ ರೀತಿಯಲ್ಲಿ ಮಂಜೂರಾಗಿರಬಹುದು.

2) ಕಾಯಿದೆಯ ಅನುಸೂಚಿ 143[11]ರ ರೀತ್ಯಾ ಕೇಂದ್ರ ಸರ್ಕಾರವು ಹೊರಡಿಸಿರುವ ಕಂಪನಿಗಳ(ಲೆಕ್ಕಪರಿಶೋಧಕರ ವರದಿ) ಆದೇಶವು, 2016 (ಆದೇಶ) ಅಗತ್ಯಪಡಿಸುವಂತೆ, ಆದೇಶದ ಕಂಡಿಕೆ 3 ಮತ್ತು 4ರಲ್ಲಿ ನಿಗದಿಪಡಿಸಿರುವ ವಿಷಯಾಂಶಗಳ ಬಗ್ಗೆ ನಿರೂಪಣೆಯನ್ನು **"ಅನುಬಂಧ ಎ"ನಲ್ಲಿ** ಒದಗಿಸಿದ್ದೇವೆ. ಈ ನಿರೂಪಣೆಯು ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯ ಅಭಿಪ್ರಾಯ ಸಲ್ಲಿಕೆ ನಿರಾಕರಣೆಯ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮ ಹಾಗೂ ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗೆ ಉಲ್ಲೇಖಿಸಿ ಆರ್ಥಿಕ ವರದಿ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣದ ಬಗ್ಗೆ ನಮ್ಮ ಪ್ರತ್ಯೇಕ ವರದಿಯಲ್ಲಿ ವ್ಯತಿರಿಕ್ತ ಅಭಿಪ್ರಾಯ ನೀಡಿಕೆಗೆ ಆಧಾರದ ಭಾಗದಲ್ಲಿ ವಿವರಿಸಿರುವ ಭೌತಿಕ ದೌರ್ಬಲ್ಯ ಸಾಧ್ಯತೆಗಳಿಗೆ ಒಳಪಟ್ಟಿದೆ.

3) ಕಾಯಿದೆಯ ಅನುಸೂಚಿ 143(3)ಅಗತ್ಯಪಡಿಸುವಂತೆ, ಮುಂದೆ ತಿಳಿಸಿರುವಂತೆ ವರದಿ ಸಲಿಸುತ್ತಿದ್ದೇವೆ:

(ಎ) ಮೇಲೆ, ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ವಿವರಿಸಿರುವಂತೆ, ಎಲ್ಲ ಅಗತ್ಯ ಮಾಹಿತಿಗಳು ಮತ್ತು ವಿವರಣೆಗಳನ್ನು ಒದಗಿಸುವಂತೆ ನಾವು ಕೋರಿದ್ದು, ಅವನ್ನು ನಾವು ಪಡೆಯಲು ಸಾಧ್ಯವಾಗಲಿಲ್ಲ, ಆದರೆ ನಮಗೆ ತಿಳಿದ ಮಟ್ಟಿಗೆ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅವು ಅಗತ್ಯವಾಗಿದ್ದವು.

(ಬಿ) ನಾವು ನಡೆಸಿದ ಪರಿಶೀಲನೆಯಿಂದ ಕಂಡುಬಂದಿರುವುದೇನೆಂದರೆ, ಮೇಲೆ, ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ತಿಳಿಸಿರುವ ಅಂಶಗಳ ವಿನಃ, ಕಾನೂನು ಅಗತ್ಯಪಡಿಸುವಂತೆ, ಈವರೆಗೆ ಕಂಪನಿಯು ಅಗತ್ಯ ಲೆಕ್ಕಪತ್ರ ಪುಸ್ತಕಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿದೆ.

(ಸಿ) ನಮ್ಮ ವರದಿಯ ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ತಿಳಿಸಿರುವ ಅಂಶಗಳೊಂದಿಗೆ ಅನ್ವಯಿಸಿದಂತೆ, ನಾವು ಪರಿಶೀಲನೆಗೆ ಒಳಪಡಿಸಿದ ಕಂಪನಿಯ ಆಯವ್ಯಯ ಪಟ್ಟಿ, ಇತರ ಸಮಗ್ರ ಆದಾಯಗಳನ್ನೂ ಒಳಗೊಂಡ ಲಾಭ ಮತ್ತು ನಷ್ಟದ ನಿರೂಪಣಾ ಪಟ್ಟಿ, ಸ್ವಾಮ್ಯದಲ್ಲಿ ಬದಲಾವಣೆಯ ಪಟ್ಟಿ ಹಾಗೂ ಹಣ ಚಲಾವಣೆ ಪಟ್ಟಿಗಳು ಲೆಕ್ಕಪತ್ರಪುಸ್ತಕಗಳೊಂದಿಗೆ ಅನುರೂಪವಾಗಿವೆ.

(ಡಿ) ಮೇಲೆ, ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಮೇಲೆ ಬೀರುವ ಪರಿಣಾಮ ಸಾಧ್ಯತೆಗಳ ಪ್ರಯುಕ್ತ, ಕಂಪನಿ(ಭಾರತೀಯ ಲೆಕ್ಕಪದ್ಧತಿ ತತ್ವಗಳು)ನಿಯಮಗಳು, 2015ರೊಂದಿಗೆ ಅನ್ವಯಿಸಲಾದ ಕಾಯಿದೆಯ ಅನುಸೂಚಿ 133ರಡಿ ನಿಗದಿಪಡಿಸಿರುವ ಭಾರತೀಯ ಲೆಕ್ಕಪದ್ಧತಿ ತತ್ವಗಳೊಂದಿಗೆ ಹಿಂದೆ ತಿಳಿಸಿರುವ ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳು ಅನುಪಾಲನೆಗೊಳ್ಳುತ್ತವೆಯೇ ಎಂಬುದರ ಬಗ್ಗೆ ನಾವು ಹೇಳಲು ಸಾಧ್ಯವಿಲ್ಲ.

(ಇ) ಮೇಲೆ, ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಮೇಲೆ ಬೀರುವ ಪರಿಣಾಮ ಸಾಧ್ಯತೆಗಳ ಪ್ರಯುಕ್ತ, ಕಂಪನಿಯ ಕಾರ್ಯನಿರ್ವಹಣೆಯ ಮೇಲೆ ಅವು ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಗಳ ಬಗ್ಗೆ ನಾವು ಹೇಳಲು ಸಾಧ್ಯವಿಲ್ಲ.

(ಎಫ್) ನಿಗಮ ವ್ಯವಹರಣೆಗಳ ಸಚಿವಾಲಯವು ಹೊರಡಿಸಿರುವ ದಿನಾಂಕ 05.06.2015ರ ಜಿ.ಎಸ್.ಆರ್–463(ಇ) ಪ್ರಕಾರ, ಕಂಪನಿಯು ಸರ್ಕಾರದ ಸಂಸ್ಥೆಯಾಗಿರುವುದರಿಂದ, ಕಂಪನಿ ಕಾಯಿದೆ, 2013ರ ಅನುಸೂಚಿ 164(2)ರ ಅವಕಾಶನ್ವಯ, ನಿರ್ದೇಶಕರನ್ನು ಅನರ್ಹತೆಗೊಳಿಸುವಿಕೆಯು ಕಂಪನಿಗೆ ಅನ್ವಯಿಸುವುದಿಲ್ಲ,

(ಜಿ) ಲೆಕ್ಕಪತ್ರ ಮತ್ತು ತತ್ಸಂಬಂಧ ದಾಖಲೆ ದಸ್ತಾವೇಜು ನಿರ್ವಹಣೆಗೆ ಸಂಬಂಧಿಸಿದ ಮೀಸಲಾತಿ/ಮಾರ್ಪಾಡುಗಳು ಮೇಲಿನ ಕಂಡಿಕೆ3(ಬಿ)ಯೊಂದಿಗೆ ಅನ್ವಯಿತವಾದ ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ತಿಳಿಸಿರುವಂತಿವೆ.

(ಎಚ್) ಕಂಪನಿಯ ಆರ್ಥಿಕ ನಿರೂಪಣಾ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಪ್ರಮಾಣಬದ್ಧತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗೆ ಸಂಬಂಧಿಸಿದಂತೆ, ನಮ್ಮ ಪ್ರತ್ಯೇಕ ವರದಿಯಲ್ಲಿನ **"ಅನುಬಂಧ ಬಿ"**ಯನ್ನು ಪರಾಮರ್ಶಿಸುವುದು. ವರದಿಯಲ್ಲಿ ತಿಳಿಸಿರುವ ಕಾರಣಗಳಿಂದಾಗಿ, ಕಂಪನಿಯ ಆರ್ಥಿಕ ನಿರೂಪಣಾ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ನಮ್ಮ ವರದಿಯು ವ್ಯತಿರಿಕ್ತ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

(ಐ) ಮೇಲೆ, ಅಭಿಪ್ರಾಯ ಸಲ್ಲಿಕೆ ನಿರಾಕರಣೆಗೆ ಆಧಾರದ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಮೇಲೆ ಬೀರುವ ಪರಿಣಾಮ ಸಾಧ್ಯತೆಗಳ ವಿನಃ, ಕಂಪನಿ (ಪರಿಶೋಧನೆ ಮತ್ತು ಪರಿಶೋಧಕರು) ನಿಯಮಗಳು, 2014ರ ನಿಯಮ 11ರ ತಿದ್ದುಪಡಿಗೊಳಿಸಿರುವಂತೆ ಹಾಗೂ ಅದರನ್ವಯ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ ಒಳಪಡಿಸಬೇಕಾದ ಇತರ ವಿಷಯಾಂಶಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯ ಹಾಗೂ ನಮಗೆ ಒದಗಿಸಿರುವ ಅತ್ಯುತ್ತಮ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ :

i. ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಯ ಟಿಪ್ಪಣಿ 37.7 ಮತ್ತು 37.8ರಲ್ಲಿ ವಿವರಿಸಿರುವಂತೆ, ಕಂಪನಿಯು ತನ್ನ ಆರ್ಥಿಕ ಸ್ಥಿತಿಗಳ ಮೇಲೆ ಬಾಕಿ ಇರುವ ಮೊಕದ್ದಮೆಗಳ ಅಂದಾಜು ಪರಿಣಾಮಗಳನ್ನು ಬಹಿರಂಗಪಡಿಸಿದೆ;

ii. ಭವಿಷ್ಯದಲ್ಲಿ ನಷ್ಟ ಉಂಟಾಗಬಹುದಾದ ಇತರೆ ಮೂಲದ ಗುತ್ತಿಗೆಗಳನ್ನೂ ಒಳಗೊಂಡಂತೆ, ಕಂಪನಿಯು ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿಲ್ಲ.

iii. ಕಂಪನಿಯ ಹೂಡಿಕೆದಾರರ ತಿಳಿವಳಿಕೆ ಹಾಗೂ ಸುರಕ್ಷಾ ನಿಧಿಗೆ ಯಾವುದೇ ಮೊಬಲಗನ್ನು ವರ್ಗಾಯಿಸಬೇಕಾದ ಅಗತ್ಯತೆ ಇಲ್ಲ.

(ಜೆ) ಕಾಯಿದೆಯ ಅನುಸೂಚಿ 143(5) ಅಗತ್ಯಪಡಿಸುವಂತೆ, ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರು ನೀಡಿರುವ ನಿರ್ದೇಶನಗಳನ್ನು ನಾವು ಪರಿಗಣಿಸಿ, ತದನುಸಾರ ಕೈಗೊಂಡ ಕ್ರಮ ಮತ್ತು ಅದು ಕಂಪನಿಯ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳು ಹಾಗೂ ಲೆಕ್ಕಪತ್ರಗಳ ಮೇಲೆ ಬೀರುವ ಪರಿಣಾಮವನ್ನು **'ಅನುಬಂಧ ಸಿ'** ಯಲ್ಲಿ ನೀಡಲಾಗಿದೆ.

ಬಿ.ಪಿ.ರಾವ್ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003116 ಎಸ್

ಸಹಿ/–
ಬಿ.ಸತೀಶ್‌ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ 024559

ಸ್ಥಳ: ಬೆಂಗಳೂರು
ದಿನಾಂಕ:22–03–2021
ಯು.ಡಿ.ಐ.ಎನ್:212024559ಎಎಎಡಿಆರ್9595

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ ಎ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ 2020ರ ಮಾರ್ಚ್ 31ರಂದಿನ ವರ್ಷಾಂತ್ಯಕ್ಕೆ ಭಾರತೀಯ ಲೆಕ್ಕಪದ್ಧತಿ ತತ್ವಗಳು ಆರ್ಥಿಕ ನಿರೂಪಣಾ ವರದಿಗೆ ಸಂಬಂಧಿಸಿ ಸಮ ಸಂಖ್ಯೆ ದಿನಾಂಕದ ನಮ್ಮ ವರದಿಯ 'ಇತರ ಕಾನೂನು ಹಾಗೂ ನಿಯಂತ್ರಿತ ಅಗತ್ಯತೆಗಳ ಮೇಲೆ ವರದಿ' ಬಗ್ಗೆ ಕಂಡಿಕೆ 2ರಲ್ಲಿ ಉಲ್ಲೇಖಿಸಿರುವಂತೆ, ಮತ್ತು ಅಭಿಪ್ರಾಯ ಸಲ್ಲಿಕೆ ನಿರಾಕರಣೆಯ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮ ಹಾಗೂ ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗೆ ಉಲ್ಲೇಖಿಸಿ ಆರ್ಥಿಕ ವರದಿ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣದ ಬಗ್ಗೆ ನಮ್ಮ ಪ್ರತ್ಯೇಕ ವರದಿಯಲ್ಲಿ ವ್ಯತಿರಿಕ್ತ ಅಭಿಪ್ರಾಯ ನೀಡಿಕೆಗೆ ಆಧಾರದ ಭಾಗದಲ್ಲಿ ವಿವರಿಸಿರುವ ಭೌತಿಕ ದೌರ್ಬಲ್ಯ ಸಾಧ್ಯತೆಗಳಿಗೆ ಒಳಪಟ್ಟಿದೆ.

(i) ಸ್ಥಿರಾಸ್ತಿಗಳು (ಪ್ರಸ್ತುತ ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಎಂದು ಉಲ್ಲೇಖಿಸಿದೆ) (ಪಿ.ಪಿ.ಇ)

I. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಕಂಪನಿಯು ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಪರಿಮಾಣಾತ್ಮಕ ವಿವರ, ಸ್ಥಳದ ಬಗ್ಗೆ ಅಗತ್ಯ ಪ್ರಮಾಣದ ದಾಖಲೆಗಳನ್ನು ನಿರ್ವಹಿಸಿಲ್ಲ. ಅಲ್ಲದೆ ಕಂಪನಿಯು ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿಲ್ಲ:

   i) ಲೆಕ್ಕಪುಸ್ತಕಗಳಲ್ಲಿ ಭೂಮಿಯ ವಿಷಯದಲ್ಲಿ, ಸ್ವತಂತ್ರ ಹಿಡುವಳಿ ಅಥವಾ ಭೋಗ್ಯ ಹಿಡುವಳಿ ಎಂದು ವರ್ಗೀಕರಿಸಿರುವ ಬಗ್ಗೆ

   ii) ರಿಯಾಯಿತಿ ದರದಲ್ಲಿ/ಸರ್ಕಾರದಿಂದ ಉಚಿತವಾಗಿ/ಗ್ರಾಹಕರಿಂದ/ಖಾಸಗಿ ವ್ಯಕ್ತಿಗಳಿಂದ ಸ್ವಾಧೀನಪಡಿಸಿಕೊಂಡ ಆಸ್ತಿ(ಭೂಮಿಯನ್ನೂ ಒಳಗೊಂಡು)

II.

   i) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಕಾರ್ಯಾಚರಣೆಗೆ ಬಳಸಿರುವ ವಿದ್ಯುತ್ ಮಾರ್ಗದಂತಹ ಆಸ್ತಿಗಳು/ಸ್ಥಾಪನಗಳು ಅರಣ್ಯ ಪ್ರದೇಶ ಹಾದುಹೋಗಿ ರಾಜ್ಯಾದ್ಯಂತ ವಿಸ್ತೃತಗೊಂಡು, ನಿರಂತರ ಕಾರ್ಯಾಚರಣೆಯಲ್ಲಿರುವುದರಿಂದ, ಭೌತಿಕವಾಗಿ ನಿಯತ ತಪಾಸಣೆಗೆ ಒಳಪಡಲಾಗದ ಕಾರಣ, ಇವುಗಳನ್ನು ಭೌತಿಕವಾಗಿ ಲಭ್ಯವಿವೆ ಎಂದು ಪರಿಗಣಿಸಲಾಗಿದೆ.

   ii) ಕಂಪನಿಯು, ಪ್ರತಿ ವರ್ಷ ಯಂತ್ರೋಪಕರಣ, ಸಲಕರಣೆ ಹಾಗೂ ಪೀಠೋಪಕರಣಗಳ (ಯಂತ್ರೋಪಕರಣ ಹಾಗೂ ಸ್ಥಾವರ ಪರಿಶೀಲನೆ) ಭೌತಿಕ ಪರಿಶೀಲನೆಯನ್ನು ಮಾಡುವ ವ್ಯವಸ್ಥೆಯನ್ನು ಹೊಂದಿದೆ. ಆದರೂ, ಪರಿಮಾಣಾತ್ಮಕ ಮಾಹಿತಿಯ ಪಿ.ಪಿ.ಇ. ಪುಸ್ತಕವನ್ನು ನಿರ್ವಹಿಸಿಲ್ಲ ಮತ್ತು ಭೌತಿಕ ಪರಿಶೀಲನೆ ವರದಿಗಳೊಂದಿಗೆ ಇವನ್ನು ಲೆಕ್ಕಸಮನ್ವಯಗೊಳಿಸಿಲ್ಲ. ಹೀಗಾಗಿ, ಅಂತಹ ಪರಿಶೀಲನೆಯ ವ್ಯತ್ಯಾಸದ ಬಗ್ಗೆ ನಾವು ಅಭಿಪ್ರಾಯ ನೀಡಲು ಆಗುವುದಿಲ್ಲ.

   iii) ವಿಭಾಗ/ಲೆಕ್ಕಘಟಕಗಳಲ್ಲಿ ನಿರ್ವಹಿಸಲ್ಪಡುತ್ತಿರುವ ಭೂ ದಾಖಲೆಗಳು ನಿಗಮ ಕಾರ್ಯಾಲಯದಲ್ಲಿ ನಿರ್ವಹಿಸುತ್ತಿರುವ ದಾಖಲೆಗಳೊಂದಿಗೆ ಲೆಕ್ಕಸಮನ್ವಯಗೊಳಿಸಬೇಕಾದ ಅವಶ್ಯವಿದೆ.

   iv) ನಮ್ಮ ಅಭಿಪ್ರಾಯದ ಪ್ರಕಾರ, ಎಲ್ಲ ವಿಧದ ಪಿ.ಪಿ.ಇ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ(ಸಮಗ್ರ ಗುತ್ತಿಗೆ ಆಧಾರದ ಮೇಲೆ ಖರೀದಿಸಿದ ಸಾಮಗ್ರಿಗಳನ್ನೂ ಒಳಗೊಂಡು) ಹಾಗೂ ಬಳಕೆಯಲ್ಲಿ ಇರದ ಆಸ್ತಿಗಳನ್ನು ನಿಯತಕಾಲಿಕ ಭೌತಿಕ ಪರಿಶೀಲನೆ ಮಾಡುವ ವ್ಯವಸ್ಥೆಯನ್ನು ಕಂಪನಿಯು ಹೊಂದಬೇಕು.

III. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿಯು 481 ಆಸ್ತಿಗಳಿಗೆ ಸಂಪೂರ್ಣ ಹಕ್ಕುಪತ್ರವನ್ನು ಹೊಂದಿಲ್ಲ. ಮುಂದುವರಿಸಿ, ಕೆ.ಐ.ಎ.ಡಿ.ಬಿ.ಸಂಸ್ಥೆಯಿಂದ ಮಾರಾಟ ಹಾಗೂ ಭೋಗ್ಯದ ಒಪ್ಪಂದದ ಮೂಲಕ ರೂ.5158.30 ಲಕ್ಷ ಮೌಲ್ಯದಲ್ಲಿ ಸ್ವಾಧೀನಪಡಿಸಿಕೊಂಡಿರುವ 263.62ಎಕರೆ ಭೂಮಿಯ ವಿಷಯದಲ್ಲಿ, ಕಂಪನಿಯು, ಕರ್ನಾಟಕ ಸರ್ಕಾರದ ದಿನಾಂಕ 09.03.2017ರ ಆದೇಶ ಸಂಖ್ಯೆ ಸಿಐ 15 ಎಸ್‌ಪಿಕ್ಯು 2017ರ ತಿದ್ದುಪಡಿಯ ಮೂಲಕ ಹಾಲಿ ಇರುವ 99 ವರ್ಷಗಳ ಭೋಗ್ಯದ ಅವಧಿಯನ್ನು ಕನಿಷ್ಠ ಎರಡು ವರ್ಷಗಳ ಅವಧಿಗೆ ನಿಗದಿಪಡಿಸಿದ ಭೋಗ್ಯ ಹಾಗೂ ಮಾರಾಟದ ಬದಲಾವಣೆಯ ಪ್ರಕ್ರಿಯೆಯಲ್ಲಿ ದೆ. 263.62 ಎಕರೆ ಭೂಮಿಯ ಪೈಕಿ ಕಂಪನಿಯು ಕೆ.ಐ.ಎ.ಡಿ.ಬಿ. ಇಂದ 9.62 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ.

(ii) **ತಪಶೀಲು**

I. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಉಗ್ರಾಣ, ಬಿಡಿಭಾಗಗಳು, ಸ್ಥಾವರ ಹಾಗೂ ಬಿಡುಗಡೆಗೊಳಿಸಿದ ಆಸ್ತಿಗಳಿಗೆ ಕಂಪನಿಯ ಆಡಳಿತ ಮಂಡಳಿಯು ಪ್ರಸಕ್ತ ವರ್ಷದಲ್ಲಿ ಸಮಂಜಸ ಮಧ್ಯಂತರ ಅವಧಿಯಲ್ಲಿ ಭೌತಿಕ ತಪಶೀಲು ಪರಿಶೀಲನೆಯನ್ನು ನಡೆಸಿತು.

II. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಲೆಕ್ಕಪುಸ್ತಕಗಳಲ್ಲಿನ ದಾಖಲೆಯೊಂದಿಗೆ ಉಗ್ರಾಣದ ಭೌತಿಕ ಪರಿಶೀಲನೆಯ ತುಲನೆಯಿಂದ ಕಂಡುಬಂದ ವ್ಯತ್ಯಾಸವನ್ನು, ಕೊರತೆ ಹಾಗೂ ಅನುಪಯುಕ್ತತೆಗಳಿಗೆ ಅಗತ್ಯ ಅವಕಾಶವನ್ನು ಕಲ್ಪಿಸುವ ಮೂಲಕ ಲೆಕ್ಕಪುಸ್ತಕಗಳಲ್ಲಿ ಯುಕ್ತ ರೀತಿಯಲ್ಲಿ ವ್ಯವಹರಿಸಲ್ಪಟ್ಟಿದೆ.

(iii) **ಸಾಲಗಳು ಮತ್ತು ಮುಂಗಡಗಳು**

ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿ ಕಾಯಿದೆ, 2013ರ ಅನುಸೂಚಿ 189ರೊಳಗೆ ಒಳಪಡುವ ಕಂಪನಿಗಳು, ಸಂಸ್ಥೆಗಳು, ನಿಯಮಿತ ಹೊಣೆಗಾರಿಕೆ ಪಾಲುದಾರಿಕೆ ಅಥವಾ ಇತರ ವ್ಯಕ್ತಿಗಳಿಗೆ ಕಂಪನಿಯು ಭದ್ರಗೊಳಿಸಿದ ಅಥವಾ ಭದ್ರಗೊಳಿಸಿಲ್ಲದ ರೂಪದ ಸಾಲಗಳನ್ನು ನೀಡಿಲ್ಲ. ಹೀಗಾಗಿ ಕಂಪನಿ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಕಲಮು3(iii)ರಲ್ಲಿ ಉಲ್ಲೇಖಿಸಿರುವ ವಿಷಯಗಳಿಗೆ ನಮ್ಮ ವರದಿ ಸಲ್ಲಿಕೆಯು ಅನ್ವಯಿಸುವುದಿಲ್ಲ.

(iv) **ಸಾಲಗಳು, ಹೂಡಿಕೆಗಳು ಮತ್ತು ಖಾತರಿಗಳು**

ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿ ಕಾಯಿದೆ, 2013ರ ಅನುಸೂಚಿ 186(9)ರ ಅಡಿಯಲ್ಲಿ ಬೆಂ. ಅ. ಪ್ರಾಧಿಕಾರಕ್ಕೆ ರೂ.11211ಲಕ್ಷ ಸಾಲವನ್ನು ಮಂಜೂರು ಮಾಡಿ ಪ್ರಸಕ್ತ ವರ್ಷದಲ್ಲಿ 8757.38 ಲಕ್ಷವನ್ನು ವಿತರಿಸಿರುವುದರ ವಿನಃ, ಅನುಸೂಚಿ 185ರೊಳಗೆ ಒಳಪಡುವ ನಿರ್ದೇಶಕರು, ಇತರರಿಗೆ ಯಾವುದೇ ಸಾಲವನ್ನು ನೀಡಿಲ್ಲ ಹಾಗೂ ಅನುಸೂಚಿ 186ರೊಳಗೆ ಒಳಪಟ್ಟು ಯಾವುದೇ ಸಾಲ ಮಾಡಿಲ್ಲ, ಹೂಡಿಕೆ, ಭದ್ರತೆ ಹಾಗೂ ಖಾತರಿಗಳ ವ್ಯವಹರಣೆ ಮಾಡಿಲ್ಲ. ಕಂಪನಿಯು, ಕರ್ನಾಟಕ ಸರ್ಕಾರದಿಂದ ದಿನಾಂಕ 14.10.2019ರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದರಿಂದ, ಎಂ.ಸಿ.ಎ.ಅಧಿಸೂಚನೆ ಸಂಖ್ಯೆ ಎಫ್12/2014–ಸಿಎಲ್.ವಿ[ಜಿ.ಎಸ್.ಆರ್ 463(ಇ)] ದಿನಾಂಕ 05.06.2015ರ ಪ್ರಕಾರ ಕಂಪನಿ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಕಲಮು3(iv)ರಲ್ಲಿ ಉಲ್ಲೇಖಿಸಿರುವ ವಿಷಯಗಳಿಗೆ ನಮ್ಮ ವರದಿ ಸಲ್ಲಿಕೆಯು ಅನ್ವಯಿಸುವುದಿಲ್ಲ.

(v) **ಠೇವಣಿಗಳು**

ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕವಿನಿ ಆಯೋಗದ ನಿರ್ದೇಶನಗಳ ವಿರುದ್ಧವಾಗಿ 30.11.2012ರ ನಂತರ ಕಾರ್ಯಜಾಲ ಉನ್ನತೀಕರಣ ಶುಲ್ಕವೆಂದು ರೂ.1255.90ಲಕ್ಷವನ್ನು

ವಸೂಲಿ ಮಾಡಿ, ಕಾಯಿದೆ/ನಿಯಮಗಳ ಪ್ರಕಾರ ನಿಗದಿತ ಅವಧಿಯೊಳಗೆ ಮರುಪಾವತಿ ಮಾಡದಿರುವುದು ಹಾಗೂ ಕರ್ನಾಟಕ ಸರ್ಕಾರದ ದಿನಾಂಕ 22.05.2014ರ ಅಧಿಸೂಚನೆ ಸಂಖ್ಯೆ ಇಎನ್ 21 ವಿಎಸ್‌ಸಿ 2014ರ ವಿರುದ್ಧವಾಗಿ ಶೇ.5ರ ಬದಲಾಗಿ ಶೇ.10ರ ದರದಲ್ಲಿ ಉಸ್ತುವಾರಿ ಶಿಲ್ಕವನ್ನು ವಸೂಲಿ ಮಾಡಿ, ರೂ.538.61 ಲಕ್ಷವನ್ನು ಹಿಂಪಾವತಿಸಬೇಕಾಗಿರುವುದರ ವಿನಃ, ಕಂಪನಿ ಕಾಯಿದೆ, 2013ರ ಅನುಸೂಚಿ 73ರಿಂದ 76 ಹಾಗೂ ಅನ್ವಯಿತ ನಿಯಮಗಳಡಿಯಲ್ಲಿ ಒಳಪಡುವ ಸಾರ್ವಜನಿಕರಿಂದ ಕಂಪನಿಯು ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ

(vi) **ವೆಚ್ಚ ದಾಖಲೆಗಳು**

ವಿದ್ಯುತ್ ಪ್ರಸರಣೆಯ ವೆಚ್ಚ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಕೇಂದ್ರ ಸರ್ಕಾರವು, ಕಂಪನಿ ಕಾಯಿದೆ,2013ರ ಅನುಸೂಚಿ 148(1)ರ ಅಡಿಯಲ್ಲಿ ನಿಗದಿಪಡಿಸಿದೆ. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿಯು ವೆಚ್ಚ ದಾಖಲೆಗಳ ನಿರ್ವಹಣೆಯ ಪ್ರಯುಕ್ತ ಪ್ರತ್ಯೇಕ ನಮೂನೆಯ ದಾಖಲೆ ಪುಸ್ತಕಗಳನ್ನು ಹೊಂದಿಲ್ಲ. ಆರ್ಥಿಕ ಲೆಕ್ಕೀಕರಣ ಪುಸ್ತಕ ಹಾಗೂ ದಾಖಲೆಗಳನ್ನು ಆಧರಿಸಿ ವೆಚ್ಚ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲಾಗುತ್ತದೆ.

(vii) **ಶಾಸನಬದ್ಧ ಬಾಕಿಗಳು**

I. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಭವಿಷ್ಯ ನಿಧಿ, ರಾಜ್ಯ ನೌಕರರ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೇವಾ ತೆರಿಗೆ, ಕರ, ರಾಜಸ್ವ ಶುಲ್ಕಗಳನ್ನು ಒಳಗೊಂಡಂತೆ, ಕಂಪನಿಯು ಯುಕ್ತ ಪ್ರಾಧಿಕಾರಗಳಿಗೆ ವಿವಾದರಹಿತ ಅನ್ವಯಿತ ಶಾಸನಬದ್ಧ ಬಾಕಿ ಹಾಗೂ ಇತರೆ ಶಾಸನಬದ್ಧ ಬಾಕಿಗಳನ್ನೂ ನಿಯತವಾಗಿ ಪಾವತಿಸುತ್ತಿದೆ. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಆಯವ್ಯಯ ಪಟ್ಟಿಯ ದಿನಾಂಕದಂದಿಗೆ ಇದ್ದಂತೆ, ಪಾವತಿಗಾಗಿ ಆರು ತಿಂಗಳುಗಳಿಗೂ ಮೀರಿದ ಯಾವುದೇ ವಿವಾದರಹಿತ ಶಾಸನಬದ್ಧ ಬಾಕಿ ಇಲ್ಲ.

II. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕೆಳಗೆ ಕೋಷ್ಟಕದಲ್ಲಿ ತೋರಿಸಿರುವ ಬಾಕಿಗಳ ವಿನಃ, ಯಾವುದೇ ವಿವಾದದ ಪ್ರಯುಕ್ತ ಪಾವತಿಸದಿರುವ ಆದಾಯ ತೆರಿಗೆ, ಜಿ.ಎಸ್.ಟಿ, ಮೌಲ್ಯವರ್ಧಿತ ತೆರಿಗೆ, ಸೇವಾ ತೆರಿಗೆ, ಸೀಮಾ ಶುಲ್ಕ, ಅಬಕಾರಿ ಶುಲ್ಕ ಬಾಕಿಗಳಿಲ್ಲ.

ಶಾಸನದ ಹೆಸರು	ಬಾಕಿಯ ಸ್ವರೂಪ	ಬಾಕಿ ರೂ.ಗಳಲ್ಲಿ	ಅವಧಿ	ವಿವಾದ ಬಾಕಿ ಇರುವ ವೇದಿಕೆ
ಸೇವಾ ತೆರಿಗೆ	ವಿ.ಎಸ್.ಎ.ಟಿ.ಶುಲ್ಕ	1,68,568/–	2011–12	CESTAT
ಸೇವಾ ತೆರಿಗೆ	ಸ್ಥಿರಾಸ್ತಿ ಬಾಡಿಗೆ	1,02,03,581/–	2007–08 ರಿಂದ 2009–10ರವರೆಗೆ	CESTAT
		16,28,588/–	ಏಪ್ರಿಲ್ 2010 ರಿಂದ ಮಾರ್ಚ್ 2011ರವರೆಗೆ	
		37,70,652/–	ಏಪ್ರಿಲ್ 2011 ರಿಂದ ಮಾರ್ಚ್ 2012ರವರೆಗೆ	
		12,30,928/–	01.04.2012 ರಿಂದ 30.06.2012	ಆಯುಕ್ತರು(ಮನವಿ)
		17,86,173/–	ಜುಲೈ 2012 ರಿಂದ ಸೆಪ್ಟೆಂಬರ್ 2013	ಆಯುಕ್ತರು(ಮನವಿ)

ಶಾಸನದ ಹೆಸರು	ಬಾಕಿಯ ಸ್ವರೂಪ	ಬಾಕಿ ರೂ.ಗಳಲ್ಲಿ	ಅವಧಿ	ವಿವಾದ ಬಾಕಿ ಇರುವ ವೇದಿಕೆ
ಸೇವಾ ತೆರಿಗೆ	ತಾಂತ್ರಿಕ ತಪಾಸಣೆ ಹಾಗೂ ಪ್ರಮಾಣೀಕರಣ ಸಂಬಂಧವಾಗಿ ಹೋಗಿ ಬರುವ ಶುಲ್ಕ	3,62,972/–	ಏಪ್ರಿಲ್ 2010 ರಿಂದ ಸೆಪ್ಟೆಂಬರ್ 2010	CESTAT
		1,94,104/–	ಏಪ್ರಿಲ್ 2011 ರಿಂದ ಸೆಪ್ಟೆಂಬರ್ 2011	
		3,75,086/–	ಅಕ್ಟೋಬರ್ 2011 ರಿಂದ ಮಾರ್ಚ್2012	
ಸೇವಾ ತೆರಿಗೆ	ಠೇವಣಿಗಳು, ಉಳಿಸಿಕೊಂಡ ಹಣ, 3 ವರ್ಷಗಳ ನಂತರ ಹಿಂಪಾವತಿಗಾಗಿ ಆದಾಯವೆಂದು ವರ್ಗಾಯಿಸಲ್ಪಟ್ಟ ನಿರ್ಣಯಕ್ಕೆ ಬಾಕಿ ಇರುವ ವಸೂಲು ಮಾಡಿದ ದಂಡ	14,86,38,823/–	01.07.2012 ರಿಂದ 30.03.2015	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ
		22,42,464/–	ಏಪ್ರಿಲ್ 2015 ರಿಂದ ಸೆಪ್ಟೆಂಬರ್ 2016	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ
ಸೇವಾ ತೆರಿಗೆ	ಉಸ್ತುವಾರಿ ಶುಲ್ಕ	1,96,62,528/–	ಜುಲೈ 2012 ರಿಂದ ಆಗಸ್ಟ್ 2014	CESTAT
ಸೇವಾ ತೆರಿಗೆ	ಕರ್ನಾಟಕ ಸರ್ಕಾರಕ್ಕೆ ಪಾವತಿಸಿದ ಖಾತರಿ ಕಾರ್ಯಬಾರಿ ಶುಲ್ಕ	72,344/–	ಏಪ್ರಿಲ್ 2012 ರಿಂದ ಮಾರ್ಚ್ 2013 ಮತ್ತು ಜುಲೈ 2012 ರಿಂದ ಮಾರ್ಚ್ 2013	CESTAT
ಕೇಂದ್ರೀಯ ಸರಕು ಹಾಗೂ ಸೇವಾ ತೆರಿಗೆ ಕಾಯಿದೆ, 2017	ತಡ ಪಾವತಿಗಾಗಿ ಬಡ್ಡಿ	6,78,448/–	ಆಗಸ್ಟ್ 2017ರಿಂದ ಡಿಸೆಂಬರ್ 2019	ಆಯುಕ್ತರು(ಉತ್ತರ)
ಆದಾಯ ತೆರಿಗೆ ಕಾಯಿದೆ 1961	ಹಿಂಪಾವತಿಯಿಂದ ಬಾಕಿಗಳ ಹೊಂದಾಣಿಕೆ	86,26,972/–	ನಿರ್ಧರಣ ವರ್ಷ 2009–10	ಆದಾಯ ತೆರಿಗೆಯ ಸಹಾಯಕ ಆಯುಕ್ತರು(ಎ.ಸಿ.ಐ.ಟಿ)
		73,03,387/–	ನಿರ್ಧರಣ ವರ್ಷ 2009–10(ಎಫ್.ಬಿ.ಟಿ)	
		33,013/–	ನಿರ್ಧರಣ ವರ್ಷ 2012–13	
		80,73,980	ನಿರ್ಧರಣ ವರ್ಷ 2015–16	
ಆದಾಯ ತೆರಿಗೆ ಕಾಯಿದೆ 1961	ಬಂಡವಾಳ ಲಾಭದ ಮೇಲೆ ಕೋರಿದ ಆದಾಯ ತೆರಿಗೆ ಬಾಕಿ	2,92,99,051/–	ನಿರ್ಧರಣ ವರ್ಷ 2012–13	ಆಯುಕ್ತರು, ಆದಾಯ ತೆರಿಗೆ, ಮನವಿಗಳು(ಸಿ.ಐ.ಟಿ[ಎ])
	ಹಿಂಪಾವತಿಯಿಂದ ಬಾಕಿಗಳ ಹೊಂದಾಣಿಕೆ	65,60,637/–	ನಿರ್ಧರಣ ವರ್ಷ 2014–15	ಜಂಟಿ ಆಯುಕ್ತರು, ಆದಾಯ ತೆರಿಗೆ(ಜಿ.ಸಿ.ಐ.ಟಿ)

ಶಾಸನದ ಹೆಸರು	ಬಾಕಿಯ ಸ್ವರೂಪ	ಬಾಕಿ ರೂ.ಗಳಲ್ಲಿ	ಅವಧಿ	ವಿವಾದ ಬಾಕಿ ಇರುವ ವೇದಿಕೆ
	ಅನನುಮತಿ ಪ್ರಯುಕ್ತ ಕೋರಿದ ಆದಾಯ ತೆರಿಗೆ ಬಾಕಿ(ಆ.ವ.2019–20ರಲ್ಲಿ ಮುನ್ ಠೇವಣಿ ಎಂದು ರೂ.12,04,420 ಪಾವತಿಸಿದೆ)	60,22,111/–	ನಿರ್ಧರಣ ವರ್ಷ 2017–18	ಆಯುಕ್ತರು, ಆದಾಯ ತೆರಿಗೆ, ಮನವಿಗಳು(ಸಿ.ಐ.ಟಿ[ಎ])

(viii) ನಮ್ಮ ಅಭಿಪ್ರಾಯದಂತೆ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಬ್ಯಾಂಕುಗಳಿಗೆ, ಆರ್ಥಿಕ ಸಂಸ್ಥೆಗಳಿಗೆ ಹಾಗೂ ಸರ್ಕಾರಕ್ಕೆ ಸಾಲ ಮರುಪಾವತಿಯ ವಿಷಯದಲ್ಲಿ ತಪ್ಪಿತಸ್ಥವಾಗಿಲ್ಲ. ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಯ ಪ್ರಕಾರ ಸಾಲಪತ್ರ ವಿತರಣೆಯ ಮೂಲಕ ಕಂಪನಿಯು ಯಾವುದೇ ಹಣ ಸೌಲಭ್ಯವನ್ನು ಪಡೆದಿಲ್ಲ.

(ix) ನಮ್ಮ ಅಭಿಪ್ರಾಯದಂತೆ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು, ಸಾಲ ಲಿಖಿತ ಪತ್ರಗಳನ್ನೂ ಒಳಗೊಂಡಂತೆ,ಪ್ರಾರಂಭಿಕ ಸಾರ್ವಜನಿಕ ವಿತರಣೆ ಅಥವಾ ಮುಂದುವರಿದ ಸಾರ್ವಜನಿಕ ವಿತರಣೆ ಮೂಲಕ ಯಾವುದೇ ಹಣ ಸೌಲಭ್ಯವನ್ನು ಪಡೆದಿಲ್ಲ. ನಿರ್ದಿಷ್ಟ ಬಂಡವಾಳ ಕಾಮಗಾರಿಗಳಿಗಾಗಿ ಬ್ಯಾಂಕುಗಳಿಂದ ಪಡೆದ ನಿರ್ದಿಷ್ಟ ವಾಯಿದೆ ಸಾಲಗಳಿಗೆ ಸಂಬಂಧಿಸಿದಂತೆ, ಈ ಸಾಲಗಳನ್ನು ಇತರೆ ಉದ್ದೇಶಗಳಿಗೂ ಬಳಸಲಾಗಿದೆ ಎಂಬುದು ನಮ್ಮ ಅಭಿಪ್ರಾಯ. ಲಭ್ಯವಿರುವ ಮಾಹಿತಿಯ ಪ್ರಕಾರ ಇದರ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗಲಿಲ್ಲ. ಕಾರ್ಯಶೀಲ ಬಂಡವಾಳ ಉದ್ದೇಶಗಳಿಗಾಗಿ ಬ್ಯಾಂಕುಗಳಿಂದ ಪಡೆದ ಅಲ್ಪಾವಧಿ ಸಾಲಗಳಿಗೆ ಸಂಬಂಧಿಸಿದಂತೆ, ಯಾವ ಉದ್ದೇಶಕ್ಕಾಗಿ ಸಾಲ ಪಡೆಯಲಾಗಿತ್ತೋ, ಅದೇ ಉದ್ದೇಶಕ್ಕಾಗಿ ಆ ಸಾಲದ ಮೊಬಲಗನ್ನು ಉಪಯೋಗಿಸಲಾಗಿದಿಯೇ ಎಂಬುದರ ಬಗ್ಗೆ ನಾವು ಅಭಿಪ್ರಾಯ ನೀಡಲು ಆಗುವುದಿಲ್ಲ.

(x) ನಮ್ಮ ಅತ್ಯುತ್ತಮ ತಿಳಿವಳಿಕೆ, ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ನಮ್ಮ ಪರಿಶೋಧನೆಯ ಸಮಯದಲ್ಲಿ ಕಂಪನಿಯಿಂದ ಅಥವಾ ಕಂಪನಿಗೆ ಯಾವುದೇ ವಂಚನೆ ಆಗಿರುವುದು ಕಂಡುಬಂದಿಲ್ಲ/ವರದಿಯಾಗಿಲ್ಲ ಅಥವಾ ಅಂತಹವುಗಳ ಬಗ್ಗೆ ಆಡಳಿತ ಮಂಡಳಿಯಿಂದ ನಮಗೆ ಮಾಹಿತಿ ಇಲ್ಲ. ಆದರೂ, ಗಂಭೀರ ಸ್ವರೂಪದ ನಿಯಮ ವಿರುದ್ಧತೆಗಳ ಆರೋಪಕ್ಕೊಳಗಾಗಿ ಇಲಾಖಾ ವಿಚಾರಣೆಯನ್ನು ಎದುರಿಸುತ್ತಿರುವ ಉದ್ಯೋಗಿಗಳ ಪ್ರಕರಣಗಳಲ್ಲಿ, ವಿಚಾರಣೆ ಪೂರ್ಣಗೊಂಡನಂತರವಷ್ಟೇ ಪ್ರಕರಣಗಳ ಸ್ವರೂಪವನ್ನು ಗೊತ್ತುಪಡಿಸಿಕೊಳ್ಳಬಹುದಾಗಿದೆ ಎಂದು ನಮಗೆ ತಿಳಿಸಲಾಗಿದೆ.

(xi) ಕಂಪನಿಯು ಸರ್ಕಾರದ ಸಂಸ್ಥೆಯಾಗಿರುವುದರಿಂದ, ದಿನಾಂಕ 05.06.2015ರ ಎಂ.ಸಿ.ಎ.ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463[ಇ] ಅಧಿಸೂಚನೆಯ ಪ್ರಕಾರ, ವ್ಯವಸ್ಥಾಪಕ ಮಂಡಳಿಯ ಸಂಭಾವನೆಗೆ ಸಂಬಂಧಿಸಿದಂತೆ, ಕಂಪನಿ ಕಾಯಿದೆ, 2013ರ ಅನುಸೂಚಿ 197ರ ನಿಯಮಗಳಿಂದ ವಿನಾಯಿತಿ ಪಡೆದಿದೆ. ಹೀಗಾಗಿ, ಕಂಪನಿ (ಪರಿಶೋಧಕರ ವರದಿ) ಆದೇಶ, 2016 ಕಲಮು 3[xi)ರಲ್ಲಿ ಉಲ್ಲೇಖಿಸಿರುವ ವಿಷಯಗಳ ಬಗ್ಗೆ ನಾವು ವರದಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(xii) ನಮ್ಮ ಅಭಿಪ್ರಾಯ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಲ್ಲ. ಹೀಗಾಗಿ, ಕಂಪನಿ (ಪರಿಶೋಧಕರ ವರದಿ) ಆದೇಶ, 2016 ಕಲಮು 3[xi)ರಲ್ಲಿ ಉಲ್ಲೇಖಿಸಿರುವ ವಿಷಯಗಳ ಬಗ್ಗೆ ನಾವು ವರದಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiii) ಕಂಪನಿಯು ಸರ್ಕಾರದ ಸಂಸ್ಥೆಯಾಗಿರುವುದರಿಂದ, ಕಂಪನಿಯು ದಿನಾಂಕ 05.06.2015ರ ಎಂ.ಸಿ.ಎ. ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463[ಇ] ಅಧಿಸೂಚನೆಯ ಪ್ರಕಾರ, ಸಂಬಂಧಿತ ಗಣ್ಯ ವ್ಯಕ್ತಿಗಳೊಂದಿಗಿನ ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ಕಂಪನಿ ಕಾಯಿದೆ, 2013ರ ಅನುಸೂಚಿ 177 ಹಾಗೂ 188ರ ನಿಯಮಗಳಿಂದ ವಿನಾಯಿತಿ ಪಡೆದಿದೆ. ಹೀಗಾಗಿ, ಕಂಪನಿ (ಪರಿಶೋಧಕರ ವರದಿ) ಆದೇಶ, 2016 ಕಲಮು 3[xii)ರಲ್ಲಿ ಉಲ್ಲೇಖಿಸಿರುವ ವಿಷಯಗಳ ಬಗ್ಗೆ ನಾವು ವರದಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiv) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳು ಮತ್ತು ದಾಖಲೆ ದಸ್ತಾವೇಜುಗಳ ನಮ್ಮ ಪರಿಶೀಲನೆಯನ್ನು ಆಧರಿಸಿ, ಕಂಪನಿಯು ಪ್ರಸಕ್ತ ವರ್ಷದಲ್ಲಿ ಯಾವುದೇ ಆದ್ಯತಾ ಷೇರು ಅಥವ ಷೇರುಗಳ ಖಾಸಗೀ ನಿಯೋಜಕತ್ವ ಅಥವಾ ಪೂರ್ಣ ಅಥವಾ ಭಾಗಶಃ ಪರಿವರ್ತಿತ ಸಾಲಪತ್ರಗಳನ್ನಾಗಿ ಮಾಡಿಲ್ಲ. ಹೀಗಾಗಿ ಆದೇಶದ ಕಲಮು 3[xiv) ಅನ್ವಯಿಸುವುದಿಲ್ಲ.

(xv) ನಮ್ಮ ಅಭಿಪ್ರಾಯ ಹಾಗೂ ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಪ್ರಸಕ್ತ ವರ್ಷದಲ್ಲಿ ಕಂಪನಿಯು ತನ್ನ ನಿರ್ದೇಶಕರುಗಳು ಅಥವಾ ಅವರೊಂದಿಗೆ ಸಂಪರ್ಕವಿರುವ ವ್ಯಕ್ತಿಗಳೊಂದಿಗೆ ಯಾವುದೇ ನಗದು ರೂಪದಲ್ಲಿಲ್ಲದ ವ್ಯವಹಾರಗಳನ್ನು ಕೈಗೊಂಡಿಲ್ಲ. ಹೀಗಾಗಿ ಕಂಪನಿ ಕಾಯಿದೆ, 2013ರ ಅನುಸೂಚಿ 192ರ ಅವಕಾಶಗಳ ಅನುಸಾರದ ಕಂಪನಿ (ಪರಿಶೋಧಕರ ವರದಿ) ಆದೇಶ, 2016 ಕಲಮು 3[xv)ರಲ್ಲಿ ಉಲ್ಲೇಖಿಸಿರುವ ವಿಷಯಗಳ ಬಗ್ಗೆ ನಾವು ವರದಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(xvi) ನಮ್ಮ ಅಭಿಪ್ರಾಯ ಹಾಗೂ ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿಯು ಬ್ಯಾಂಕಿಂಗ್ ಅಲ್ಲದ ಆರ್ಥಿಕ ಸಂಸ್ಥೆಯಲ್ಲ. ಹೀಗಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ,1934ರ ಅನುಸೂಚಿ 45–IA ಅಡಿಯಲ್ಲಿ ಕಂಪನಿಯನ್ನು ನೋಂದಾಯಿಸಬೇಕಾದ ಅಗತ್ಯವಿಲ್ಲ.

ಬಿ.ಪಿ.ರಾವ್ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003116 ಎಸ್

ಸಹಿ/–
ಬಿ.ಸತೀಶ್‌ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ 024559

ಸ್ಥಳ: ಬೆಂಗಳೂರು
ದಿನಾಂಕ:22–03–2021
ಯು.ಡಿ.ಐ.ಎನ್:212024559ಎಎಎಡಿಆರ್9595

"ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ ಬಿ"

(ಸಮಸಂಖ್ಯೆ ದಿನಾಂಕದ ನಮ್ಮ ವರದಿಯ 'ಇತರ ಕಾನೂನು ಮತ್ತು ನಿಯಂತ್ರಿತ ಅಗತ್ಯತೆಗಳ ಮೇಲಿನ ವರದಿ'ಯ ಕಂಡಿಕೆ 3(ಎಚ್)ನಲ್ಲಿ ಉಲ್ಲೇಖಿಸಿದೆ)

ಕಂಪನಿ ಕಾಯಿದೆ, 2013ರ ಅನುಸೂಚಿ 143ರ ಉಪ ಅನುಸೂಚಿ 3ರ ಕಲಮು(I) ರ ಅಡಿಯಲ್ಲಿ ಅಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ

2020ರ ಮಾರ್ಚ್ 31ರಂದಿಗೆ ಹಾಗೂ ಆ ದಿನಾಂಕದಂದಿಗೆ ಅಂತ್ಯಗೊಂಡ ವರ್ಷಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಭಾರತೀಯ ಲೆಕ್ಕ ಪದ್ಧತಿ ತತ್ವಗಳ(ಭಾ.ಲೆ.ಪ.ತತ್ವ) ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಸಂಬಂಧಿಸಿದ ಆರ್ಥಿಕ ವರದಿಗಳ ಮೇಲೆ ಅಂತರಿಕ ಆರ್ಥಿಕ ನಿಯಂತ್ರಣಗಳನ್ನು ಲೆಕ್ಕಪರಿಶೋಧನೆ ನಡೆಸಿದ್ದೇವೆ.

ಅಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ಆಡಳಿತ ವರ್ಗದ ಜವಾಬ್ದಾರಿ

ಆರ್ಥಿಕ ವರದಿಗಳ ಮೇಲಿನ ಅಂತರಿಕ ಆರ್ಥಿಕ ನಿಯಂತ್ರಣಗಳ ಪರಿಶೋಧನೆಯ ಸಂಬಂಧವಾಗಿ, ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು(ಐ.ಸಿ.ಐ.ಎ) ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ("ಮಾರ್ಗದರ್ಶಕ ಟಿಪ್ಪಣಿ")ಯಲ್ಲಿ ತಿಳಿಸಿರುವ ಅಂತರಿಕ ನಿಯಂತ್ರಣಗಳ ಅಗತ್ಯಾಂಶಗಳನ್ನು ಪರಿಗಣಿಸಿ ಕಂಪನಿಯು ಅನುಷ್ಠಾನಗೊಳಿಸಿರುವ ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧದ ಮೂಲತತ್ವಗಳನ್ನು ಉಲ್ಲೇಖಿಸಿ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಅಂತರಿಕ ನಿಯಂತ್ರಣವನ್ನು ಆಧರಿಸಿದ ಅಂತರಿಕ ಆರ್ಥಿಕ ನಿಯಂತ್ರಣಗಳನ್ನು ನಿರ್ವಹಿಸಿ ಅನುಷ್ಠಾನಗೊಳಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿ ಕಾಯಿದೆ, 2013ರಲ್ಲಿ ಅಗತ್ಯಪಡಿಸಿರುವಂತೆ, ಈ ಜವಾಬ್ದಾರಿಗಳು ವಿನ್ಯಾಸ, ಅನುಷ್ಠಾನ ಹಾಗೂ ಕಂಪನಿಯ ಕಾರ್ಯನೀತಿ, ಆಸ್ತಿಗಳನ್ನು ಕಾಪಾಡಿಕೊಳ್ಳುವುದು, ಮೋಸ/ವಂಚನೆ ಹಾಗೂ ಲೋಪದೋಶಗಳನ್ನು ಪತ್ತೆ ಮಾಡಿ ತಡೆಯುವುದು, ಲೆಕ್ಕೀಕರಣದಲ್ಲಿ ನಿಖರತೆ ಹಾಗೂ ಪರಿಪೂರ್ಣತೆ ಇವುಗಳನ್ನೊಳಗೊಂಡಂತೆ ಕ್ರಮಬದ್ಧ ಹಾಗೂ ಸಮರ್ಥವಾದ ತನ್ನ ವ್ಯವಹರಣೆಯ ಕಾರ್ಯವನ್ನು ಖಚಿತಪಡಿಸಿಕೊಳ್ಳಲು, ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ಅಗತ್ಯ ಪ್ರಮಾಣದ ಅಂತರಿಕ ಆರ್ಥಿಕ ನಿಯಂತ್ರಣದ ಅನುಷ್ಠಾನ ಹಾಗೂ ನಿರ್ವಹಣೆ ಮತ್ತು ಸಕಾಲದಲ್ಲಿ ವಿಶ್ವಸನೀಯ ಆರ್ಥಿಕ ಮಾಹಿತಿಗಳನ್ನು ಸಿದ್ಧಪಡಿಸುವುದನ್ನು ಒಳಗೊಂಡಿದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಪರಿಶೋಧನಾ ಕಾರ್ಯವನ್ನು ಆಧರಿಸಿ, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲೆ ಕಂಪನಿಯ ಅಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನಮ್ಮ ಜವಾಬ್ದಾರಿಯಾಗಿರುತ್ತದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ ಹಾಗೂ ಪರಿಶೋಧನಾ ಗುಣಮಾನಕಗಳ ಪ್ರಕಾರ ನಾವು ಲೆಕ್ಕಪರಿಶೋಧನೆಯನ್ನು ನಡೆಸಿದ್ದು, ಕಂಪನಿ ಕಾಯಿದೆ, 2013ರ ಅನುಸೂಚಿ 143(10)ರ ಅಡಿಯಲ್ಲಿ ನಿಗದಿಪಡಿಸಿರುವ ರೀತ್ಯಾ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಅಂತರಿಕ ಆರ್ಥಿಕ ನಿಯಂತ್ರಣಗಳ ಪರಿಶೋಧನೆಗೆ ಅನ್ವಯಿಸುವುದರ ಮಟ್ಟಿಗೆ ಹಾಗೂ ಭಾ.ಚಾ.ಅ.ಸಂಸ್ಥೆಯು ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ ಮಟ್ಟಿಗೆ ಇದೆ ಎಂದು ಭಾವಿಸಲಾಗಿದೆ. ಆ ಗುಣಮಟ್ಟ ಹಾಗೂ ಮಾರ್ಗದರ್ಶಕ ಟಿಪ್ಪಣಿಯು, ನಾವು ನೈತಿಕ ಅಗತ್ಯತೆ ಹಾಗೂ ಯೋಜನೆಯನ್ನು ಪಾಲಿಸಿ, ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲೆ ಸಾಕಷ್ಟು ಪ್ರಮಾಣದ ಅಂತರಿಕ ಆರ್ಥಿಕ ನಿಯಂತ್ರಣಗಳನ್ನು ಹೊಂದಿರುವ ಹಾಗೂ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಅಂತಹ ನಿಯಂತ್ರಣಗಳು ಭೌತಿಕ

ಅಂಶಗಳ ವಿಷಯದಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಂಡಿತ್ತೇ ಎಂಬ ಯುಕ್ತಾತೀತ ಖಚಿತತೆಯನ್ನು ಪಡೆದುಕೊಳ್ಳಲು ಪರಿಶೋಧನೆಯನ್ನು ನಡೆಸುವುದನ್ನು ಅಗತ್ಯಪಡಿಸುತ್ತವೆ.

ನಮ್ಮ ಲೆಕ್ಕ ಪರಿಶೋಧನೆಯು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ, ಆರ್ಥಿಕ ವರದಿ ಸಲ್ಲಿಕೆಯ ಮೇಲೆ ಸಾಕಷ್ಟು ಪ್ರಮಾಣದ ಅಂತರಿಕ ಆರ್ಥಿಕ ನಿಯಂತ್ರಣ ವ್ಯವಸ್ಥೆಯ ಬಗ್ಗೆ ಹಾಗೂ ಪರಿಣಾಮಕಾರಿ ಕಾರ್ಯಾಚರಣೆಯ ಬಗ್ಗೆ ಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆದುಕೊಳ್ಳುವ ಕಾರ್ಯಸಾಧನೆಯ ವಿಧಿವಿಧಾನಗಳನ್ನು ಒಳಗೊಳ್ಳುತ್ತದೆ. ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ, ಆರ್ಥಿಕ ವರದಿಗಳ ಮೇಲೆ ಕಂಪನಿಯ ಅಂತರಿಕ ಅರ್ಥಿಕ ನಿಯಂತ್ರಣಗಳ ನಮ್ಮ ಲೆಕ್ಕಪರಿಶೋಧನೆಯು, ಭಾ.ಲೆ.ಪ. ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂ, ಆರ್ಥಿಕ ವರದಿಗಳ ಮೇಲೆ ಕಂಪನಿಯ ಅಂತರಿಕ ಅರ್ಥಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಭೌತಿಕ ಕೊರತೆಯು ಇರುವುದರ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದು, ಅಂತಹ ಗೊತ್ತುಪಡಿಸಿಕೊಂಡ ಅಪಾಯದ ಪ್ರಮಾಣವನ್ನು ಆಧರಿಸಿ ಅಂತರಿಕ ನಿಯಂತ್ರಣದ ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ವಿನ್ಯಾಸವನ್ನು ಸಿದ್ಧಪಡಿಸಿ ಪರೀಕ್ಷಿಸುವುದನ್ನು ಒಳಗೊಂಡಿದೆ. ಆಯ್ಕೆ ಮಾಡಿಕೊಂಡ ಕಾರ್ಯವಿಧಾನವು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕವಾಗಿ ತಪ್ಪು ನಿರೂಪಣೆ ಇರುಬಹುದಾದ ಅಪಾಯವು ಮೋಸ/ವಂಚನೆ ಅಥವಾ ಲೋಪದೋಶದ್ದಾಗಿತ್ತೇ ಎಂಬುದನ್ನು ಗೊತ್ತುಪಡಿಸಿಕೊಳ್ಳುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನಾಭಿಪ್ರಾಯವನ್ನು ಅವಲಂಬಿಸಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನೆಯ ಸಾಕ್ಷ್ಯಾಧಾರಗಳು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲೆ ಕಂಪನಿಯ ಅಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ನಮ್ಮ ಔಚಿತ್ಯ ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಸಲ್ಲಿಸಲು ಅವಶ್ಯಕ ಪ್ರಮಾಣದಲ್ಲಿ ಹಾಗೂ ಯುಕ್ತವಾಗಿವೆ ಎಂದು ನಂಬಿದ್ದೇವೆ.

ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಅಂತರಿಕ ಆರ್ಥಿಕ ನಿಯಂತ್ರಣಗಳ ಅರ್ಥ:

ಕಂಪನಿಯೊಂದರ, ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲಿನ ಅಂತರಿಕ ಆರ್ಥಿಕ ನಿಯಂತ್ರಣಗಳು, ಸರ್ವಸಾಮಾನ್ಯವಾಗಿ ಒಪ್ಪಿಕೊಂಡ ಲೆಕ್ಕೀಕರಣ ತತ್ವಗಳ ಪ್ರಕಾರ ಬಾಹ್ಯ ಉದ್ದೇಶಗಳಿಗಾಗಿ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಿ, ಅದರ ಸಂಬಂಧವಾದ ಆರ್ಥಿಕ ವರದಿಗಳ ವಿಶ್ವಸನೀಯತೆಯ ಬಗ್ಗೆ ಯುಕ್ತ ಖಚಿತತೆಯನ್ನು ಒದಗಿಸಲು ವಿನ್ಯಾಸಗೊಳಿಸಿರುವ ಒಂದು ಪ್ರಕ್ರಿಯೆ. ಆ ಕಂಪನಿಯ ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲಿನ ಅಂತರಿಕ ಆರ್ಥಿಕ ನಿಯಂತ್ರಣಗಳು, ಮುಂದಿನವುಗಳ ಸಂಬಂಧವಾದ ಕಾರ್ಯನೀತಿ ಹಾಗೂ ವಿಧಾನಗಳನ್ನು ಒಳಗೊಂಡಿವೆ;(1) ಕಂಪನಿಯ ಆಸ್ತಿಗಳ ವ್ಯವಹಾರ ಹಾಗೂ ವಿಲೇವಾರಿಗಳ ಸಂಬಂಧವಾಗಿ ಸಮಂಜಸ ವಿವರ, ನಿಖರತೆ ಹಾಗೂ ನೈಜ ದಾಖಲೆಗಳ ನಿರ್ವಹಣೆ (2) ಸರ್ವಸಾಮಾನ್ಯವಾಗಿ ಒಪ್ಪಿತವಾದ ಲೆಕ್ಕೀಕರಣ ತತ್ವಗಳ ಅನುಸಾರ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಅಗತ್ಯ ವ್ಯವಹರಣೆಗಳನ್ನು ದಾಖಲಿಸಲು ಹಾಗೂ ಕಂಪನಿಯ ಆಡಳಿತ ವ್ಯವಸ್ಥಾಪಕ ಮಂಡಳಿ ಹಾಗೂ ನಿರ್ದೇಶಕರುಗಳ ಅಧಿಕೃತ ಒಪ್ಪಿಗೆಯೊಂದಿಗೆ ಸಂಸ್ಥೆಯ ಸ್ವೀಕೃತಿ ಹಾಗೂ ವೆಚ್ಚಗಳನ್ನು ಕೈಗೊಳ್ಳಲು ಯುಕ್ತ ಖಚಿತತೆಯನ್ನು ಒದಗಿಸುವುದು (3) ಕಂಪನಿಯ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲೆ ಭೌತಿಕ ಪರಿಣಾಮ ಬೀರಬಹುದಾದ ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನಪಡಿಸಿಕೊಳುವಿಕೆ, ಬಳಕೆ ಅಥವಾ ವಿಲೇವಾರಿಗಳನ್ನು ಸಕಾಲದಲ್ಲಿ ಪತ್ತೆ ಮಾಡುವುದು ಹಾಗೂ ತಡೆಯುವುದರ ಬಗ್ಗೆ ಯುಕ್ತ ಖಚಿತತೆಯನ್ನು ಒದಗಿಸುವುದು.

ಭಾರತೀಯ ಲೆಕ್ಕಪದ್ಧತಿ ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಸಂಬಂಧಿಸಿದ ಅಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಮಿತಿಗಳು

ವಂಚನೆ ಅಥವಾ ನಿಯಂತ್ರಣಗಳನ್ನು ಮೀರಿದ ಅನುಚಿತ ಆಡಳಿತ ವ್ಯವಸ್ಥೆಯನ್ನೂ ಒಳಗೊಂಡಂತೆ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲಿರುವ ಅಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಮಿತಿಯಿಂದಾಗಿ, ಲೋಪ ಅಥವಾ ಮೋಸದಿಂದಾಗಿ ಭೌತಿಕ ತಪ್ಪು ನಿರೂಪಣೆಗಳು ಉಂಟಾಗಬಹುದು ಹಾಗೂ ಅವುಗಳನ್ನು ಕಂಡುಹಿಡಿಯಲಾಗದಿರಬಹುದು. ಅಲ್ಲದೆ, ಭವಿಷ್ಯದಲ್ಲಿ, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಸಂಬಂಧಿಸಿದ ಆರ್ಥಿಕ ವರದಿಗಳ ಮೇಲೆ ಅಂತರಿಕ ಆರ್ಥಿಕ ನಿಯಂತ್ರಣದ ಯಾವುದೇ ಮೌಲ್ಯೀಕರಣ ಕಲ್ಪನೆಗಳು ಅಪಾಯಕಾರಿಯಾಗಬಹುದಾಗಿದ್ದು, ಪರಿಸ್ಥಿತಿಯ ಬದಲಾವಣೆ ಅಥವಾ ಕಾರ್ಯನೀತಿ ಅಥವಾ ಕಾರ್ಯಪ್ರಕ್ರಿಯೆಗಳ ಅನುಸರಣೆಯ ಪ್ರಮಾಣವು ಕ್ಷೀಣಿಸಿ, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಸಂಬಂಧವಾದ ಆರ್ಥಿಕ ವರದಿಗಳ ಮೇಲಿರುವ ಅಂತರಿಕ ಆರ್ಥಿಕ ನಿಯಂತ್ರಣಗಳು ಕೊರತೆಯುಕ್ತವಾಗಿರಬಹುದಾಗಿರುತ್ತದೆ.

ವ್ಯತಿರಿಕ್ತ ಅಭಿಪ್ರಾಯಕ್ಕೆ ಆಧಾರಗಳು

ನಮ್ಮ ಪರಿಶೋಧನೆಯನ್ನು ಆಧರಿಸಿ, ನಮ್ಮ ಅಭಿಪ್ರಾಯ ಹಾಗೂ ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, 2020ರ ಮಾರ್ಚ್ 31ರಂದಿಗೆ ಆರ್ಥಿಕ ವರದಿಗಳ ಮೇಲೆ ಕಂಪನಿಯ ಅಂತರಿಕ ಆರ್ಥಿಕ ನಿಯಂತ್ರಣದಲ್ಲಿ ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ಪ್ರಮಾಣಬದ್ಧತೆಯಲ್ಲಿ ಮುಂದೆ ತಿಳಿಸಿರುವ ಭೌತಿಕ ಕೊರತೆಗಳನ್ನು ಗುರುತಿಸಲಾಗಿದೆ:

A. ಪಿಂಚಣಿ ಹಾಗೂ ಉಪದಾನ

31.03.2006ರವರೆಗೆ ಸೇವೆಗೆ ಸೇರಿದ ಉದ್ಯೋಗಿಗಳ ಪಿಂಚಣಿ ಹಾಗೂ ಉಪದಾನದ ವಿಷಯದಲ್ಲಿ ಕಾಲಿಕ ಅಧಾರದ ಮೇಲೆ ಸ್ವತಂತ್ರ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಪಡೆದುಕೊಳ್ಳಲು ಹಾಗೂ ಪಾವತಿಸಿದ ವಂತಿಗೆ, ಲೆಕ್ಕಕ್ಕೊಳಪಡಿಸಿದ ನಿವ್ವಳ ತೀರ್ಮಾನಿತ ಪ್ರಯೋಜನಗಳ ಹೊಣೆಗಾರಿಕೆ, ಪಾವತಿಸಿದ ತೀರ್ಮಾನಿತ ಪ್ರಯೋಜನ ಹೊಣೆಗಾರಿಕೆಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಪರಿಣಾಮಕಾರಿ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಕಂಪನಿಯು ಹೊಂದಿಲ್ಲ. ಮುಂದುವರಿಸಿ, ಕಂಪನಿಯು ಪಾವತಿಸಿದ ವಂತಿಗೆಯಲ್ಲಿ ಕರ್ನಾಟಕ ಸರ್ಕಾರದ ಹೊಣೆಗಾರಿಕೆ ಪಾಲಿನ ಕೊರತೆಯು ಒಳಗೊಂಡಿರುವುದರ ಬಗ್ಗೆ ಪರಿಶೀಲಿಸಲು ಕಂಪನಿಯು ಸಾಕಷ್ಟು ನಿಯಂತ್ರಣವನ್ನು ಹೊಂದಿಲ್ಲ.

B. ಆಸ್ತಿ, ಸ್ಥಾವರ ಹಾಗೂ ಉಪಕರಣ(ಪಿ.ಪಿ.ಇ)

i) ಮುಂದಿನವುಗಳ ವಿಷಯದಲ್ಲಿ ಕಂಪನಿಯು ಪರಿಣಾಮಕಾರಿ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ:

   a. ಕಾಲಿಕವಾಗಿ, ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದಂತೆ, ಆಸ್ತಿ, ಸ್ಥಾವರ ಹಾಗೂ ಉಪಕರಣ ರಿಜಿಸ್ಟರುಗಳ ಸಂಬಂಧಿತ ಮಾಹಿತಿಯನ್ನು ಪರಿಪೂರ್ಣಗೊಳಿಸುವುದು.

   b. ವರದಿ ಸಲ್ಲಿಕೆಯ ದಿನಾಂಕದಂದಿಗೆ, ದುರ್ಬಲಗೊಳಿಸಿದ ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ಗುರುತಿಸುವಿಕೆ.

   c. ಚರಾಸ್ತಿಗಳನ್ನು ಹೊರತುಪಡಿಸಿ, ಯಾವುದೇ ನಿರ್ದಿಷ್ಟ ಕಾರ್ಯಕ್ರಮವಿಲ್ಲದ ಕಾರಣ ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ಭೌತಿಕ ಪರಿಶೀಲನೆ.

d. ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ರಿಜಿಸ್ಟರುಗಳೊಂದಿಗೆ ಚರಾಸ್ತಿಗಳ ಭೌತಿಕ ಪರಿಶೀಲನಾ ವರದಿಯ ಸಮನ್ವಯಗೊಳಿಸುವಿಕೆ.

e. ಬಂಡವಾಳೀಕರಣದ ಸಮಯದಲ್ಲಿ ಕಾರ್ಯಸ್ಥಗಿತ ವೆಚ್ಚವನ್ನು ಅಂದಾಜು ಮಾಡಿ ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ಭಾಗವೆಂದು ಗುರುತಿಸುವುದು.

ಮೇಲಿನ ಕೊರತೆಗಳು, ಕಂಪನಿಯ ಭಾರತೀಯ ಲೆಕ್ಕಪದ್ಧತಿ ತತ್ವದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ಭೌತಿಕ ತಪ್ಪು ನಿರೂಪಣೆಯೊಂದಿಗೆ ತತ್ಸಂಬಂಧ ಸವಕಳಿ ಮತ್ತು ನಿರ್ವಹಣಾ ವೆಚ್ಚದ ಮೇಲೆ ಪರಿಣಾಮ ಬೀರುವಿಕೆಗೆ ಅವಕಾಶವಾಗಬಹುದು

ii) ಭೂಮಿಯ ಸ್ವರೂಪ, ದಸ್ತಾವೇಜುಗೊಳಿಸುವಿಕೆ, ಭೂಮಿಯ ಮೌಲ್ಯೀಕರಣ, ಭೋಗ್ಯ ದ ಭೂಮಿಯ ಋಣಮುಕ್ತತೆಗಳಿಗೆ ಸಂಬಂಧಿಸಿ, ಕಂಪನಿಯ ಅಂತರಿಕ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾದ ಕಾರ್ಯಾಚರಣೆಯಲ್ಲಿಲ್ಲದಿರುವುದು ಕಂಪನಿಯ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೋಗ್ಯಾಧಾರಿತ/ಮಾನ್ಯಕೊಡುಗೆ ಮಾಲಿಕತ್ವ ಭೂಮಿಯ ಹಾಗೂ ಇದರ ಋಣಮುಕ್ತತೆಯ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಗುತ್ತದೆ.

iii) ರಿಯಾಯಿತಿ ದರದಲ್ಲಿ/ಉಚಿತವಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಲೆಕ್ಕೀಕರಣದ ವಿಷಯದಲ್ಲಿ ಕಂಪನಿಯ ಅಂತರಿಕ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾದ ಕಾರ್ಯ ನಿರ್ವಹಣೆಯಲ್ಲಿಲ್ಲದಿರುವುದು, ಆಸ್ತಿ, ಸ್ಥಾವರ ಮತ್ತು ಉಪಕರಣಗಳು, ಋಣಮುಕ್ತತೆ, ಅನುದಾನ ಹಾಗೂ ಇತರೆ ಆದಾಯಗಳ ವಿಷಯದಲ್ಲಿ ಕಂಪನಿಯ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗುತ್ತದೆ.

iv) ಮುಂದಿನವುಗಳನ್ನು ಖಚಿತಪಡಿಸಿಕೊಳುವಲ್ಲಿ ಕಂಪನಿಯ ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆಯಲ್ಲಿರಲಿಲ್ಲ:

a. ಆಸ್ತಿ, ಸ್ಥಾವರ ಮತ್ತು ಉಪಕರಣಗಳನ್ನು ಕಾರ್ಯಾನುಷ್ಠಾನಗೊಳಿಸುವ ದಿನಾಂಕದಂದಿಗೆ ಅವುಗಳ ಪರಿಪೂರ್ಣ ವೆಚ್ಚದ ಬಗ್ಗೆ.

b. ಕಂಪನಿ ಕಾರ್ಯನೀತಿಯ ಪ್ರಕಾರ ಉದ್ದೇಶಿತ ಕ್ರಮದಲ್ಲಿ ಯಥೋಚಿತ ವೆಚ್ಚ ನಮೂದು ಪುಸ್ತಕದ(ಸಿ ರಿಜಿಸ್ಟರ್) ನಿರ್ವಹಣೆ.

ಇದು, ವರದಿ ಮಾಡಿದ ದಿನಾಂಕದಂದಿಗೆ ಬಂಡವಾಳೀಕರಿಸಲ್ಪಟ್ಟ ಆಸ್ತಿ, ಸ್ಥಾವರ, ಉಪಕರಣಗಳು, ಅವುಗಳ ಸವಕಳಿ, ಗುತ್ತಿಗೆದಾರರಿಗೆ ಹೊಣೆಗಾರಿಕೆಗಳ ಕಡಿಮೆ ರೂಪಿತ/ಅಧಿಕರೂಪಿತಕ್ಕೆ ಕಾರಣವಾಗಿ ಭಾರತೀಯ ಲೆಕ್ಕಪದ್ಧತಿ ತತ್ವದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕವಾಗಿ ತಪ್ಪು ನಿರೂಪಣೆಗೆ ಫಲಿತವಾಗಬಹುದು.

v) ಕಂಪನಿ ನಿಯಮಗಳು(ಭಾರತೀಯ ಲೆಕ್ಕಪದ್ಧತಿ ತತ್ವಗಳು), 2015 ಹಾಗೂ ತದನಂತರದ ತಿದ್ದುಪಡಿಗಳ ಅಡಿಯಲ್ಲಿ ಹೊರಡಿಸಿದ ಭಾ.ಲೆ.ಪ. 23 'ಸಾಲ ಪಡೆಯುವಿಕೆ ವೆಚ್ಚ'ರ ಅನ್ವಯ ಪರಿಣಾಮಕಾರಿ ಬಡ್ಡಿ ದರ ವಿಧಾನವನ್ನು ಅನ್ವಯಿಸಿ ಬಡ್ಡಿ ವೆಚ್ಚದ ಲೆಕ್ಕಾಚಾರ ಹಾಗೂ ಸರಾಸರಿ ವಿಧಾನದ ಅಧಾರದಲ್ಲಿ ಬಂಡವಾಳೀಕರಣ ದರದ ಲೆಕ್ಕಾಚಾರಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಯು ಅಗತ್ಯ ಪ್ರಮಾಣದ ಕಾರ್ಯ ವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ,ಸ್ಥಾವರ ಹಾಗೂ ಉಪಕರಣ, ಅವುಗಳ ಸವಕಳಿ ಹಾಗೂ ಆರ್ಥಿಕ ವೆಚ್ಚಗಳಿಗೆ ಭಾರತೀಯ ಲೆಕ್ಕಪದ್ಧತಿ ತತ್ವದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕವಾಗಿ ತಪ್ಪು ನಿರೂಪಣೆಗೆ ಫಲಿತವಾಗಬಹುದು.

vi) ಕಂಪನಿಯ ವಿವಿಧ ವಿಭಾಗಗಳಲ್ಲಿ ಸಿಬ್ಬಂದಿ ವೆಚ್ಚಗಳನ್ನು, ಆಯಾ ವೆಚ್ಚಗಳನುಸಾರ ವರ್ಗೀಕರಿಸಿ ವಿತರಿಸುವುದು, ಆಸ್ತಿ,ಸ್ಥಾವರ, ಉಪಕರಣಗಳ ಮೇಲಿನ ಸಾಲ ಪಡೆಯುವಿಕೆ ವೆಚ್ಚ, ಇವುಗಳ ನಿರ್ವಹಣೆಯು ಅಸಮರ್ಪಕವಾಗಿದ್ದು, ಕಂಪನಿಯು ಅಗತ್ಯ ಪ್ರಮಾಣದ ಕಾರ್ಯ ವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ,ಸ್ಥಾವರ ಹಾಗೂ ಉಪಕರಣ, ಅವುಗಳ ಸವಕಳಿಗೆ ಭಾರತೀಯ ಲೆಕ್ಕಪದ್ಧತಿ ತತ್ವದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕವಾಗಿ ತಪ್ಪು ನಿರೂಪಣೆಗೆ ಫಲಿತವಾಗಬಹುದು.

vii) ಸಕಾಲಿಕವಾಗಿ ಅನುಷ್ಠಾನ ದೃಢೀಕರಣವನ್ನು ನೀಡುವ ವಿಷಯದಲ್ಲಿ ಕಂಪನಿಯು ಅಗತ್ಯ ಪ್ರಮಾಣದ ಕಾರ್ಯನೀತಿ ಹಾಗೂ ವಿಧಾನವನ್ನು ಹೊಂದಿಲ್ಲ. ಇದು, ಆಸ್ತಿ,ಸ್ಥಾವರ ಹಾಗೂ ಉಪಕರಣಗಳ ಶೀಘ್ರ/ವಿಳಂಬ ಬಂಡವಾಳೀಕರಣ, ಸಾಲ ಪಡೆಯುವಿಕೆ ವೆಚ್ಚ ಹಾಗೂ ಸವಕಳಿಯನ್ನೂ ಒಳಗೊಂಡಂತೆ ನಿರ್ಮಾಣ ಹಂತದಲ್ಲಿ ವೆಚ್ಚಗಳ ವರ್ಗೀಕರಣ ಹಾಗೂ ಹಂಚುವಿಕೆಯ ಮೇಲೆ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

viii) ಬಿಡುಗಡೆಗೊಳಿಸಿದ ಆಸ್ತಿಗಳಿಗೆ ಸಮುಚಿತ ಸವಕಳಿ ಒದಗಿಸುವುದು ಹಾಗೂ ಇತರ ವಿಭಾಗಗಳಿಗೆ ವರ್ಗಾಯಿಸಿದ ಆಸ್ತಿಗಳ ಸಮುಚಿತ ಮೌಲ್ಯೀಕರಣವನ್ನು ಖಚಿತಪಡಿಸಿಕೊಳ್ಳುವಲ್ಲಿ ಪರಿಣಾಮಕಾರಿ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣದ ಕೊರತೆಯಿಂದಾಗಿ, ಆಸ್ತಿ, ಸ್ಥಾವರ ಹಾಗೂ ಉಪಕರಣಗಳ ಮುಂದೊಯ್ಯಬಹುದಾದ ವೆಚ್ಚ ಹಾಗೂ ಸವಕಳಿಯ ಮೇಲೆ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

ix) ಬೃಹತ್ ಕಾಮಗಾರಿ ವಿಭಾಗದಲ್ಲಿ ಉಸ್ತುವಾರಿ ಶುಲ್ಕಗಳ ಪ್ರಯುಕ್ತ ಸಿಬ್ಬಂದಿ ವೆಚ್ಚದ ತಾಂತ್ರಿಕ ಮೌಲ್ಯೀಕರಣ ಮಾಡುವಲ್ಲಿ ಅಗತ್ಯ ಪ್ರಮಾಣದ ಕಾರ್ಯನೀತಿಯನ್ನು ಹೊಂದಿಲ್ಲ. ಇದು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಆಸ್ತಿ, ಸ್ಥಾವರ, ಉಪಕರಣಗಳ ಲೆಕ್ಕಕ್ಕೆ ತೋರಿಸುವ ಸಿಬ್ಬಂದಿ ವೆಚ್ಚ, ಅವುಗಳ ಮೇಲಿನ ಸವಕಳಿ ಹಾಗೂ ಸಿಬ್ಬಂದಿ ವೆಚ್ಚದ ಅತ್ಯಧಿಕ ನಿರೂಪಣೆಗಳ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

x) ಬಾಡಿಗೆಗೆ ನೀಡಿದ ಆಸ್ತಿ, ಸ್ಥಾವರ ಹಾಗೂ ಉಪಕರಣ, ಇವುಗಳನ್ನು **ಹೂಡಿಕೆ ಆಸ್ತಿಗಳು** ಎಂದು ಗುರುತಿಸಲು ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನವನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಆಸ್ತಿ, ಸ್ಥಾವರ ಹಾಗೂ ಉಪಕರಣಗಳು ಹಾಗೂ ಹೂಡಿಕೆ ಆಸ್ತಿಗಳನ್ನು ಪ್ರಸ್ತುತಿ ಪಡಿಸುವಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xi) ವಿನ್ಯಾಸದ ಬದಲಾವಣೆ, ದರದ ವ್ಯತ್ಯಾಸ, ಪರಿಮಾಣದಲ್ಲಿ ವ್ಯತ್ಯಯ ಇವುಗಳ ಪ್ರಯುಕ್ತ ವಿವರವಾದ ಯೋಜನೆಯನ್ನು ಸಿದ್ಧಪಡಿಸಿದ ನಂತರ ಉಂಟಾದ ಬದಲಾವಣೆಗಳನ್ನು ಪರಿಗಣಿಸಲು ವೆಚ್ಚ ಸೌಲಭ್ಯ ವಿಶ್ಲೇಷಣೆ, ಐ.ಆರ್.ಆರ್ ಹಾಗೂ ಹಿಂಪಾವತಿ ಅವಧಿಗಳ ಪರಿಷ್ಕರಣೆ ಮಾಡಲು ಕಂಪನಿಯು ಅಗತ್ಯ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು ವಾಸ್ತವಿಕ ವೆಚ ಸೌಲಭ್ಯ, ಐ.ಆರ್.ಆರ್. ಹಾಗೂ ಹಿಂಪಾವತಿ ಅವಧಿಯ ಮೇಲೆ ಪರಿಣಾಮ ಬೀರಬಹುದು.

xii) ನಿರ್ಮಾಣದ ಅವಧಿಯಲ್ಲಿ, ಅವಧಿಯ ವಿಸ್ತರಣೆಯಾಗಿ, ಆ ಹಂತದಲ್ಲಿ ಅರ್ಹತಾದಾಯಕ ಆಸ್ತಿಯ ಅಭಿವೃದ್ಧಿಯನ್ನು ಸ್ಥಗಿತಗೊಳಿಸಿದ್ದು, ಅಂತಹ ಅವಧಿಯ ವಿಸ್ತರಣೆಯ ಕಾರಣ ಆಸ್ತಿ, ಸ್ಥಾವರ, ಉಪಕರಣಗಳ ವೆಚ್ಚದ ಸಂಬಂಧವಾದ ಬಡ್ಡಿಯ ವಿನಿಯೋಗವನ್ನು ನಿರ್ಬಂಧಿಸುವಲ್ಲಿ ಕಂಪನಿಯು ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಆಸ್ತಿ, ಸ್ಥಾವರ, ಉಪಕರಣಗಳು, ಅವುಗಳ ಸವಕಳಿ ಹಾಗೂ ಬಡ್ಡಿ ವೆಚ್ಚಗಳ ಮೇಲೆ ಪೈಣಾಮ ಬೀರಬಹುದಾಗಿದೆ.

C. ಸ್ವನಿರ್ವಹಿತ ಕಾಮಗಾರಿಗಳು(ಎಸ್.ಇ.ಡಬ್ಲ್ಯು ಗಳ) ಅಥವಾ ಠೇವಣಿ ವಂತಿಗೆ ಕಾಮಗಾರಿಗಳು (ಡಿ.ಸಿ.ಡಬ್ಲ್ಯು ಗಳ)

xiii) ಸಕಾಲಿಕವಾಗಿ ಜಂಟಿ ತಪಶೀಲು ಹಾಗೂ ಆ ಸಂಬಂಧವಾದ ಮಾಹಿತಿ ಪಡೆಯಲು ಸ್ವ ನಿರ್ವಹಿತ ಕಾಮಗಾರಿ ಹಾಗೂ ಠೇವಣಿ ವಂತಿಗೆ ಕಾಮಗಾರಿಗಳ ಪ್ರತ್ಯೇಕ ರಿಜಿಸ್ಟರುಗಳನ್ನು ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಆಸ್ತಿ, ಸ್ಥಾವರ, ಉಪಕರಣಗಳ ಸಕಾಲಿಕ ಬಂಡವಾಳೀಕರಣ, ತತ್ಸಂಬಂಧ ಸವಕಳಿ, ಗ್ರಾಹಕರಿಂದ ವಂತಿಗೆ, ಖರ್ಚುಗಳು ಹಾಗೂ ಕಂದಾಯ ಮಾನ್ಯತೆಗಳ ವಿಷಯದಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xiv) ಕರ್ನಾಟಕ ವಿದ್ಯುಚ್ಛಕ್ತಿ ಜಾಲ ಸಂಹಿತೆ, 2015 ಅಗತ್ಯಪಡಿಸುವಂತೆ, ಅಂತರ್ ಸಂಪರ್ಕ ಸೌಲಭ್ಯದ ಸಮಯದಲ್ಲಿ ವಿದ್ಯುತ್ ಸಂಪರ್ಕ ಒಪ್ಪಂದದ ನಿವೇದನೆಗೆ ಸಹಿ ಹಾಕುವಿಕೆ, ಜಾಲ ಸಂಪರ್ಕದ ಅರ್ಜಿದಾರರಿಗೆ ಯಥೋಚಿತ ಅಂತರ್ ಸಂಪರ್ಕ ಅನುಮೋದನೆ ನೀಡುವಿಕೆ, ನ್ಯಾಯಸಮ್ಮತ ದರದಲ್ಲಿ ಮೌಲ್ಯೀಕರಣ ಮಾಡಿ ಸಕಾಲದಲ್ಲಿ ಕಂಪನಿಗೆ ಮೂಲಸೌಕರ್ಯದ ಹಸ್ತಾಂತರ, ಇವುಗಳನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು ಸ್ವ ನಿರ್ವಹಿತ ಕಾಮಗಾರಿ ಹಾಗೂ ಠೇವಣಿ ವಂತಿಗೆ ಕಾಮಗಾರಿಗಳ ಸಕಾಲಿಕ ಬಂಡವಾಳೀಕರಣದ ವಿಷಯದಲ್ಲಿ, ಆಸ್ತಿ, ಸ್ಥಾವರ, ಉಪಕರಣಗಳ ತತ್ಸಂಬಂಧ ಸವಕಳಿ, ಋಣಮುಕ್ತತೆ, ಗ್ರಾಹಕರಿಂದ ವಂತಿಗೆ, ಕಂದಾಯ ಮಾನ್ಯತೆ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ ಶುಕ ವಸೂಲಿಯ ವಿಷಯದಲ್ಲಿ ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xv) ಉಸ್ತುವಾರಿ ವೆಚ್ಚಗಳ ಲೆಕ್ಕೀಕರಣವು ಭಾ.ಲೆ.ಪ.ತತ್ವ 115'ಗ್ರಾಹಕರೊಂದಿಗೆ ಗುತ್ತಿಗೆ ವ್ಯವಸ್ಥೆಯಿಂದ ಕಂದಾಯ' ಅನುಸಾರ ಇರುವುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಮುಂಚಿತವಾಗಿಯೇ ಕಂದಾಯದ ಪರಿಗಣನೆಯ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xvi) ಸಕಾಲಿಕ ಕೇಳಿಕೆ, ವಸೂಲಿ, ತಡಪಾವತಿಗೆ ಸಮಾಪನ ಹಾನಿ, ಬಂಡವಾಳ ವೆಚ್ಚ ಲೆಕ್ಕಾಚಾರ, ಸ್ವಯಂ ವಿದ್ಯುತ್ ಉತ್ಪಾದಕರಿಂದ ವಸೂಲು ಮಾಡಿದ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಯನ್ನು ಪರಿಶೀಲಿಸಲು ಅಂತರಿಕ ಆರ್ಥಿಕ ನಿಯಂತ್ರಣ ಸಂಬಂಧವಾಗಿ ಕಂಪನಿಯು ಯಥೋಚಿತ ಕಾರ್ಯನೀತಿ ಹಾಗೂ ವಿಧಾನವನ್ನು ಹೊಂದಿಲ್ಲ. ಇದು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಲಾಭದ ವಿಚಾರವಾಗಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xvii) ಸ್ವ ನಿರ್ವಹಿತ ಕಾಮಗಾರಿ/ಠೇವಣಿ ವಂತಿಗೆ ಕಾಮಗಾರಿ/ಭೂಮಿ ಹಾಗೂ ಮೂಲಸೌಕರ್ಯ ನೀಡಿಕೆಯ ನಿಮಿತ್ತ ಏಕಕಾಲಿಕ ಹಿಂಪಾವತಿಯಾಗದ ಶುಲ್ಕ, ಇವುಗಳ ನಿಮಿತ್ತ ಗ್ರಾಹಕರ ವಂತಿಗೆ ಪಾವತಿ, ಭಾ.ಲೆ.ಪ.ತತ್ವ 115 'ಗ್ರಾಹಕರೊಂದಿಗೆ ಗುತ್ತಿಗೆಯಿಂದ ಕಂದಾಯ' ಅನುಸಾರ ಕಾರ್ಯಾನುಷ್ಠಾನಗೊಳಿಸಲ್ಪಟ್ಟ ಸ್ವ ನಿರ್ವಹಿತ ಕಾಮಗಾರಿ ಹಾಗೂ ಠೇವಣಿ ವಂತಿಗೆ ಕಾಮಗಾರಿಗಳ ಮೌಲ್ಯೀಕರಣ, ಇವುಗಳ ಯಥೋಚಿತ ಹಾಗೂ ಸಕಾಲಿಕ ಲೆಕ್ಕೀಕರಣಕ್ಕಾಗಿ ಕಂಪನಿಯು ಅಗತ್ಯ ಕಾರ್ಯನೀತಿ ಹಾಗೂ ವಿಧಾನಗಳನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ

ನಿರೂಪಣಾ ಪಟ್ಟಿಗಳಲ್ಲಿ ಆಸ್ತಿ, ಸ್ಥಾವರ, ಉಪಕರಣಗಳ ಸವಕಳಿ, ಕಂದಾಯ ಮಾನ್ಯತೆ, ಗ್ರಾಹಕರಿಂದ(ಗೆ)ಸ್ವೀಕೃತಿ/ಪಾವತಿಗಳ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xviii) ಸ್ವ ನಿರ್ವಹಿತ ಕಾಮಗಾರಿಯ ಅರ್ಜಿದಾರರಿಗೆ ಒದಗಿಸಿದ ಮೂಲ ಸೌಕರ್ಯದ ವೆಚ್ಚಗಳ ಲೆಕ್ಕಾಚಾರ ಹಾಗೂ ವಸೂಲಿ ಸಂಬಂಧವಾಗಿ ಕಂಪನಿಯು ಯಥೋಚಿತ ಕಾರ್ಯನೀತಿ, ವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಆಸ್ತಿ, ಸ್ಥಾವರ, ಉಪಕರಣಗಳ ಸವಕಳಿ, ಕಂದಾಯ ಮಾನ್ಯತೆ, ಕಾರ್ಯಾಚರಣೆ ನಿರ್ವಹಣೆ ವೆಚ್ಚ, ಉಸ್ತುವಾರಿ ವೆಚ್ಚದ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಬಹುದು.

D. ಕಾಮಗಾರಿ ಬಿಲ್ಲುಗಳ ಪ್ರಕ್ರಿಯೆ:

xix) ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯ ವಿಚಾರದಲ್ಲಿ ಕಂಪನಿಯು ಅಂತರಿಕ ನಿಯಂತ್ರಣ ವ್ಯವಸ್ಥೆಯು ಸಮರ್ಥ ಕಾರ್ಯನಿರ್ವಹಣೆಯಲ್ಲಿರಲಿಲ್ಲ:

a. ಕಾಮಗಾರಿ ಅಳತೆಗಾಗಿ, ಕವಿಪ್ರನಿನಿ ಕಾಮಗಾರಿ ಅಳತೆ ಪುಸ್ತಕದ ಕಲಮು 5ರ ಪ್ರಕಾರ, ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಯನ್ನು ಆಧರಿಸಿ ಎಲ್ಲಾ ಅಳತೆಗಳನ್ನು ದಾಖಲಿಸತಕ್ಕದ್ದು. ಆದಾಗ್ಯೂ, ಆಚರಣೆಯಲ್ಲಿರುವ ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಲೆಕ್ಕದ ಬಿಲ್ಲುಗಳನ್ನು ಸಿದ್ಧಪಡಿಸಿದ/ಸ್ವೀಕರಿಸಿದ ನಂತರ ಅಳತೆ ಪುಸ್ತಕದಲಿ ನಮೂದುಗಳನ್ನು ಪರಿಪೂರ್ಣಗೊಳಿಸಲಾಗುತ್ತಿದೆ.

b. ವರದಿಯ ದಿನಾಂಕದಂದಿಗೆ ಪೂರ್ಣಗೊಳಿಸಲ್ಪಟ್ಟ ಬಂಡವಾಳ/ನವೀಕರಣ ಹಾಗೂ ಆಧುನೀಕರಣ/ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ(ಪರಿಮಾಣ ವ್ಯತ್ಯಯ ಬಿಲ್ಲು ಹಾಗೂ ದರ ವ್ಯತ್ಯಾಸದ ಬಿಲ್ಲುಗಳನ್ನೂ ಒಳಗೊಂಡು)ಕೆಲಸಗಳಿಗೆ ಕಂಪನಿಯು ಯಥೋಚಿತ ಅವಕಾಶವನ್ನು ಕಲ್ಪಿಸಿಲ್ಲ.

c. ದರ ವ್ಯತ್ಯಾಸದ ಬಿಲ್ಲುಗಳು/ಪರಿಮಾಣ ವ್ಯತ್ಯಾಸದ ಬಿಲ್ಲುಗಳು/ವಸೂಲಿ ಬಿಲ್ಲುಗಳನ್ನು ಸಕಾಲಿಕವಾಗಿ ಕಾರ್ಯಪ್ರಕ್ರಿಯೆಗೆ ಒಳಪಡಿಸಿಲ್ಲ.

d. ಪಾವತಿಗಾಗಿ ಪ್ರಕ್ರಿಯೆಗೆ ಒಳಪಡಿಸುವ ಮುಂಚೆ ಕಾಮಗಾರಿಗಳ ಚಾಲ್ತಿ ಲೆಕ್ಕದ ಬಿಲ್ಲುಗಳನ್ನು ಕಂಪನಿಯ ಅಂತರಿಕ ಲೆಕ್ಕಪರಿಶೋಧಕರು ಪರ್ಶೀಲನೆಗೆ ಒಳಪಡಿಸುತ್ತಿರಲಿಲ್ಲ.

ಇದು, ಕಂಪನಿಯ ಹೊಣೆಗಾರಿಕೆ ಹಾಗೂ ಅವಕಾಶ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ, ಸ್ಥಾವರ, ಉಪಕರಣ, ಸಾಲ ಪಡೆಯುವಿಕೆ ವೆಚ್ಚವನ್ನೂ ಒಳಗೊಂಡು ಇ.ಡಿ.ಸಿ ವಿಂಗಡಣೆ, ಸವಕಳಿ, ಆಸ್ತಿ ನಿರ್ವಹಣೆಯ ವೆಚ್ಚಗಳ ಮೇಲೆ ಭೌತಿಕ ಪರಿಣಾಮವನ್ನು ಬೀರಬಹುದು.

xx) ಸಮಗ್ರ ಗುತ್ತಿಗೆಗೆ ಸಂಬಂಧಿಸಿದಂತೆ, ದರ ವ್ಯತ್ಯಯ ಹಾಗೂ ಪರಿಮಾಣ ವ್ಯತ್ಯಯಗಳ ಕ್ಲೇಮುಗಳನ್ನು ಚಾಲ್ತಿಯಲ್ಲಿರುವ ದರ ಅನುಸೂಚಿ/ಮಾರುಕಟ್ಟೆ ದರದ ಪ್ರಕಾರ ಪರಿಗಣಿಸದೆ ಗುತ್ತಿಗೆ ಒಪ್ಪಂದಿತ ದರಕ್ಕಿಂತ ಅಧಿಕ ದರದಲ್ಲಿ ಕ್ಲೇಮು ಮಾಡಿದ್ದು, ಕಂಪನಿಯು ಈ ವಿಚಾರವಾಗಿ .ಯಾಉದೇ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ, ಸ್ಥಾವರ, ಉಪಕರಣಗಳು, ಪಾವತಿಗಳು, ಸ್ವೀಕೃತಿಗಳ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಿ ಸವಕಳಿ ಹಾಗೂ ಆರ್ಥಿಕ ವೆಚ್ಚದ ಮೇಲೆ ಪರಿಣಾಮ ಬೀರಬಹುದಾಗಿದೆ.

xxi) ವಿನ್ಯಾಸ/ರೇಖಾಕೃತಿಗಳ ತಿದ್ದುಪಡಿಯಿಂದಾಗಿ ಪರಿಮಾಣ ಹಾಗೂ ಗುತ್ತಿಗೆ ಒಪ್ಪಂದಿತ ದರದ ಬದಲಾವಣೆ, ತಿದ್ದುಪಡಿ ವಿನ್ಯಾಸದ ಪ್ರಕಾರ ವಿಲೇವಾರಿ ಸೂಚನೆ ನೀಡುವಿಕೆ ಹಾಗೂ ತದರನ್ವಯ

ಸಮಗ್ರ ಗುತ್ತಿಗೆ ಪ್ರಕರಣಗಳಲ್ಲಿ ಪರಿಮಾಣಗಳಿಗೆ ಪಾವತಿಗಳ ಮೇಲೆ ನಿರ್ಬಂಧ, ಈ ವಿಚಾರಗಳಲ್ಲಿ ಕಂಪನಿಯು ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ, ಸ್ಥಾವರ, ಉಪಕರಣಗಳು, ಪಾವತಿಗಳು, ಸ್ವೀಕೃತಿಗಳ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಿ ಸವಕಳಿ ಹಾಗೂ ಆರ್ಥಿಕ ವೆಚ್ಚದ ಮೇಲೆ ಪರಿಣಾಮ ಬೀರಬಹುದಾಗಿದೆ.

xxii) ಟೆಂಡರು ದಸ್ತಾವೇಜು ಹಾಗೂ ತತ್ಸಂಬಂಧ ಸುತ್ತೋಲೆಗಳಲ್ಲಿ ಅಸ್ಪಷ್ಟತೆಯ ಕಾರಣ ಸಮಗ್ರ ಗುತ್ತಿಗೆಯ ಸ್ಥಾಪಿಸುವಿಕೆಯ ಕಾಮಗಾರಿಗೆ ಏಕೈಕವಾಗಿ ಕೂಲಿ ವೆಚ್ಚ ಮಾತ್ರ ಅನ್ವಯಿತವಾಗಿದ್ದು, ಈ ಸಂಬಂಧವಾದ ದರ ವ್ಯತ್ಯಾಸ ಕ್ಲೇಮುಗಳ ವಿಷಯದಲ್ಲಿ ಕಂಪನಿಯು ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ಆರ್ಥಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ, ಸ್ಥಾವರ, ಉಪಕರಣಗಳು, ಪಾವತಿಗಳು, ಸ್ವೀಕೃತಿಗಳ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಿ ಸವಕಳಿ ಹಾಗೂ ಆರ್ಥಿಕ ವೆಚ್ಚದ ಮೇಲೆ ಪರಿಣಾಮ ಬೀರಬಹುದಾಗಿದೆ.

E. ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆ

xxiii) ಸಾಕಷ್ಟು ಹಾಗೂ ಗುಣಮಟ್ಟದ ಮಾನವ ಶಕ್ತಿಯ ಲಭ್ಯತೆ, ಉದ್ದೇಶ, ವ್ಯವಹರಣೆಗಳ ವ್ಯಾಪ್ತಿ , ಇವುಗಳ ವಿಷಯದಲ್ಲಿ ಕಂಪನಿಯ ಆಂತರಿಕ ಲೆಕ್ಕ ಪರಿಶೋಧನಾ ಶಾಖೆಯು ಮತ್ತಷ್ಟು ಸದೃಢವಾಗಬೇಕಿದೆ. ಅಲ್ಲದೆ, ಪ್ರಸ್ತುತ ಕಾರ್ಯವ್ಯಾಪ್ತಿಗೆ ಒಳಪಟ್ಟಿಲ್ಲದ, ಪ್ರಮುಖ ಕ್ಷೇತ್ರಗಳಾದ ಆಸ್ತಿಗಳ ಬಂಡವಾಳೀಕರಣ, ಆದಾಯ ವೆಚ್ಚಗಳನ್ನು ಮಾನ್ಯಗೊಳಿಸುವುದು, ಚಾಲ್ತಿ ಲೆಕ್ಕ ಬಿಲ್ಲುಗಳ ಪರಿಶೀಲನೆ, ಇವುಗಳನ್ನು ಒಳಪಡಿಸಲು ಆಂತರಿಕ ಲೆಕ್ಕ ಪರಿಶೋಧನೆಯ ಶಾಖೆಯನ್ನು ಸದೃಢಗೊಳಿಸಬಹುದಾಗಿದೆ. ಯಥೋಚಿತ ಕಾರ್ಯಕೌಶಲತೆ ಹಾಗೂ ನೂತನ ಕಾರ್ಯತಂತ್ರಗಳಲಿ ಪರಿಣಿತಿ ಹೊಂದಲು ಆಂತರಿಕ ಲೆಕ್ಕ ಪರಿಶೋಧನಾ ಶಾಖೆಯ ಸಿಬ್ಬಂದಿ ವರ್ಗಕ್ಕೆ ನಿರಂತರ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆ ಅತ್ಯಗತ್ಯ.

xxiv) ಪಾವತಿಸಬೇಕಾದ ಶಾಸನಬದ್ಧ ಬಾಕಿಗಳ ಸಕಾಲಿಕ ಲೆಕ್ಕೀಕರಣದ ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಯುಕ್ತ ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದು ಶಾಸನಬದ್ಧ ಬಾಕಿಗಳನ್ನು ತಡವಾಗಿ ಪಾವತಿಸುವುದರ ಜೊತೆಗೆ ಅನ್ವಯಿತ ಬಡ್ಡಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಗೆ ಕಾರಣವಾಗುತ್ತದೆ.

F. ಕಂದಾಯ

xxv) ಕಾರ್ಯ ಮತ್ತು ಪಾಲನಾ ಶುಲ್ಕ, ಪ್ರಸರಣ ಶುಲ್ಕ, ಉಸ್ತುವಾರಿ ಶುಲ್ಕ, ಬಾಡಿಗೆ ಆದಾಯ, ಸಮಾಲೋಚನಾ ಶುಲ್ಕ, ಇತರರಿಗೆ ನೀಡಿದ ಭೂಮಿ ಸಂಬಂಧಿತ ಶುಲ್ಕ ಹಾಗೂ ಟರ್ಮಿನಲ್ ಬೇ, ಉತ್ತೇಜಕ, ದಂಡ ವಸೂಲಿ, ಕಂಪನಿ ಕಾಯಿದೆ (ಭಾ.ಲೆ.ಪ.ತತ್ವ) 2015 ಹಾಗೂ ತದನಂತರದ ತಿದ್ದುಪಡಿಗಳನ್ವಯ ಹೊರಡಿಸಿದ ಭಾ.ಎ.ಪ.ತತ್ವ 115" ಗ್ರಾಹಕರೊಂದಿಗೆ ಗುತ್ತಿಗೆ ಒಪ್ಪಂದದಿಂದ ಕಂದಾಯ"ದ ಅನುಸಾರವಿಲ್ಲದ ಹಿಡಿದಿಟ್ಟುಕೊಂಡಿರುವ ಹಣ ಹಾಗೂ ತೊಡೆದುಹಾಕಿದ ಭದ್ರತಾ ಠೇವಣಿ, ಇವುಗಳನ್ನು ಗುರುತಿಸುವುದು/ಕೇಳಿಕೆ/ಸಕಾಲಿಕವಾಗಿ ವಸೂಲಿ ಮಾಡುವುದು, ನಿಖರತೆಯ ಮೇಲ್ವಿಚಾರಣೆ ಹಾಗೂ ಪರಿಪೂರ್ಣತೆ, ಹಾಗೂ ಒದಗಿ ಬಂದ ಆಧಾರದ ಮೇಲೆ ಲೆಕ್ಕೀಕರಿಸುವಿಕೆಯ ವಿಷಯಗಳಲ್ಲಿ ಕಂಪನಿಯು ಅಗತ್ಯ ಪ್ರಮಾಣದ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಕಂದಾಯ, ವೆಚ್ಚಗಳು, ಆಸ್ತಿ ಹಾಗೂ ಹೊಣೆಗಾರಿಕೆಗಳ ಲೆಕ್ಕದಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದು.

xxvi) ಕವಿನಿ ಆಯೋಗ(ಪ್ರಸರಣ ಶುಲ್ಕದ ದರವನ್ನು ನಿರ್ಧರಿಸಲು ಷರತ್ತು ಹಾಗೂ ನಿಬಂಧನೆಗಳು) ವಿನಿಯಮ, 2006ನ್ನು ಅನ್ವಯಿಸಿ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮಾಡಿಕೊಂಡ ಪ್ರಸರಣ ಒಪ್ಪಂದದ ಪ್ರಕಾರ ಅಧಿಕ ಕರದ ತಡ ಪಾವತಿ/ರಿಯಾಯಿತಿಯ ವಿಚಾರದಲ್ಲಿ ವಸೂಲಿ/ಪಾವತಿ ಮಾಡಲು ಕಂಪನಿಯು ಯಥೋಚಿತ ಕಾರ್ಯನೀತಿ, ಕಾರ್ಯವಿಧಾನ, ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು ಕಂದಾಯ, ವೆಚ್ಚಗಳು, ಆಸ್ತಿ ಹಾಗೂ ಹೊಣೆಗಾರಿಕೆಗೆ ಸಂಬಂಧಿಸಿ, ಭಾರತೀಯ ಲೆಕ್ಕಪದ್ದತಿಯ್ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಭೌತಿಕ ತಪ್ಪು ನಿರೂಪಣೆಗೆ ಫಲಿತವಾಗಬಹುದಾಗಿದೆ.

xxvii) ಆಯಾ ನಿಬಂಧನೆಗಳನ್ವಯ, ಪ್ರಸರಣ ಶುಲ್ಕದ ಲೆಕ್ಕಾಚಾರದ ನಿಖರತೆ ಹಾಗೂ ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಯಥೋಚಿತ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಕಂದಾಯ ಹಾಗೂ ವ್ಯವಹರಣೆಯ ಸ್ವೀಕೃತಿಗಳ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಬಹುದು.

G. ಇತರೆ

xxviii) ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ, ಮಾನ್ಯಗೊಳಿಸುವಿಕೆ, ಅಳತೆ,ಮಂಡಿಸುವಿಕೆ ಹಾಗೂ ಪ್ರಕಟಪಡಿಸುವಿಕೆಗೆ ಸಂಬಂಧಿಸಿದಂತೆ, ಭಾರತೀಯ ಲೆಕ್ಕತತ್ವ ಪದ್ಧತಿಯ ಪೂರ್ಣಾನುಸರಣೆಯನ್ನು ಮಾಡುವಲ್ಲಿ ಕಂಪನಿಯು ಯಥೋಚಿತ ಕಾರ್ಯನೀತಿ ಹಾಗೂ ವಿಧಾನಗಳನ್ನು ಹೊಂದಿಲ್ಲ.

xxix) ಕಂಪನಿಯ ಟೆಂಡರಿಂಗ್ ಹಾಗೂ ಸಂಗ್ರಹಣೆ ಶಾಖೆಯು ಅನುಸರಿಸುತ್ತಿರುವ ಕಾರ್ಯವಿಧಾನಗಳ ಸಮುಚಿತವನ್ನು ಖಚಿತಪಡಿಸಿಕೊಳ್ಳಲು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ತದನ್ವಯ ನಿಯಮಗಳ ಪಾಅನೆ ಮಾಡುತ್ತಿರುವ ಬಗ್ಗೆ ಕಂಪನಿಯು ನಿರ್ದಿಷ್ಟ ಕಾರ್ಯಾಚರಣೆ ವಿಧಾನವನ್ನು ಹೊಂದಿಲ್ಲ.

xxx) ಗುತ್ತಿಗೆದಾರರಿಂದ ಪಡೆದ ಮುಂಗಡ ಭದ್ರತಾ ಠೇವಣಿ ಹಾಗೂ ಇತರ ಠೇವಣಿಗಳ ಲೆಕ್ಕಸಮನ್ವಯಗೊಳಿಸುವಿಕೆ ಹಾಗೂ ಸ್ಥಿರೀಕರಣಗೊಳಿಸುವುದು ಮತ್ತು ಕಂಪನಿ ಕಾರ್ಯನೀತಿಯ ಪ್ರಕಾರ ಮುಂಗಡ ಭದ್ರತಾ ಠೇವಣಿ/ಭದ್ರತಾ ಠೇವಣಿಯ ಕ್ರೆಡಿಟ್ ಶಿಲ್ಕನ್ನು ಇಳಿತಗೊಳಿಸಿ ಆದಾಯವೆಂದು ಪರಿಗಣಿಸುವಲ್ಲಿ ಕಂಪನಿಯ ಯುಕ್ತ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಪ್ರಸಕ್ತ ಹೊಣೆಗಾರಿಕೆ ಹಾಗೂ ಕಂದಾಯಗಳ ಲೆಕ್ಕದಲ್ಲಿ ಭೌತಿಕ ತಪ್ಪು ನಿರೂಪಣೆಗೆ ಕಾರಣವಾಗಬಹುದಾಗಿದೆ.

xxxi) ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಅಡಕಗಳ ಮೇಲೆ ಭೌತಿಕವಾಗಿ ಪರಿಣಾಮ ಬೀರಬಹುದಾದಂತಹ ಕ್ಲಿಷ್ಟ ಅಂದಾಜುಗಳು ಹಾಗೂ ತೀರ್ಮಾನಗಳನ್ನು ಗುರುತಿಸುವಿಕೆಯ ಯುಕ್ತತೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಯಥೋಚಿತ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ.

xxxii) ಕಂಪನಿ(ಭಾರತೀಯ ಲೆಕ್ಕಪದ್ಧತಿ ತತ್ವಗಳು)ನಿಯಮಗಳು, 2015 ಹಾಗೂ ತದನಂತರದ ತಿದ್ದುಪಡಿಗಳನ್ವಯ ಹೊರಡಿಸಿರುವ ಭಾ.ಲೆ.ಪ.ತತ್ವ 109 'ಆರ್ಥಿಕ ಲಿಖಿತಪತ್ರಗಳು' ಪ್ರಕಾರ ಆರ್ಥಿಕ ಆಸ್ತಿಗಳು ಮತ್ತು ಆರ್ಥಿಕ ಹೊಣೆಗಾರಿಕೆಗೆ ಸಂಬಂಧಿಸಿದಂತೆ, ಇತರ ಸಮಗ್ರ ಆದಾಯದ ಮೂಲಕ ನ್ಯಾಯಯುತ ಮೌಲ್ಯ, ಲಾಭ ಮತ್ತು ನಷ್ಟದ ಮೂಲಕ ನ್ಯಾಯಯುತ ಮೌಲ್ಯಗಳನ್ನು ಅಳೆಯಲು ಕಂಪನಿಯು ಅಗತ್ಯ ಕಾರ್ಯವಿಧಾನವನ್ನು ಹೊಂದಿಲ್ಲ.

xxxiii) ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ, 2006ರ ಅಡಿಯಲ್ಲಿನ ಗುತ್ತಿಗೆದಾರರನ್ನು ಗುರುತಿಸಿ, ಭಾ.ಲೆ.ಪ.ತತ್ವ.ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಈ ಮಾಹಿತಿಗಳನ್ನು ಪ್ರಕಟಪಡಿಸಲು ಕಂಪನಿಯು ಯಥೋಚಿತ ಕಾರ್ಯನೀತಿ ಹಾಗೂ ವಿಧಾನಗಳನ್ನು ಹೊಂದಿಲ್ಲ. ಇದು ಭಾ.ಲೆ.ಪ.ತತ್ವ.ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಅಗತ್ಯ ಮಾಹಿತಿಗಳ ಭೌತಿಕ ತಪ್ಪು ನಿರೂಪಣೆಗೆ ಅವಕಾಶ ಕಲ್ಪಿಸಬಹುದಾಗಿದೆ.

xxxiv) ಪ್ರಸಕ್ತ/ಪ್ರಸಕ್ತದ್ದಲ್ಲದ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಗುರುತು ಮಾಡಲು ಕಂಪನಿಯು ಯಥೋಚಿತ ಕಾರ್ಯನೀತಿ ಹಾಗೂ ವಿಧಾನಗಳನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಗಳ ಮಂಡಿಸುವಿಕೆಯ ಮೇಲೆ ಭೌತಿಕ ತಪ್ಪು ನಿರೂಪಣೆ ಬೀರುವ ಸಾಧ್ಯತೆ ಇದೆ.

xxxv) ಪೂರ್ವಾವಧಿ ಅಂಶಗಳನ್ನು ಗುರುತಿಸಿ ವರದಿ ಮಾಡುವುದರ ಸಂಬಂಧವಾಗಿ ಕಂಪನಿಯು ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಪ್ರಸಕ್ತ ವರ್ಷದ ಲಾಭ ಅಥವಾ ನಷ್ಟದ ವರದಿ ಮಾಡುವಿಕೆ ಹಾಗೂ ವ್ಯವಹರಣೆಯ ಸ್ವರೂಪದ ಮೇಲೆ ಭೌತಿಕ ತಪ್ಪು ನಿರೂಪಣೆ ಬೀರುವ ಸಾಧ್ಯತೆ ಇದೆ.

xxxvi) ಹೊಸ ನಿಬಂಧನೆಗಳು/ಅಧಿಸೂಚನೆಗಳು/ಸುತ್ತೋಲೆಗಳು/ಆದೇಶಗಳು/ನಿರ್ದೇಶನಗಳು/ಕೇಂ.ವಿ.ನಿ. ಆಯೋಗ, ಕ.ವಿ.ನಿ. ಆಯೋಗ, ಕೇಂದ್ರ ಕಚೇರಿಗಳ ಯಾವುದೇ ತಿದ್ದುಪಡಿಗಳು/ಇತರ ಯಾವುದೇ ಶಾಸನಬದ್ಧತೆಗಳನ್ನು ಸಕಾಲಿಕವಾಗಿ ಅಳವಡಿಸಿಕೊಂಡು ಅನುಷ್ಠಾನಗೊಇಸುವುದಕ್ಕೆ ಕಂಪನಿಯು ಅಗತ್ಯ ಕಾರ್ಯವಿಧಾನಗ್ಳನ್ನು ಹೊಂದಿಲ್ಲ. ಇದು, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕ ತಪ್ಪು ನಿರೂಪಣೆಗಳಿಗೆ ಸಾಧ್ಯತೆ ಇದೆ.

xxxvii) ಗುತ್ತಿಗೆದಾರರಿಂದ ಸ್ವೀಕರಿಸಿದ ವಿಳಂಬ ಮನ್ನಾ ಅರ್ಜಿಗಳಿಗೆ ಸಂಬಂಧಿಸಿದಂತೆ, ಆಯಾ ವಿಭಾಗಗದಲ್ಲಿ ಸೂಕ್ತ ರಿಜಿಸ್ಟರುಗಳನ್ನು ನಿರ್ವಹಿಸುವುದಕ್ಕೆ ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಕಂಪನಿ ಕಾರ್ಯನೀತಿಗಳನ್ವಯ, ವಸೂಲಿ ಮಾಡಿದ ದಂಡದ ಮೊಬಲಗನ್ನು ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಕಂದಾಯವೆಂದು ಮಾನ್ಯ ಮಾಡುವುದಕ್ಕೆ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

xxxviii) ಕಂಪನಿ(ಭಾರತೀಯ ಲೆಕ್ಕಪದ್ಧತಿ ತತ್ವಗಳು)ನಿಯಮಗಳು, 2015 ಹಾಗೂ ತದನಂತರದ ತಿದ್ದುಪಡಿಗಳನ್ವಯ ಹೊರಡಿಸಿರುವ ಭಾ.ಲೆ.ಪ.ತತ್ವ 19 'ಸಿಬ್ಬಂದಿ ಸೌಲಭ್ಯಗಳು' ಪ್ರಕಾರ ಸಿಬ್ಬಂದಿ ಸೌಲಭ್ಯಗಳಿಗೆ ಸಂಬಂಧಿಸಿದ ಹೊಣೆಗಾರಿಕೆಯ ಲೆಕ್ಕಾಚಾರ ಮಾಡಲು ಕಂಪನಿಯು ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ.

xxxix) ವಿವಿಧ ಪ್ರಾಧಿಕಾರಗಳಿಂದ ಸ್ವೀಕರಿಸಿದ ಅನುದಾನಗಳ ಉಸ್ತುವಾರಿ, ಅನುದಾನದ ಸ್ವೀಕೃತಿ ಹಾಗೂ ಬಳಕೆಯ ಲೆಕ್ಕೀಕರಣ ಮತ್ತು ಅನುಸರಣೆಗಳಿಗೆ ಸಂಬಂಧಿಸಿದಂತೆ, ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ.

xl) ಆದಾಯ ಹಾಗೂ ನಮೂನೆ 26 ಎ.ಎಸ್‌ನಲ್ಲಿ ಬಿಂಬಿಸಿರುವ ಮೂಲ ಆದಾಯದ ಮೇಲೆ ಹಿಡಿದುಕೊಂಡ ತೆರಿಗೆ, ಇವುಗಳನ್ನು ಲೆಕ್ಕಪುಸ್ತಕಗಳಲ್ಲಿ ಲೆಕ್ಕಕ್ಕೊಳಪಡಿಸಿ ಲೆಕ್ಕಸಮನ್ವಯಗೊಳಿಸಲು ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಮುಂಗಡ ತೆರಿಗೆ ಪಾವತಿ, ಕಂದಾಯ, ಗ್ರಾಹಕರಿಂದ ಮುಂಗಡ, ವ್ಯವಹರಣೆ ಸ್ವೀಕೃತಿಗಳ ಲೆಕ್ಕಾಚಾರ ಮಾಡುವುದರ ಮೇಲೆ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

xli) ಸಂಗ್ರಹಣೆಯ ಸಮಯದಲ್ಲಿ ಬಂಡವಾಳ ಬಿಡಿ ಭಾಗಗಳ ಬಂಡವಾಳೀಕರಣ, ತಪಶೀಲು ಮೌಲ್ಯೀಕರಣದ ಮೇಲೆ ಸ್ಥಿರತೆ, ಸಕಾಲಿಕವಾಗಿ ಹಳೆಯ/ಅನುಪಯುಕ್ತ ಸಾಮಗ್ರಿಗಳನ್ನು

ರದ್ದಿಗೊಳಿಸುವುದು ಇವುಗಳ ಸಂಬಂಧವಾಗಿ ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅತಿ ಕಡಿಮೆ ನಿರೂಪಣೆ, ತಪಶೀಲಿನ ಅತಿಹೆಚ್ಚು/ಅತಿಕಡಿಮೆ ನಿರೂಪಣೆಯನ್ನು ಬಿಂಬಿಸುವುದಕ್ಕೆ ಕಾರಣವಾಗಬಹುದಾಗಿದೆ.

xlii) ಸಂಬಂಧಿತ ಗ್ರಾಹಕರು/ಗುತ್ತಿಗೆದಾರರು/ಸರಬರಾಜುದಾರರ ವರದಿಯ ದಿನಾಂಕದಂದಿಗೆ ಬಾಕಿ ಶಿಲ್ಕನ್ನು ಲೆಕ್ಕಸಮನ್ವಯಗೊಳಿಸಲು ಕಂಪನಿಯು ಅಗತ್ಯ ಪ್ರಮಾಣದ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದು, ಭಾ.ಲೆ.ಪ.ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಗಳ ಅತಿ ಹೆಚ್ಚು/ಕಡಿಮೆ ನಿರೂಪಣೆಗೆ ಅವಕಾಶವಾಗಬಹುದಾಗಿದೆ.

xliii) ವಸತಿ ಗೃಹಗಳ ದುರಸ್ತಿ ಹಾಗೂ ನಿರ್ವಹಣಾ ವೆಚ್ಚಗಳ ಸಂಬಂಧವಾಗಿ ಭರಿಸಿದ ವೆಚ್ಚವನ್ನು ಬೇಡಿಕೆ ಮತ್ತು ವಸೂಲಿಯ ಆಧಾರದ ಮೇಲೆ ಕಂಪನಿಯು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಹಂಚಿಕೊಳ್ಳುವ ಸ್ಥಿರತೆಗೆ ಸಂಬಂಧಿಸಿದಂತೆ, ಪರಿಣಾಮಕಾರಿ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣದ ಕೊರತೆಯು ಆ ವರ್ಷದ ನಿರ್ವಹಣ ವೆಚ್ಚದ ಭೌತಿಕ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

xliv) ವರದಿ ಮಾಡಿದ ದಿನಾಂಕದಂದಿಗೆ, ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಸಾದಿಲ್ವಾರು ಹೊಣೆಗಾರಿಕೆ/ಆಸ್ತಿಗಳಿಗೆ ಅವಕಾಶ ಕಲ್ಪಿಸುವಿಕೆ ಅಥವಾ ವಿಲೇವಾರಿಯ ಲೆಕ್ಕಾಚಾರ ಮಾಡಲು ಕಂಪನಿಯು ಅಗತ್ಯ ಅಂತರಿಕ ನಿಯಂತ್ರಣದ ವ್ಯವಸ್ಥೆಯನ್ನು ಹೊಂದಿಲ್ಲ.

xlv) ಅಗೋಚರ ಆಸ್ತಿಗಳ ಗುರುತುಪಡಿಸುವಿಕೆ/ಅಳತೆ/ಬಂಡವಾಳೀಕರಣ ಹಾಗೂ ಋಣಮುಕ್ತತೆಗೊಳಿಸುವ ವಿಷಯದಲ್ಲಿ ಪರಿಣಾಮಕಾರಿ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣದ ಕೊರತೆಯು, ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ, ಅಂತಹ ಅಗೋಚರ ಆಸ್ತಿಗಳ ಭೌತಿಕ ತಪ್ಪು ನಿರೂಪಣೆ ಹಾಗೂ ತದನ್ವಯ ಋಣಮುಕ್ತತೆಯ ಪರಿಣಾಮ ಬೀರಬಹುದಾಗಿದೆ.

H. ಸಾಂಸ್ಥಿಕ ವರದಿ ಸಲ್ಲಿಕೆ ಪ್ರಕ್ರಿಯೆ

xlvi) ಆಯಾ ವಿಭಾಗದ ಲೆಕ್ಕಾಧಿಕಾರಿಯು ಸಂಬಂಧಿತ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ, ಆಯಾ ವೃತ್ತದ ಉಪಲೆಕ್ಕ ನಿಯಂತ್ರಣಾಧಿಕಾರಿಯು ಸಂಬಂಧಿತ ಅಧೀಕ್ಷಕ ಇಂಜಿನಿಯರ್(ವಿ)ರವರಿಗೆ, ಆಯಾ ವಲಯದ ಲೆಕ್ಕನಿಯಂತ್ರಣಾಧಿಕಾರಿಯು ಸಂಬಂಧಿತ ಮುಖ್ಯ ಇಂಜಿನಿಯರ್(ವಿ)ರವರಿಗೆ ವರದಿ ಮಾಡಿಕೊಳ್ಳತಕ್ಕದ್ದು.

ಮೇಲಿನ ವರದಿ ಮಾಡಿಕೊಳ್ಳುವ ಪ್ರಕ್ರಿಯೆಯು, ಬಿಲ್ಲು ಪ್ರಕ್ರಿಯೆ ಮತ್ತು ಪಾವತಿ ವ್ಯವಸ್ಥೆಯಲ್ಲಿ ಲೆಕ್ಕಾಧಿಕಾರಿಯ ಅಧಿಕಾರ ಸ್ವಾತಂತ್ರವನ್ನು ದುರ್ಬಲಗೊಳಿಸಬಹುದು. ಕಾರ್ಯನಿರತವಾಗಿ, ಲೆಕ್ಕಾಧಿಕಾರಿಯು ಉಪ ಲೆಕ್ಕ ನಿಯಂತ್ರಣಾಧಿಕಾರಿಗೆ, ಉಪಲೆಕ್ಕನಿಯಂತ್ರಣಾಧಿಕಾರಿಯು ಲೆಕ್ಕನಿಯಂತ್ರಣಾಧಿಕಾರಿಗೆ, ಲೆಕ್ಕನಿಯಂತ್ರಣಾಧಿಕಾರಿಯು ಆರ್ಥಿಕ ಸಲಹೆಗಾರರಿಗೆ(ಆಮತ್ತುಸಂ) ವರದಿ ಮಾಡಿಕೊಳ್ಳುವಂತೆ ಆಡಳಿತಾತ್ಮಕ ವ್ಯವಸ್ಥೆಯನ್ನು ರೂಪಿಸಬೇಕು.

I. ಗಣಕೀಕರಣ

xlvii) ಕೇಂದ್ರ ಕಚೇರಿಗೆ ಸಲ್ಲಿಸುವ ವರದಿಗಳಿಗೆ ಸಂಬಂಧಿಸಿದಂತೆ, ನಿಖರತೆಯೊಂದಿಗೆ ಸಕಾಲಿಕವಾಗಿ ಆರ್ಥಿಕ ವರದಿ ಸಲ್ಲಿಸಲು ಹಾಗೂ ಲೆಕ್ಕೀಕರಣ ಹಾಗೂ ಗಣನೆಯ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಲೆಕ್ಕೀಕರಣ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಒಂದು ಪರಿಣಾಮಕಾರಿಯಾದ ಕಾರ್ಯವಿಧಾನ ಮತ್ತು ಅಂತರಿಕ ಆರ್ಥಿಕ ನಿಯಂತ್ರಣವನ್ನು ವಿಕಸನಗೊಳಿಸಬಹುದಾಗಿದೆ.

ಗಣಕೀಕರಣದ ಅನುಪಸ್ಥಿತಿಯು ಭಾರತೀಯ ಲೆಕ್ಕಪದ್ಧತಿ ತತ್ವಗಾನುಸಾರದ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

xlviii) ಉದ್ದೇಶಿತ ಪ್ರಯೋಜನಗಳನ್ನು ಪಡೆದುಕೊಳ್ಳುವ ಸಲುವಾಗಿ ಬಿಲ್ಲು ಪಥಕರಣ, ತಪಶೀಲು ನಿರ್ವಹಣಾ ವ್ಯವಸ್ಥೆ, ಕಂದಾಯ ವೆಚ್ಚಗಳ ಬಿಲ್ ಪಥಕರಣ ವ್ಯವಸ್ಥೆ, ಯೋಜನಾ ಉಸ್ತುವಾರಿ ವ್ಯವಸ್ಥೆ, ಇಂತಹ ಪ್ರಚಲಿತ ಅನ್ವಯಿಸುವಿಕೆ/ಮಾಹಿತಿ ಪದ್ಧತಿಯು ಪರಿಣಾಮಕಾರಿಯಾಗಿ ಸಮರ್ಥವಾಗಿ ಅನುಷ್ಠಾನಗೊಳಿಸಿರುವುದನ್ನು ಹಾಗೂ ನಿರಂತರ ಉಸ್ತುವಾರಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಯಥೋಚಿತ ಕಾರ್ಯವಿಧಾನ ಹಾಗೂ ಅಂತರಿಕ ನಿಯಂತ್ರಣವನ್ನು ಹೊಂದಿಲ್ಲ.

ಭಾರತೀಯ ಲೆಕ್ಕಪದ್ಧತಿ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಸಂಬಂಧಿಸಿದ ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಅಂತರಿಕ ಆರ್ಥಿಕ ನಿಯಂತ್ರಣದಲ್ಲಿನ **ಭೌತಿಕ ದುರ್ಬಲತೆಯು** ಒಂದು ಕೊರತೆ ಅಥವಾ ಕೊರತೆಗಳ ಸಮೂಹವಾಗಿದ್ದು, ಇದರಿಂದ ಕಂಪನಿಯ ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳಲ್ಲಿ ಭೌತಿಕ ತಪ್ಪು ನಿರೂಪಣೆಗಳನ್ನು ತಡೆಗಟ್ಟಲಾಗದ ಅಥವಾ ಸಕಾಲಿಕವಾಗಿ ಕಂಡುಹಿಡಿಯಲಾಗದ ಸಾಧ್ಯತೆಗಳಿವೆ.

ವಿರೋಧಾತ್ಮಕ ಅಭಿಪ್ರಾಯ

ನಮ್ಮ ಅಭಿಪ್ರಾಯ ಹಾಗೂ ನಮ್ಮ ಅತ್ಯುತ್ತಮ ತಿಳಿವಳಿಕೆಯ ಪ್ರಕಾರ ಹಾಗೂ ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯ ಅಭಿಪ್ರಾಯ ನೀಡಿಕೆ ನಿರಾಕರಣೆಯ ಭಾಗದಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಸಾಧ್ಯತೆ ಹಾಗೂ ನಿಯಂತ್ರಣ ಪ್ರಮಾಣದ ಉದ್ದೇಶಗಳ ಸಾಧನೆಯ ಸಂಬಂಧವಾಗಿ ಮೇಲಿನ ವಿರೋಧಾತ್ಮಕ ಅಭಿಪ್ರಾಯದ ಆಧಾರದಲ್ಲಿ ವಿವರಿಸಿರುವ ಭೌತಿಕ ದುರ್ಬಲತೆಯ ಪ್ರಯುಕ್ತ, ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಹೊರಡಿಸಿರುವ ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಅಂತರಿಕ ಆರ್ಥಿಕ ನಿಯಂತ್ರಣದ ಪರಿಶೋಧನೆಯ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ತಿಳಿಸಿರುವ ಅಂತರಿಕ ನಿಯಂತ್ರಣಗಳ ಅಗತ್ಯಾಂಶಗಳನ್ನು ಪರಿಗಣಿಸಿಕಂಪನಿಯು ಸ್ಥಾಪಿಸಿದ ಆರ್ಥಿಕ ವರದಿ ಸಲ್ಲಿಕೆಯ ಮೇಲಿನ ಅಂತರಿಕ ನಿಯಂತ್ರಣವನ್ನು ಆಧರಿಸಿ ಕಂಪನಿಯು 2020ರ ಮಾರ್ಚ್ 31ರ ದಿನಾಂಕದಂದಿಗೆ ಆರ್ಥಿಕ ನಿರೂಪಣಾ ವರದಿಗಳ ಮೇಲೆ ಕಂಪನಿಯು ಯಥೋಚಿತ ಹಾಗೂ ಪರಿಣಾಮಕಾರಿ ಅಂತರಿಕ ಆರ್ಥಿಕ ನಿಯಂತ್ರಣವನ್ನು ನಿರ್ವಹಿಸಿಲ್ಲ.

2020ರ ಮಾರ್ಚ್ 31ರಂದು ಅಂತ್ಯಗೊಂಡ ವರ್ಷಕ್ಕೆ ಕಂಪನಿಯ ಭಾರತೀಯ ಲೆಕ್ಕಪದ್ಧತಿ ತತ್ವಗಳಡಿಯಲ್ಲಿನ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಲೆಕ್ಕಪರಿಶೋಧನೆಯಲ್ಲಿ ಅನ್ವಯಿಸಿರುವ ಸ್ವರೂಪ, ಕಾಲಬದ್ಧತೆ, ಪರಿಶೋಧನಾ ಪರೀಕ್ಷೆಯ ಮಟ್ಟವನ್ನು ಗೊತ್ತುಪಡಿಸಿಕೊಳ್ಳಲು, ಮೇಲೆ ಗುರುತುಪಡಿಸಿ ವರದಿ ಮಾಡಿರುವ ಭೌತಿಕ ದುರ್ಬಲತೆಗಳನ್ನು ಪರಿಗಣಿಸಿದ್ದೇವೆ. ಕಂಪನಿಯ ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಅಭಿಪ್ರಾಯಗಳ ಮೇಲೆ ಈ ಭೌತಿಕ ದುರ್ಬಲತೆಗಳು ಪರಿಣಾಮ ಬೀರಿದ್ದು, ಕಂಪನಿಯ ಈ ಆರ್ಥಿಕ ನಿರೂಪಣಾ ಪಟ್ಟಿಯ ಸಂಬಂಧವಾಗಿ ನಾವು ನಮ್ಮ ಅಭಿಪ್ರಾಯ ನೀಡಿಕೆ ನಿರಾಕರಣೆಯನ್ನು ತಿಳಿಸಿದ್ದೇವೆ.

ಬಿ.ಪಿ.ರಾವ್ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003116 ಎಸ್

ಸಹಿ/–
ಬಿ.ಸತೀಶ್‌ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ 024559

ಸ್ಥಳ: ಬೆಂಗಳೂರು
ದಿನಾಂಕ:22–03–2021
ಯು.ಡಿ.ಐ.ಎನ್:212024559ಎಎಎಡಿಆರ್9595

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ 'ಅನುಬಂಧ ಸಿ'

(ಸಮ ಸಂಖ್ಯೆ ದಿನಾಂಕದ ನಮ್ಮ ವರದಿಯ 'ಇತರ ಕಾನೂನು ಮತ್ತು ನಿಯಂತ್ರಿತ ಅಗತ್ಯತೆಗಳ ಮೇಲಿನ ವರದಿ'ಯ ಕಂಡಿಕೆ 3(ಜೆ)ನಲ್ಲಿ ಉಲ್ಲೇಖಿಸಿದೆ)

A.ನಿರ್ದೇಶನಗಳು

(ಕಂಪನಿ ಕಾಯಿದೆ, 2013ರ ಅನುಸೂಚಿ 143(5)ರ ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ(ಕಂಪನಿ) ಸದಸ್ಯರಿಗೆ, 2020ರ ಮಾರ್ಚ್ 31ರ ದಿನಾಂಕದಂದಿಗೆ ಅಂತ್ಯಗೊಂಡ ವರ್ಷಕ್ಕೆ, ಸಮ ದಿನಾಂಕದ ನಮ್ಮ ವರದಿಯಲ್ಲಿ ಉಲ್ಲೇಖಿಸಿರುವ ಅನುಬಂಧ)

ಕ್ರ. ಸಂ.	ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
1.	ತನ್ನ ಎಲ್ಲಾ ಲೆಕ್ಕನಿರ್ವಹಣೆ ವ್ಯವಹರಣೆಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಪ್ರಕ್ರಿಯೆಗೊಳಿಸುವ ಸೌಲಭ್ಯವನ್ನು ಹೊಂದಿದೆಯೇ? ಹೌದಾದರೆ, ಆರ್ಥಿಕ ಪರಿಣಾಮಗಳ ಸಹಿತ ಸಮಗ್ರ ಲೆಕ್ಕನಿರ್ವಹಣೆಯ ಮೇಲೆ, ಪ್ರಭಾವ ಬೀರಬಹುದಾದ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಹೊರತುಪಡಿಸಿದ ಅಂತಹ ಲೆಕ್ಕನಿರ್ವಹಣಾ ಕಾರ್ಯಪ್ರಕ್ರಿಯೆಗಳು ಯಾವುದಾದರೂ ಇದ್ದರೆ ತಿಳಿಸುವುದು	ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಪ್ರಸ್ತುತ ಕಂಪನಿಯು ತನ್ನ ಲೆಕ್ಕನಿರ್ವಹಣೆಯ ಪುಸ್ತಕ ಹಾಗೂ ದಾಖಲೆದಸ್ತಾವೇಜುಗಳನ್ನು ಮಾನವಶಕ್ತಿಯ ಮೂಲಕ ನಿರ್ವಹಿಸುತ್ತಿದೆ. ಆದಾಗ್ಯೂ, ಕಂಪನಿಯಲ್ಲಿ ಮುಂದೆ ತಿಳಿಸಿರುವ ಪ್ರಮುಖ ವ್ಯವಹರಣೆಗಳನ್ನು ಸ್ವನಿರ್ವಹಿತ ಪ್ರಕ್ರಿಯೆಗೊಳಪಡಿಸಲಾಗಿದೆ. 1. ಇ–ಸಂಗ್ರಹಣೆ 2. ಅಂತಿಮ ಲೆಕ್ಕಗಳ ಸಮನ್ವಯಗೊಳಿಸುವಿಕೆ 3. ಅಂತರ ಘಟಕ ಲೆಕ್ಕಗಳ ವ್ಯವಹರಣೆ ಹಾಗೂ ತೀರುವಳಿ 4. ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ 5. ಕಂದಾಯ ವೆಚ್ಚಗಳ ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ ವ್ಯವಸ್ಥೆಯ ಉದ್ದೇಶಿತ ಪ್ರಯೋಜನಗಳನ್ನು ಪಡೆಯಲು ಮೇಲಿನ ಮಾಹಿತಿ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಿ ಅನುಷ್ಠಾನಗೊಳಿಸಿ ನಿರಂತರ ಉಸ್ತುವಾರಿಯಲ್ಲಿರಿಸಬೇಕಾಗಿದೆ. ಕೈಗೊಂಡಿರುವ ಕಾಮಗಾರಿಗಳ ವೆಚ್ಚ ನಮೂದು ಪುಸ್ತಕಗಳ ಲೆಕ್ಕನಿರ್ವಹಣೆಯನ್ನು ಬರವಣಿಗೆಯ ಮೂಲಕ ಲೆಕ್ಕಪುಸ್ತಕಗಳಲ್ಲಿ ದಾಖಲಿಸಲಾಗುತ್ತಿದೆ. ಕಂಪನಿ ಕಾರ್ಯನೀತಿಯ ಪ್ರಕಾರ ಹೊಂದಿರುವ ಉದ್ದೇಶಗಳ ರೀತ್ಯಾ ವೆಚ್ಚ ನಮೂದು ಪುಸ್ತಗಳ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು, ಕಂಪನಿಯು ಲೆಕ್ಕೀಕರಣ, ವರದಿ ಮಾಡುವಿಕೆ ಹಾಗೂ ಉಸ್ತುವಾರಿ ವ್ಯವಸ್ಥೆಯನ್ನು ಸದೃಢಗೊಳಿಸಬೇಕಾಗಿದೆ. ಆದ್ದರಿಂದ, ವೆಚ್ಚನಮೂದು ಪುಸ್ತಕ, ನಿರ್ಮಾಣದ ಸಮಯದಲ್ಲಿ ಭರಿಸಿದ ಖರ್ಚಿನ ಹಂಚಿಕೆ ಹಾಗೂ ವಿನಿಯೋಗ ಮತ್ತು ಬಂಡವಾಳೀಕರಣದ ಇತರ ಪ್ರಕ್ರಿಯೆಗಳನ್ನು ಸಮಗ್ರವಾಗಿ ಗಣಕೀಕರಣಗೊಳಿಸಬೇಕಾಗಿದೆ. ಲೆಕ್ಕನಿರ್ವಹಣೆಯನ್ನು ಗಣಕೀಕರಣಗೊಳಿಸಲು ವ್ಯವಸ್ಥಾಪಕ ಮಂಡಳಿಯು ಸಮಗ್ರ ವ್ಯವಸ್ಥೆಯ ಬಗ್ಗೆ ಯೋಜಿಸುತ್ತಿದೆ. ಇ.ಆರ್.ಪಿ.ಪರಿಹಾರ ಅನುಷ್ಠಾನಕ್ಕಾಗಿ ವಿವರವಾದ ಕಾರ್ಯಯೋಜನೆಯನ್ನು ಅನುಮೋದಿಸಲಾಗಿದೆ. ಇದರ ಟೆಂಡರ್ ಪ್ರಕ್ರಿಯೆ ಚಾಲನಗೊಂಡಿದೆ.

ಕ್ರ. ಸಂ.	ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
2.	ಕಂಪನಿಗೆ ಸಾಲ ನೀಡಿರುವವರು, ಕಂಪನಿಯು ಅಂತಹವರಿಗೆ ಸಾಲ ತೀರಿಸುವ ಹೊಣೆಗಾರಿಕೆಯ ಪ್ರಯುಕ್ತ ಹಾಲಿ ಇರುವ ಸಾಲ/ಮನ್ನಾ ಪ್ರಕರಣ/ಸಾಲ, ಬಡ್ಡಿ ಇತ್ಯಾದಿಗಳನ್ನು ತೊಡೆದುಹಾಕಿರುವ ವಿಷಯಕ್ಕೆ ಸಂಬಂಧಿಸಿ ಯಾವುದೇ ಪುನಾರಚನೆಯನ್ನು ಪಾಡಿರುವರೇ?, ಹಾಗಿದ್ದಲ್ಲಿ ಅದರ ಮೇಲಿನ ಆರ್ಥಿಕ ಪರಿಣಾಮವನ್ನು ತಿಳಿಸುವುದು	ವ್ಯವಸ್ಥಾಪಕ ಮಂಡಳಿಯು ಒದಗಿಸಿರುವ ಮಾಹಿತಿ ಹಾಗೂ ನಾವು ನಡೆಸಿದ ಪರಿಶೀಲನೆಯನ್ನು ಆಧರಿಸಿ, ಹಾಲಿ ಇರುವ ಸಾಲ/ಮನ್ನಾ ಪ್ರಕರಣ/ಸಾಲ, ಬಡ್ಡಿ ಇತ್ಯಾದಿಗಳನ್ನು ತೊಡೆದುಹಾಕಿರುವ ಯಾವುದೇ ಪ್ರಕರಣಗಳು ಕಂಡುಬಂದಿಲ್ಲ.
3.	ನಿರ್ದಿಷ್ಟ ಯೋಜನೆಗಳಿಗೆ ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ಸ್ವೀಕರಿಸಿದ/ ಪಡೆಯಬೇಕಾದ ಹಣವನ್ನು, ಆ ಷರತ್ತು ಹಾಗೂ ನಿಬಂಧನೆಗಳನ್ವಯ ಸೂಕ್ತ ಲೆಕ್ಕೀಕರಣಕ್ಕೆ ಒಳಪಡಿಸಲಾಗಿದೆಯೇ/ಆ ಉದ್ದೇಶಕ್ಕೆ ಬಳಸಲಾಗಿದೆಯೇ. ವಿಪಥನವಾದ ಪ್ರಕರಣಗಳನ್ನು ಪಟ್ಟಿ ಮಾಡುವುದು.	ವ್ಯವಸ್ಥಾಪಕ ಮಂಡಳಿಯು ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳು ಹಾಗೂ ನಮ್ಮ ಪರಿಶೀಲನೆಯ ಪ್ರಕಾರ, ಕಂಪನಿಯು 31.03.2020ರ ವರೆಗೆ ಪಿ.ಎಸ್.ಡಿ.ಎಫ್.ನಿಂದ ರೂ.5437.60ಲಕ್ಷ ಹಾಗೂ ಎನ್.ಸಿ.ಇ.ಎಫ್.ನಿಂದ ರೂ.17119.10 ಲಕ್ಷ ಹಣವನ್ನು ಗ್ರೀನ್ ಎನೆರ್ಜಿ ಕಾರಿಡಾರ್ ಯೋಜನೆಯ ನಿಮಿತ್ತ ಪಡೆದಿದೆ. ಕಂಪನಿಯು, 132ಕೆವಿ ಹಾಗೂ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಕೇಂದ್ರಗಳಲ್ಲಿ ಒ.ಪಿ.ಜಿ.ಡಬ್ಬ್ಯು. ಆಧಾರಿತ ರಿಲಯಬಲ್ ಕಮ್ಯುನಿಕೇಷನ್ ಅನುಷ್ಠಾನದ ಪ್ರಯುಕ್ತ 2019–2020ರ ಅವಧಿಯಲ್ಲಿ ಎನ್.ಎಲ್.ಡಿ.ಸಿ(ಪಿ.ಎಸ್.ಡಿ.ಎಫ್)ನಿಂದ ರೂ.1267.90ಲಕ್ಷ ಅನುದಾನವನ್ನು ಸ್ವೀಕರಿಸಿದೆ. ಅನುದಾನ ಮಂಜೂರತಿಯ ಷರತ್ತುಗಳನ್ವಯ ಅಗತ್ಯಪಡಿಸುವಂತೆ, ಅನುದಾನ ಸ್ವೀಕರಿಸಿದ ಒಂದು ವರ್ಷದೊಳಗೆ ಅನುದಾನದ ಮೊಬಲಗನ್ನು ಕಂಪನಿಯು ಆ ಉದ್ದೇಶಕ್ಕೆ ಬಳಸಿಲ್ಲ. ಕಂಪನಿಯು ಸಮಯ ವಿಸ್ತರಣೆಗೆ ಮನವಿಯನ್ನು ಸಲ್ಲಿಸಿದ್ದು, ಎನ್.ಎಲ್.ಡಿ.ಸಿ.ಯ ನಿರ್ಣಯ ಬರಬೇಕಿದೆ. ಪಿ.ಎಸ್.ಡಿ.ಎಫ್. ಹಾಗೂ ಎನ್.ಸಿ.ಇ.ಎಫ್.ನಿಂದ ಪಡೆದ ಅನುದಾನದಿಂದ ನಿರ್ವಹಿತಗೊಂಡ ಯೋಜನೆಗಳ ವಿಷಯದಲ್ಲಿ, ಕಂಪನಿಯು ಅನುದಾನ ಸ್ವೀಕೃತಿ, ಬಳಕೆ, ಅನುದಾನದ ಮೊಬಗಿಗಿಂತ ಅಧಿಕವಾಗಿ ಭರಿಸಿದ ವೆಚ್ಚಗಳಿಗೆ ಲೆಕ್ಕಸಮನ್ವಯ ಮಾಹಿತಿಗಳನ್ನು ಒದಗಿಸಿಲ್ಲ. ಹೀಗಾಗಿ, ಭಾ.ಲೆ.ಪ.ತತ್ವ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಇದರ ಯತಾರ್ಥತೆ ಹಾಗೂ ವಿನಿಯೋಗದ ಬಗ್ಗೆ ಖಚಿತಪಡಿಸಿಕೊಳ್ಳಲು ಆಗುವುದಿಲ್ಲ. ಮೇಲಿನ ಯೋಜನೆಗಳ ಅನುಷ್ಠಾನ ಹಾಗೂ ಅಭಿವೃದ್ಧಿ ಸಂಬಂಧವಾಗಿ, ಕಂಪನಿಯು ಪ್ರತ್ಯೇಕವಾದ ಯೋಜನಾವರು ಎಕ್ಕಪತ್ರ ನಿರ್ವಹಣೆ ಮಾಡಿಲ್ಲ. ಕಂಪನಿಯು ವಿದ್ಯುತ್ ದರ ಪಟ್ಟಿಯಲ್ಲಿ ಯೋಜನೆಯ ನಿಧಿ ಹವಣಿಕೆಯ ಭಾಗವನ್ನು ಪ್ರಸ್ತಾಪಿಸಿಲ್ಲ.

ಕ್ರ. ಸಂ.	ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
		ಅಲ್ಲದೆ, ಕಂಪನಿಯು ಷರತ್ತು ನಿಬಂಧನೆಗಳ ಪಾಲನೆ, ಯುಕ್ತ ಪ್ರಾಧಿಕಾರಕ್ಕೆ ಅನುದಾನ ಬಳಕೆಯ ದೃಢೀಕರಣ ಪ್ರಮಾಣ ಪತ್ರ ಸಲ್ಲಿಸಿರುವಿಕೆ, ಸಕಾಲದಲ್ಲಿ ಯೋಜನೆಯನ್ನು ಪೂರ್ಣಗೊಳಿಸಿರುವುದು, ಒಪ್ಪಂದದ ನಿವೇದನೆ ಹಾಗೂ ಮಂಜೂರಾತಿ ಪತ್ರದ ಪ್ರಕಾರ ಇತರ ವರದಿ ಸಲ್ಲಿಕೆ ಹಾಗೂ ಅನುಸರಣ ಅಗತ್ಯತೆಗಳು, ಇವುಗಳ ಬಗ್ಗೆ ಖಾಚಿತಪಡಿಸಿಕೊಳ್ಳಲು ನಮಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಿಲ್ಲ. ಹೀಗಾಗಿ ಷರತ್ತು ಹಾಗೂ ನಿಬಂಧನೆಗಳ ಪಾಲನೆ ಬಗ್ಗೆ ನಾವು ಅಭಿಪ್ರಾಯ ಮಂಡಿಸಲು ಆಗುವುದಿಲ್ಲ.

B. ಕಂಪನಿಗೆ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು

(ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ(ಕಂಪನಿ) ಸದಸ್ಯರಿಗೆ, 2020ರ ಮಾರ್ಚ್ 31ರ ದಿನಾಂಕದಂದಿಗೆ ಅಂತ್ಯಗೊಂಡ ವರ್ಷಕ್ಕೆ, ಸಮ ದಿನಾಂಕದ ನಮ್ಮ ವರದಿಯಲ್ಲಿ ಉಲ್ಲೇಖಿಸಿರುವ ಅನುಬಂಧ)

ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
(ಎ) ಕಂಪನಿ ಮಾಲಿಕತ್ವದ, ಬಳಕೆಯಲ್ಲಿಲ್ಲದ ಭೂಮಿಯ ಅತಿಕ್ರಮಣವನ್ನು ತಡೆಯಲು ಕೈಗೊಂಡ ಕ್ರಮಗಳನ್ನು ತಪಾಸಣೆಗೈಯ್ಯುವುದು. ಕಂಪನಿಯ ಮಾಲಿಕತ್ವದ ಭೂಮಿಯ ಅತಿಕ್ರಮಣ, ನ್ಯಾಯಾಂಗ ಮೊಕದ್ದಮೆ, ಬಳಕೆಯಲ್ಲಿರದಿರುವುದು, ಅಧಿಕ್ಯವೆಂದು ಘೋಷಿಸಿರುವುದು, ಇಂತಹವುಗಳ ವಿವರವನ್ನು ಒದಗಿಸುವುದು.	ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ವಿವಿಧ ವ್ಯಕ್ತಿಗಳಿಂದ 152.42 ಎಕರೆ 398.63 ಗುಂಟಾ ಪ್ರಮಾಣದ ಭೂಮಿಯ ಅತಿಕ್ರಮಣ ಮಾಡಲ್ಪಟ್ಟಿದೆ. ಈ ಅತಿಕ್ರಮಣವನ್ನು ಮುಕ್ತಗೊಳಿಸಲು ಅಗತ್ಯ ಕ್ರಮ ಹಾಗೂ ಪ್ರಯತ್ನಗಳನ್ನು ಮಾಡಲಾಗುತ್ತಿದೆ..
(ಬಿ) ಪ್ರಸರಣೆಗಾಗಿ ವಿದ್ಯುತ್ ಉತ್ಪಾದನಾ ಕಂಪನಿಗಳಲ್ಲಿ ಲಭ್ಯವಿರುವ ವಿದ್ಯುತ್ ಪ್ರಮಾಣಕ್ಕನುಗುಣವಾಗಿ ವಿದ್ಯುತ್ ಬಳಕೆ ಪದ್ಧತಿಯು ಅನುಗುಣವಾಗಿದಿಯೇ? ಇಲ್ಲದಿದ್ದರೆ, ವಿದ್ಯುತ್ ಉತ್ಪಾದನಾ ಕಂಪನಿಯು ಕ್ಲೇಮು ಮಾಡಿರುವ ನಷ್ಟ ಪ್ರಮಾಣದ ಬಗ್ಗೆ ಅಭಿಪ್ರಾಯ ಸಲ್ಲಿಸುವುದು	ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಪ್ರಸರಣೆಗಾಗಿ ವಿದ್ಯುತ್ ಉತ್ಪಾದನಾ ಕಂಪನಿಗಳಲ್ಲಿ ಲಭ್ಯವಿರುವ ವಿದ್ಯುತ್ ಪ್ರಮಾಣಕ್ಕನುಗುಣವಾಗಿ ವಿದ್ಯುತ್ ಬಳಕೆ ಪದ್ಧತಿಯು ಅನುಗುಣವಾಗಿದೆ, ಯಾವುದೇ ವಿದ್ಯುತ್ ಉತ್ಪಾದನಾ ಕಂಪನಿಯು ನಷ್ಟ ಪ್ರಮಾಣವನ್ನು ಕ್ಲೇಮು ಮಾಡಿಲ್ಲ.
(ಸಿ)ಪ್ರಸಕ್ತ ವರ್ಷದಲ್ಲಿ, ನಿಗದಿತ ಪ್ರಮಾಣಕ್ಕೆದಿರಾಗಿ, ಅಧಿಕವಾಗಿರುವ ಪ್ರಸರಣ ನಷ್ಟವನ್ನು ಎಷ್ಟರ ಮಟ್ಟಿಗೆ ಭರಿಸಲಾಗಿದೆ. ಇದನ್ನು ಲೆಕ್ಕಪುಸ್ತಕಗಳಲ್ಲಿ ಸೂಕ್ತ ರೀತಿಯಲ್ಲಿ ಲೆಕ್ಕಕ್ಕೊಳಪಡಿಸಲಾಗಿದಿಯೇ?	ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಆ.ವ.2019–20ಕ್ಕೆ ವಾಸ್ತವಿಕ ಪ್ರಸರಣ ನಷ್ಟ ಪ್ರಮಾಣ ಶೇ.3.129, ಕ.ವಿ.ನಿ.ಆಯೋಗದ ನಿಗದಿತ ಪ್ರಮಾಣ ಶೇ.3.050 ಹಾಗೂ ವಿದ್ಯುತ್ ದರ ಆದೇಶ 2020ರ ನಿಗದಿತ ಪ್ರಮಾಣ ಶೇ.3.150ರ ಮಿತಿಯಲ್ಲಿದೆ(ಸರಾಸರಿ 3.100%)

ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
(ಡಿ) ಸಾಲ/ಅನುದಾನ/ಸಹಾಯಧನದ ಯುಕ್ತ ಪರಿಣಾಮಕಾರಿ ಬಳಕೆಯ ಬಗ್ಗೆ ಪರೀಕ್ಷಿಸಿ. ನಿಧಿಬಳಕೆಯ ವಿಪಥನದ ಪ್ರಕರಣಗಳನ್ನು ಪಟ್ಟಿ ಮಾಡುವುದು	ನಮಗೆ ಒದಗಿಸಿರುವ ಮಾಹಿತಿ ಹಾಗೂ ನಮ್ಮ ಪರಿಶೀಲನೆಯ ಪ್ರಕಾರ ಪಡೆದಿರುವ ವಾಯಿದೆ ಸಾಲಗಳನ್ನು ಯಾವ ಉದ್ದೇಶಕ್ಕೆ ಪಡೆಯಲಾಗಿತ್ತೋ, ಅದೇ ಉದ್ದೇಶಕ್ಕೇ ವಿನಿಯೋಗಿಸಲಾಗಿದ್ದು, ಕೆಲವೇ ಪ್ರಕರಣಗಳಲ್ಲಿ ವಾಯಿದೆ ಸಾಲವನ್ನು ಮಂಜೂರಾದ ಉದ್ದೇಶಕ್ಕೆ ಬಳಸಿಲ್ಲ ಹಾಗೂ ಪಡೆದಿದ್ದ ಅಲ್ಪಾವಧಿ ಸಾಲವನ್ನು ಬಂಡವಾಳ ಕಾಮಗಾರಿಗಳಿಗೆ, ದೀರ್ಘಾವಧಿ ಸಾಲಗಳ ತೀರುವಳಿಗಾಗಿ, ಸಾಲಗಳನ್ನು ಮುಂಚಿತವಾಗಿ ತೀರಿಸಲು ಬಳಸಲಾಗಿದೆ. ಸ್ವಕಾರ್ಯ ನಿರ್ವಹಣೆಯನ್ನು ಕೈಗೊಳ್ಳಲು ಕಂಪನಿಯು ಬೆಂಗೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿ.ಡಿ.ಎ) ರೂ.11211ಲಕ್ಷ ಅಂತರ ನಿಗಮ ಸಾಲವನ್ನು ಮಂಜೂರು ಮಾಡಿದೆ. ಬಿ.ಡಿ.ಎ ಕೋರಿಕೆಯನ್ನು ಆಧರಿಸಿ ಪ್ರಸಕ್ತ ವರ್ಷದಲ್ಲಿ ರೂ.8757.38ಲಕ್ಷ ಮೊಬಲಗನ್ನು ವಿತರಿಸಲಾಯಿತು, ಅದರ ಪೈಕಿ ರೂ.6300 ಲಕ್ಷವನ್ನು ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ನಿಂದ ಅಲ್ಪಾವಧಿ ಸಾಲದ ಮೂಲಕ ಹವಣಿಸಲಾಗಿತ್ತು, ಇದು ಮಂಜೂರಾತಿ ಷರತ್ತುಗಳಿಗೆ ವ್ಯತಿರಿಕ್ತವಾಗಿದೆ. ಕಂಪನಿಯು, 132ಕೆವಿ ಹಾಗೂ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಕೇಂದ್ರಗಳಲ್ಲಿ ಒ.ಪಿ.ಜಿ.ಡಬ್ಯು. ಆಧಾರಿತ ರಿಲಯಬಲ್ ಕಮ್ಯುನಿಕೇಷನ್ ಅನುಷ್ಠಾನದ ಪ್ರಯುಕ್ತ 2019–2020ರ ಅವಧಿಯಲ್ಲಿ ಎನ್.ಎಲ್.ಡಿ.ಸಿ (ಪಿ.ಎಸ್.ಡಿ.ಎಫ್)ನಿಂದ ರೂ.1267.90 ಲಕ್ಷ ಅನುದಾನವನ್ನು ಸ್ವೀಕರಿಸಿದೆ. ಅನುದಾನವನ್ನು ಠೇವಣಿ ರೂಪದಲ್ಲಿರಿಸಿದ ಪ್ರಯುಕ್ತ ಒದಗಿ ಬಂದ ಬಡ್ಡಿ ರೂ.62.98ಲಕ್ಷವನ್ನು ಅನುದಾನಕ್ಕೆ ಸೇರಿಸಲಾಯಿತು. ಅನುದಾನ ಮಂಜೂರತಿಯ ಷರತ್ತುಗಳನ್ವಯ ಅಗತ್ಯಪಡಿಸುವಂತೆ, ಅನುದಾನ ಸ್ವೀಕರಿಸಿದ ಒಂದು ವರ್ಷದೊಳಗೆ ಅನುದಾನದ ಮೊಬಲಗನ್ನು ಕಂಪನಿಯು ಆ ಉದ್ದೇಶಕ್ಕೆ ಬಳಸಿಲ್ಲ. ಕಂಪನಿಯು ಸಮಯ ವಿಸ್ತರಣೆಗೆ ಮನವಿಯನ್ನು ಸಲ್ಲಿಸಿದ್ದು, ಎನ್.ಎಲ್.ಡಿ.ಸಿ.ಯ ನಿರ್ಣಯ ಬರಬೇಕಿದೆ. ಹಿಮಾಚಲ ಪ್ರದೇಶ ಮತ್ತು ಕರ್ನಾಟಕದಲ್ಲಿ ಗ್ರೀನ್ ಎನೆರ್ಜಿ ಕಾರಿಡಾರ್ ಯೋಜನೆಯ ಅಡಿಯಲ್ಲಿ ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯನ್ನು ರಚಿಸಲು ಕಂಪನಿಯು 2016–17ರಲ್ಲಿ ರೂ.7681.00 ಲಕ್ಷ, 2017–18ರಲ್ಲಿ ರೂ. 2652.30 ಲಕ್ಷ, 2018–19ರಲ್ಲಿ ರೂ.6785.80ಲಕ್ಷ (ಒಟ್ಟು ಅನುದಾನ: ರೂ.17119.10ಲಕ್ಷ) ವನ್ನು ಸ್ವೀಕರಿಸಿತ್ತು. ಸ್ವೀಕರಿಸಿದ ಅನುದಾನದ ಠೇವಣಿ ಇಡುವಿಕೆಯಿಂದ ಒದಗಿಬಂದ ಬಡ್ಡಿ ರೂ.36.63ಲಕ್ಷ .ಪಿ.ಎಸ್.ಡಿ.ಎಫ್. ಯೋಜನೆಯ ಅಡಿಯಲ್ಲಿ 220 ಹಾಗೂ 440ಕೆವಿ ಸಾಮರ್ಥ್ಯದ ವಿದ್ಯುತ್ ಕೇಂದ್ರಗಳ ಸುರಕ್ಷಾ ವ್ಯವಸ್ಥೆಯ ದುರಸ್ತಿ ಹಾಗೂ ಉನ್ನತೀಕರಣದ ಪ್ರಯುಕ್ತ ಕಂಪನಿಯು 2016–

ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
	17ರಲ್ಲಿ ರೂ.604.20 ಲಕ್ಷ, 2017–18ರಲ್ಲಿ ರೂ. 1208.40 ಲಕ್ಷ, 2018–19ರಲ್ಲಿ ರೂ.3625.00ಲಕ್ಷ (ಒಟ್ಟು ಅನುದಾನ: ರೂ.5437.60ಲಕ್ಷ)ವನ್ನು ಸ್ವೀಕರಿಸಿತ್ತು. ಅನುದಾನದ ಮೊಬಲಗನ್ನು ಠೇವಣಿ ಇಟ್ಟ ಪ್ರಯುಕ್ತ ಗಳಿಸಿದ ಬಡ್ಡಿ ರೂ.16.94ಲಕ್ಷ.
ಈ) ಐ.ಆರ್.ಆರ್. ಮತ್ತು ಹಿಂಪಾವತಿ ಅವಧಿಯನ್ನೂ ಒಳಗೊಂಡಂತೆ, ಬೃಹತ್ ಬಂಡವಾಳ ವೆಚ್ಚ/ವಿಸ್ತರಣೆಯ ವೆಚ್ಚ ಪ್ರಯೋಜನ ವಿಶ್ಲೇಷಣೆಯನ್ನು ಪರೀಕ್ಷಿಸುವುದು.	ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ವಿದ್ಯುತ್ ಸರಬರಾಜು ಕಂಪನಿಗಳ ಕೋರಿಕೆಯ ಪ್ರಕಾರ ಉಪಕೇಂದ್ರಗಳ ವಿದ್ಯುತ್ ಪ್ರಸರಣ ಮೂಲ ಸೌಕರ್ಯ ಹಾಗೂ ಸಂಬಂಧಿತ ಕಾಮಗಾರಿಗಳನ್ನು ರಚಿಸಲಾಗಿದೆ. ಕಾರ್ಯಾಚರಣೆಯ ಎಲ್ಲ ವೆಚ್ಚಗಳನ್ನು , ಬಂಡವಾಳ ವೆಚ್ಚದ ಪ್ರಯುಕ್ತವಾದ ಸವಕಳಿ ಇಂತಹ ವೆಚ್ಚಗಳನ್ನೊಳಗೊಂಡ ವಾರ್ಷಿಕ ಕಂದಾಯ ಮರುಗಳಿಕೆಯನ್ನು(ಎ.ಆರ್.ಆರ್.) ಆಧರಿಸಿ ಕ.ವಿ.ನಿ. ಆಯೋಗವು ವಿದ್ಯುತ್ ದರಗಳನ್ನು ಗೊತ್ತುಪಡಿಸುತ್ತದೆ. ಹೀಗಾಗಿ, ನಮ್ಮ ಅಭಿಪ್ರಾಯದ ಪ್ರಕಾರ, ಕ.ವಿ.ನಿ. ಆಯೋಗವು ನಿಗದಿಪಡಿಸುವ ವಿದ್ಯುತ್ ದರದ ಒಂದು ಭಾಗವಾಗಿರುವ ಬಂಡವಾಳ ವೆಚ್ಚವನ್ನು ಕಂಪನಿಯು ನಂತರದ ವರ್ಷಗಳಲಿ ಮರುಗಳಿಸುತ್ತದೆ. ಆದರೂ, ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿದ ನಂತರ ಉಂಟಾದ ಮುಂದಿನ ಬದಲಾವಣೆಗಳನ್ನು ಪರಿಗಣಿಸಲು ಕಂಪನಿಯು ವೆಚ್ಚ ಪ್ರಯೋಜನ ವಿಶ್ಲೇಷಣೆ, ಐ.ಆರ್.ಆರ್., ಹಿಂಪಾವತಿ ಅವಧಿ ಇವುಗಳನ್ನು ಪರಿಷ್ಕರಿಸುತ್ತಿಲ್ಲ, ಇದು ವಾಸ್ತವಿಕ ವೆಚ್ಚ/ಐ.ಆರ್.ಆರ್/ ಹಿಂಪಾವತಿ ಅವಧಿಯ ಹೆಚ್ಚುವಿಕೆ/ಇಳಿತಗೊಳ್ಳುವ ಸಾಧ್ಯತೆ ಇದೆ. ಯೋಜನೆಯ ವಿನ್ಯಾಸದಲ್ಲಿ ತಿದ್ದುಪಡಿ ಹಾಗೂ ತದನಂತರದಲ್ಲಿ ಯೋಜನೆಯ ವೆಚ್ಚವು ವ್ಯತ್ಯಯಗೊಳ್ಳುವ ಕಾರಣ ಯೋಜನೆಯ ವೆಚ್ಚವನ್ನು ಪರಿಷ್ಕರಿಸದಿರುವುದು ಯೋಜನೆಯ ಒಟ್ಟಾರೆ ವೆಚ್ಚದ ಮೇಲೆ ಪರಿಣಾಮ ಬೀರುವುದರೊಂದಿಗೆ, ಯೋಜನೆಯನ್ನು ಕಾರ್ಯಾನುಷ್ಠಾನ ಗೊಳಿಸುವಾಗ ಹೆಚ್ಚುವರಿ ಮುಂಗಡ ಪಾವತಿಗೆ ಹಾಗೂ ಅದನ್ನೇ ಎಫ್.ಕ್ಯು.ವಿ.ಕ್ಲೇಮುಗಳನ್ನು ಆಧರಿಸಿ ಮರು ವಸೂಲಿಗೆ ಅವಕಾಶವಾಗುತ್ತದೆ, ಇದು ಆರ್ಥಿಕ ವೆಚ್ಚದ ಮೇಲೆ ತತ್ಪರಿಣಾಮವನ್ನು ಬೀರುತ್ತದೆ. ಸಮಗ್ರ ಗುತ್ತಿಗೆ ಯೋಜನೆಗಳಿಗೆ ಸಂಬಂಧಿಸಿ, ದರ ವ್ಯತ್ಯಯ ಕ್ಲೇಮುಗಳು, ಪರಿಮಾಣ ವ್ಯತ್ಯಯ ಕ್ಲೇಮುಗಳನ್ನು ಹಾಲಿ ಚಾಲ್ತಿಯಲ್ಲಿರುವ ನಿಗದಿತ ದರ/ಮಾರುಕಟ್ಟೆ ದರದ ಬದಲಾಗಿ ಗುತ್ತಿಗೆ ದರದ ಪ್ರಕಾರ ಪರಿಗಣಿಸಲಾಗುತ್ತದೆ. ಸಮಗ್ರ ಗುತ್ತಿಗೆಯ ಸ್ಥಾಪನೆ ಕಾಮಗಾರಿಯ ಪ್ರಕರಣದಲ್ಲಿ ಏಕೈಕವಾಗಿ ಕೂಲಿ ವೆಚ್ಚ ಮಾತ್ರ ಒಳಪಡುವುದರಿಂದ ಸ್ಥಾಪನೆಯನ್ನು ಆಧರಿಸಿದ ದರ ವ್ಯತ್ಯಯವನ್ನು ಅನ್ವಯಿಸುವುದಕ್ಕೆ

ನಿರ್ದೇಶನಗಳು	ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರ ನಿರ್ದೇಶನಗಳಿಗೆ ವರದಿ/ಉತ್ತರ
	ಸಂಬಂಧಿಸಿದಂತೆ ಟೆಂಡರ್ ದಸ್ತಾವೇಜು ಹಾಗೂ ಸಂಬಂಧಿತ ಸುತ್ತೋಲೆಗಳಲ್ಲಿ ಸ್ಪಷ್ಟತೆ ಇಲ್ಲದ ಕಾರಣ, ಸ್ಥಾಪಿಸುವಿಕೆಯನ್ನು ಆಧರಿಸಿ ದರ ವ್ಯತ್ಯಯವನ್ನು ಪ್ರಕ್ರಿಯೆಗೆ ಒಳಪಡಿಸುವುದು. ವಿವಿಧ ಸಂದರ್ಭಗಳಲ್ಲಿ, ಸ್ವಯಂ ನಿರ್ವಹಿತ ಕಾಮಗಾರಿ (ಎಸ್.ಇ.ಡಬ್ಲ್ಯು)/ಠೇವಣಿ ವಂತಿಗೆ ಕಾಮಗಾರಿ (ಡಿ.ಸಿ.ಡಬ್ಯು) ಅಥವಾ ವಾರ್ಷಿಕ ಕಾಮಗಾರಿ ಕಾರ್ಯಕ್ರಮದ (ಎ.ಪಿ.ಡಬ್ಲ್ಯು) ಅಡಿಯಲ್ಲಿ ತನ್ನ ಬಂಡವಾಳ ಬಜೆಟ್‌ನಲ್ಲಿ ಕಾಮಗಾರಿಯೊಂದನ್ನು ಕೈಗೊಳ್ಳಬೇಕಾದ ಅಗತ್ಯತೆಯನ್ನು ನಿರ್ಧರಿಸಲು ಗೊತ್ತುಪಡಿಸಿರುವ ಕವಿನಿ ಆಯೋಗದ ಸೂತ್ರಗಳನ್ವಯ ಪಾಲಿಸಬೇಕಾದ ಯುಕ್ತ ಮಾರ್ಗದರ್ಶಕ ಕಾರ್ಯನೀತಿಯನ್ನು ಕಂಪನಿಯು ಹೊಂದಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳಿಗೆ ಗ್ರಾಹಕರು ಮನವಿಯನ್ನು ಮಾಡಿದರೂ, ಕಂಪನಿಯು ಅಂತಹ ಮನವಿಗಳನ್ನು ಮಾನ್ಯಗೊಳಿಸುವ ನಿಟ್ಟಿನಲ್ಲಿಲ್ಲವೆಂದು ನಮಗೆ ತಿಳಿಸಲಾಯಿತು. ಕಂಪನಿಯೇ ಬಂಡವಾಳ ವೆಚ್ಚವನ್ನು ಭರಿಸುವುದರಿಂದ, ಅಂತಹ ಕಾಮಗಾರಿಗಳನ್ನು ಕೈಗೊಳ್ಳುವ ಮುಂಚೆ ಸಾಕಷ್ಟು ಮೌಲ್ಯೀಕರಣವನ್ನು ಕೈಗೊಳ್ಳುವುದು ಅತ್ಯವಶ್ಯ. ಹೀಗಾಗಿ, ವಿವಿಧ ಸಂದರ್ಭಗಳಲ್ಲಿ, ಸ್ವಯಂ ನಿರ್ವಹಿತ ಕಾಮಗಾರಿ (ಎಸ್.ಇ.ಡಬ್ಲ್ಯು)/ ಠೇವಣಿ ವಂತಿಗೆ ಕಾಮಗಾರಿ(ಡಿ.ಸಿ.ಡಬ್ಯು) ಅಥವಾ ವಾರ್ಷಿಕ ಕಾಮಗಾರಿ ಕಾರ್ಯಕ್ರಮದ(ಎ.ಪಿ.ಡಬ್ಲ್ಯು) ಅಡಿಯಲ್ಲಿ ತನ್ನ ಬಂಡವಾಳ ಬಜೆಟ್‌ನಲ್ಲಿ ಕಾಮಗಾರಿಯೊಂದನ್ನು ಕೈಗೊಳ್ಳಬೇಕಾದ ಅಗತ್ಯತೆಯನ್ನು ನಿರ್ಧರಿಸಲು ಗೊತ್ತುಪಡಿಸಿರುವ ಕವಿನಿ ಆಯೋಗದ ಸೂತ್ರಗಳನ್ವಯ ಪಾಲಿಸಬೇಕಾದ ಯುಕ್ತ ಮಾರ್ಗದರ್ಶಕ ಕಾರ್ಯನೀತಿಯನ್ನು ಕಂಪನಿಯು ಹೊಂದಬೇಕಾದ ಅವಶ್ಯಕತೆ ಇದೆ. ಅಂತಹ ಮಾರ್ಗದರ್ಶಕಗಳ ಅಥವಾ ಸೂಕ್ತ ವಿವರಣೆಗಳ ಅನುಪಸ್ಥಿತಿಯಲ್ಲಿ, ಹಾಲಿ ಇರುವ ಮಾಪಕಗಳನ್ನು ಡಿ.ಸಿ.ಡಬ್ಲ್ಯು ಬದಲು ಎ.ಪಿ.ಡಬ್ಲ್ಯು ಕಾರ್ಯಕ್ರಮದ ಅಡಿಯಲಿ ರೂ.3892.48 ಲಕ್ಷ ಪ್ರಾರಂಭಿಕ ವೆಚ್ಚದಲ್ಲಿ ಡಿ.ಎ.ಎಂ.ಎಸ್. ಮಾಪಕಗಳಿಂದ ಬದಲಾಯಿಸುವಿಕೆಯ ಕಾಮಗಾರಿ ಸಂಬಂಧವಾಗಿ ಕಂಪನಿಯು ಭರಿಸಿರುವ ಬಂಡವಾಳ ವೆಚ್ಚಗಳ ವಿನಿಯೋಗದ ಬಗ್ಗೆ ನಾವು ಅಭಿಪ್ರಾಯ ಸಲ್ಲಿಸಲು ಆಗುವುದಿಲ್ಲ.

ಬಿ.ಪಿ.ರಾವ್ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003116 ಎಸ್

ಸಹಿ/–
ಬಿ.ಸತೀಶ್‌ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ 024559

ಸ್ಥಳ: ಬೆಂಗಳೂರು
ದಿನಾಂಕ:22–03–2021
ಯು.ಡಿ.ಐ.ಎನ್:212024559ಎಎಎಡಿಆರ್9595

ಅಂಕುಶ ಸೇತಿ

ಈ ದಾಖಲೆಗಳಲ್ಲಿ ತಿಳಿಸಲಾದ ಅಭಿಪ್ರಾಯವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಮುಂದೆ "ಕವಿಪ್ರನಿನಿ ಅಥವಾ "ಕಂಪನಿ" ಎಂದು ಕರೆಯಲ್ಪಡುವ) ದ ಮುಂದೆ ಇರಿಸಿದ ಸಮಸ್ಯೆಗಳಿಗೆ ಪ್ರತಿಕ್ರಿಯೆಯಾಗಿರುತ್ತದೆ ಮತ್ತು ನಮ್ಮ ಮುಂದೆ ನೀಡಲಾದ ವಾಸ್ತವ ಮತ್ತು ಸನ್ನಿವೇಶಗಳು ಇರಬಹುದು, ಕಂಪನಿಗಳ ಕಾಯ್ದೆ, 2013 ರಲ್ಲಿರುವ ನಿಬಂಧನೆಗಳನ್ನು ಅರ್ಥೈಸಿಕೊಳ್ಳುವ ಮೂಲಕ ಕಾನೂನು ಅಂಶಗಳನ್ನು ಪರಿಹರಿಸಲು ನಾವು ನಮ್ಮ ಅತ್ಯುತ್ತಮ ಪ್ರಯತ್ನ ಮಾಡಿದ್ದೇವೆ (ಇನ್ನು ಮುಂದೆ 'ಕಾಯ್ದೆ' ಎಂದು ಉಲ್ಲೇಖಿಸಲಾಗುತ್ತದೆ).

ಈ ಅಭಿಪ್ರಾಯವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಅವರ ಅಧಿಕೃತ ಏಜೆಂಟ್‌ಗಳ ಬಳಕೆಗಾಗಿ ಮಾತ್ರ. ಇಲ್ಲಿ ಒಳಗೊಂಡಿರುವ ಮಾಹಿತಿ ಮತ್ತು ವೀಕ್ಷಣೆಗಳು ಸವಲತ್ತು ಮತ್ತು ಗೌಪ್ಯ ಮಾಹಿತಿಯಾಗಿದೆ ಮತ್ತು ಯಾವುದೇ ಇತರ ಪಕ್ಷ ಅಥವಾ ಯಾವುದೇ ಉದ್ದೇಶಕ್ಕಾಗಿ ಬಳಸಬಾರದು. ಅಂತಹ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ಕಾನೂನಿನಿಂದ ನಿಷೇಧಿಸಬಹುದು. ಅನಧಿಕೃತ ವಿತರಣೆ ಅಥವಾ ಈ ಅಭಿಪ್ರಾಯದ ನಕಲು ಅಥವಾ ಅದರ ಯಾವುದೇ ಭಾಗವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಈ ಅಭಿಪ್ರಾಯವು, ಕಂಪನಿಯು ನಮಗೆ ಒದಗಿಸುವ ಸಂಗತಿಗಳು ಮತ್ತು ಮಾಹಿತಿಯನ್ನು ಆಧರಿಸಿದೆ ಮತ್ತು ಪರಿಗಣನೆಯ ವಿಷಯಕ್ಕೆ ಸಂಬಂಧಿಸಿದಂತೆ ಈ ಅಭಿಪ್ರಾಯದ ದಿನಾಂಕದಂದು ಪ್ರಚಲಿತವಿರುವ ಕಾನೂನಿನ ಪ್ರಕಾರ. ಅಲ್ಲದೆ, ಸಂಸ್ಥೆಯು/ಕಂಪನಿ ಈ ಮೂಲಕ ವೃತ್ತಿಪರ ದೃಷ್ಟಿಕೋನಗಳು ಭಿನ್ನವಾಗಿರಬಹುದು, ಅಭಿಪ್ರಾಯವು ವೈಯಕ್ತಿಕ ವಿವಾದದಲ್ಲಿರುತ್ತದೆ ಮತ್ತು ಒಬ್ಬ ವೃತ್ತಿಪರರಿಂದ ಇನ್ನೊಬ್ಬರಿಗೆ ಭಿನ್ನವಾಗಿರಬಹುದು ಎಂಬ ಅಂಶವನ್ನು ಒಪ್ಪಿಕೊಳ್ಳುತ್ತದೆ.

ಸಹಿ/–
ಅಂಕುಶ ಸೇತಿ
ಕಂಪನಿ ಕಾರ್ಯದರ್ಶಿ
ಎಮ್. ಸಂಖ್ಯೆ 42050
ಸಿಓಪಿ. ಸಂಖ್ಯೆ 15741

ದಿನಾಂಕ:30–11–2019

ಸ್ಥಳ: ಬೆಂಗಳೂರು

ಪ್ರಕರಣ ಸತ್ಯಗಳು:

ಕವಿಪ್ರನಿನಿ ಅನ್ನು 1999 ರಲ್ಲಿ ಸರ್ಕಾರಿ ಕಂಪನಿಯಾಗಿ (ಅಂದರೆ ಕರ್ನಾಟಕ ರಾಜ್ಯ ಸರ್ಕಾರ) ಸೇರಿಸಲಾಯಿತು, ಅದು ಹಾಗೆಯೇ ಕಾರ್ಯನಿರ್ವಹಿಸುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಕರ್ನಾಟಕ ರಾಜ್ಯದ ಒಂದು ಇಲಾಖೆಯು, ಕವಿಪ್ರನಿನಿ ಅನ್ನು ಸಂಪರ್ಕಿಸಿದೆ, ಬಿಡಿಎ ಅರ್ಕಾವತಿ ವಸತಿ ಬಡಾವಣೆಯಲ್ಲಿ ವಿದ್ಯುತ್ ಮೂಲಸೌಕರ್ಯವನ್ನು ಮುಂದೂಡಿದ ಪಾವತಿ ವಿಧಾನದಲ್ಲಿ, ಈ ಕೆಳಗಿನ ಷರತ್ತುಗಳ ಮೇಲೆ:

- ಕವಿಪ್ರನಿನಿ ಬಿಡಿಎಗೆ ಆರಂಭಿಕ ಹಣಕಾಸು ಬೆಂಬಲವನ್ನು ನೀಡುತ್ತದೆ.
- ಕರ್ನಾಟಕ ಸರ್ಕಾರ (GOK) ಪತ್ರದ ಮೂಲಕ ದಿನಾಂಕ: 14.10.2019 ನ್ನು ಕವಿಪ್ರನಿನಿ ಯಿಂದ 112.11 ಕೋಟಿ ರೂಪಾಯಿಗಳ ಬಡ್ಡಿ ಹೊಂದಿರುವ ಸಾಲವನ್ನು ಪಡೆಯಲು ಬಿಡಿಎಗೆ ಅನುಮೋದನೆ ನೀಡಿದೆ.

- ಕವಿಪ್ರನಿನಿಗೆ ವೆಚ್ಚವನ್ನು ಪೂರೈಸಲು ಬಡ್ಡಿಯನ್ನು ಎಸ್‌ಬಿಐ ಒಂದು ವರ್ಷದ ಎಂಸಿಎಲ್‌ಆರ್+2.5% ನಲ್ಲಿ ವಿಧಿಸಲಾಗುತ್ತದೆ.

ಮುಂದೆ, ಕರ್ನಾಟಕ ಸರ್ಕಾರವು ಕವಿಪ್ರನಿನಿಗೆ ಆದೇಶವನ್ನು ಹೊರಡಿಸಿದೆ ಮತ್ತು ಹಣಕಾಸಿನ ಸೌಲಭ್ಯವನ್ನು ಬಿಡಿಎಗೆ ಮುಂದೂಡುವ ಪಾವತಿಯ ಆಧಾರದ ಮೇಲೆ ವಿಸ್ತರಿಸಲು ನಿರ್ದೇಶಿಸಿದೆ.

ಆದರೆ, ಕಂಪನಿಯ ಮೆಮೊರ್ಯಾಂಡಮ್ ಆಫ್ ಅಸೋಸಿಯೇಷನ್ (MoA) ಸಾಲಗಳನ್ನು ಮತ್ತು ಖಾತರಿಗಳನ್ನು ಒದಗಿಸುವುದಕ್ಕಾಗಿ, ಸಾಮಾನ್ಯ ವ್ಯವಹಾರದಲ್ಲಿ ಅಥವಾ ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ಒದಗಿಸುವುದಿಲ್ಲ.

ಸಾಲ/ಖಾತರಿಗಳನ್ನು ಒದಗಿಸಲು ಕಂಪನಿಯ MoA ಯಲ್ಲಿ ಲಭ್ಯವಿರುವ ಸ್ಪಷ್ಟ ಒಪ್ಪಿಗೆ/ನಿಬಂಧನೆಯ ಅನುಪಸ್ಥಿತಿಯಲ್ಲಿ ವಹಿವಾಟಿನ ಸಿಂಧುತ್ವವನ್ನು ಖಚಿತಪಡಿಸಿಕೊಳ್ಳಲು ನಮ್ಮ ಅಭಿಪ್ರಾಯವು ಪಡೆಯಲಾಗುತ್ತಿದೆ.

<u>ಪ್ರಶ್ನೆ 1</u>

ಬಿಡಿಎಗೆ ಸಾಲವನ್ನು ನೀಡುವ ವಹಿವಾಟನ್ನು MoA ನ ಅಲ್ಟ್ರಾ ವೈರ್‌ಗಳೆಂದು ಪರಿಗಣಿಸಲಾಗಿದೆಯೇ; ಮತ್ತು ಆದ್ದರಿಂದ ಕಂಪನಿಗಳ ಕಾಯ್ದೆಯ ಉಲ್ಲಂಘನೆ

<u>ಕಾನೂನು ನಿಯಮಗಳ ಬೆಳಕಿನಲ್ಲಿ ವಿಶ್ಲೇಷಣೆ:</u>

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 186 ರ ನಿಯಮಗಳು (ಕಂಪನಿಗಳ ಕಾಯ್ದೆ1 1952 ರ ಅನುಚ್ಛೇದ 372ಎ) ಕಂಪನಿಗಳು ತಮ್ಮಲ್ಲಿ ಲಭ್ಯವಿರುವ ಹೆಚ್ಚುವರಿ ಹಣವನ್ನು ಸೂಕ್ತ ಹೂಡಿಕೆ ಅವಕಾಶಗಳಲ್ಲಿ ಹೂಡಿಕೆ ಮಾಡಲು ಅನುವು ಮಾಡಿಕೊಡುತ್ತದೆ, ಸಾಲ ಅಥವಾ ಖಾತರಿಗಳನ್ನು ಒದಗಿಸಲು ಆಯ್ಕೆ ಸೇರಿದಂತೆ.

ಮತ್ತಷ್ಟು ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 463 (ಇ) ದಿನಾಂಕ: 05.06.2015, ಮತ್ತು ಅಧಿಸೂಚನೆ ಸಂಖ್ಯೆ ಜಿಎಸ್‌ಟಿ 802 ದಿನಾಂಕ: 23.02.2018 ರ ತಿದ್ದುಪಡಿಯಂತೆ, ಸೆಕ್ಷನ್ 186 ರ ನಿಬಂಧನೆ ಸರ್ಕಾರಿ ಕಂಪನಿಗಳಿಗೆ ಅನ್ವಯಿಸುವುದಿಲ್ಲ.

ಅಧಿಸೂಚನೆಯ ಸಾರವು ಕೆಳಕಂಡಂತಿದೆ:

ಅಧ್ಯಾಯ XII, ಸೆಕ್ಷನ್ 186 ಅನ್ವಯಿಸದಿರುವುದು–

(ಎ) ರಕ್ಷಣಾ ಉತ್ಪಾದನೆಯಲ್ಲಿ ತೊಡಗಿರುವ ಒಂದು ಸರ್ಕಾರಿ ಕಂಪನಿ;

(ಬಿ) ಪಟ್ಟಿ ಮಾಡಲಾದ ಕಂಪನಿಯಲ್ಲದ ಒಂದು ಸರ್ಕಾರಿ ಕಂಪನಿ, ಅಂತಹ ಕಂಪನಿಯು ಕೇಂದ್ರ ಸರ್ಕಾರದ ಸಚಿವಾಲಯದ ಅಥವಾ ಇಲಾಖೆಯು ಕಂಪನಿಯ ಆಡಳಿತಾತ್ಮಕ ಉಸ್ತುವಾರಿ ವಹಿಸಿ ಅನುಮೋದನೆಯನ್ನು ಪಡೆದರೆ ಅಥವಾ ರಾಜ್ಯ ಸರ್ಕಾರವು ಮಾಡುವ ಮೊದಲು ಯಾವುದೇ ಸಾಲ ಅಥವಾ ಯಾವುದೇ ಖಾತರಿ ನೀಡುವ ಅಥವಾ ಯಾವುದೇ ಭದ್ರತೆಯನ್ನು ಒದಗಿಸುವುದು ಅಥವಾ ಸೆಕ್ಷನ್ ಅಡಿಯಲ್ಲಿ ಯಾವುದೇ ಹೂಡಿಕೆ ಮಾಡುವುದು.

ಪ್ರಸ್ತುತ ಪಡಿಸಿರುವ ನಿದರ್ಶನದಲ್ಲಿ, ಕವಿಪ್ರನಿನಿ ಕರ್ನಾಟಕ ಸರ್ಕಾರದಿಂದ ಆದೇಶವನ್ನು ಸ್ವೀಕರಿಸಿದೆ ಎಂದು ಅರ್ಥೈಸಿಕೊಳ್ಳಲಾಗಿದೆ. ಇಂಧನ ಇಲಾಖೆಯ ಕ್ಯಾಬಿನೆಟ್ ಕಾರ್ಯದರ್ಶಿ ಸಹಿ ಮಾಡಿ ನಿರ್ದೇಶಿಸಿದಂತೆ ಬಿಡಿಎ ಅರ್ಕಾವತಿ ವಸತಿ ಬಡಾವಣೆಯ ಮೂಲಸೌಕರ್ಯ ಸ್ಥಾಪನೆಗೆ ಬಿಡಿಎಗೆ ಹಣಕಾಸಿನ ನೆರವು ವಿಸ್ತರಿಸಲು ಕವಿಪ್ರನಿನಿಗೆ ನಿರ್ದೇಶನ ನೀಡಿಲಾಗಿದೆ.

ಆದ್ದರಿಂದ, ಕವಿಪ್ರನಿನಿಗೆ ಸಚಿವಾಲಯದ ಅನುಮೋದನೆ ಇದೆ ಎಂದು ಊಹಿಸುವುದು ಸುರಕ್ಷಿತವಾಗಿದೆ, (ಇಂಧನ ಇಲಾಖೆ) ಇದು ಆಡಳಿತಾತ್ಮಕವಾಗಿ ಕಂಪನಿಯ ಉಸ್ತುವಾರಿ ವಹಿಸಿದೆ; ಮತ್ತು ಆ ಮಟ್ಟಿಗೆ ಈ

ವಹಿವಾಟು ಮೇಲೆ ವಿವರಿಸಿದಂತೆ ಸ್ಥಿತಿಯನ್ನು ತೃಪ್ತಿಪಡಿಸುತ್ತದೆ ಮತ್ತು ಹೀಗಾಗಿ ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 186 ರ ಅನುಸರಣೆಯ ಹೊರಗಿದೆ.

ಮುಂದೆ ನಾವು ಕಂಪನಿಯ ಮೆಮೋರ್ಯಾಂಡಮ್ ಆಫ್ ಅಸೋಸಿಯೇಷನ್‌ನ ಷರತ್ತು 26 ಮತ್ತು 27 ಅನ್ನು ಉಲ್ಲೇಖಿಸುತ್ತೇವೆ, ಅದು ಈ ಕೆಳಗಿನಂತಿದೆ:

ಷರತ್ತು 26:

ಆರ್ಥಿಕ ಹೂಡಿಕೆಯ ಹೊಸ ಕ್ಷೇತ್ರಗಳನ್ನು ಗುರುತಿಸಲು ಮತ್ತು ಅಂತಹ ಹೂಡಿಕೆಗಳನ್ನು ಕೈಗೊಳ್ಳಲು ಕೈಗೊಳ್ಳುವ ಅಥವಾ ಸಹಾಯ ಮಾಡಲು ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ ಪರವಾಗಿ ಉದ್ಯಮಿಯಾಗಿ ಕೆಲಸ ಮಾಡಬೇಕಾಗುತ್ತದೆ.

ಷರತ್ತು 27:

ನಿರ್ದೇಶಕರು ಅಗತ್ಯವೆಂದು ಪರಿಗಣಿಸಿದಾಗ ಮತ್ತು ಕಂಪನಿಯ ಹಣವನ್ನು ಹೂಡಿಕೆ ಮಾಡಲು ನಿರ್ದೇಶಕರು ಸೂಕ್ತವೆಂದು ಭಾವಿಸಿದಾಗ ಮತ್ತು ಅದರೊಂದಿಗೆ ಮಾರಾಟ ಮಾಡಲು, ವರ್ಗಾಯಿಸಲು ಅಥವಾ ವ್ಯವಹರಿಸಲು ಆಸ್ತಿ ಅಥವಾ ಸ್ಥಿರ ಆಸ್ತಿಯ ಅಡಮಾನ ಅಥವಾ ಬ್ಯಾಂಕ್/ಸಾಂಸ್ಥಿಕ ಖಾತರಿಯ ಆಧಾರದಲ್ಲಿ ಹಣವನ್ನು ಮುಂಗಡವಾಗಿ ಒದಗಿಸಲು ಮತ್ತು ಭವಿಷ್ಯದಲ್ಲಿ ಸರಕು ಮತ್ತು ಸೇವೆಗಳ ಪೂರೈಕೆಯ ಆಧಾರದಲ್ಲಿ ಹಣವನ್ನು ಮುಂಗಡವಾಗಿ ಪಾವತಿಸಬೇಕಾಗುತ್ತದೆ.

ಕವಿಪ್ರನಿನಿಯ ಮೆಮೋರ್ಯಾಂಡಮ್ ಆಫ್ ಅಸೋಸಿಯೇಷನ್‌ನ ಷರತ್ತು 26 ಮತ್ತು 27ರ ಸರಳ ಓದುವಿಕೆಯ ಮೇಲೆ, ಕಂಪನಿಯ ಉದ್ದೇಶಗಳನ್ನು ಮತ್ತಷ್ಟು ಸ್ಥಾಪಿಸಲು ಮತ್ತು ನಿರ್ವಹಿಸಲು ಸೂಕ್ತವಾದ ಮತ್ತು ಸೂಕ್ತವೆಂದು ಪರಿಗಣಿಸುವಂತಹ ಕ್ರಮಗಳನ್ನು ತೆಗೆದುಕೊಳ್ಳಲು ಕವಿಪ್ರನಿನಿಗೆ ಅಧಿಕಾರ ನೀಡಲಾಗಿದೆ ಎಂದು ಊಹಿಸಬಹುದು.

ಪ್ರಸ್ತುತ ಪಡಿಸಿರುವ ನಿದರ್ಶನದಲ್ಲಿ, ಕರ್ನಾಟಕ ರಾಜ್ಯ ವ್ಯಾಪ್ತಿಯ ಎಲ್ಲಾ ಭಾಗಗಳಿಗೆ ಮತ್ತು ಪ್ರದೇಶಗಳಿಗೆ ವಿದ್ಯುತ್ ಪೂರೈಕೆಯನ್ನು ಕವಿಪ್ರನಿನಿಯು ಕಡ್ಡಾಯವಾಗಿ (ಅಂದರೆ ಉದ್ದೇಶ) ಖಚಿತಪಡಿಸುವುದು, ಈ ನೆಪದಲ್ಲಿ ಬಿಡಿಎ ಅರ್ಕಾವತಿ ವಸತಿ ಬಡಾವಣೆಯ ಮೂಲಸೌಕರ್ಯ ಸ್ಥಾಪನೆಗೆ ಬಿಡಿಎಗೆ ಹಣಕಾಸಿನ ನೆರವು ವಿಸ್ತರಿಸುವ ಕ್ರಮ ಕಂಪನಿಯ ಎಂಒಎ ಷರತ್ತು 26 ಮತ್ತು 27 ಅನ್ವಯ ಕವಿಪ್ರನಿನಿಯ ಉದ್ದೇಶ ಅನುಸರಣೆಯಾಗಿದೆ.

ತೀರ್ಮಾನ

ಮೇಲೆ ಉಲ್ಲೇಖಿಸಿದ ನಿಬಂಧನೆಗಳ ಸಂಯೋಜನೆ ಓದುವಿಕೆಯ ಮೇಲೆ ಅಂದರೆ ಕಂಪನಿಯ ಮೆಮೋರ್ಯಾಂಡಮ್ ಆಫ್ ಅಸೋಸಿಯೇಷನ್‌ನ ಷರತ್ತು 26 ಮತ್ತು 27 ರ ಅನ್ವಯ; ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 463(ಇ) ದಿನಾಂಕ: 05.06.2015 ರಿಂದ ಒದಗಿಸಲಾದ ವಿನಾಯಿತಿಗಳು, ಕಂಪನಿಯ ಎಂಒಎ ನ ಉದ್ದೇಶದನ್ವಯ ಬಿಡಿಎಗೆ ಹಣಕಾಸಿನ ನೆರವು ನೀಡುವ ವಹಿವಾಟು ಹೊರಗಿದೆ ಎಂದು ಊಹಿಸಲಾಗಿದೆ ಅದು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 186 ರ ವ್ಯಾಪ್ತಿಗೆ ಒಳಪಡುವುದಿಲ್ಲ.

ಆದ್ದರಿಂದ, ವಹಿವಾಟು ಮೆಮೋರ್ಯಾಂಡಮ್ ಆಫ್ ಅಸೋಸಿಯೇಷನ್‌ನ ಅಲ್ಲ ಮತ್ತು ಕಂಪನಿ ಕಾಯ್ದೆ, 2013 ರ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿಲ್ಲ ಎಂಬುದು ನಾವು ತೀರ್ಮಾನಿಸುತ್ತೇವೆ.

ಸಹಿ/–
ಅಂಕುಶ ಸೇತಿ
ಕಂಪನಿ ಕಾರ್ಯದರ್ಶಿ
ಎಮ್. ಸಂಖ್ಯೆ 42050
ಸಿಓಪಿ. ಸಂಖ್ಯೆ 15741

ದಿನಾಂಕ:30–11–2019
ಸ್ಥಳ: ಬೆಂಗಳೂರು

ಆಯವ್ಯಯ ಪಟ್ಟಿ 31.03.2020 ರಂದು ಇದ್ದಂತೆ

(ಮೊಬಲಗು ರೂ. ಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಲೆಕ್ಕ ಸಂಕೇತ	31 ಮಾರ್ಚ್-2020 ರಂದು ಇದ್ದಂತೆ		31 ಮಾರ್ಚ್-2019 ರಂದು ಇದ್ದಂತೆ		01 ಏಪ್ರಿಲ್-2018 ರಂದು ಇದ್ದಂತೆ	
ಆಸ್ತಿಗಳು								
ಪ್ರಸಕ್ತವಲ್ಲದ ಆಸ್ತಿಗಳು								
(ಎ) ಸ್ಥಾವರ ಸ್ವತ್ತು ಮತ್ತು ಸಲಕರಣೆ	2	10, 12, 16.2	13213 07 67 098		12049 21 42 355		11381 36 81 615	
(ಬಿ) ಪ್ರಗತಯಲ್ಲಿರುವ ಬಂಡವಾಳ ಕಾಮಗಾರಿಗಳು	3	14, 15	3511 00 03 599		3213 89 20 475		2371 65 40 512	
(ಸಿ) ಇತರೆ ಅರ್ಮೂತ ಸ್ವತ್ತುಗಳು	3ಎ	18	83 81 259		1 08 69 755			
(ಡಿ) ಸದ್ಭಾವನೆ								
(ಇ) ಆರ್ಥಿಕ ಸ್ವತ್ತುಗಳು								
(i)ಸಾಲಗಳು	4	28.935, 28.936	121 39 99 018		20 30 70 414		19 29 07 546	
(ii) ಇತರೆ	4ಎ	25, 26, 27, 28	1794 53 66 665		629 81 65 098		616 59 16 797	
(ಎಫ್) ಇತರೆ ಪ್ರಸಕ್ತವಲ್ಲದ ಸ್ವತ್ತುಗಳು	5	17,25, 26,27, 28, 28.4 ಯಿಂದ 28.9, 31 ಯಿಂದ 37	133 58 45 877		193 64 22 990		110 29 97 763	
				18774 43 63 516		16107 95 91 087		14499 20 44 233
ಪ್ರಸಕ್ತ ಆಸ್ತಿಗಳು								
(ಎ) ದಾಸ್ತಾನುಗಳು	6	22&16.1	84 97 85 965		72 93 06 821		60 81 41 199	
(ಬಿ) ಆರ್ಥಿಕ ಸ್ವತ್ತುಗಳು								
(i) ವ್ಯವಹಾರ ಸ್ವೀಕೃತಿಗಳು	7	23, 28.1	1063 17 25 651		676 96 36 611		661 95 30 785	
(ii) ನಗದು ಮತ್ತು ನಗದಿಗೆ ಸಮಾನವಾದದ್ದು	8	20, 24	73 60 71 717		52 74 59 151		130 31 40 350	
(iii) ಇತರೆ ಬ್ಯಾಂಕ್ ಉಳಿಕೆಗಳು	9	24.8, 20.2	131 61 59 093		106 95 97 056		90 30 80 779	
(iv) ಸಾಲಗಳು	10	25, 27	18 79 24 511		1 18 95 950		88 93 434	
(v) ಇತರೆ ಆರ್ಥಿಕ ಆಸ್ತಿಗಳು	11	28	277 85 81 241		256 57 06 720		236 48 02 808	
(ಸಿ)ಇತರೆ ಪ್ರಸಕ್ತ ಆಸ್ತಿಗಳು	12	16, 28.1 ಯಿಂದ 28.9	5 88 08 325	1655 90 56 503	6 99 73 910	1174 35 76 219	3 91 39 723	1184 67 29 078
ಒಟ್ಟು ಆಸ್ತಿಗಳು				20430 34 20 019		17282 31 67 306		15683 87 73 311
ಸ್ವಾಮ್ಯ								
ಸ್ವಾಮ್ಯ ಮತ್ತು ಹೊಣೆಗಾರಿಕೆಗಳು								
(ಎ) ಸ್ವಾಮ್ಯ ಷೇರು ಬಂಡವಾಳ	13	52.301	2182 32 25 000		2182 32 25 000		2182 32 25 000	
(ಬಿ) ಇತರೆ ಸ್ವಾಮ್ಯ	14	55 to 58	2548 80 97 642		2149 87 63 259		2072 18 80 250	
ಒಟ್ಟು ಸ್ವಾಮ್ಯ				4731 13 22 642		4332 19 88 259		4254 51 05 250
ಪ್ರಸಕ್ತವಲ್ಲದ ಹೊಣೆಗಾರಿಕೆಗಳು								
(ಎ) ಆರ್ಥಿಕ ಹೊಣೆಗಾರಿಕೆಗಳು								
(i) ಸಾಲಗಳು	15	51 ಯಿಂದ 54	6010 75 93 499		5258 77 81 522		4619 88 66 775	
(ii) ಇತರ ಹಣಕಾಸಿನ ಹೊಣೆಗಾರಿಕೆಗಳು	15ಎ		2303 04 19 413		253 61 09 195		461 06 57 919	
(ಬಿ) ಹವಣಿಕೆಗಳು	16	44	293 98 56 990		226 67 84 131		173 14 76 182	
(ಸಿ) ಮುಂದೂಡಿದ ತೆರಿಗೆ ಹೊಣೆ (ನಿವ್ವಳ)	17	46.802	1159 34 29 139		950 84 29 826		898 22 89 128	
(ಡಿ) ಇತರೆ ಪ್ರಸಕ್ತವಲ್ಲದ ಹೊಣೆಗಾರಿಕೆಗಳು	18	42 ಯಿಂದ 53	1549 01 39 589	11316 14 38 630	1932 19 29 545	8622 10 34 219	1740 97 59 542	7893 30 49 546
ಪ್ರಸಕ್ತ ಹೊಣೆಗಾರಿಕೆಗಳು								
(ಎ) ಆರ್ಥಿಕ ಹೊಣೆಗಾರಿಕೆಗಳು								
(i) ಸಾಲಗಳು	19	51 ಯಿಂದ 54	800 00 00 000		150 00 20 000		158 33 33 123	

ವಿವರಗಳು	ಟಿಪ್ಪಣಿ ಸಂಖ್ಯೆ	ಲೆಕ್ಕ ಸಂಕೇತ	31 ಮಾರ್ಚ್–2020 ರಂದು ಇದ್ದಂತೆ		31 ಮಾರ್ಚ್–2019 ರಂದು ಇದ್ದಂತೆ		01 ಏಪ್ರಿಲ್–2018 ರಂದು ಇದ್ದಂತೆ	
(ii) ವ್ಯವಹಾರದ ಪಾವತಿಗಳು								
(ಎ) ಎಂಎಸ್ಎಂಇ ಯ ಒಟ್ಟು ಬಾಕಿ			–		–			
(ಬಿ) ಎಂಎಸ್ಎಂಇ ಹೊರತುಪಡಿಸಿ ಜಮೆಯ ಒಟ್ಟು ಬಾಕಿ	**20**	**41**	**384 42 81 878**		**684 26 61 486**		**710 60 58 214**	
(iii)ಇತರ ಆರ್ಥಿಕ ಹೊಣೆಗಾರಿಕೆಗಳು	**21**	**46.9**	**1904 58 97 285**		**2161 19 23 818**		**1466 38 20 206**	
(ಬಿ) ಇತರ ಪ್ರಸಕ್ತ ಹೊಣೆಗಾರಿಕೆಗಳು	**22**	**42 ಯಿಂದ 46**	**265 41 81 402**		**230 38 15 701**		**223 97 95 689**	
(ಸಿ) ಹವಣಿಕೆಗಳು	**23**	**42,44,46**	**1028 62 98 182**		**1102 17 23 823**		**932 40 55 927**	
(ಡಿ) ಪ್ರಸ್ತುತ ಆದಾಯ ತೆರಿಗೆ ಹೊಣೆಗಾರಿಕೆಗಳು (ನಿವ್ವಳ)	**24**	**46.8**		**4383 06 58 747**		**4328 01 44 828**	**44 35 55 356**	**3536 06 18 516**
ಒಟ್ಟು ಸ್ವಾಮ್ಯ ಮತ್ತು ಹೊಣೆಗಾರಿಕೆಗಳು				**20430 34 20 019**		**17282 31 67 306**		**15683 87 73 312**

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು 1–37

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಸದಸ್ಯತ್ವ ಸಂಖ್ಯೆ : 003116ಎಸ್

ಸಹಿ/–
(ಡಾ. ಎನ್. ಮಂಜುಳ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಸಿದ್ಲಿಂಗಪ್ಪ ತೇಲಿ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ. ಸತೀಶ್ ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/–
(ರೂತ್.ಜಿ.ಮಿರಜ್ಕರ್)
ಆರ್ಥಿಕ ಸಲಹೆಗಾರರು(ಲೆ&ಸಂ)

ಸಹಿ/–
(ರಮ್ಯ ಕಣ್ಣನ್)
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ : 22–03–2021

31.03.2020ರ ವರ್ಷಾಂತ್ಯದ ಲಾಭ ಮತ್ತು ನಷ್ಟ ಖಾತೆ

(ಮೊಬಲಗು ರೂ. ಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಲೆಕ್ಕ ಸಂಕೇತ	ಪ್ರಸ್ತುತ ವರ್ಷ 2019–20	ಹಿಂದಿನ ವರ್ಷ 2018–19
I ಕಾರ್ಯಾಚರಣೆಗಳಿಂದ ಆದಾಯ (ವಿದ್ಯುತ್ ಪ್ರಸರಣ)	**25**	**61 & 62**	3520 88 68 032	2952 12 24 471
II ಇತರೆ ಆದಾಯ	**26**	**62**	226 06 01 890	178 76 63 070
III ಒಟ್ಟು ಆದಾಯ (I + II)			**3746 94 69 922**	**3130 88 87 541**
ವೆಚ್ಚ				
ಎ) ಸಿಬ್ಬಂದಿ ವೆಚ್ಚಗಳು	**27**	**75**	1154 68 43 272	1283 67 37 508
ಬಿ) ರಿಪೇರಿ ಮತ್ತು ನಿರ್ವಹಣೆ	**28**	**74**	305 63 81 050	270 93 42 370
ಸಿ) ಆಡಳಿತ ಮತ್ತು ಇತರ ವೆಚ್ಚಗಳು	**29**	**76**	131 60 32 697	116 62 33 134
ಡಿ) ಹಣಕಾಸು ವೆಚ್ಚ	**30**	**78**	457 91 06 018	391 54 38 678
ಇ) ಸವಕಳಿ ಮತ್ತು ಭೋಗ್ಯ	**31**	**77**	953 72 39 372	854 74 90 522
ಎಫ್) ಇತರ ವೆಚ್ಚಗಳು	**32**	**77, 79, 80**	4 53 55 180	9 75 91 331
ಒಟ್ಟು ವೆಚ್ಚಗಳು**(IV)**			**3008 09 57 589**	**2927 28 33 543**
ವಿಶೇಷ ಮತ್ತು ಅಸಾಧಾರಣ ಅಂಶಗಳು ಮತ್ತು ತೆರಿಗೆ ಮುಂಚಿನ ಲಾಭ/ನಷ್ಟ (III-IV+V)			**738 85 12 333**	**203 60 53 998**
ಕೂಡಿಸಿ / (ಕಳೆಯಿರಿ): ಅಸಾಧಾರಣ ಅಂಶಗಳು (ಹಿಂಪಡೆಯಲಾದ ಆದಾಯ)	**34**	**62**		
ಲಾಭ /ನಷ್ಟ ತೆರಿಗೆಯ ಮುಂಚೆ			**738 85 12 333**	**203 60 53 998**
ಕಳೆಯಿರಿ: ತೆರಿಗೆ ವೆಚ್ಚ				
ಆದಾಯ ತೆರಿಗೆ	**35**	**81.1**	131 41 78 637	73 30 30 291
ಮುಂದೂಡಲ್ಪಟ್ಟ ತೆರಿಗೆ	**36**	**81.201**	208 49 99 313	52 61 40 698
ಅವಧಿಗೆ ಲಾಭ / (ನಷ್ಟ)			**398 93 34 383**	**77 68 83 009**
ಇತರ ಸಮಗ್ರ ಆದಾಯ				
ಎ.1. ಲಾಭ ಅಥವಾ ನಷ್ಟದ ನಂತರ ಮರು ವರ್ಗೀಕರಿಸದ ವಸ್ತುಗಳು				
ಎ.2. ಮೇಲಿನ ವಸ್ತುಗಳಿಗೆ ಸಂಬಂಧಿಸಿದ ಆದಾಯ ತೆರಿಗೆ			–	–
ಬಿ.1. ಲಾಭ ಅಥವಾ ನಷ್ಟಕ್ಕೆ ತರುವಾಯ ಮರು ವರ್ಗೀಕರಿಸುವ ವಸ್ತುಗಳು			–	–
ಬಿ.2. ಮೇಲಿನ ವಸ್ತುಗಳಿಗೆ ಸಂಬಂಧಿಸಿದ ಆದಾಯ ತೆರಿಗೆ			–	–
ವರ್ಷದ ಒಟ್ಟುಇತರೆ ಸಮಗ್ರ ಆದಾಯ / (ನಷ್ಟ) (ತೆರಿಗೆಯ ನಿವ್ವಳ)			–	–
ವರ್ಷದ ಒಟ್ಟು ಸಮಗ್ರ ಆದಾಯ / (ನಷ್ಟ)			**398 93 34 383**	**77 68 83 009**

ಸ್ವಾಮ್ಯಸೇರಿಗೆ ಗಳಿಕೆಗಳು (ಐಎನ್ಆರ್ನಲ್ಲಿ)

ಸ್ವಾಮ್ಯ ಷೇರುಗಳ ಮುಖ ಬೆಲೆ: ಐಎನ್ಆರ್ 1,000 / –		
ಮೂಲ	182.80	35.60
ಗುಣ ತಗ್ಗಿದ	182.80	35.60
ಪ್ರತಿ ಸ್ವಾಮ್ಯ ಷೇರಿನ ಗಳಿಕೆಯನ್ನು ಕಂಪ್ಯೂಟಿಂಗ್		
ಮೂಲ	2 18 23 225	2 18 23 225
ಗುಣ ತಗ್ಗಿದ	2 18 23 225	2 18 23 225

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು **1–37**

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ	**ಸಹಿ/–**	**ಸಹಿ/–**
ಸನ್ನದಿತ ಲೆಕ್ಕಿಗರು	**(ಡಾ. ಎನ್. ಮಂಜುಳ)**	**(ಸಿದ್ಲಿಂಗಪ್ಪ ತೇಲಿ)**
ಸದಸ್ಯತ್ವ ಸಂಖ್ಯೆ : 003116ಎಸ್	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು (ಹಣಕಾಸು)
ಸಹಿ/–	**ಸಹಿ/–**	**ಸಹಿ/–**
ಬಿ. ಸತೀಶ್ ರಾವ್	**(ರೂತ್.ಜಿ.ಮಿರಜ್ಕರ್)**	**(ರಮ್ಯ ಕಣ್ಣನ್)**
ಪಾಲುದಾರರು	ಆರ್ಥಿಕ ಸಲಹೆಗಾರರು (ಲೆ&ಸಂ)	ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ. 024559		

ಸ್ಥಳ: ಬೆಂಗಳೂರು
ದಿನಾಂಕ : 22–03–2021

31.03.2020 ರ ವರ್ಷಾಂತ್ಯದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ

(ಮೊಬಲಗು ರೂ. ಗಳಲ್ಲಿ)

ವಿವರಗಳು	ಎ. ಸ್ವಾಮ್ಯ ಷೇರು ಬಂಡವಾಳ	ಬಿ. ಇತರೆ ಸ್ವಾಮ್ಯ		
		ಮೀಸಲು ಮತ್ತು ಹೆಚ್ಚವರಿ		ಒಟ್ಟು
		ಬಂಡವಾಳ ಮೀಸಲು	ಒಳಿಸಿದ ಗಳಿಕೆ	
ವರದಿ ಅವಧಿಯ ಆರಂಭಿಕ ಶಿಲ್ಕು (01/04/2018)	2182 32 25 000	7 45 46 563	2086 24 77 379	**2093 70 23 942**
ಬಂಡವಾಳ ಮೀಸಲು ಮರು ಹೊಂದಾಣಿಕೆ		–7 45 46 563	7 45 46 563	
ಸೇರಿಸಿ/(ಕಳೆಯಿರಿ):2018–19ರ ನಿವ್ವಳ ಹಿಂದಿನ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ)	–		–2 08 46 168	**–2 08 46 168**
ಸೇರಿಸಿ/(ಕಳೆಯಿರಿ):2018–19ರ ನಿವ್ವಳ ಹಿಂದಿನ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ)			–19 42 97 524	**–19 42 97 524**
ಹೊಂದಾಣಿಕೆಯಿಂದ ಆರಂಭಿಕ ಬಾಕಿಯ ವರದಿ ಮಾಡುವ ಅವಧಿಯ ಆರಂಭದಲ್ಲಿ (01/04/2018)	**2182 32 25 000**		**2072 18 80 250**	**2072 18 80 250**
ಸೇರಿಸಿ: ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2018–19ನೇ ಸಾಲಿಗೆ)	–	–	77 68 83 009	**77 68 83 009**
ಸೇರಿಸಿ /(ಕಡಿಮೆ): 2019–20ರ ನಿವ್ವಳ ಪೂರ್ವ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೊಡಿ)	–	–		
ವರದಿ ಅವಧಿಯ ಆರಂಭದಲ್ಲಿ (01/04/2019) ಮರು–ಹೊಂದಾಣಿಕೆಯಾದ ಆರಂಭಿಕ ಬಾಕಿ	**2182 32 25 000**		**2149 87 63 259**	**2149 87 63 259**
ಸೇರಿಸಿ:ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2019–20 ನೇ ಸಾಲಿನ)	–	–	398 93 34 383	**398 93 34 383**
ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (31/03/2020)	**2182 32 25 000**		**2548 80 97 642**	**2548 80 97 642**

ಗಮನಿಸಿ: ಕಂಪನಿಯು ಹಿಂದಿನ ವರ್ಷದ ನಿವ್ವಳ ಪೂರ್ವ ಅವಧಿಯ ಅಂಕಿ ಅಂಶಗಳನ್ನು ಮೀಸಲು ಮತ್ತು ಹೆಚ್ಚುವರಿ (ಉಳಿಸಿಕೊಂಡಿರುವ ಗಳಿಕೆ) ಗೆ ಹೊಂದಿಸಿದೆ (ಟಿಪ್ಪಣಿ ಸಂಖ್ಯೆ 33 ನೋಡಿ)

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಸದಸ್ಯತ್ವ ಸಂಖ್ಯೆ : 003116ಎಸ್

ಸಹಿ/–
(ಡಾ. ಎನ್. ಮಂಜುಳ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಸಿದ್ಲಿಂಗಪ್ಪ ತೇಲಿ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ. ಸತೀಶ್ ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/–
(ರೂತ್.ಜಿ.ಮಿರಜ್‌ಕರ್)
ಆರ್ಥಿಕ ಸಲಹೆಗಾರರು(ಲೆ&ಸಂ)

ಸಹಿ/–
(ರಮ್ಯ ಕಣ್ಣನ್)
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ : 22–03–2021

31 ಮಾರ್ಚ್–2020 ರ ಅಂತ್ಯಕ್ಕೆ ನಗದು ಹರಿವಿನ ಪಟ್ಟಿ **(ಮೊಬಲಗು ರೂ. ಗಳಲ್ಲಿ)**

		ವಿವರಗಳು	31 ಮಾರ್ಚ್–2020ರ ವರ್ಷಾಂತ್ಯಕ್ಕೆ ಇದ್ದಂತೆ	31 ಮಾರ್ಚ್–2019ರ ವರ್ಷಾಂತ್ಯಕ್ಕೆ ಇದ್ದಂತೆ
I		**ಕಾರ್ಯಾಚರಣೆಯಿಂದ ಬಂದ ನಗದು ಹರಿವು**		
		ತೆರಿಗೆ ಪೂರ್ವ ಲಾಭ/ನಷ್ಟ	738 85 12 333	203 60 53 998
		ಮುಂದೂಡಲ್ಪಟ್ಟ ನಿಯಂತ್ರಿತ ಆದಾಯಕ್ಕಾಗಿ ಹೊಂದಾಣಿಕೆ		
		ಹೊಂದಾಣಿಕೆಗಳು		
	i	ಸವಕಳಿ ಮತ್ತು ಋಣಮುಕ್ತತೆ ವೆಚ್ಚ	953 72 39 372	854 74 90 522
	ii	ಹಿಂದಿನ ವರ್ಷದ ಹೆಚ್ಚುವರಿ ಹವಣಿಗಳನ್ನು ಹಿಂಪಡೆಯುವುದು	–12 32 69 999	– 85 60 724
	iii	ಗ್ರಾಹಕರ ಕೊಡುಗೆಯಿಂದ ಬಂದ ಆಸ್ತಿಗಳ ಮೇಲಿನ ಸವಕಳಿ	–98 57 20 333	–72 05 43 501
	iv	ಉಗ್ರಾಣ ಕೊರತೆಗೆ ಹವಣಿಕೆ	– 10 82 306	13 53 256
	v	ದಾಸ್ತಾನುಗಳ ಮಾರಾಟದಿಂದ ಬಂದ ಲಾಭ	–1 59 23 353	– 91 36 105
	vi	ನಿರುಪಯುಕ್ತ ಸಾಮಾಗ್ರಿಗಳ ಮಾರಾಟದಿಂದ ಬಂದ ಲಾಭ		– 16 39 246
	vii	ಬಿಡುಗಡೆ ಹೊಂದಿದ ಆಸ್ತಿಗಳ ಮಾರಾಟದಿಂದ ಬಂದ ಆದಾಯ	–2 22 09 450	–6 11 71 251
	viii	ಇತರೆ ಸ್ವೀಕೃತಿಗಳು ತೊಡೆದು ಹಾಕಿರುವುದು & ವಿಶೇಷ ಅಂಶಗಳು	1 86 87 778	3 19 29 556
	ix	ಬಡ್ಡಿಯಿಂದ ಬಂದ ಆದಾಯ	–1 60 14 375	–5 00 90 743
	x	ಹಿಂದಿನ ಅವಧಿಯ ಹೊಂದಾಣಿಕೆ		
	xi	ಆರ್ಥಿಕ ವೆಚ್ಚಗಳು	457 91 06 018	391 54 38 678
		ಕಾರ್ಯನಿರತ ಬಂಡವಾಳದ ಬದಲಾವಣೆಗೆ ಮುಂಚಿನ ಕ್ರಿಯಾತ್ಮಕ ಲಾಭ/ನಷ್ಟ	**2035 93 25 683**	**1368 11 24 440**
		ಕಾರ್ಯಾಚರಣೆಯಿಂದ ಬದಲಾವಣೆ ಹೊಂದಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು		
	i	ಸ್ವೀಕೃತಿಗಳಲ್ಲಿನ ಹೆಚ್ಚಳ/ಕಡಿಮೆ	–386 20 89 040	–15 01 05 826
	ii	ದಾಸ್ತಾನುಗಳಲ್ಲಿನ ಹೆಚ್ಚಳ/ಕಡಿಮೆ	–11 93 96 838	–12 25 18 878
	iii	ಪ್ರಸಕ್ತ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ	–18 22 63 912	–19 17 21 052
	iv	ಪ್ರಸಕ್ತ ಹೊಣೆಗಾರಿಕೆಗಳ/ಹವಣಿಕೆಗಳಲ್ಲಿನ ಹೆಚ್ಚಳ/ಕಡಿಮೆ	–573 53 80 029	818 42 57 740
	v	ಪ್ರಸಕ್ತವಲ್ಲದ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ	–1205 75 53 057	–97 58 36 396
	vi	ಪ್ರಸಕ್ತವಲ್ಲದ ಬಾಧ್ಯತೆಗಳ/ ಹೊಣೆಗಾರಿಕೆಗಳಲ್ಲಿನ ಹೆಚ್ಚಳ/ಕಡಿಮೆ	–320 47 43 788	143 61 24 515
	vii	ಪ್ರಸ್ತುತವಲ್ಲದ ಹಣಕಾಸು ಹೊಣೆಗಾರಿಕೆಗಳಲ್ಲಿ ಹೆಚ್ಚಳ/ಕಡಿಮೆ	2049 43 10 219	–207 45 48 725
	vii	ಸಾಲಗಳಲ್ಲಿನ ಹೆಚ್ಚಳ/ಕಡಿಮೆ	–17 60 28 561	– 30 02 516
		ಕಾರ್ಯಾಚರಣೆಯಿಂದ ಉದ್ಭವಿಸಿದ ನಗದು	**1551 61 80 678**	**1978 37 73 301**
		ಕೂಡಿಸಿ/ಕಳೆಯಿರಿ: ಪಾವತಿಸಿದ ಆದಾಯ ತೆರಿಗೆ (ಮರುಪಾವತಿಯ ನಿವ್ವಳ)	–140 49 94 690	–90 58 87 872
		ಕಾರ್ಯಾಚರಣೆಯಿಂದ ಬಂದ ನಿವ್ವಳ ಹಣದ ಒಳ ಹರಿವು (ಎ)	**1411 11 85 988**	**1887 78 85 429**
II		**ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು**		
	i	ಪಿಪಿಇ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ	–2307 58 73 811	–2288 16 99 668
	ii	ಬ್ಯಾಂಕ್ ಠೇವಣಿಗಳಿಂದ 3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳ ನಿವ್ವಳ ಹೆಚ್ಚಳ/ಕಡಿಮೆ	–24 65 62 037	–16 65 16 277
	iii	ಬಡ್ಡಿಯಿಂದ ಬಂದ ಆದಾಯ	1 60 14 375	5 00 90 743
		ಹೊಡಿಕೆಯ ಚಟುವಟಿಕೆಗಳಿಂದ ನಿವ್ವಳ ಹಣದ ಒಳ ಹರಿವು (ಬಿ)	**–2330 64 21 473**	**–2299 81 25 201**
III		**ಆರ್ಥಿಕ ಚಟುವಟಿಗಳಿಂದ ಹಣದ ಹರಿವು**		
	i	ಬಂಡವಾಳ ಕಾಮಗಾರಿಗಳಿಗಾಗಿ ಪಡೆದ ದೇಣಿಗೆ ಮತ್ತು ಅನುದಾನ	103 17 47 023	173 18 96 938

ವಿವರಗಳು			31 ಮಾರ್ಚ್–2020ರ ವರ್ಷಾಂತ್ಯಕ್ಕೆ ಇದ್ದಂತೆ	31 ಮಾರ್ಚ್–2019ರ ವರ್ಷಾಂತ್ಯಕ್ಕೆ ಇದ್ದಂತೆ
	ii	ಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು	752 57 93 421	639 48 14 747
	iii	ಅಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು	649 39 98 556	–8 92 13 123
	iv	ಆರ್ಥಿಕ ಮತ್ತು ಇತರೆ ಖರ್ಚುಗಳು	–564 76 90 948	–469 29 39 992
		ಆರ್ಥಿಕ ಚಟುವಟಿಕೆಗಳಿಂದ ನಿವ್ವಳ ನಗದು ಒಳ ಹರಿವು (ಸಿ)	**940 38 48 052**	**334 45 58 570**
		ನಿವ್ವಳ ಬದಲಾವಣೆ ನಗದು ಮತ್ತು ನಗದಿಗೆ ಸರಿಸಮಾನವಾದುದು (ಎ+ಬಿ+ಸಿ)	**20 86 12 566**	**–77 56 81 199**
		ಕೂಡಿರಿ: ಆರಂಭಿಕ ನಗದು ಮತ್ತು ನಗದಿಗೆ ಸರಿಸಮಾನವಾದುದು 01.04.2019	52 74 59 151	130 31 40 350
		31.03.2020 ರಂದು ಇದ್ದಂತೆ ಅಂತಿಮ ನಗದು ಮತ್ತು ನಗದಿಗೆ ಸರಿಸಮಾನವಾದುದು	**73 60 71 717**	**52 74 59 151**

ಟಿಪ್ಪಣಿ– 1)ಹಣ ಚಲಾವಣೆ ವಿವರಣೆ ಅನುಬಂಧವನ್ನು "ಪರೋಕ್ಷ ವಿಧಾನದಲ್ಲಿ" ಲೆಕ್ಕ ಪದ್ಧತಿ–7 "ಹಣ ಚಲಾವಣೆ ವಿವರಣೆಗಳೂ" ಪ್ರಕಾರ ಪರೋಕ್ಷ ವಿಧಾನದಲ್ಲಿ ಸಿದ್ಧಪಡಿಸಲಾಗಿದೆ.

ಟಿಪ್ಪಣಿ–2) ಕಂಪನಿಯು ಹೊಂದಿರುವ ನಗದು ಮತ್ತು ನಗದು ಸಮನಾದ ಬಾಕಿಗಳು INR 3,14,371/– (ಹಿಂದಿನ ವರ್ಷ :INR 4,19,268/–) ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಮತ್ತು INR 20,783/– (ಹಿಂದಿನ ವರ್ಷ : INR 20,607/–) ಫ್ಯಾಮಿಲಿ ಬೆನಿಫಿಟ್ ಫಂಡ್‌ಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನತೆಗಳು INR 4,52,23,316/– (ಹಿಂದಿನ ವರ್ಷ :INR 7,57,47,477/) ಅಲ್ಪಾವಧಿಯ ಮುಕ್ತ ಪ್ರವೇಶ ಗ್ರಾಹಕರಿಂದ UI ಶುಲ್ಕಗಳಿಗೆ ಸಂಗ್ರಹಿಸಲಾಗಿದೆ, ಇದು ESCOM'sಗೆ ಪಾವತಿಸಬೇಕಾಗುತ್ತದೆ/ ಹೊಂದಿಸಬಹುದಾಗಿದೆ. ನಗದು ಮತ್ತು ನಗದು ಸಮಾನವಾದ INR 2,38,08,666 (ಹಿಂದಿನ ವರ್ಷ INR: Nil) ರಾಜ್ಯ ಆಯೋಗವು ನಿರ್ದಿಷ್ಟಪಡಿಸಿದಂತೆ ಉದ್ದೇಶಕ್ಕಾಗಿ ವಿದ್ಯುತ್ ವ್ಯವಸ್ಥೆ ಅಭಿವೃದ್ಧಿ ನಿಧಿಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನವಾದ INR 5,17,254/– (ಹಿಂದಿನ ವರ್ಷ : INR 5,99,461/–) ಮತ್ತು INR 2,731/– (ಹಿಂದಿನ ವರ್ಷ: INR 61,831/–) ಕ್ರಮವಾಗಿ ಜಿಇಸಿ ಮತ್ತು ಪಿಎಸ್‌ಡಿಎಫ್ ಅನುದಾನಕ್ಕೆ ಮೀಸಲಿಡಲಾಗಿದೆ.

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ
ಅವಿಭಾಜ್ಯ ಅಂಗವಾಗಿದೆ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಸದಸ್ಯತ್ವ ಸಂಖ್ಯೆ : 003116ಎಸ್

ಸಹಿ/–
(ಡಾ. ಎನ್. ಮಂಜುಳ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಸಿದ್ಲಿಂಗಪ್ಪ ತೇಲಿ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ. ಸತೀಶ್ ರಾವ್
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/–
(ರೂತ್.ಜಿ.ಮಿರಜ್‌ಕರ್)
ಆರ್ಥಿಕ ಸಲಹೆಗಾರರು (ಲೆ&ಸಂ)

ಸಹಿ/–
(ರಮ್ಯ ಕಣ್ಣನ್)
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ : 22–03–2021

ಟಿಪ್ಪಣಿ:1 ಕಂಪನಿಯ ಅವಲೋಕನ ಮತ್ತು ಗಮನಾರ್ಹ ಲೆಕ್ಕ ಪದ್ಧತಿ ನೀತಿಗಳು

1.1 ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತದಲ್ಲಿ ನೆಲೆಸಿದೆ ಮತ್ತು ಸಂಘಟಿತವಾಗಿದೆ. ಇದು ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ. ಕವಿಪ್ರನಿನಿಯು ಎಸ್ಕಾಂಗಳಿಗೆ ಹಾಗೂ ಮುಕ್ತ ಪ್ರವೇಶ ಗ್ರಾಹಕರಿಗೆ ಮತ್ತು ಇತರರಿಗೆ ವಿದ್ಯುತ್ ಪ್ರಸರಣವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿದೆ.

1.2 ಆರ್ಥಿಕ ಪತ್ರ ಸಿದ್ದಪಡಿಸುವಿಕೆಗೆ ಆಧಾರಗಳು

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS)ಅನುಗುಣವಾಗಿ, ಐತಿಹಾಸಿಕ ವೆಚ್ಚ (Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ) ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು (ಟಿಪ್ಪಣಿ 1.12 (ಎಫ್)ಗೆ ಒಳಪಟ್ಟಿರುತ್ತದೆ) ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3 ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ಮುಂದಿನ ತಿದ್ದುಪಡಿ ನಿಯಮಗಳನ್ನು ಒಳಗೊಂಡಂತೆ ಅಧಿನಿಯಮದ ಪ್ರಕರಣ 133 ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. 31.03.2016ಕ್ಕೆ ಅಂತ್ಯಗೊಂಡಂತಹ ಅವಧಿಯ ಆರ್ಥಿಕ ಪಟ್ಟಿಗಳನ್ನು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ (ಹಿಂದಿನ ಭಾರತೀಯ ಜಿಎಎಪಿ) ನಿಯಮ 7ರೊಂದಿಗೆ ಓದಲಾದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚಯದ 133ರಡಿಯಲ್ಲಿ ಅಧಿಸೂಚಿತವಾದ ಲೆಕ್ಕಪತ್ರ ಮಾನದಂಡಗಳಿಗನುಗುಣವಾಗಿ ಸಿದ್ಧಪಡಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ಅಧಿಸೂಚಿಸಿದಂತೆ, ಕಡ್ಡಾಯ ಅವಶ್ಯಕತೆಗನುಸಾರವಾಗಿ, ಕಂಪನಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳ) ನಿಯಮಗಳು, 2015ರಡಿಯಲ್ಲಿ ಅಧಿಸೂಚಿತವಾದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-ASl01– ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆ) ಅನುಗುಣವಾಗಿ 31.03.2017ಕ್ಕೆ ಅಂತ್ಯವಾಗುವ ವರ್ಷಕ್ಕೆ ತನ್ನ ಆರ್ಥಿಕ ಪಟ್ಟಿಗಳನ್ನು ಸಿದ್ಧಪಡಿಸಿದೆ. ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳಿಂದ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಸಹ ತಿಳಿಸಲಾಗಿದೆ.

ಸಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅವಶ್ಯವಿರುವ, ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳಿಗೆ ಪುನರಾವರ್ತನೆಯಾಗಿದೆಯೋ ಅಂತಹ ಸ್ಥಳಗಳನ್ನು ಬಿಟ್ಟು ಉಳಿದಿರುವೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಡಿ. ನಿಗಮದ ಕಾರ್ಯಾಚರಣೆ ಕಾಲಿಕವನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು, ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

1.3 ಅಂದಾಜು ಪಟ್ಟಿಗಳ ಉಪಯೋಗ

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜುಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಸುವಿಕೆಗೆ ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಿಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಿಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳಲ್ಲಿ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

ಲೆಕ್ಕಶೀರ್ಷಿಕೆ "ಸಾಮಗ್ರಿಗಳ ಸರಬರಾಜಿನಲ್ಲಿ ಹಕ್ಕುಬಾಧ್ಯತೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ನಿಯಂತ್ರಣ ಲೆಕ್ಕಪತ್ರ"ದಡಿಯಲ್ಲಿ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, ಯಾವುದೇ ಕ್ಲೇಮು ಮಾಡಿಲ್ಲದ ಹಕ್ಕುಬಾಧ್ಯತೆ/ಚಾಲ್ತಿಯಲ್ಲಿರುವ ಹಕ್ಕುಬಾಧ್ಯತೆಗಳು, ಯಾವುದೇ ವಿವಾದವಿಲ್ಲದೇ 10 ವರ್ಷಗಳಿಗೂ ಮೀರಿದ ಅವಧಿಗೆ ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದಲ್ಲಿದ್ದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವುದು ಮುಂದುವರಿದರೆ, ಅವುಗಳನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗುವುದು.

1.4 ದಾಸ್ತಾನುಗಳ ಮೌಲ್ಯೀಕರಣ

ಎ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ. ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.

ಬಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಿ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ 90ರ ದರದ ಪ್ರಕಾರ ಇಳಿತಗೊಳಿಸಿ, ಉಳಿದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

1.5 ನಗದು ಹರಿವಿನ ವಿವರಣಾ ಪಟ್ಟಿ

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು–ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ, ಯಾವುದೇ ಮೂಂದೂಡಲ್ಪಡ ಬಹುದಾದ ಅಥವಾ ಹಿಂದಿನ ಅವಧಿಯ ಸಂಚಯನಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ

ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

1.6 ಹಿಂದಿನ ಅವಧಿಯ ಬಾಬ್ತುಗಳು:

ಸಾಮಗ್ರಿಗಳ ಪೂರ್ವಾವಧಿಯ ತಪ್ಪುಗಳು/ದೋಷಗಳನ್ನು ಮರು ಪರಿಶೀಲನೆಯಿಂದ ಸರಿಪಡಿಸಲಾಗಿದ್ದು,ತಪ್ಪು ಸಂಭವಿಸಿದ ಅವಧಿಯ/ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು.ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳು, ಬಾಧ್ಯತೆಗಳು ಮತ್ತು ಸ್ವಾಮ್ಯಗಳ ಪ್ರಾರಂಭಿಕ ಉಳಿಕೆಗಳನ್ನು ಮಂಡಿಸುವುದು.ಒಟ್ಟು ಸ್ಥಾವರದ ಆಸ್ತಿಗಳ ಮೇಲೆ ಮತ್ತು ಸಲಕರಣೆಗಳ ಮೇಲೆ 1% ಮಿತಿಗಿಂತ ಕೆಳಗಿನ ಪೂರ್ವಾವಧಿಯ ದೋಷಗಳನ್ನು ಕಂಪನಿಗೆ ಪ್ರಸಕ್ತ ವರ್ಷದಲ್ಲಿ ಲೆಕ್ಕಿಕರೀಸಲಾಗಿದೆ.

1.7 ಕಾರ್ಯಾಚರಣಾ ವಿಭಾಗಗಳು

IND AS 108ಗೆ ಅನುಗುಣವಾಗಿ,ವಿಭಾಗದ ಮಾಹಿತಿಯನ್ನು ಪ್ರಸ್ತುತಪಡಿಸಲು ಬಳಸುವ ಆಪರೇಟಿಂಗ್ ವಿಭಾಗಗಳನ್ನು ಕಂಪನಿಯ ನಿರ್ವಹಣೆ ವಿಭಾಗಗಳಿಗೆ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಮತ್ತು ಅವುಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಬಳಸುವ ಆಂತರಿಕ ವರದಿಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ. ನಿರ್ದೇಶಕರ ಮಂಡಳಿಯು ಒಟ್ಟಾರೆಯಾಗಿ ಕಂಪನಿಯ 'ಮುಖ್ಯ ಕಾರ್ಯಾಚರಣೆಯ ನಿರ್ಧಾರಕರು' ಅಥವಾ 'ಸಿಒಡಿಎಂ' IND AS 108 ರ ಅರ್ಥದಲ್ಲಿದೆ.ಆಂತರಿಕ ವರದಿ ಮಾಡುವ ಉದ್ದೇಶಗಳಿಗಾಗಿ ಬಳಸಲಾಗುವ ಸೂಚಕಗಳು ಸ್ಥಳ ನಿರ್ವಹಣಾ ವಿಭಾಗಗಳಲ್ಲಿ ಹಾಕಲಾದ ಕಾರ್ಯಕ್ಷಮತೆ ಮೌಲ್ಯಮಾಪನ ಕ್ರಮಗಳಿಗೆ ಸಂಬಂಧಿಸಿದಂತೆ ವಿಕಸನಗೊಳ್ಳಬಹುದು.

1.8 ಆದಾಯ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ

ಪ್ರಸ್ತುತ ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ.ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ.ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳ ಲಾಭದಿಂದ ಕಂಡುಹಿಡಿಯಲಾಗುತ್ತದೆ.ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು, ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಃಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ, ಕಂಡುಹಿಡಿಯಲಾಗುತ್ತದೆ.ವರದಿ ಮಾಡುವ ಪ್ರತಿ ದಿನಾಂಕದಂದು ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳನ್ನು ಪುನರ್ ಪರಿಶೀಲನೆ ಮಾಡಲಾಗುತ್ತದೆ ಮತ್ತು ಅದನ್ನು ಸಂಬಂಧಪಟ್ಟ ತೆರಿಗೆ ಲಾಭವನ್ನು ಅರಿಯುವ ಸಂಭವವಿಲ್ಲ ಎಂಬುವಷ್ಟರ ಮಟ್ಟಿಗೆ ಕಡಿಮೆಗೊಳಿಸಲಾಗುತ್ತದೆ. ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಆಯವ್ಯಯ ಪಟ್ಟಿಯ ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ

ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತಿ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತಿ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ. ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರಮಟ್ಟಿಗೆ ಕಂಡುಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ. ಇದಕ್ಕೆ ಪ್ರತಿಯಾಗಿ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

1.9 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ. ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ, ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಕಾಮಗಾರಿ ವೃತ್ತ ಮತ್ತು ಬೃಹತ್ ಕಾಮಗಾರಿ ವಿಭಾಗದ ಸಿಬ್ಬಂದಿ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳು ನೇರವಾಗಿ ಸದರಿ ವಿಭಾಗದಲ್ಲಿ ನಿರ್ವಹಿಸಿದ ಬಂಡವಾಳ ಕಾಮಗಾರಿಗಳಿಗೆ ಸಂಬಂಧಪಟ್ಟಿರುತ್ತದೆ ಹಾಗೂ ಆಸ್ತಿ ಮೌಲ್ಯವನ್ನ ಒಳಗೊಂಡಿರುತ್ತದೆ. ಗುತ್ತಿಗೆದಾರರಿಗೆ ನೀಡಿದ ಕಾಮಗಾರಿಯನ್ನು ನಿಗಧಿತ ಅವಧಿಗಿಂತ ಮುಂಚಿತವಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆದಾರರಿಗೆ ನೀಡುವ ಪ್ರೋತ್ಸಾಹ ಧನವನ್ನು ಸದರಿ ಬಂಡವಾಳ ಕಾಮಗಾರಿಯ ವೆಚ್ಚಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಸಿ. ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ಅಂದಾಜು ಮೌಲ್ಯದ ಪ್ರಕಾರ ಲೆಕ್ಕಪುಸ್ತಕಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚು ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ. ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ' ಅಡಿಯಲ್ಲಿ ತೋರಿಸಲಾಗುತ್ತದೆ.

ಎಫ್. ಪಿಪಿಇಗೆ ಸಂಬಂಧಿಸಿದ ನಂತರದ ಖರ್ಚುಗಳು ಪಿಪಿಇಗಾಗಿ ಗುರುತಿಸುವಿಕೆ ಮಾನದಂಡಗಳನ್ನು ಪೂರೈಸಿದಾಗ ಮಾತ್ರ ಬಂಡವಾಳೀಕರಿಸಲಾಗುವುದು ಮತ್ತು ಆಸ್ತಿಗಳಿಗೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಹರಿಯುತ್ತವೆ ಮತ್ತು ವಸ್ತುವಿನ ಬೆಲೆಯನ್ನು ವಿಶ್ವಾಸಾರ್ಹವಾಗಿ ಅಳೆಯಬಹುದು.

ಜಿ. ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಃಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್. ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯಗೊಳಿಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೆ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ)ವೂ ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿ ಕಾರ್ಯಸ್ಥಗಿತಗೊಳಿಸುವ ಪ್ರಸ್ತುತ ವೆಚ್ಚವನ್ನು ಆಸ್ತಿ ಅಂದಾಜು ವೆಚ್ಚದ ಮೌಲ್ಯದಲ್ಲಿ ಪರಿಗಣಿಸಿ ಪಿ.ಪಿ.ಇ.ಗೆ ಆಸ್ತಿಕಾರ್ಯಸ್ಥಗಿತಗೊಳಿಸುವ ವೆಚ್ಚವನ್ನು ಬಂಡವಾಳೀಕರಣ ಮಾಡಲಾಗುವುದಿಲ್ಲ.

ಜೆ. ಕಾರ್ಯಕ್ಷಮತೆಯಿಲ್ಲದ ಕಾರಣ ಅಥವಾ ದೋಷಯುಕ್ತ ಉತ್ಪನ್ನಗಳ ಪೂರೈಕೆಯಿಂದಾಗಿ ಸರಬರಾಜುದಾರ/ಗುತ್ತಿಗೆದಾರರಿಂದ ಬ್ಯಾಂಕ್ ಗ್ಯಾರಂಟಿ ಅನ್ನು ಆಸ್ತಿಯ ವೆಚ್ಚದಿಂದ ಸರಿಹೊಂದಿಸಲಾಗಿದೆ.ಇವುಗಳನ್ನು ಯೋಜನೆಯೊಂದಿಗೆ ನೇರವಾಗಿ ಗುರುತಿಸಬಹುದಾಗಿದ್ದರೆ ಮತ್ತು ಹೆಚ್ಚುವರಿ ಯೋಜನಾ ವೆಚ್ಚವನ್ನು ಕಂಪನಿಯು ತಗ್ಗಿಸಲು ಸ್ವೀಕರಿಸಿದರೆ ಆಸ್ತಿಯ ವೆಚ್ಚದ ಭಾಗವಾಗಿ ಬಂಡವಾಳೀಕರಿಸುವುದು.ಇಲ್ಲದಿದ್ದರೆ ಅದನ್ನು ಆದಾಯವೆಂದು ಪರಿಗಣಿಸಬೇಕು.

1.10 ಹೂಡಿಕೆ ಸ್ವತ್ತುಗಳು

ಧೀರ್ಘಾವಧಿಯ ಬಾಡಿಗೆಗಾಗಿ ಅಥವಾ ಬಂಡವಾಳದ ಏರಿಕೆಗಾಗಿ ಅಥವಾ ಎರಡಕ್ಕೂ ಇರುವ ಆಸ್ತಿಯನ್ನು ಮತ್ತು ಕಂಪನಿಯು ಸ್ವಾಧೀನ ಪಡಿಸಿಕೊಳ್ಳದೇ ಇದ್ದಲ್ಲಿ, ಅದನ್ನು ಹೂಡಿಕೆ ಆಸ್ತಿ ಎಂದು ವರ್ಗೀಕರಿಸಲಾಗಿದೆ. ಹೂಡಿಕೆಯ ಆಸ್ತಿಯನ್ನು ಆರಂಭದಲ್ಲಿ ಅದರ ವೆಚ್ಚದಲ್ಲಿ ಅಳೆಯಲಾಗುತ್ತದೆ, ಇದರಲ್ಲಿ ಸಂಬಂಧಿತ ವಹಿವಾಟು ವೆಚ್ಚಗಳು ಮತ್ತು ಅನ್ವಯವಾಗುವ ಸಾಲ ವೆಚ್ಚ್ಚ ಸೇರಿವೆ. ನಂತರದ ಖರ್ಚನ್ನು ಆಸ್ತಿಯ ಸಾಗಿಸುವ ಮೊತ್ತಕ್ಕೆ ಬಂಡವಾಳೀಕರಿಸಿದಾಗ ಅದು ಖರ್ಚಿಗೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಹರಿಯುತ್ತದೆ ಮತ್ತು ವಸ್ತುವಿನ ಬೆಲೆಯನ್ನು ವಿಶ್ವಾಸಾರ್ಹವಾಗಿ ಅಳೆಯಬಹುದು.

ಹೂಡಿಕೆಯ ಆಸ್ತಿಯನ್ನು ಗುರುತಿಸಲಾಗದಿದ್ದಾಗ ವಿಲೇವಾರಿ ಮಾಡಿದ ನಂತರ ಅಥವಾ ಹೂಡಿಕೆಯ ಆಸ್ತಿಯನ್ನು ಅದರ ಪ್ರಸ್ತುತ ಬಳಕೆಯಿಂದ ಶಾಶ್ವತವಾಗಿ ಹಿಂತೆಗೆದುಕೊಂಡಾಗ ಮತ್ತು ವಿಲೇವಾರಿಯಿಂದ ಭವಿಷ್ಯದ ಯಾವುದೇ ಆರ್ಥಿಕ ಪ್ರಯೋಜನಗಳನ್ನು ನಿರೀಕ್ಷಿಸಲಾಗುವುದಿಲ್ಲ.

ಆಸ್ತಿಯನ್ನು ಗುರುತಿಸದಿದ್ದಾಗ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೇವಾರಿ ಆದಾಯ ಮತ್ತು ಆಸ್ತಿಯ ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸ ಎಂದು ಲೆಕ್ಕಹಾಕಲಾಗುತ್ತದೆ) ಆಸ್ತಿಯನ್ನು ಗುರುತಿಸದ ಅವಧಿಯಲ್ಲಿ ಲಾಭ ಅಥವಾ ನಷ್ಟದಲ್ಲಿ ಸೇರಿಸಲಾಗುತ್ತದೆ. ಉಚಿತ ಹಿಡುವಳಿ ಭೂಮಿಯನ್ನು ಹೊರತುಪಡಿಸಿ ಹೂಡಿಕೆಯ ಗುಣಲಕ್ಷಣಗಳನ್ನು ಅವುಗಳ ಅಂದಾಜು ಉಪಯುಕ್ತ ಜೀವನದ ಮೇಲೆ ನೇರ ರೇಖೆಯು ವಿಧಾನವನ್ನು ಬಳಸಿಕೊಂಡು ಸವಕಳಿ ಮಾಡಲಾಗುತ್ತದೆ.

1.11 ಸವಕಳಿ

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯ ಅನುಸಾರ, ಸವಕಳಿ ದರಗಳು ಈ ಕೆಳಗಿನಂತಿದೆ:

ಕ್ರಮ ಸಂಖ್ಯೆ	ವಿವರಗಳು	ಸವಕಳಿ ದರಗಳು
1	ಕಟ್ಟಡಗಳು ಮತ್ತು ರಸ್ತೆಗಳು	3.34%
2	ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಗ್ರಿಗಳು, ಪೀಠೋಪಕರಣಗಳು ಮತ್ತು ಅಳಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ನೊಂದಣಿ ಪುಸ್ತಕ, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು	6.33%
3	ಟ್ರಕ್‌ಗಳು, ಟೆಂಪೋಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು ಮತ್ತು ಇತರೆ ವಾಹನಗಳು	9.50%
4	ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು	15.00%
5	ಮರದ ರಚನೆಗಳಂತಹ ತಾತ್ಕಾಲಿಕ ರಚನೆ	100.00%
6	ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು	5.28%

ಬಿ. ಆಸ್ತಿಗಳ ಮೌಲ್ಯದ ಶೇ.90ರ ವರೆಗೆ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 01.04.2007 ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.03.2007 ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ ವಿಸರ್ಜಿಸಿದ/ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.500/–ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಎಫ್. ಭೋಗ್ಯಾಧಾರಿತ ನಿರ್ಮಿತ ಮೇಲೆ ವಿಧಿಸಲಾದ ಸವಕಳಿ ಈ ಕೆಳಗಿನಂತೆ ಇರುತ್ತದೆ.

(i) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರ ಆಸ್ತಿ, ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ 90ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(ii) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100 ರ ಪ್ರಮಾಣಾದಂತೆ, ಅಥವಾ ಭೋಗ್ಯಾಧಾರಿತ ಅವಧಿ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಬಿಡುಗಡೆಯಾದ ಸ್ವತ್ತುಗಳ ಸವಕಳಿ(ಬಳಕೆಯಲ್ಲಿದ ಸ್ವತ್ತುಗಳು) ಮತ್ತು ರಿಪೇರಿಗಾಗಿ ಬಿಡುಗಡೆ ಮಾಡಲಾದ ಸ್ವತ್ತುಗಳನ್ನು ಟಿಪ್ಪಣಿ 1.11ಎ ಅಡಿಯಲ್ಲಿ ಸೂಚಿಸಲಾದ ದರದಲ್ಲಿ ಆಸ್ವತ್ತುಗಳ ಲಿಖಿತ ಮೌಲ್ಯದ ಮೇಲೆ ಲಿಖಿತ ಮೌಲ್ಯದ ವಿಧಾನದಲ್ಲಿ ವಿಧಿಸಲಾಗುತ್ತದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೇವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣೆ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರ ಲಾಭ/(ನಷ್ಟ)ಗಳೊಳಗೆ ಲಾಭ ಅಥವಾ ನಷ್ಟದಲ್ಲಿ ಸೇರುತ್ತವೆ.

1.12 ಕಂದಾಯ ಮಾನ್ಯತೆ

ಅ. ಗ್ರಾಹಕರೊಂದಿಗಿನ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಅಥವಾ ಉತ್ಪನ್ನಗಳು ಅಥವಾ ಸೇವೆಗಳಿಗೆ ಬದಲಾಗಿ ಸ್ವೀಕರಿಸುವ ನಿರೀಕ್ಷೆಯ ಆಧಾರದ ಮೇಲೆ ಆದಾಯವನ್ನು ಅಳೆಯಲಾಗುತ್ತದೆ. ಕಂಪನಿಗಳ ಕಾರ್ಯಕ್ಷಮತೆಯ ಭಾದ್ಯತೆಯು ಕಾಲಾನಂತರದಲ್ಲಿ ತೃಪ್ತಿಪಡಿಸುತ್ತದೆ.

ಆ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಫಲಿತವಾಗಿರುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ.ಆಯೋಗ), ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣದ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಇ. ಐ.ಎಸ್.ಟಿ.ಎಸ್ ಮಾರ್ಗಗಳ ವಾರ್ಷಿಕ ಪ್ರಸರಣ ಶುಲ್ಕವನ್ನು (ವೈಟಿಸಿ) ಕಾಲಕಾಲಕ್ಕೆ ಸಿ.ಇ.ಆರ್.ಸಿಆದೇಶದ ಪ್ರಕಾರ ಸಂಚಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.

ಈ. ಕಾರ್ಯಾನುಷ್ಠಾನಗೊಂಡ ಕಾಮಗಾರಿಗಳು/ ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ಮೂರನೇ ಪಕ್ಷಕಾರರು ನೀಡಿದ ವಂತಿಗೆಯಿಂದ ನಿರ್ಮಿಸಿ ನಿಗಮದ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು, ಅವುಗಳ ಪೂರ್ಣ ಮೌಲ್ಯದ ಪ್ರಕಾರ ಲೆಕ್ಕಪುಸ್ತಕದಲ್ಲಿ ಒಳಪಡಿಸಲಾಗಿದೆ. ಬಂಡವಾಳ ಅನುದಾನ/ನಿರ್ದಿಷ್ಟ ಆಸ್ತಿಗಳಿಗೆ ಸಂಬಂಧಿಸಿದ ಅನುದಾನ ಹಾಗೂ ಬಂಡವಾಳ ಆಸ್ತಿಗಳ ವೆಚ್ಚದ ಪ್ರಯುಕ್ತ ಗ್ರಾಹಕರಿಂದ ಕೊಡುಗೆ ಇವುಗಳನ್ನು ಆಸ್ತಿಗಳ ಮೌಲ್ಯದ ವೆಚ್ಚದಿಂದ ಕಡಿಮೆಗೊಳಿಸಿಲ್ಲ, ಆದರೆ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, "ವಂತಿಗೆ ಮತ್ತು ಬಂಡವಾಳ ಆಸ್ತಿಗಳ ನಿಮಿತ್ತ ಅನುದಾನ"ವೆಂದು ವರ್ಗೀಕರಿಸಿ, ನಂತರದಲ್ಲಿ ವಂತಿಗೆ/ಅನುದಾನದಿಂದ ಗಳಿಸಿದ ಆಸ್ತಿಗಳಿಗೆ ಕಲ್ಪಿಸುವ ಸವಕಳಿಗೆ ಸಮನಾದ ಆದಾಯ ಎಂದು ಹೊಂದಾಣಿಕೆ ಮಾಡಲಾಗಿದೆ.

ಉ. ನಗದು ಆಧಾರದಲ್ಲಿ ಲೆಕ್ಕೀಕರಿಸುವ ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು, ಠೇವಣಿ ಕೊಡುಗೆ ಕೆಲಸಗಳ ಮೇಲಿನ ಕನ್ಸಲ್ಟೆನ್ಸಿ ಶುಲ್ಕಗಳು, ಉಳಿದಿರುವ ಭೂಮಿಗೆ ಶುಲ್ಕಗಳು, ಕಾರಿಡಾರ್ ಶುಲ್ಕಗಳು ಮತ್ತು ಮಂಡಪ ಕೀಪರ್

ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಿಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಊ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ, ಕಂಡು ಹಿಡಿಯಲಾಗುವುದು.

1.13 ಗುತ್ತಿಗೆಗಳು

